

ಮೆಕಿಯಾವೆಲ್ಲಿಯ

ರಾ ಜ ನೀ ತಿ

Roe 2571/ra

ರಾಜನೀತಿ

...

Makiavallia
Rajaneethe.

ලංගීසෙට

ಮೆಕಿಯಾವೆಲ್ಲಿಯ

ರಾಜನೀತಿ

ಅನುವಾದಕರು:

ನವರತ್ನ ರಾಮರಾವ್

ಸಾಹಿತ್ಯ ಅಕಾದೆಮಿಯ ಪರವಾಗಿ

ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ, ಮಂಗಳೂರು-೨

Rajaniti Kannada translation of Machiavelli's **The Prince** by Navaratna Rama Rao. Sahitya Akademi, New Delhi, 1959. Price Rs. 2.25.

ಸಾಹಿತ್ಯ ಅಕಾದೆಮಿ
ಮೊದಲ ಅಚ್ಚು: ೧೯೬೦

ಮುದ್ರಕರು:
ಕೆನರಾ ಛಾಪಖಾನೆ,
ಮಂಗಳೂರು.

ಪ್ರಕಾಶಕರು:
ಸಾಹಿತ್ಯ ಅಕಾದೆಮಿಯ ಪರವಾಗಿ
ಕನ್ನಡ ಪ್ರಪಂಚ ಪ್ರಕಾಶನ,
ಕದ್ರಿ, ಮಂಗಳೂರು-2.

ಬೆಲೆ: ರೂ. ೨-೨೫

ಪೀಠಿಕೆ

ಮೆಕಿಯಾವೆಲ್ಲಿಯು ಫ್ಲಾರೆನ್ಸ್ ನಗರದಲ್ಲಿ ಮೂರನೆಯ ಮೇ, 1467 ರಲ್ಲಿ ಜನಿಸಿದನು. ಅವನದು ಪುರಾತನ ಮತ್ತು ಶ್ರೀಮಂತ ಮನೆತನ. ಅವನ ವಿದ್ಯಾಭ್ಯಾಸ ಆಗಿನ ಕಾಲದ ಮಾದರಿಯನ್ನು ಅನುಸರಿಸಿತ್ತು. ಅವನು ಲ್ಯಾಟಿನ್ ಮತ್ತು ಗ್ರೀಕ್ ಗ್ರಂಥಗಳನ್ನು ವ್ಯಾಸಂಗ ಮಾಡಿದನು; ಆದರೆ ವ್ಯಾಕರಣಕ್ಕೇ ಆಗಲಿ, ಶೈಲಿಗೇ ಆಗಲಿ ಆಗ ವಾಡಿಕೆಯಲ್ಲಿದ್ದಂತೆ ನೇರವಾದ ಗಮನವನ್ನು ಕೊಡಲಿಲ್ಲ.

ಈ ಕಾರಣದಿಂದ ಅವನು ಯಾವಾಗಲೂ ಬರಿಯ ಪಂಡಿತನೇ ಆಗಲಿ, ಸಾಹಿತಿಯೇ ಆಗಲಿ ಆಗಲಿಲ್ಲ. ಪುಸ್ತಕಗಳ ಪ್ರೀತಿಯೆಂದರೆ ಆತನಿಗೆ ಇತಿಹಾಸ ಮತ್ತು ಮಾನವರ ಮನೋವರ್ತನೆಗಳನ್ನು ಕುರಿತು ಬರೆಯುವ ಲೇಖನಗಳಲ್ಲಿನ ಆಸಕ್ತಿ ಅಷ್ಟೇ. ಅವನು ಯಾವಾಗಲೂ ಯಾವುದೇ ಆಗಲಿ ಯಾವುದೇ ರೀತಿಯ ಮಾನವ ವ್ಯವಹಾರಗಳ ಸ್ವಂತ ಅನುಭವದಿಂದ ಹಿಂಜರಿದವನಲ್ಲ.

ಮೆಕಿಯಾವೆಲ್ಲಿಯ ರಾಜನೀತಿಯನ್ನು ಮುಖ್ಯ ಭಾರತೀಯ ಭಾಷೆಗಳಲ್ಲಿ ಪ್ರಚುರಪಡಿಸುವುದನ್ನು ಕೈಗೊಂಡುದಕ್ಕೆ ಒಂದು ಪೀಠಿಕೆಯನ್ನು ಕೋರಿದ್ದರ ಮೇಲೆ ಈ ಪೀಠಿಕೆಯನ್ನು ಕೃಪೆಯಿಟ್ಟು ರಚಿಸಿಕೊಟ್ಟ, ಮಧ್ಯ ಮತ್ತು ದೂರ ಪ್ರಾಚ್ಯದ ಇಟಾಲಿಯನ್ ಇನ್‌ಸ್ಟಿಟ್ಯೂಟಿನವರಿಗೂ, ಇದನ್ನು ಕೃಪೆಯಿಟ್ಟು ಇಂಗ್ಲಿಷಿಗೆ ಅನುವಾದಿಸಿದ ಬ್ರಿಟಿಷ್ ಕೌನ್ಸಿಲಿಗೂ ಸಾಹಿತ್ಯ ಅಕಾದೆಮಿಯು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಆತನಿಗೆ ಇಪ್ಪತ್ತೊಂಭತ್ತು ವರ್ಷವಾಗಿದ್ದಾಗ ಆತನು ತನ್ನ ನಗರದ ಮುಖ್ಯ ವ್ಯವಹಾರಗಳಲ್ಲಿ ಆಸಕ್ತಿಯಿಂದ ಪಾತ್ರ ವಹಿಸಲು ಪ್ರಾರಂಭಿಸಿದನು. ಫ್ಲಾರೆನ್ಸ್ ಆ ಕಾಲದಲ್ಲಿ ಸ್ವತಂತ್ರ "ನಗರ-ಸಂಸ್ಥಾನ" ವಾಗಿತ್ತು. ಆ ಸಂಸ್ಥಾನದ ಒಳ ಕಾರುಭಾರನ್ನೂ, ಯುದ್ಧದ ಆಡಳಿತವನ್ನೂ ನಿರ್ವಹಿಸುತ್ತಿದ್ದ ಎರಡನೆಯ ಛಾನ್ಸೆಲರಿ (Chancellory) ಗೆ 1498ರಲ್ಲಿ ಮೆಕಿಯಾವೆಲ್ಲಿ ಒಬ್ಬ ಕಾರ್ಯದರ್ಶಿಯಾದನು.

ಮೆಕಿಯಾವೆಲ್ಲಿಯ ಸ್ವಾಭಾವಿಕ ಅಲಸಿಗೆಯಿಂದಲೂ, ಅಲ್ಲದೆ ಅವನಿಗೆ ಸೈನ್ಯದ ಆಡಳಿತದ ಪಿತೂರಿಗಿಂತಲೂ ತನ್ನ ತತ್ವದ ಮೇಲೆ ಹೆಚ್ಚಿಗೆ ಆಸಕ್ತಿಯಿದ್ದುದರಿಂದಲೂ, ವಾಸ್ತವಿಕ ವ್ಯವಹಾರಗಳಲ್ಲಿನ ಅವನ ಭಾಗ ಬಹಳವಾಗಿ ಗೋಚರಿಸಲಿಲ್ಲ. ಆದರೆ, ಈ ಕೆಲಸದಲ್ಲಿ ಇವನು ಕಂಡ ವಿಷಯಗಳು ಮುಂದೆ ಇವನು ತನ್ನದೇ ಆದ ರಾಜನೀತಿಯ ಪ್ರಬಂಧವನ್ನು ಬರೆಯುವುದಕ್ಕೆ ತಳಹದಿಯಾದವು.

ಬಹು ದಿವಸದ ತಳಮುಳವನ್ನು ದಾಟಿ ಫ್ರಾನ್ಸ್ ಮತ್ತು ಸ್ಪೆಯಿನ್ ಬಿಗಿಕಟ್ಟಿನ ಪ್ರಬಲವಾದ ರಾಜ್ಯಗಳಾಗಿದ್ದ ಕಾಲ ಅದು. ತಮ್ಮ ಶಕ್ತಿಯ ದೆಸೆಯಿಂದ ಆ ರಾಷ್ಟ್ರಗಳು ಯೂರೋಪಿನ ಅಧಿನಾಯಕತ್ವದ ಧ್ಯೇಯಕ್ಕೆ ಪ್ರವೃತ್ತಿ ಒದಗಿಸಿದ್ದವು. ಅವುಗಳಿಗೆ ಹೋಲಿಸಿ ನೋಡಿದರೆ ಇಟಲಿಯೊಳಗಿನ ಸಣ್ಣ ಸಂಸ್ಥಾನಗಳು ಕ್ಷೀಣಗೊಂಡು ಹಾಳಾಗಿಹೋಗಿ ಈ ದೊಡ್ಡ ರಾಜ್ಯಗಳ ದುರಾಶೆಯಿಂದ ಬರಬಹುದಾದ ಆಪತ್ತನ್ನು ಎದುರಿಸಲು ಒಟ್ಟುಗೂಡಲಿಕ್ಕೂ ಶಕ್ತಿಯಿಲ್ಲದವುಗಳಾಗಿದ್ದವು.

ಆಗಲೇ 1499ರಲ್ಲಿ ಮಿಲಾನ್ (Milan) ಫ್ರೆಂಚರ ವಶಕ್ಕೆ ಬಿದ್ದಿತ್ತು. 1509ರಲ್ಲಿ ನೇಪಲ್ಸ್ (Naples) ಸ್ಪೆಯಿನಿನ ಒಂದು ಪ್ರಾಂತ್ಯವಾಗಿತ್ತು. ಈ ಸ್ಥಿತಿಯಲ್ಲಿ ಫ್ಲಾರೆನ್ಸ್ ಸಂಸ್ಥಾನವು ತನ್ನ ಸ್ವಾತಂತ್ರ್ಯವು ಸುರಕ್ಷಿತವಾಗಿದೆ ಎಂದು ಆಶಿಸುವುದು ಕಷ್ಟವಾಗಿತ್ತು. ಒಳ ಆಡಳಿತದಲ್ಲಾದರೋ ಕಕ್ಷಿಗಳ ಕಲಹ. ಹೀಗಾಗಿ ನಗರಕ್ಕೆ, 1494ರಲ್ಲಿ ಗಡಿಪಾರಾದ ಮೆಡಿಚಿ (Medici) ಮನೆಮುತನದವರು ಅಧಿಕಾರಕ್ಕೆ ವಾಪಸು ಬಂದು ಸ್ವಾತಂತ್ರ್ಯವನ್ನು ನಾಶಪಡಿಸುತ್ತಾರೆಂಬ ಭೀತಿ ಒದಗಿತ್ತು.

ಈ ವಾತಾವರಣವನ್ನು ಸರಿಯಾಗಿ ವಿಮರ್ಶಿಸಿ, ಅರಿತು ಇದರ ಫಲವಾಗಿ ರಾಜಕೀಯ ಪರಿಣಾಮ ಏನಾಗಬಹುದೆಂಬುದನ್ನು ಗುಣಿಸಿ ತಿಳಿಯಲು

ಮೆಕಿಯಾವೆಲ್ಲಿಗಿಂತ ಶಕ್ತನಾದವನು ಇಟಲಿಯಲ್ಲಿ ಮತ್ತೊಬ್ಬನು ಇರಲಿಲ್ಲ ವೆಂದು ಧೈರ್ಯವಾಗಿ ಹೇಳಬಹುದು.

ಇವನ ಸರಕಾರವು ಇವನನ್ನು ಹಲವಾರು ವಿಶೇಷ ನಿಯೋಗಗಳಿಗೆ ನೇಮಿಸಿತು. ಇವುಗಳ ಸಲುವಾಗಿ ಇವನು ಇಟಲಿ ಸರಹದ್ದಿನ ಹೊರಕ್ಕೆ ಸಂಚಾರ ಮಾಡಿ ಜರ್ಮನಿಗೆ ಹೋಗಬೇಕಾಯಿತು. ಈ ನಿಯೋಗಗಳ ಅನುಭವದಿಂದ ಇವನಲ್ಲಿ ಯಾವಜ್ಜೀವವೂ ಬದಲಾವಣೆಯಿಲ್ಲದೆ ಉಳಿಯು ವಂಥ ಕೆಲವು ದೃಢವಾದ ನಂಬಿಕೆಗಳು ಜನಿಸಿದವು. ಕಾರ್ಯಕಾರಣಗಳ ಕ್ಲಿಷ್ಟ ಸಂಬಂಧವನ್ನು ಗಮನಿಸಿ ತಿಳಿಯುವ ಅಭ್ಯಾಸ ಅವನಲ್ಲಿ ಉಂಟಾಯಿತು. ಮನುಷ್ಯನ ನಡೆವಳಿಯ ದಿಟವಾದ ಪ್ರೇರಣೆಗಳನ್ನು ವಿಚಕ್ಷಕ ದೃಷ್ಟಿಯಿಂದ ಗ್ರಹಿಸಿ, ಇವನು ಮಾನವ ಇತಿಹಾಸದಲ್ಲಿ, ಮನುಷ್ಯನ ಇಚ್ಛೆಯಿಂದ ಉಂಟಾಗ ತಕ್ಕ ಸಂಭವಗಳಿಗೂ, ಪುರುಷಯತ್ನವಿಲ್ಲದೆ ದೈವದಿಂದ ಸಂಭವಿಸುವ ಪರಿ ಣಾಮಗಳಿಗೂ ಇರುವ ವ್ಯತ್ಯಾಸವನ್ನು ಚೆನ್ನಾಗಿ ಕಂಡನು, ಅನಿರೀಕ್ಷಿತ ಸಂಭವಗಳನ್ನು ಇವನು ಆಕಸ್ಮಿಕ (Chance) ಎಂದು ಕರೆಯುತ್ತಿದ್ದನು. ಇದು ಮುಂದೆ ತಿಳಿಯುತ್ತದೆ.

ಇವನ ನಿಯೋಗಗಳ ಸಂದರ್ಭದ ಟಿಪ್ಪಣಿಗಳು, ಪತ್ರಗಳು, ವರದಿಗಳು ಇವನ ಮುಖ್ಯ ಗ್ರಂಥದ ಸಾಮಗ್ರಿಗಳನ್ನು ಒದಗಿಸಿಕೊಟ್ಟವೆಂದು ಹೇಳಲು ಅಡ್ಡಿಯಿಲ್ಲ; ಅವು ಆ ಗ್ರಂಥದ ಮೊದಲ ಕರಡು ಎಂದರೂ ಸಲ್ಲಬಹುದು.

1512ನೆಯ ಇಸವಿಯಲ್ಲಿ ಎರಡನೆಯ ಪೋಪ್ ಜೂಲಿಯಸ್, ಸ್ಪೈಯಿನ್ ಮತ್ತು ವೆನಿಸ್ಸಿನ ಸಂಗಡ ಸಂಧಿಮಾಡಿಕೊಂಡು, ಫ್ರೆಂಚಿನವರನ್ನು, ಅವರು ಈ ಮೊದಲೆ ಯುಕ್ತವಾದಂತೆ 1499ರಲ್ಲಿ ವಶಪಡಿಸಿಕೊಂಡಿದ್ದ ಮಿಲಾನ್ ಪಟ್ಟಣದಿಂದ ಉಚ್ಚಾಟನೆ ಮಾಡಿದನು. ಫ್ಲಾರೆನ್ಸ್ ಪಟ್ಟಣವು ಫ್ರೆಂಚಿನವರ ಪಕ್ಷಕ್ಕೆ ಸೇರಿದ್ದಾದ್ದರಿಂದ ಈ ವಿಪತ್ತಿನಲ್ಲಿ ಅದೂ ಭಾಗಿಯಾ ಯಿತು. ಈ ಕಾರಣದಿಂದ ಮೆಡಿಚಿ ಮನೆತನದವರು ಫ್ಲಾರೆನ್ಸ್‌ನಲ್ಲಿ ಪುನಃ ಅಧಿಕಾರಕ್ಕೆ ಬರಲು ಸಾಧ್ಯವಾಯಿತು.

ಈ ಬದಲಾವಣೆಯ ದೆಸೆಯಿಂದ ಮೆಕಿಯಾವೆಲ್ಲಿ ತನ್ನ ಕಾರ್ಯದರ್ಶಿ ಸ್ಥಾನವನ್ನು ಕಳೆದುಕೊಂಡುದಲ್ಲದೆ, ಒಂದು ವರ್ಷ ಕಾರಾಗೃಹದಲ್ಲಿ ಇರಲೂ ಬೇಕಾಯಿತು. ಕೆಲವು ಕಾಲದ ನಂತರ ಮೆಡಿಚಿಯವರ ಮೇಲಿನ ಪಿತೂರಿ ಯಲ್ಲಿ ಇವನು ಭಾಗಿ ಎಂಬ ಗುಮಾನೆಯ ಮೇಲೆ ಇವನನ್ನು ಹಿಡಿದು

ಚಿತ್ರಹಿಂಸೆಗೆ ಗುರಿಪಡಿಸಿದರು. ಕೊನೆಗೆ, ಇವನು ನಿರಪರಾಧಿ ಎಂದು ನಿಶ್ಚಯಿಸಿ ಬಿಡುಗಡೆ ಮಾಡಲಾಗಿ, ಇವನಾಗಿಯೇ ಫ್ಲಾರೆನ್ಸನ್ನು ತ್ಯಜಿಸಿ, ಕೆಲವು ಮೈಲಿ ದೂರದಲ್ಲಿರುವ ಹಳ್ಳಿಪ್ರದೇಶಕ್ಕೆ ಹೋಗಿ ಒಂದು ಚಿಕ್ಕ ಮನೆಯಲ್ಲಿ ವಾಸವಾಗಿದ್ದನು.

ಈ ಏಕಾಕಿ ಜೀವನದಲ್ಲಿ, ಈ ಅನಪೇಕ್ಷಿತ ವಿಶ್ರಾಂತಿಯಲ್ಲಿ ಈತನು ತನಗೆ ಪ್ರಿಯವಾದ ರೋಮನ್ ಇತಿಹಾಸಕಾರರ ಗ್ರಂಥಗಳಲ್ಲಿ ಮಗ್ನನಾಗಿದ್ದು 1513ರಲ್ಲಿ (ಜೂಲೈ ತಿಂಗಳಿಂದ ಡಿಸೆಂಬರ್ ಡಿಸೆಂಬರ್ ವರೆಗಿನ ಕಾಲದಲ್ಲಿ) ತನ್ನ ನಾಯಕ ಕೃತಿಯಾದ The Prince ಎಂಬ ರಾಜನೀತಿ ಪುಸ್ತಕವನ್ನು ಅವಿಚ್ಛಿನ್ನವಾಗಿ ಬರೆದನು. 1520ರ ವರೆಗೂ ಇವನು ಇದೇ ರೀತಿ ಪ್ರತ್ಯೇಕ ಜೀವನದಲ್ಲಿ ಇದ್ದದ್ದೇ ಇವನ ಅತ್ಯುತ್ತಮ ಲೇಖನಗಳ ಕಾಲ ಆಯಿತು. ಇದರಲ್ಲಿ ಇವನು ತನ್ನ ಉತ್ತಮ ಕಾವ್ಯಗಳಾದ, ಪ್ರಕರಣಗಳು, ಇತರ ಐತಿಹಾಸಿಕ ಮತ್ತು ರಾಜಕೀಯ ಪ್ರಬಂಧಗಳು, ಯುದ್ಧಕಲೆ (The Art of War) ಎಂಬ ಸಂಭಾಷಣಾ ರೂಪದ ಗ್ರಂಥ, ಮ್ಯಾನ್ ಬ್ರಸಾಲ್ (Manbrasol) ಎಂಬ ಲಘುನಾಟಕ ಇವುಗಳನ್ನು ಬರೆದನು. ಈ ಲಘುನಾಟಕವು 16ನೆಯ ಶತಮಾನದ ಇಟಾಲಿಯನ್ ದೃಶ್ಯಗ್ರಂಥಗಳಲ್ಲಿ ಉತ್ಕೃಷ್ಟವಾದುದಾಗಿದೆ.

ಆದರೆ, ಈ ತರಹದ ಜೀವನದಲ್ಲಿ, ಇವನಿಗೆ ಅತೃಪ್ತಿ ಉಂಟಾಯಿತು. ಕಾರ್ಯಶೀಲನಾದ ಇವನಿಗೆ, ಇದು ವ್ಯರ್ಥ ಕಾಲಕ್ಷೇಪವೆಂದು ತೋರುತ್ತಾ ಬಂತು. ಗ್ರಂಥಗಳನ್ನು ರಚಿಸುವುದು ಕೂಡಾ ಕೇವಲ ಅಲ್ಪ ಅವಧಿಯ ವಿನೋದವಾಗಿ ತೋರಿಬಂತು. ನಿಜವಾದ ರಾಜಕೀಯ ಚಳುವಳಿಗೆ ವಾಪಸು ಬಂದು ಭಾಗವಹಿಸಬೇಕೆಂಬ ಹಂಬಲ ಈತನಲ್ಲಿ ಉಂಟಾಯಿತು. ಈ ಉದ್ದೇಶದಿಂದ, ಇವನು ತನಗೆ ಯುಕ್ತವಾದ ಸ್ಥಿರಸ್ಥಾನ ದೊರೆಯಲೆಂಬ ಆಶೆಯಿಂದ, ಮೆಡಿಚಿ ಮನೆತನದ ಮುಖ್ಯಸ್ಥರ ಸಂಪರ್ಕವನ್ನು ಪ್ರಾರಂಭ ಮಾಡಿದನು.

ವಿಶ್ವವಿದ್ಯಾಲಯ ಇವನಿಗೆ ಒಂದಷ್ಟು ಉದ್ಯೋಗವನ್ನು ಒದಗಿಸಿತು. ಅದರಲ್ಲಿ ಫ್ಲಾರೆನ್ಸಿನ ಚರಿತ್ರೆಯನ್ನು ಬರೆಯುವುದು ಒಂದು ಭಾಗವಾಗಿತ್ತು.

1525ರಲ್ಲಿ ಶತ್ರುಗಳ ಧಾಳಿಯ ಭೀತಿಯ ಕಾರ್ಮೋಡಗಳು ಕವಿದುವು. ಈ ಸಲದ ಭೀತಿ ಸ್ಪೆಯಿನಿನ ದೊರೆ ಮತ್ತು ಜರ್ಮನಿಯ ಚಕ್ರಾಧಿಪತಿಯಾದ

ಐದನೆಯ ಛಾರ್ಲಸ (Charles) ರ ನಾಯಕತ್ವದಲ್ಲಿ ಜರ್ಮನಿ ಮತ್ತು ಸ್ಪೆಯಿನಿನಿಂದ ಬಂತು. ಮೆಕಿಯಾವೆಲ್ಲಿಯನ್ನು ಫ್ಲಾರೆನ್ಸಿನ ರಕ್ಷಣೆಯನ್ನು ಭದ್ರಪಡಿಸುವುದಕ್ಕೂ ಅದರ ಕೋಟೆ ಕೊತ್ತಳಗಳ ಬಂದೋಬಸ್ತಿಗೂ ಜವಾಬ್ದಾರನನ್ನಾಗಿ ನೇಮಿಸಿದರು. ಈ ಕೆಲಸಗಳನ್ನು ಈತನು ತನ್ನ ಸ್ವಾಭಾವಿಕ ಶ್ರದ್ಧೆಯಿಂದ ಮಾಡತೊಡಗಿದನು. ಆದರೆ 1527ರಲ್ಲಿ ಜರ್ಮನರು ರೋಮನ್ನು ಹಲ್ಲಾ ಮಾಡಿ, ಹಿಡಿದು, ಆ ಕಾಲದಲ್ಲಿ ವಾಡಿಕೆಯಲ್ಲಿದ್ದಂತೆ ಭಯಂಕರವಾದ ರೀತಿಯಲ್ಲಿ ಲೂಟಿ ಮಾಡಿದರು. ಇಟಾಲಿಯನ್ ಪಟ್ಟಣಗಳು ಆತ್ಮರಕ್ಷಣೆಯ ಯತ್ನವೇ ಇಲ್ಲದೆ ಶತ್ರುಗಳ ವಶವಾಗುತ್ತಾ ಬಂದವು. ಫ್ಲಾರೆನ್ಸ್, ತಿರುಗಿ ಮೆಡಿಚಿಯವರನ್ನು ಆಚೆಗೆ ಅಟ್ಟಿ, ಮರಳಿ ಪ್ರಜಾಪ್ರಭುತ್ವದ ನಗರ ಆಯಿತು. ಆ ಕ್ಷಣ ಮಾತ್ರ ಮೆಕಿಯಾವೆಲ್ಲಿಗೆ ತನ್ನ ಪೂರ್ವದ ಕಾರ್ಯದರ್ಶಿ ಪದವಿ ಸಿಕ್ಕುತ್ತದೆಂಬ ಆಶೆಯಿತ್ತು; ಆದರೆ, ಇವನು ಮೆಡಿಚಿಯವರ ಆಶ್ರಿತನಾಗಿದ್ದನೆಂಬುದರ ಪರಿಣಾಮವಾಗಿ ಇವನು ಶಂಕೆಗೆ ಪಾತ್ರನಾದನು, ಇವನಿಗೆ ಯಾವ ಸ್ಥಾನವೂ ದೊರೆಯಲಿಲ್ಲ.

ಇದಾದ ಒಂದು ತಿಂಗಳ ಮೇಲೆ, ಎಂದರೆ 1527ನೆಯ ಜೂನ್ ಇಪ್ಪತ್ತರಲ್ಲಿ, ಮೆಕಿಯಾವೆಲ್ಲಿಯು ಮೃತಪಟ್ಟನು.

ಮೆಕಿಯಾವೆಲ್ಲಿಯ ಬೋಧನೆಯು ಕ್ರಮಬದ್ಧವಾದ ರೀತಿಯಲ್ಲಿ, ಒಂದೆಡೆಯಲ್ಲಿ, ಪುಷ್ಟೀಕರಿಸಲ್ಪಟ್ಟಿಲ್ಲ. ಅದು ಅವನ ಎಲ್ಲ ಐತಿಹಾಸಿಕ ಮತ್ತು ರಾಜಕೀಯ ಗ್ರಂಥಗಳಲ್ಲಿ, ಕ್ರಮವಿಲ್ಲದ ರೀತಿಯಲ್ಲಿ ಪ್ರತಿಪಾದಿತವಾಗಿ ದೊರೆಯುತ್ತದೆ. ಆದರೂ, ಅದರ ಮೂಲತತ್ವವು ಈ ಪುಸ್ತಕಗಳಲ್ಲಿ ಪುನಃ ಪುನಃ ಕಂಡುಬರುವುದರಿಂದ ಅದನ್ನು ಉದ್ಧರಿಸಿ, ಒಂದು ಕ್ರಮಬದ್ಧವಾದ ರಾಜನೀತಿ ತತ್ವವನ್ನು ರಚಿಸಬಹುದಾಗಿದೆ.

ಪಾಶ್ಚಾತ್ಯ ವಿಮರ್ಶಕರು, ಮೆಕಿಯಾವೆಲ್ಲಿಯನ್ನು ರಾಜತಂತ್ರ ಶಾಸ್ತ್ರವೆಂಬ ಒಂದು ಹೊಸ ಶಾಸ್ತ್ರದ ಸ್ಥಾಪಕನೆಂದು ಹೇಳುತ್ತಾರೆ, ಈ ಶಾಸ್ತ್ರವು ಬುದ್ಧಿಶಕ್ತಿ ಪ್ರಧಾನವಾದುದು, ಧರ್ಮಕ್ಕೆ ನೀತಿಗೆ ಸಂಬಂಧಪಟ್ಟುದಲ್ಲ ಎನ್ನುವುದು ಈ ಮಾತಿನ ಭಾವ. ಮೆಕಿಯಾವೆಲ್ಲಿಯು ತನ್ನ ಶಾಸ್ತ್ರವನ್ನು ತನ್ನ ಸ್ವತಂತ್ರ ಆಲೋಚನೆಯಿಂದ ಇತರ ಅವಲಂಬನವಿಲ್ಲದೆ ರಚಿಸಿದ್ದಾಗಿ ಒತ್ತಿ ಹೇಳುತ್ತಾನೆ. ತನ್ನ ಬೋಧನೆಯು ವಾಸ್ತವ್ಯವನ್ನು ಅನುಸರಿಸಿ ಕಲ್ಪಿತವಾದದ್ದು; ಪುರಾತನ ಗ್ರೀಸ್ ಮತ್ತು ರೋಮ್‌ನವರ ಬರಿಯ ಊಹಾಮಾತ್ರದ ರಾಜನೀತಿ

ಕಲ್ಪನೆಯಂತೆ ಆಕಾಶ ಉಪನ್ಯಾಸವಲ್ಲ ಎಂದು ಹೇಳುತ್ತಾನೆ. ಅವರು ಚರ್ಚಿಸಿದ್ದು ಜನ ಹೇಗೆ ಬಾಳುವುದು ಸರಿ ಎಂದು; ಇವನು ಚರ್ಚಿಸಿದ್ದು ಜನ ವಾಸ್ತವವಾಗಿ ಹೇಗೆ ಬಾಳುತ್ತಾರೆ ಎಂದು. ಮೆಕಿಯಾವೆಲ್ಲಿಯ ಅಭಿಪ್ರಾಯಗಳು ರಾಜಕೀಯ ಜೀವನದಲ್ಲಿ ಇದ್ದ ನಾಗರಿಕನೊಬ್ಬನ ಜೀವನ ಅನುಭವವನ್ನು ನೇರ ಅನುಸರಿಸಿ ಇರುತ್ತವೆಂದು ನಾವು ಮೊದಲೇ ಹೇಳಿದ್ದೇವೆ.

ಮೆಕಿಯಾವೆಲ್ಲಿಯು ಬರಿಯ ಚಿನ್ಮಾತ್ರದ ತಾತ್ವಿಕನಲ್ಲ. ಅವನ ಬರವಣಿಗೆಗಳು ತಾನು ಸ್ವತಃ ಕಂಡ ಕಕ್ಷಿ ವ್ಯವಹಾರಗಳ, ವಿವಾದಗಳ ಮೇಲೆ ಬರೆಯಲ್ಪಟ್ಟವುಗಳಾದರೂ ಅವುಗಳು ಮಜಬೂತಾದ ಮೂಲ ತತ್ವಗಳ ಮೇಲೆ ಸ್ಥಿರವಾಗಿ ನಿಂತಿವೆ. ಒಂದೊಂದು ವೇಳೆ ತತ್ವಕ್ಕೂ ಮನೋರಾಗಕ್ಕೂ ಅವುಗಳಲ್ಲಿ ವಿರೋಧ ಕಂಡುಬಂದರೂ ಕೊನೆಗೆ ತತ್ವವೇ ಗೆಲ್ಲುತ್ತದೆ. ಅವನ ಕಾಲದಲ್ಲಿನ ಜನಗಳು ಭಗವಂತನ ಭಾವನೆ ಬಿಟ್ಟು ಕೇವಲ ಪ್ರಾಪಂಚಿಕ ವಿಷಯಗಳಿಗೆ ಗಮನ ಕೊಡುತ್ತಿದ್ದರು. ಮೆಕಿಯಾವೆಲ್ಲಿಯ ತತ್ವವು ಈ ಮನೋಭಾವವನ್ನೇ ಅನುಸರಿಸುತ್ತದೆ. ಕ್ರಮಕ್ರಮವಾಗಿ ಉತ್ತಮಗೊಂಡು ಮಾನವ ಜಾತಿಯು ಹೆಚ್ಚೆಚ್ಚು ಒಳಿತಾಗುವುದು ಸಾಧ್ಯ ಎಂಬ ಭಾವನೆಯೇ ಅವನಿಗೆ ಇರಲಿಲ್ಲ. ಮಾನವ ಸ್ವಭಾವದ ತಿರುಳು ಬೇರೆಯಾಗುವುದಲ್ಲ, ಮನುಷ್ಯ ತನ್ನ ಸಹಜ ಪ್ರವೃತ್ತಿಗೆ ಗುಲಾಮನಾಗಿ ವರ್ತಿಸುತ್ತಾನೆ, ಅದನ್ನು ಅಡಗಿಸುವುದು ಅಸಾಧ್ಯ ಎಂಬುದು ಅವನ ಅಭಿಪ್ರಾಯ.

ಸನ್ನಿವೇಶ ಪರಿವರ್ತನಾತೀತ ಅದಾದರೂ ಎಲ್ಲಾ ಸಂದರ್ಭಗಳಲ್ಲಿಯೂ ಮನುಷ್ಯನ ವರ್ತನೆಯನ್ನು ಕ್ರಮಪಡಿಸಬಹುದು; ಹೀಗೆ ಕ್ರಮಪಡಿಸುವುದು ಮನುಷ್ಯನನ್ನು ಆಳುವವರ ಜವಾಬ್ದಾರಿ; ಕ್ರಮಪಡಿಸುವ ಸೂತ್ರಗಳೇ ರಾಜನೀತಿ. ಇವುಗಳನ್ನು ಸರಿಯಾಗಿ ಅನುಸರಿಸಿ ಜಾರಿಯಲ್ಲಿ ತಂದರೆ ಆಳುವವನ ಅಧಿಕಾರವು ದೃಢವಾಗಿ ನಿಲ್ಲುತ್ತದೆ. ಇದು ಇವನ ತತ್ವ.

ಮನುಷ್ಯ ಜಾತಿಯು ಪರಿಣಾಮದಿಂದ ಮುಂದುವರಿಯಲಾರದು ಎಂಬ ಭಾವನೆಯು ಮೆಕಿಯಾವೆಲ್ಲಿಯನ್ನು ಮನುಷ್ಯ ಸ್ವಭಾವದ ವಿಚಾರದಲ್ಲಿ ಅಶುಭದರ್ಶಕ (Pessimist) ನನ್ನಾಗಿ ಮಾಡಿತು. ಆದರೆ, ಅವನಿಗೆ ಸೌಶೀಲ್ಯ ಅಥವಾ ಪೌರುಷ ಎಂಬುದು ಉಂಟೆಂದು ನಂಬಿಕೆಯಿತ್ತು. ಮೆಕಿಯಾವೆಲ್ಲಿಗೆ ಸೌಶೀಲ್ಯವೆಂದರೆ ಬುದ್ಧಿವಂತಿಕೆ ಮತ್ತು ಕಾರ್ಯಪಟುತ್ವ. ಸೌಶೀಲನಾದ ಪುರುಷನು ಯಾವ ಸನ್ನಿವೇಶದಲ್ಲಿಯೂ ಎಲ್ಲಾ ಅಂಶಗಳನ್ನು

ಸರಿಯಾಗಿ ತಿಳಿದು, ಗುಣಿಸಿ, ಆ ಮೇಲೆ ರಾಜ್ಯದ ಕ್ಷೇಮಕ್ಕಾಗಿ ಕ್ಷಿಪ್ರವಾಗಿ, ಏಕಸಂಕಲ್ಪದಿಂದ ಶಕ್ತಿಯುತವಾದ ಕಾರ್ಯವನ್ನು ಕೈಗೊಳ್ಳುವನು.

ಇಂಥ ಸುಶೀಲನಿಗೆ ದೈವವು ವಿರೋಧವಾಗಬಹುದು; ಅಥವಾ ಮನುಷ್ಯನ ಜಾಣ್ಮೆಗೆ ಮೀರಿದ ಸಂದರ್ಭಗಳ ಸಂಕಲನದಿಂದ ಇವನಿಗೆ ಪರಾಜಯವಾಗಬಹುದು. ಸಂದರ್ಭಗಳ ಶಕ್ತಿಗೆ ತಲೆಬಾಗಿದವನು ಜಯಶಾಲಿಯಾಗುವುದಿಲ್ಲ. ಮುಂಜಾಗರೂಕತೆಯಿಂದ ಪರಿಹಾರ ಕ್ರಮವನ್ನು ಕೈಗೊಳ್ಳುವವನಿಗೆ ಮಾತ್ರ ಜಯವು ಸಲ್ಲುತ್ತದೆ. ಸರ್ವಶ್ರೇಷ್ಠ ಮೇಧಾಶಕ್ತಿಯೇ ಸೌಶೀಲ್ಯ ಎಂಬ ಮೆಕಿಯಾವೆಲ್ಲಿಯ ಈ ಭಾವನೆಯು ಸಾಂಪ್ರದಾಯಿಕ ಮತಾಚಾರ ಅಭಿಪ್ರಾಯಕ್ಕೆ ಕೇವಲ ವಿರೋಧವಾಗಿದೆ. ಏಕೆಂದರೆ, ಇದರ ಪ್ರಕಾರ ರಾಜಕೀಯ ಮನುಷ್ಯನ ಸೌಶೀಲ್ಯಕ್ಕೂ ಧರ್ಮಿಷ್ಠನ ಸೌಶೀಲ್ಯಕ್ಕೂ ಅರ್ಥಾರ್ಥ ಸಾಮ್ಯವಿಲ್ಲ.

ಪುರುಷ ಯತ್ನಕ್ಕೆ ಮೀರಿ ಹತೋಟಿಯಿಲ್ಲದೆ ಸಂಭವಿಸುವ ಘಟನೆಗಳನ್ನು ಹಿಂದಿನ ಶತಮಾನಗಳ ತತ್ವಜ್ಞರೆಲ್ಲರೂ ದೈವಸಂಕಲ್ಪ ಅಥವಾ ಮನುಷ್ಯನ ನ್ಯಾಯಕ್ಕೆ ಮಿಗಿಲಾದ ದಿವ್ಯ ನ್ಯಾಯ ಎಂದು ಹೇಳುತ್ತಿದ್ದರು. ಇಂಥಾ ಘಟನೆಗಳು ಕ್ರೈಸ್ತಧರ್ಮದ ಆಗಮನಕ್ಕೆ ಪೂರ್ವದಲ್ಲಿ ಪಾಶ್ಚಾತ್ಯರ ಭಾವನೆಯಲ್ಲಿ ಕುರುಡು ಅದೃಷ್ಟ, ಆಕಸ್ಮಿಕ ರಭಸದ ವಿಧಿ, ಕ್ರೂರವಾದ ಅಪಘಾತ ಆಗಿದ್ದವು. ಮೆಕಿಯಾವೆಲ್ಲಿಯ ದರ್ಶನದಲ್ಲಿ ಮರಳಿ ಕ್ರೈಸ್ತ ಧರ್ಮದಕಲ್ಪನೆ ಅನ್ವಯಿಸಿತು.

ಈ ಫ್ಲಾರೆಂಟೈನ್ ಮೇಧಾವಿಯು ಸಾಂಪ್ರದಾಯಿಕವಾದ ಮತೀಯ ಅಭಿಪ್ರಾಯವನ್ನು ಹೀಗೆ ತಳ್ಳಿಬಿಟ್ಟನಾದರೂ ಅದರ ಸ್ಥಳದಲ್ಲಿ ಬೇರೆ ಯಾವ ಭಾವವನ್ನೇ ಆಗಲಿ, ಮಾನದಂಡವನ್ನೇ ಆಗಲಿ ನಿರ್ಮಿಸುವುದು ಅವನಿಂದ ಆಗಲಿಲ್ಲ. ಹೊರನೋಟಕ್ಕಂತೂ ಇವನು ಜೀವನದಲ್ಲಿ ಸರಿ ತಪ್ಪುಗಳ ಸಮಸ್ಯೆ ಒಂದಿದೆಯೆಂಬುದನ್ನು ಅರಿಯದಂತೆ ಕಂಡನು. ಆದರೆ ಮೆಕಿಯಾವೆಲ್ಲಿಯ ದರ್ಶನ ಒಂದಂಶದಲ್ಲಿ ಬೋಧಪ್ರದವಾಗಿದೆ. ಅವನು ಅಡಿಗಡಿಗೂ ಒತ್ತಿ ಹೇಳುವುದೇನೆಂದರೆ, ಮನುಷ್ಯನ ಶ್ರೇಯ ಸಂಕಲ್ಪ, ಆವಶ್ಯಕ ಕಂಡಾಗ ಸಾರ್ವಜನಿಕ ಪ್ರಯೋಜನಕ್ಕಾಗಿ ಬಲಿಯಾಗುತ್ತದೆ ಎನ್ನುವುದು. ಸಮಾಜ ಅಂದರೆ ರಾಜ್ಯ. ಇದು ರಚಿತವಾಗಿರುವುದೇ ಅಕಸ್ಮಾತ್ತಿನ ಕುರುಡು ರಭಸದ ಚಂಡಮಾರುತದಿಂದ ಮನುಷ್ಯ ಜಾತಿಯನ್ನು ರಕ್ಷಿಸುವುದಕ್ಕೆ. ಆದುದರಿಂದ

ಮನುಷ್ಯನ ಯಾವ ಕಾರ್ಯವೂ ರಾಜ್ಯದ ಕ್ಷೇಮಕ್ಕೆ ವಿರೋಧವನ್ನುಂಟು ಮಾಡತಕ್ಕದ್ದಾಗಿರಕೂಡದು. ರಾಜ್ಯದ ಅಂದರೆ ಸಮಾಜದ ಕ್ಷೇಮಕ್ಕಾಗಿ ಆವಶ್ಯಕ ಆದಾಗ ಪ್ರತಿಯೊಬ್ಬನ ಅಹಂಭಾವವೂ ತಾನು ನಿಕೃಷ್ಟವೆಂದು ತಿಳಿದು ದಾರಿಬಿಡಬೇಕು.

ಮೇಲೆ ಹೇಳಿರುವುದು ಮೆಕಿಯಾವೆಲ್ಲಿಯ ತತ್ವ ಮತ್ತು ಉಪದೇಶದ ಸಾರಾಂಶವಾಗಿದೆ. ಅವನ ಮನೋಧರ್ಮ ದೃಢವಾದ ಅಶುಭಪ್ರತೀಕ್ಷೆ ಯಂತೆ ಕಾಣುತ್ತದೆ; ಆದರೆ ಅದರಲ್ಲಿ ವಿನಯವನ್ನು ಹೋಲುವ ಒಂದು ತರಹದ ದೈನ್ಯವಿದೆ. ಇದೇ ಇವನ ಮಾನವ ಸಹಾನುಭೂತಿಯ ಲೇಶಮಾತ್ರ ಚಿಹ್ನೆ ಎನ್ನಬಹುದು. ಇವನ ಗ್ರಂಥದಲ್ಲಿ ಹಲವು ವೇಳೆ ಕಂಡುಬರುವ ಕಟು ಮತ್ತು ಬಲ ಆದ ಕಾವ್ಯಗುಣ ಒಂದರ ರೂಢಮೂಲ ಇದು.

ಮೆಕಿಯಾವೆಲ್ಲಿಯ ಸಮಕಾಲೀನ ಮತ್ತು ಆ ಮೇಲಿನ ವಿಚಾರವಂತ ರಲ್ಲಿ ಇವನ ಅಭಿಪ್ರಾಯವನ್ನು ಕುರಿತು ಮಾಡಿದ ಪ್ರತಿಕ್ರಿಯೇನೆನ್ನುವುದನ್ನು ಈಗ ನಾವು ಸೂಕ್ಷ್ಮವಾಗಿ ವಿಂಗಡಿಸಿ ಪರೀಕ್ಷಿಸೋಣ. ಒಂದನ್ನು ಮಾತ್ರ ಮೊದಲೇ ಹೇಳಬಹುದು. ಮೆಕಿಯಾವೆಲ್ಲಿಯನ್ನು ಓದುವವರು ಸ್ಪಷ್ಟವಾಗಿ ಒಂದು ದಾರಿಯನ್ನು ಹಿಡಿಯಬೇಕು. ಆವನ ಮಾತನ್ನು ಒಪ್ಪಬೇಕು ಅಥವಾ ನಿರಾಕರಿಸಬೇಕು; ಔದಾಸೀನ್ಯ ಸಾಧ್ಯವೇ ಇಲ್ಲ.

ಅವನ ಗ್ರಂಥವು ಕ್ಯಾಥೊಲಿಕ್ ಕ್ರೈಸ್ತ ಧರ್ಮಪೀಠವು (Catholic Church) ತಮ್ಮ ಧರ್ಮದ ಮತ್ತು ಮತಾಚಾರದ ಬೆಲೆಗಳನ್ನು ಉದ್ಧರಿಸ ಬೇಕೆಂದು ಮಹಾ ಪ್ರಯತ್ನಗಳನ್ನು ಮಾಡುತ್ತಿರುವ ಕಾಲದಲ್ಲಿ ಪ್ರಕಟವಾ ಯಿತು. ಆ ಕಾಲದಲ್ಲಿ ಹಿಂದಿನವರ ಔದಾಸೀನ್ಯದಿಂದ ಕ್ರಿಶ್ಚಿಯನ್ ಮತದ ಆಧ್ಯಾತ್ಮಿಕ ರಿಕ್ಥ ಕೇವಲ ಕ್ಷೀಣಗತಿಗೆ ಬಂದಿತ್ತು. ಇಂಥ ಜೀರ್ಣೋದ್ಧಾರದ ಯತ್ನದ ಕಾಲದಲ್ಲಿ ಬಂದ ಮೆಕಿಯಾವೆಲ್ಲಿಯ ಕೃತಿಯ ವಿಚಾರದಲ್ಲಿ ಪಕ್ಷ ಗಳಿಂದ ಬರೆಯಲ್ಪಟ್ಟುದು ರಾಗರಹಿತವಾದ ವಿಮರ್ಶೆಯಲ್ಲ, ಕೋಪಯುಕ್ತ ಮತ್ತು ಹಾನಿಕಾರಕ ಆದ ಪ್ರತಿಪಾದನೆ ಆದದ್ದು ಅನಿವಾರ್ಯ. ಅದನ್ನು ಬರೆದವರು ಈತನು ತನ್ನ ಗ್ರಂಥಗಳಿಂದ ತಮ್ಮ ಮತ ಮತ್ತು ಸಂಸ್ಕೃತಿಯ ಮೂಲವನ್ನೇ ನಾಶಮಾಡಲು ಯತ್ನಿಸುತ್ತಾನೆಂದು ತಿಳಿದಿದ್ದದ್ದು ಇದಕ್ಕೆ ಕಾರಣ.

ಮೆಕಿಯಾವೆಲ್ಲಿಯ ಬೋಧನೆಯು ಎಷ್ಟು ಕ್ರಾಂತಿಯುತವಾಗಿದ್ದು

ದೆಂದರೆ ಅವನ ಪಕ್ಷದವರೂ ಕೂಡ ಅವನ ದರ್ಶನಕ್ಕೆ ನೀರು ಬೆರೆಸಿ ಕಷ್ಪರ ತೆಗೆಯಲು ಉದ್ಯುಕ್ತರಾಗಬೇಕಾಯಿತು. ಹೀಗಾಗಿ ಅವರು ರಾಜನೀತಿ ಗ್ರಂಥಕ್ಕೆ ಆಧಾರಹೀನ ಅಥವಾ ಅಲಂಕಾರಯುತವಾದ ಅರ್ಥವನ್ನು ಕಲ್ಪಿಸಿ ಟಿಪ್ಪಣಿಗಳನ್ನು ಬರೆದರು. ಮೆಕಿಯಾವೆಲ್ಲಿಯು ದುಷ್ಟರಾಜರುಗಳಿಗೆ, ಅವರನ್ನು ನಾಶಮಾಡುವ ಉದ್ದೇಶದಿಂದ ಬೇಕೆಂತಲೇ ದುರ್ಬೋಧನೆಯನ್ನು ಮಾಡಿದನು ಎಂದು ಹೇಳಿದರು. ಕ್ರೈಸ್ತ ಧರ್ಮಪೀಠದ ವಿರೋಧವು ಎಷ್ಟು ಪ್ರಬಲವಾಗಿತ್ತೆಂದರೆ, 1559ನೆಯ ಇಸವಿಯಿಂದ ಅರ್ಧ ಶತಮಾನಕಾಲ ಈ ಪುಸ್ತಕವನ್ನು ಅಚ್ಚುಹಾಕುವುದೇ ಸಾಧ್ಯವಾಗಲಿಲ್ಲ. ಆದರೂ ಈ ಕಾಲದಲ್ಲಿಯೂ ಮನುಷ್ಯರಭಾವನೆಗಳಲ್ಲಿ ಇದರ ಜೀವಾಂಕುರದ ಪ್ರಭಾವ ಕಾಣುತ್ತಿತ್ತು.

ನಿಜವಾಗಿಯೂ ಕ್ಯಾಥೊಲಿಕ (Catholics) ರೂ ಕೂಡಾ, ತಮ್ಮ ಮತಕ್ಕೆ ವಿರೋಧಿಗಳಾದವರನ್ನೂ, ಪೋಪರ ಸರ್ವಾಧಿಕಾರವನ್ನು ನಿರಾಕರಿಸಿದವರನ್ನೂ, ನಾಶಪಡಿಸುವ ಕಾರ್ಯದಲ್ಲಿ ಮೆಕಿಯಾವೆಲ್ಲಿ, ಬೋಧಿಸಿದ ನೀತಿಯನ್ನೇ ಪ್ರಯೋಗಿಸುತ್ತಿದ್ದರು.

ಮೆಕಿಯಾವೆಲ್ಲಿಗೆ ಅಧಿಕಾರ ಸ್ಥಾನದ ವೈರ ಉತ್ಪತ್ತಿಯಾದದ್ದು ಇಟಲಿಯಲ್ಲಲ್ಲ; ಫ್ರಾನ್ಸಿನಲ್ಲಿ ಮತ್ತು ಇಂಗ್ಲೆಂಡಿನಲ್ಲಿ. ಈ ವೈರಕ್ಕೆ ಕಾರಣ ಪೋಪರು ಮೆಕಿಯಾವೆಲ್ಲಿಯ ತಂತ್ರವನ್ನೇ ತಮ್ಮ ಮೇಲೆ ಪ್ರಯೋಗಿಸುತ್ತಿರುವರೆಂಬ ಆ ಜನರ ಭಾವನೆ. ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳಲ್ಲಿ ಮೆಕಿಯಾವೆಲ್ಲಿ ತತ್ವವೆಂದರೆ ದ್ರೋಹ ಎಂಬುದರ ಸಮಾನಾರ್ಥ ಪದವೆಂದಾಯಿತು. ಈ ದೇಶಗಳಲ್ಲಿ ಪೋಪರ ದುಷ್ಟನೀತಿ ಎಲ್ಲ ಮೆಕಿಯಾವೆಲ್ಲಿಯ ಉಪದೇಶದ ಫಲವೆಂದು ನಂಬುತ್ತಿದ್ದರು.

ಹದಿನೇಳನೆಯ ಶತಮಾನದಲ್ಲೂ ಕೂಡಾ ಮೆಕಿಯಾವೆಲ್ಲಿಯ ಬೋಧೆಯ ನಿಜ ಅರ್ಥ ಜನಗಳಿಗೆ ಮನದಟ್ಟಾಗಿರಲಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಆಗ ಇನ್ನೂ ನಿಂದಕರು ಬಹುಜನ, ಸಮರ್ಥಕರು ವಿರಳ. ಆದರೆ ಸಮರ್ಥಕರಲ್ಲಿ ಆ ಕಾಲದ ಶ್ರೇಷ್ಠ ಮೇಧಾವಿಗಳು ಹಲವರಿದ್ದರು. ಇಂಗ್ಲೆಂಡಿನಲ್ಲಿ ಫ್ರಾನ್ಸಿಸ್ ಬೇಕನ್ (Francis Bacon) ಮೆಕಿಯಾವೆಲ್ಲಿಯ ವಿಚಾರಕ್ರಮದ ವ್ಯಧಿಕರಣವನ್ನು ಬದಿಗಿಟ್ಟು ಅಧಿಕರಣಾಂಶವನ್ನು, ಅದರಲ್ಲಿ ವಸ್ತುಸ್ಥಿತಿಯನ್ನು ಗ್ರಹಿಸುವ ರೀತಿಯನ್ನು ವಿಶೇಷವಾಗಿ ಮೆಚ್ಚಿದ.

ಫ್ರಾನ್ಸಿನಲ್ಲಿ ಡೆಕಾರ್ಟೆ (Descartes) ಪ್ರಯೋಜನಕಾರಿಯಾದುದನ್ನು ಸಂಗ್ರಹಿಸುವ ಉದ್ಯಮದಲ್ಲಿ ಧರ್ಮ ಜಿಜ್ಞಾಸೆಗೆ ಸ್ಥಾನವಿಲ್ಲವೆಂಬ ಮೆಕಿಯಾವೆಲ್ಲಿಯ ರಾಜನೀತಿ ಸೂತ್ರವನ್ನು ಅನುಮೋದಿಸಿದನು.

ಉತ್ತರೋತ್ತರ ಮೆಕಿಯಾವೆಲ್ಲಿಯ ಸಿದ್ಧಾಂತದ ಚರ್ಚೆಯೆಲ್ಲಾ ಅವನು ಹೆಚ್ಚು ಗಮನಕೊಡದಿದ್ದ ಒಂದು ವಿಷಯದ ಸೂಕ್ಷ್ಮ ಮತ್ತು ಸಾವಕಾಶ ಪರೀಕ್ಷೆಯಲ್ಲಿ ಕೇಂದ್ರೀಕೃತವಾಯಿತು. ಆ ವಿಷಯ ಇದು: ರಾಜಕೀಯ ವ್ಯವಹಾರಗಳು ಪರತಂತ್ರ ಅಲ್ಲ ಎಂದು ಈತ ಪ್ರತಿಪಾದಿಸುತ್ತಾನೆ. ಹಾಗಾದರೆ ಈ ವ್ಯವಹಾರಕ್ಕೂ ಧರ್ಮಪರವಾದ ವರ್ತನೆಗೂ ಯಾವ ಅನುಬಂಧ ಇರಬೇಕು? ಈ ವಿಷಯದಲ್ಲಿ ಮೆಕಿಯಾವೆಲ್ಲಿ ಏನು ಹೊಸ ಸಲಹೆಯನ್ನು ಕೊಟ್ಟನು?

18ನೆಯ ಶತಮಾನದ ಉತ್ತರಾರ್ಧ ದಿಂದಮೆಕಿಯಾವೆಲ್ಲಿಯ ಉಪದೇಶವು ಪುನರ್ವಿಮರ್ಶೆಗೆ ಬಂತು. ಆ ಕಾಲದಲ್ಲಿ ಯೂರೋಪಿನಲ್ಲಿನ ಸರಕಾರಗಳ ರಚನೆಯೇ ಆಮೂಲಾಗ್ರವಾಗಿ ರೂಪಾಂತರವನ್ನು ಹೊಂದುತ್ತಿತ್ತು. ಉದಾರಿ ಭಾವನೆಗಳ ನವೀನ ಬೀಜಗಳು ಮೊಳೆಯುತ್ತಿದ್ದವು; ಮತ್ತು ಈ ಸನ್ನಿವೇಶದಲ್ಲಿ ಮೆಕಿಯಾವೆಲ್ಲಿಯ ಕೃತಿಯ ಪುನರ್ ವಿಮರ್ಶೆಯು ಜರಗಿತು.

ಆದರೆ, ಆಗ ಉದ್ಭವವಾದ ತೀರ್ಪುಗಳು ಸಲ್ಲುವ ವಿಮರ್ಶೆಯಲ್ಲ; ಕೇವಲ ಏಕಪಕ್ಷೀಯವಾಗಿದ್ದುವು. ಪ್ರತಿಯೊಬ್ಬರೂ ಮೆಕಿಯಾವೆಲ್ಲಿಯ ಅಭಿಪ್ರಾಯಗಳನ್ನು ತಮ್ಮ ಸದ್ಯದ ಸಮಸ್ಯೆಗಳಿಗೆ ಹೊಂದಿಸಲು ಯತ್ನ ಮಾಡುತ್ತಿದ್ದರು. ಆದ್ದರಿಂದ ಮೆಕಿಯಾವೆಲ್ಲಿಯನ್ನು ಕುರಿತು ಆಗಿನ ವಿಮರ್ಶೆಯು ಆ ವಿಮರ್ಶೆಯನ್ನು ಮಾಡಿದ ಸಮಾಜದ ತಾತ್ಕಾಲಿಕ ಚರಿತ್ರೆ ಎಂದು ಹೇಳಿದರೆ ಸಲ್ಲುತ್ತದೆ.

ಈ ಹೇಳಿಕೆ ಇಟಲಿಯೊಳಗಿನ ವಿಮರ್ಶೆಗೆ ವಿಶೇಷವಾಗಿ ಅನ್ವಯಿಸುತ್ತದೆ. ಮೆಕಿಯಾವೆಲ್ಲಿಯ ದೇಶಬಾಂಧವರು ಇವನನ್ನು ಇಟಾಲಿಯನ್ ಜನಾಂಗದ ಪುನರ್ಜನ್ಮದ ಜನ್ಮಋಷಿಯನ್ನಾಗಿ ಕಾಣಲು ಇಷ್ಟಪಟ್ಟರು. 19ನೆಯ ಶತಮಾನದ ಮೊದಲನೆಯ ಅರ್ಧದಲ್ಲಿ ಇತರ ದೇಶಗಳಿಂದ ಅಪಹರಿಸಲ್ಪಟ್ಟಿದ್ದ ತಮ್ಮ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಲು ಇವರು ಎಲ್ಲರೂ ಸಾಹಸ ಮಾಡುತ್ತಿದ್ದರು. ಈ ಸ್ವಾತಂತ್ರ್ಯ ನಾಶಕ್ಕೆ ಮೆಕಿಯಾವೆಲ್ಲಿಯೇ ಖುದ್ದು ಆಹುತಿಯಾದನೆಂದು ಅವರು ತಿಳಿದಿದ್ದರು. ಅವನ ಬರವಣಿಗೆಗಳಲ್ಲಿ

ಸ್ವಾತಂತ್ರ್ಯದ ಪುನರ್ಜೀವನವಾಗಬೇಕೆಂಬ ಆಗ್ರಹಪೂರ್ವಕವಾದ ಬೇಡಿಕೆಗಳನ್ನು ಅವರು ಕಂಡರು. ಅದು ಕೇವಲ ತತ್ಕಾಲೋಚಿತವಾದ ಟೀಕೆಯೆಂದು ಖಂಡಿತವಾಗಿ ಹೇಳಬಹುದು. ಏತಕ್ಕೆಂದರೆ 19ನೆಯ ಶತಮಾನದಲ್ಲಿನ ಹೋರಾಟದಿಂದ ಹೊರಮೂಡಿದ ಸಂಯುಕ್ತ ಇಟಲಿಗೂ, ಮೆಕಿಯಾವೆಲ್ಲಿ ಮೂರು ಶತಮಾನಗಳ ಹಿಂದೆ ತನ್ನ ಬರವಣಿಗೆಯಲ್ಲಿ ಚಿತ್ರಿಸಿದ್ದ ಜನಾಂಗ ಸಂಸ್ಥಾನಕ್ಕೂ ಇರುವ ಹೋಲಿಕೆಬಹಳ ಸ್ವಲ್ಪ.

ಮೆಕಿಯಾವೆಲ್ಲಿಯ ಶಾಸ್ತ್ರೀಯ ಮೌಲ್ಯವನ್ನು ಸರಿಯಾಗಿ ನಿರ್ಣಯಿಸಿ ಅವನ ಗ್ರಂಥಗಳ ನ್ಯಾಯಬದ್ಧ ತುಲನಕ್ಕೆ ಅಂಕುರಾರ್ಪಣ ಕೊಟ್ಟ ವಿಮರ್ಶಕನು ಫ್ರಾನ್ಸೆಸ್ಕೋ ಡಿ ಸ್ಯಾಂಕ್ಟಿಸ್ (Francesco de Sanctis). ಈತನು ಇಟಾಲಿಯನ್ ಸಾಹಿತ್ಯದ ಅತಿ ವಿಚಕ್ಷಣ ವಿಮರ್ಶಕನೆಂದು ಜನಗಳ ಭಾವನೆ. ಈಗಲೂ ಇವನ ನಿರ್ಣಯಗಳನ್ನು ಜನಗಳು ಒಪ್ಪುತ್ತಾರೆ. ಈತನು ಮೆಕಿಯಾವೆಲ್ಲಿಯ ಗ್ರಂಥಗಳನ್ನು ಅವನವೇ ಆದ ಮೂಲತತ್ವಗಳನ್ನನುಸರಿಸಿ, ಪರಿಶೀಲಿಸಿ ಅವುಗಳು ಮೆಕಿಯಾವೆಲ್ಲಿಯ ಕಾಲದ ಇತಿಹಾಸದ ಹಿನ್ನೆಲೆಯೆಂದು ಪ್ರತಿಪಾದಿಸಿದ್ದಾನೆ. ಡಿ ಸ್ಯಾಂಕ್ಟಿಸನ ದೃಷ್ಟಿಯಲ್ಲಿ ಮೆಕಿಯಾವೆಲ್ಲಿಯ ಗ್ರಂಥವು ಆಧುನಿಕ ಸಂಸ್ಕೃತಿಗೆ ನಿಜವಾದ ಒಂದು ದತ್ತಿ. ಅದು ಪ್ರಾಪಂಚಿಕ ಜೀವನದಲ್ಲಿ ನಮಗೆ ಪುನಃ ನಂಬಿಕೆಯನ್ನು ಕೊಡುತ್ತದೆ; ಆ ಜೀವನಕ್ಕೆ ಒಂದು ಧ್ಯೇಯವಿದೆ; ಆ ಧ್ಯೇಯವನ್ನು ನಮ್ಮ ನೈಸರ್ಗಿಕ ಶಕ್ತಿಯಿಂದ ಸಾಧಿಸುವ ಜವಾಬ್ದಾರಿ ನಮ್ಮದು; ಅದಕ್ಕೋಸ್ಕರ ಮಾನವ ಜೀವನ ಮತ್ತು ಮಾನವ ಕರ್ಮ ಎಂಬವು ಗೌರವಯುತವಾದ ವಸ್ತುಗಳು ಎಂದು ಮೆಕಿಯಾವೆಲ್ಲಿಯ ದರ್ಶನವೆಂಬುದಾಗಿ ಡಿ ಸ್ಯಾಂಕ್ಟಿಸನ ತೀರ್ಪು.

ನಮ್ಮ ಪ್ರಪಂಚ ನಮ್ಮ ನಡತೆಗೆ ಅನುರೂಪವಾಗಿರುತ್ತದೆ; ಪ್ರತಿಯೊಬ್ಬನೂ ತಾನೇ ತನ್ನ ದೈವ, ತನ್ನ ಬಲ. ಇದೇ ಮೆಕಿಯಾವೆಲ್ಲಿಯ ಬೋಧೆ ,ಎಂದು ಡಿಸ್ಯಾಂಕ್ಟಿಸ್ ಉದ್ಧರಿಸಿ ಹೇಳುತ್ತಾನೆ. ಇಟಾಲಿಯನ್ ವಿಮರ್ಶೆ ಮಾತ್ರವಲ್ಲ, ಈಚಿನ ಎಲ್ಲ ವಿಮರ್ಶೆಯೂ ಡಿ ಸ್ಯಾಂಕ್ಟಿಸನ ಈ ಅಭಿಪ್ರಾಯದಿಂದ ಸ್ಫೂರ್ತಿಪಡೆದಿದೆ.

ಅನುಕ್ರಮಣಿಕೆ

ಸಮರ್ಪಣೆ

ನಿಕೋಲೋ ಮೆಕಿಯಾವೆಲ್ಲಿ, ಪೀರೋ ಡಿ ಮೆಡಿಚಿ ಯವರ ಪುತ್ರರು ಮಹಾ ಯಶಸ್ವಿಯಾದ ಲೊರೆನ್‌ಜೊರವರ ಸನ್ನಿಧಾನಕ್ಕೆ ಸಮರ್ಪಿಸುವುದು

ಪ್ರಭುಗಳ ಅನುಗ್ರಹವನ್ನಪೇಕ್ಷಿಸುವವರು ಸಾಮಾನ್ಯವಾಗಿ ಪ್ರಭುಗಳು ಬೆಲೆಕಟ್ಟುವ, ಅಥವಾ ಅವರಿಗೆ ವಿಶೇಷವಾಗಿ ಆನಂದವನ್ನುಂಟುಮಾಡುವ ವಸ್ತುಗಳ ನಜರನ್ನೊಪ್ಪಿಸಿ ಅವರ ಪರಿಚಯವನ್ನು ಸಂಪಾದಿಸುತ್ತಾರೆ. ಹೀಗೆ ಮಾಡುವುದರ ಪ್ರತಿಫಲವಾಗಿ ಈ ಅರ್ಥಿಗಳಿಗೆ ಬಹು ವೇಳೆ ಕುದುರೆಗಳೋ, ಆಯುಧಗಳೋ, ಕಿನ್‌ಕಾಬು ಬಟ್ಟೆಗಳೋ, ಒಡವೆಗಳೋ ಅವರವರ ಯೋಗ್ಯತಾನುಸಾರ ಖಿಲ್ಲತ್ತಾಗಿ ದೊರೆಯುತ್ತವೆ. ಮಹಾ ಪ್ರಭುಗಳಾದ ತಮ್ಮ ದರ್ಶನದ ಮತ್ತು ಸೇವೆಯ ಅರ್ಥಿಯಾದ ನಾನು ತಮಗೆ ಕಾಣಿಕೆಯಾಗಿ ಸಮರ್ಪಿಸಲು ಯೋಗ್ಯವಾದ ವಸ್ತುವಿಗಾಗಿ ನನ್ನ ಬೊಕ್ಕಸವನ್ನು ಶೋಧಿಸಲಾಗಿ, ಅದರಲ್ಲಿ ನನಗೆ ದೊರೆತ ಅತ್ಯುತ್ತಮ ವಸ್ತುವೆಂದು ನನಗೆ ಕಂಡುಬಂದದ್ದು—ನಾನು ಆಧುನಿಕ ರಾಜಕಾರ್ಯಗಳ ಸ್ವಂತ ವ್ಯವಹಾರದಿಂದಲೂ, ಪುರಾತನ ರಾಜನೀತಿಯ ನಿರಂತರ ವಿಚಾರದಿಂದಲೂ, ಗಳಿಸಿದ ಮಹಾಪುರುಷರ ನೀತಿ ಮತ್ತು ಅರ್ಥಸಾಧನೆಯ ತಿಳುವಳಿಕೆ. ಇದನ್ನು ರಾಶಿಮಾಡಿ, ದೀರ್ಘಕಾಲ ಪರಿಶೋಧಿಸಿ, ಇದರಲ್ಲಿನ ಜೀವಾಳವನ್ನು ಸಣ್ಣ ಗಾತ್ರದ ಪ್ರಬಂಧವಾಗಿ ಸಂಗ್ರಹಿಸಿ, ಈ ಪ್ರಬಂಧವನ್ನು ಸನ್ನಿಧಾನಕ್ಕೆ ಒಪ್ಪಿಸಲು ಧೈರ್ಯಮಾಡಿದ್ದೇನೆ. ಇದು ತಮ್ಮ ಸ್ವೀಕಾರಕ್ಕೆ ಯೋಗ್ಯವಾದ ಕಾಣಿಕೆಯೆಂದು

ಹೇಳಲು ನನಗೆ ದಾಕ್ಷಿಣ್ಯ ಸಾಲದಾದರೂ ತಾವು ದಯಾವಂತರೆಂಬ ನನ್ನ ನಂಬಿಕೆ ಹೀಗೆ ಮಾಡಲು ನನ್ನನ್ನು ಪ್ರೇರೇಪಿಸಿರುತ್ತದೆ. ನಾನು ಬಹುಕಾಲ ಬಹುಶ್ರಮದಿಂದ ಸಂಪಾದಿಸಿದ ತಿಳುವಳಿಕೆಯನ್ನು ತಮಗೆ ಸ್ವಲ್ಪದರಲ್ಲಿ ಸುಲಭವಾಗಿ ವಶಪಡಿಸಿಕೊಳ್ಳಲು ಅನುಮಾಡುವುದರಲ್ಲಿ ನನ್ನ ಬುದ್ಧಿವಂತಿಕೆಯನ್ನೆಲ್ಲಾ ಉಪಯೋಗಿಸಿದ್ದೇನೆ. ಈ ಪ್ರಬಂಧದಲ್ಲಿ ಸಾಮಾನ್ಯವಾಗಿ ವಾಡಿಕೆ ಇರುವಂತೆ ವಾಕ್ಚಾತುರ್ಯವನ್ನಾಗಲಿ ಅಲಂಕಾರದ ಸೊಬಗನ್ನಾಗಲಿ ನಾನು ಬೆರೆಸಿಲ್ಲ. ಇದರ ವಿಷಯದ ಗೌರವ, ಇದರ ಸತ್ಯ ಸಮಂಜಸತೆಗಳಿಂದ, ಇದಕ್ಕೆ ಮೆಚ್ಚಿಗೆ ದೊರೆಯದಿದ್ದರೆ ಬೇರೆ ತಂತ್ರಗಳಿಂದ ಬರಬಹುದಾದ ಮೆಚ್ಚಿಗೆಯೇ ನನಗೆ ಬೇಡ. ನನ್ನಂಥ ಅಲ್ಪ ಮನುಷ್ಯ ದೊಡ್ಡ ಪ್ರಭುಗಳ ರಾಜನೀತಿಯನ್ನು ಕುರಿತು ಬರೆಯುವುದಲ್ಲದೆ ಅವರುಗಳ ರಾಜಕಾರ್ಯಗಳನ್ನು ವಿಧಿನಿಷೇಧಗಳಿಗೆ ಒಳಪಡಿಸಲು ಯತ್ನಮಾಡುವುದು ಅತಿ ಸಾಹಸದ ಅಧಿಕಪ್ರಸಂಗವೆಂದು ಯಾರೂ ನಿಂದಿಸಲಾಗದು. ಹೇಗೆ ಭೂಭಾಗವನ್ನು ನಿರ್ದುಷ್ಟವಾಗಿ ತಿಳಿದುಕೊಳ್ಳುವವರು ಕೋವಿನಲ್ಲಿ ಇಳಿದು ಬೆಟ್ಟಗಳ ರೂಪವನ್ನೂ, ಬೆಟ್ಟಗಳನ್ನು ಏರಿ ಕೋವುಗಳ ರೂಪವನ್ನೂ ಪರಿಶೀಲಿಸಬೇಕೋ, ಹಾಗೆ ಪ್ರಜೆಗಳ ಸ್ಥಾನಕ್ಕಿಳಿದು ರಾಜರ ಸ್ವಭಾವವನ್ನೂ, ರಾಜರ ಉನ್ನತಿಗೆ ಏರಿ ಪ್ರಜೆಗಳ ಸ್ಥಿತಿಗಳನ್ನೂ ರಾಜನೀತಿ ನಿಪುಣನು ಪರಿಶೀಲಿಸಬೇಕು.

ಮಹಾಪ್ರಭೋ, ಈ ಪುಸ್ತಕವನ್ನು ನಾನು ಎಷ್ಟು ಆದರದಿಂದ ಒಪ್ಪಿಸಿದ್ದೇನೋ, ಅಷ್ಟು ಆದರದಿಂದ ಸ್ವೀಕರಿಸಿ, ತಾವು ಅದನ್ನು ಸಾವಧಾನ ಚಿತ್ತದಿಂದ ಓದಿ ಅದರಲ್ಲಿನ ವಿಷಯಗಳನ್ನು ಅವ್ಯಗ್ರ ಬುದ್ಧಿಯಿಂದ ನಿದಿಧ್ಯಾಸಿಸಿದರೆ ನನಗೆ ತಮ್ಮಲ್ಲಿರುವ ಪರಮ ಭಕ್ತಿಯೂ, ತಾವು ತಮ್ಮ ಸಾಮರ್ಥ್ಯಕ್ಕೂ, ಸದ್ಗುಣಗಳಿಗೂ ಸಲ್ಲಬೇಕಾದ ಮಹೋನ್ನತಿಯನ್ನು ಪಡೆಯಬೇಕೆಂಬ ನನ್ನ ಏಕಕಾಂಕ್ಷೆಯೂ ತಮಗೆ ವ್ಯಕ್ತವಾಗುತ್ತದೆ. ಈ ಪರಮ ವೈಭವದಲ್ಲಿ ತಮ್ಮ ಕಟಾಕ್ಷ ಬಡಬಗ್ಗರ ಕಡೆ ಬಿದ್ದರೆ, ನಾನು ಎಷ್ಟು ಅನ್ಯಾಯವಾಗಿ, ಎಷ್ಟು ದೀರ್ಘಕಾಲ, ಎಷ್ಟು ಅವಿಚ್ಛಿನ್ನವಾದ ದೌರ್ಭಾಗ್ಯಕ್ಕೆ ಗುರಿಯಾಗಿದ್ದೇನೆಂಬುದನ್ನು ಕಾಣುವಿರಿ.

ಒಂದನೆಯ ಅಧ್ಯಾಯ

ವಂಶ ಪಾರಂಪರ್ಯವಾಗಿ ಬಂದ ರಾಜ್ಯಗಳನ್ನು ಕುರಿತು

ಪ್ರಜಾಪ್ರಭುತ್ವಗಳನ್ನು ಕುರಿತು ನಾನು ಬೇರೆ ಪ್ರಬಂಧದಲ್ಲಿ ಪ್ರಸಂಗ ಮಾಡಿರುತ್ತೇನಾದ್ದರಿಂದ, ಇಲ್ಲಿ ಅವುಗಳ ವಿಚಾರ ಹೇಳುವುದಿಲ್ಲ. ಇಲ್ಲಿ ರಾಜರ ಆಳ್ವಿಕೆಯ ರಾಜ್ಯಗಳನ್ನು ಕುರಿತು ಮಾತ್ರ ವಿಚಾರ ಮಾಡುತ್ತೇನೆ; ಅವುಗಳನ್ನು ಆಳುವುದು ಹೇಗೆ? ಅವುಗಳನ್ನು ದುರಸ್ತಾಗಿ ಉಳಿಸಿಕೊಂಡು ಬರುವುದು ಹೇಗೆ?—ಇವುಗಳನ್ನು ಹೇಳುತ್ತೇನೆ. ಖಚಿತವಾಗಿ ಇದನ್ನು ಹೇಳುತ್ತೇನೆ—ಏನೆಂದರೆ ವಂಶಪಾರಂಪರ್ಯವಾಗಿ ಆಳುವ ಆಳ್ವಿಕೆಗೆ ಬಂದ ರಾಜ್ಯವು, ಆಳುವುದಕ್ಕೂ, ಕಾಪಾಡುವುದಕ್ಕೂ, ಹೊಸ ಸಂಪಾದನೆಯ ರಾಜ್ಯಕ್ಕಿಂತಲೂ ಸುಲಭತರ. ಇಂಥ ಪಿತ್ರಾರ್ಜಿತ ರಾಜ್ಯಗಳಲ್ಲಿ ಪ್ರಭುಗಳು ತಮ್ಮ ಹಿಂದಿನವರ ಮಾರ್ಗವನ್ನು ಅನುಸರಿಸಿ, ಆಗಾಗ ಒದಗಬಹುದಾದ ಸಂದರ್ಭಗಳಿಗೆ ಮಾತ್ರ ತಕ್ಕಂತೆ ನಡತೆಯನ್ನು ಮಾರ್ಪಡಿಸಿಕೊಂಡರೆ ಸಾಕು. ಹೀಗೆ ಮಾಡಲು ಶಕ್ತನಾದ ದೊರೆಯು ಪ್ರಬಲ ವೈರಿಗಳ ಧಾಳಿಯಿಂದ ಉತ್ಪಾಟನವಾಗದಿದ್ದಲ್ಲಿ ತನ್ನ ಸಿಂಹಾಸನವನ್ನು ಸುಖವಾಗಿ ಉಳಿಸಿಕೊಂಡು ಅನುಭವಿಸಬಹುದು. ಒಂದು ವೇಳೆ ಸ್ಥಾನಭ್ರಷ್ಟನಾದರೂ, ಇವನ ರಾಜ್ಯವನ್ನು ಆಕ್ರಮಿಸಿಕೊಂಡ ಪರನಿಗೆ ವಿಪತ್ತು ಅಥವಾ ಭಾಗ್ಯಚ್ಯುತಿಯಾಗುವ ಸಂದರ್ಭದಲ್ಲಿ, ಇವನು ರಾಜ್ಯವನ್ನು ಮರಳಿಪಡೆಯುವ ಸಂಭವವುಂಟು. ಇಂಥ ಘಟನೆಯ ನಿದರ್ಶನವನ್ನು ಇಟಲಿಯ ಚರಿತ್ರೆಯಲ್ಲಿ ಕಾಣಬಹುದು. ಡ್ಯೂಕ್ ಆಫ್ ಫೆರಾರ (Duke of Ferrara) 1484ನೆಯ ಇಸವಿಯಲ್ಲಿ ವೆನಿಷಿಯನ್ನರ

(Venetians) ಮತ್ತು ಅನಂತರ ಹತ್ತನೆಯ ಪೋಪ್ ಜೂಲಿಯಸ (Pope Julius X)ನ ಧಾಳಿಯನ್ನು ಶೌರ್ಯದಿಂದ ಎದುರಿಸಿ ರಾಜ್ಯವನ್ನು ಕಳೆದುಕೊಂಡ ವನು, ತಾನು ಹಿಂದಿನ ರಾಜಮನೆತನಸ್ಥನೆಂಬ ಒಂದು ಕಾರಣದಿಂದಲೇ ಪುನಃ ರಾಜ್ಯದಲ್ಲಿ ಸ್ಥಾಪಿತನಾದನು. ಮೊದಲಿನಿಂದಲೂ ಆಳಿದ ಪೀಳಿಗೆಯ ದೊರೆಯು ಬಹಳ ದುಷ್ಟಸ್ವಭಾವದವನಾದ ಹೊರತು, ಪ್ರಜೆಗಳ ನೈಸರ್ಗಿಕ ಮಮತೆಗೆ ಪಾತ್ರನಾಗಿರುತ್ತಾನೆ; ಅವನು ಪ್ರಜೆಗಳನ್ನು ಮಾಮೂಲು ಬಿಟ್ಟು ಹಿಂಸಿಸುವುದೂ ಇಲ್ಲ. ಪದ್ಧತಿಗೆ ತಪ್ಪದ ಆಡಳಿತವು ಪ್ರಜೆಗಳಿಗೆ ಅಭ್ಯಾಸ ಬಲದಿಂದ ಹಿತವಾಗಿರುತ್ತದೆ. ಸ್ಥಾಪಿತವಾದುದರಲ್ಲಿ ಯಾವುದಾದರೂ ಹೊಸ ದನ್ನು ಸೇರಿಸಿದರೆ ಅಲ್ಲವೆ ಹಳೆಯ ಗೋಡೆಗೆ ಹೊಸದನ್ನು ತೇಪೆ ಹಾಕಿದ ಹಾಗೆ ಬಿರುಕುಬಿಟ್ಟು ದುರ್ಬಲತೆ ಕಾಣುವುದು?

ಎರಡನೆಯ ಅಧ್ಯಾಯ

ಮಿಶ್ರ ಪ್ರಾಂತ್ಯಗಳು

ನಿಜವಾಗಿಯೂ ಕಠಿಣವಾದ ಸಮಸ್ಯೆಗಳು ಹುಟ್ಟುವುದು ಹೊಸದಾಗಿ ಗೆದ್ದು ತನ್ನ ರಾಷ್ಟ್ರಕ್ಕೆ ಸೇರಿಸಿಕೊಂಡ ಪರ ಪ್ರಾಂತ್ಯಗಳಲ್ಲಿ. ಇಂಥವುಗಳಿಗೆ ಮಿಶ್ರರಾಜ್ಯಗಳೆನ್ನಬಹುದು. ಇಂಥವುಗಳಲ್ಲಿ ಥಟಕ್ ಎಂದು ಏಳುವ ದಂಗೆಗಳೂ ಕ್ರಾಂತಿಗಳೂ ಹೊಸ ಸಂಪಾದನೆಗೆ ಸಹಜವಾದ ವಕ್ರತೆ ಮತ್ತು ಹಟಮಾರಿತನದ ಫಲವೆನ್ನಬೇಕು. ಜನರು ತಮ್ಮ ಈಗಿನ ರಾಜನನ್ನು ಉರುಳಿಸಿದರೆ ತಮ್ಮ ಗತಿ ಉತ್ತಮವಾಗಬಹುದೆಂಬ ಆಶೆಯೇ ದಂಗೆಗೆ ಕಾರಣ. ಸಾಮಾನ್ಯವಾಗಿ ದಂಗೆಯ ಪರಿಣಾಮವಾಗಿ ಇದ್ದಗತಿ ಇನ್ನೂ ಕೆಟ್ಟು ಆಶಾಭಂಗವಾಗುತ್ತದೆ.

ಪರಪ್ರಾಂತ್ಯಗಳನ್ನು ಗೆದ್ದ ರಾಜನು ಅವುಗಳ ಪ್ರಜೆಗಳ ದ್ವೇಷಕ್ಕೆ ಗುರಿಯಾಗುವುದಕ್ಕೆ ಹೊಸ ರಾಷ್ಟ್ರದ ಆಳುವಿಕೆಯಲ್ಲಿ ಅನಿವಾರ್ಯವಾದ ಕಾರಣಗಳುಂಟು. ಪ್ರಜೆಗಳ ಮೇಲೆ ಸೈನಿಕರನ್ನು ಹೂಡುವುದು, ಹೊಸ ತೆರಿಗೆಗಳನ್ನು ಹಾಕುವುದು, ಇವುಗಳೇ ಮೊದಲಾದ ಸಾವಿರ ದಬ್ಬಾಳಿಕೆಗಳು ಜನಗಳಲ್ಲಿ ಹೊಟ್ಟೆಯುರಿಯನ್ನುಂಟುಮಾಡುವುವು. ರಾಜರು ಸೋತವರ ಅವಿಶ್ವಾಸಕ್ಕೆ ಗುರಿಯಾಗುವುದಲ್ಲದೆ, ಹೊಸ ರಾಷ್ಟ್ರದಲ್ಲಿನ ತಮ್ಮ ಪಕ್ಷದವರ ಪ್ರೀತಿಯನ್ನೂ ಕಳೆದುಕೊಳ್ಳುತ್ತಾರೆ. ಏಕೆಂದರೆ, ಈ ಪಕ್ಷದವರು ತಮ್ಮ ಸಹಾಯಕ್ಕೆ ಮಿತಿಮೀರಿದ ಪ್ರತಿಫಲದ ಆಶೆಯಿಟ್ಟುಕೊಂಡಿದ್ದವರಾಗಿ, ಅದು ದೊರೆಯದಿದ್ದುದರಿಂದ ಅತೃಪ್ತರಾಗುತ್ತಾರೆ. ಇವರಿಂದ ಹಿಂದೆ ಉಪಕಾರ ಹೊಂದಿದ ರಾಜನು ಇವರ ಅತೃಪ್ತಿಯನ್ನು ಕಠಿಣ ಕ್ರಮದಿಂದ ಅಡಗಿಸುವ ಹಾಗೂ ಇಲ್ಲ.

ಪರ ಪ್ರಾಂತ್ಯವನ್ನು ಆಕ್ರಮಿಸಬೇಕೆಂಬ ದೊರೆಯು ಎಷ್ಟು ಬಲ ಶಾಲಿಯೇ ಆಗಲಿ, ಅವನ ಸೈನ್ಯವು ಎಷ್ಟು ಸಾಮರ್ಥ್ಯವುಳ್ಳದ್ದೇ ಆಗಲಿ, ಅವನು ಆ ಆಕ್ರಮಣವನ್ನು ಪ್ರಾರಂಭಿಸುವುದಕ್ಕೆ ಮುನ್ನ, ಆ ಪರರಾಷ್ಟ್ರದ ಪ್ರಜೆ ಗಳಲ್ಲಿ ಕೆಲವರನ್ನಾದರೂ ತನ್ನ ಹಿತದವರನ್ನಾಗಿ ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಳ್ಳದೆ ಇದ್ದುದರಿಂದಲೇ ಹನ್ನೆರಡನೆಯ ಲೂಯಿ (Louis XII)ಯು ಮಿಲಾನ (Milan) ನ್ನು ಎಷ್ಟು ಬೇಗನೆ ಗೆದ್ದನೋ ಅಷ್ಟೇ ಬೇಗ ಕಳೆದು ಕೊಂಡನು. ಇವನು ಬಂದರೆ ಅನುಕೂಲವೆಂದು ಬಾಗಿಲು ತೆರೆದವರು ಕೂಡ ಇವನ ಗರ್ವವನ್ನೂ, ಭಾರವನ್ನೂ, ತಡೆಯಲಾರದೆ ಶತ್ರುಗಳಾಗಿ ತಿರುಗಿಬಿದ್ದರು. ಒಂದು ಸಲ ಗೆದ್ದ ಅನಂತರ ದಂಗೆಯಿಂದ ಕೈತಪ್ಪಿ ಹೋಗಿ, ಎರಡನೆಯ ಸಲ ಗೆಲ್ಲಬೇಕಾಗಿ ಬಂದ ದೇಶಗಳ ಹತೋಟಿಯು ಬಹಳ ಕಷ್ಟ. ಜನಗಳು ದಂಗೆಯೆದ್ದುದರಿಂದ ರಾಜ್ಯವನ್ನು ಆಕ್ರಮಿಸಿದವನಿಗೆ ಅವರಲ್ಲಿ ಏನು ದಾಕ್ಷಿಣ್ಯವಿರಲೂ ಕಾರಣವಿಲ್ಲ. ತಪ್ಪಿತಸ್ಥರನ್ನು ಶಿಕ್ಷಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಅವನು ಸಂಪೂರ್ಣ ಸ್ವಾತಂತ್ರ್ಯವುಳ್ಳವನಾಗಿರು ತ್ತಾನೆ, ಮತ್ತು ತನ್ನ ಶಕ್ತಿಯಲ್ಲಿ ಇರತಕ್ಕ ನ್ಯೂನತೆಗಳನ್ನು ದುರಸ್ತುಮಾಡಿ ಕೊಳ್ಳುತ್ತಾನೆ. ಕೌಂಟ್ ಲೋಡೋವಿಕ್ಕ (Lodovick) ನು ಫ್ರೆಂಚರ ಹಸ್ತಗತ ವಾಗಿದ್ದ ಮಿಲಾನನ್ನು ರಕ್ಷಿಸುವುದಕ್ಕೆ ಮೊದಲನೆಯ ಸಲ ಆಸುಪಾಸಿನಲ್ಲಿ ನಿಂತು ಶತ್ರುಗಳನ್ನು ಪೀಡಿಸಿದರೆ ಸಾಕಾಗಿತ್ತು. ಎರಡನೆಯ ಸಲ ಅವನು ಮಿಲಾನನ್ನು ಜಯಿಸಬೇಕಾಗಿದ್ದರೆ ಫ್ರೆಂಚ್ ದೊರೆಗೆ ವಿರೋಧವಾಗಿ ಪ್ರಪಂಚವನ್ನೇ ಉದ್ರೇಕಿಸಿ ತನ್ನ ಕಡೆಗೆ ಸೇರಿಸಿಕೊಳ್ಳಬೇಕಾಗಿ ಬಂದಿತು, ಮತ್ತು ಫ್ರೆಂಚ ರನ್ನು ಇಟಲಿಯಿಂದಲೇ ಹೊರದೂಡಬೇಕಾಗಿ ಬಂದಿತು. ವಸ್ತುತಃ ಫ್ರೆಂಚರು ಎರಡುಸಲ ನಿವೃತ್ತರಾಗಬೇಕಾಯಿತು. ಮೊದಲನೆಯ ನಿವೃತ್ತಿಗೆ ಕಾರಣವನ್ನು ನಾನು ಮೊದಲೇ ಹೇಳಿದ್ದೇನೆ. ಎರಡನೆಯ ನಿವೃತ್ತಿಯನ್ನು ಈಗ ಚರ್ಚೆ ಮಾಡೋಣ. ಲೂಯಿ ದೊರೆಯು ಯಾವ ಪ್ರಕಾರ ಮಿಲಾನಿನ ಮೇಲೆ ತನ್ನ ಹಿಡಿತವನ್ನು ಬಿಡದೇ ಇರಬಹುದಾಗಿತ್ತು ಎಂಬುದನ್ನು ಹೇಳುತ್ತೇನೆ. ಹೊಸ ದಾಗಿ ಸಂಪಾದಿಸಿದ ರಾಜ್ಯಗಳು ಸಂಪಾದಿಸಿದವನದೇ ದೇಶದಲ್ಲಿದ್ದು ಅದರದೇ ಭಾಷೆಯನ್ನಾಡತಕ್ಕದ್ದಾಗಿರಬಹುದು, ಅಥವಾ ಬೇರೆಯದಾಗಿ ಇರಬಹುದು. ದೇಶ, ಭಾಷೆ ಎರಡೂ ಒಂದೇ ಆಗಿದ್ದರೆ, ಆ ರಾಜ್ಯವನ್ನು ಸುಖವಾಗಿ ದಕ್ಕಿಸಿ ಕೊಳ್ಳಬಹುದು. ಅದರೊಳಗೂ ಅಲ್ಲಿನ ಪ್ರಜೆಗಳಿಗೆ ಸ್ವಾತಂತ್ರ್ಯದ ಅನುಭವ

ವಿಲ್ಲದೇ ಇದ್ದರೆ ಇದ್ದದ್ದೂ ಸುಲಭ. ಇಂಥ ಪ್ರದೇಶಗಳನ್ನು ದಕ್ಕಿಸಿಕೊಳ್ಳ ಬೇಕಾದರೆ, ಅವುಗಳ ಹಿಂದಿನ ನಾಯಕರನ್ನು ಸಮಗ್ರ ಕುಟುಂಬಸಹಿತ ನಾಶ ಮಾಡಿಬಿಟ್ಟರೆ ಸಾಕು. ಇಂಥ ಪ್ರಾಂತ್ಯಗಳಲ್ಲಿ ಮಾತು, ಕಥೆ, ವ್ಯವಹಾರ, ವಾಡಿಕೆಗಳು ಮೊದಲಿನಂತೆಯೇ ನಡೆದು ಬರುವುದರಿಂದ ಅಲ್ಲಿನ ಜನರು ಹೊಸ ರಾಜನ ದೌಲತ್ತನ್ನು ತಕರಾರಿಲ್ಲದೆ ಒಪ್ಪುತ್ತಾರೆ. ಇದಕ್ಕೆ ದೃಷ್ಟಾಂತ ಗಳು ಬರ್ಗಂಡಿ (Burgandy), ಬ್ರೆಟಾನ್ (Bretagne), ಗಾಸ್ಕಾಯಿನ್ (Gascoigne) ಮತ್ತು ನಾರ್ಮಂಡಿ (Normandy) ಪ್ರಾಂತ್ಯಗಳು. ಇವು ಗಳಲ್ಲಿನ ಜನಗಳು, ಕಾನೂನು, ಪದ್ಧತಿ, ಜೀವನ ವಿಧಾನ, ಮತ್ತು ಬಹು ಮಟ್ಟಿಗೆ ಭಾಷೆ, ಇವುಗಳಲ್ಲಿ ಫ್ರೆಂಚರನ್ನೇ ಹೋಲುತ್ತಾರಾದ್ದರಿಂದ ಈ ಪ್ರಾಂತ್ಯಗಳು ಬಹುಕಾಲದಿಂದ ಫ್ರಾನ್ಸ್ ಜೊತೆಗೆ ಸೇರಿ ಫ್ರೆಂಚ್ ಆಡಳಿತ ದಲ್ಲೇ ಇವೆ. ಹೊಸ ಪ್ರಾಂತ್ಯವನ್ನು ಸಂಪಾದಿಸಿದವನು ಅದನ್ನು ದಕ್ಕಿಸಿ ಕೊಂಡು ಅನುಭವಿಸಬೇಕಾದರೆ ಎರಡು ಕಾರ್ಯಗಳನ್ನು ಜಾಗರೂಕತೆಯಿಂದ ಮಾಡಬೇಕು. ಮೊದಲನೆಯದು, ಹಿಂದಿನ ದೊರೆಯ ಕುಟುಂಬವನ್ನು ನಿರ್ಮೂಲವಾಗಿ ಉತ್ಪಾಟನ ಮಾಡಬೇಕು. ಎರಡನೆಯದು, ಹೊಸ ನಿಬಂಧನೆಗಳನ್ನೇ ಆಗಲಿ, ತೆರಿಗೆಗಳನ್ನೇ ಆಗಲಿ, ಹಾಕಬಾರದು. ಹೀಗೆ ನಡೆದು ಕೊಂಡರೆ ಹೊಸ ಪ್ರಾಂತ್ಯವು ಸ್ವಲ್ಪಕಾಲದಲ್ಲಿಯೇ ಅವನ ಹಳೇ ಪ್ರಾಂತ್ಯ ದೊಂದಿಗೆ ಸೇರಿ ಒಂದುಗೂಡಿ ಹೋಗುತ್ತದೆ. ಗೆದ್ದರಾಜ್ಯದ ಭಾಷೆ, ಪದ್ಧತಿ ಗಳು ಮತ್ತು ಕಾನೂನುಗಳಲ್ಲಿ ರಾಜನ ಸ್ವಂತ ರಾಜ್ಯಕ್ಕೆ ಬಹಳ ವ್ಯತ್ಯಸ್ತ ವಾಗಿದ್ದರೆ ಅದನ್ನು ಉಳಿಸಿಕೊಳ್ಳುವುದು ಬಹಳ ಕಷ್ಟ. ಇದಕ್ಕೆ ತುಂಬಾ ಶ್ರಮವೂ, ಸುದೈವವೂ ಬೇಕು. ಇದಕ್ಕೆ ಎಲ್ಲಕ್ಕಿಂತಲೂ ಉತ್ಕೃಷ್ಟವಾದ ಉಪಾಯ, ರಾಜನು ತಾನು ಹೊಸ ರಾಜ್ಯದಲ್ಲಿಯೇ ವಾಸವಾಗಿರುವುದು. ಇದರಿಂದ ಅವನ ಹತೋಟಿಯು ಭದ್ರವಾಗಿರುತ್ತದೆ. ಇದರ ನಿದರ್ಶನ ತುರುಕರು ಗ್ರೀಸಿನಲ್ಲಿ ಆಚರಿಸುತ್ತಿರುವ ನೀತಿ. ತುರುಕ ಚಕ್ರವರ್ತಿಯು ತನ್ನ ಸ್ಥಾನವನ್ನು ಗ್ರೀಸಿನಲ್ಲಿಯೇ ಸ್ಥಾಪಿಸಿಕೊಳ್ಳದಿದ್ದರೆ ಅವನು ಎಷ್ಟು ಸಾಹಸ ಮಾಡಿದರೂ ಯಾವ ನೀತಿಯನ್ನು ಅನುಸರಿಸಿದ್ದರೂ ಗ್ರೀಸನ್ನು ಹತೋಟಿ ಯಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ಖುದ್ದು ಅಲ್ಲಿಯೇ ಇರು ವುದರಿಂದ ಪಿತೂರಿಗಳು ಮೊಳಕೆಯಲ್ಲೇ ಗಮನಕ್ಕೆ ಬಂದು ಬೆಳೆಯುವುದಕ್ಕೆ ಮೊದಲೇ ನಿವಾರಿಸಲಾಗುತ್ತವೆ. ದೂರದೇಶದಲ್ಲಿದ್ದರೆ ಎಲ್ಲವೂ ಚಾರರ ವರದಿ

ಯಿಂದ ಗೊತ್ತಾಗಬೇಕು. ಈ ಕಾಲವ್ಯಯದಿಂದ ದೋಷವು ಬಲಿತು ಚಿಕಿತ್ಸೆಗೆ ಮೀರಿದ್ದಾಗಿ ಬಿಟ್ಟಿರುತ್ತದೆ. ಅದೂ ಅಲ್ಲದೆ ಆಳುವ ಪ್ರಭುವೇ ಸ್ಥಳದಲ್ಲಿರುವುದರಿಂದ ತಾಬೇದಾರರ ಕಾಟ ನಿವಾರಣೆಯಾಗಿ ಪ್ರಜೆಗಳಿಗೆ ದೊರೆಯಲ್ಲಿ ಪ್ರೇಮವೂ, ದುಷ್ಟರಿಗೆ ಭೀತಿಯೂ ಬೆಳೆಯುತ್ತವೆ. ಇನ್ನೊಂದು ಫಲವೇನೆಂದರೆ ಹೊರಗಿನ ಶತ್ರುಗಳು ಈ ಪ್ರಾಂತ್ಯವನ್ನು ಆಕ್ರಮಿಸಲು ಹಿಂದು ಮುಂದು ನೋಡಬೇಕಾಗುತ್ತದೆ.

ದೊರೆಯು ಸ್ವಂತವಾಗಿ ವಾಸಮಾಡುವುದಲ್ಲದೆ ಅದಕ್ಕಿಂತಲೂ ಒಳ್ಳೆಯದೆಂದೇ ಹೇಳಬಹುದಾದ ಮತ್ತೊಂದು ಉಪಾಯವುಂಟು. ಹೊಸ ಪ್ರಾಂತ್ಯದಲ್ಲಿ ಕೇಂದ್ರಪ್ರಾಯವಾಗಿರುವ ಎರಡು ಸ್ಥಾನಗಳನ್ನು ಹುಡುಕಿ ಅಲ್ಲಿ ತನ್ನವರ ಪಟ್ಟಣಗಳನ್ನು ಅಥವಾ ನೆಲಸು ನಾಡುಗಳನ್ನು ಸ್ಥಾಪಿಸುವುದು. ಇದು ಆ ಪ್ರಾಂತ್ಯದಲ್ಲಿ ಒಂದು ಸೈನ್ಯವನ್ನು ನಿಲ್ಲಿಸುವುದಕ್ಕಿಂತಲೂ ಮೇಲು. ದಂಡು ನೆಡಬೇಕೆಂದರೆ ಬಹಳ ವೆಚ್ಚದ ಕೆಲಸ. ನೆಲಸುನಾಡು ಹೆಚ್ಚು ಖರ್ಚು ಹಿಡಿಯತಕ್ಕದ್ದೇ ಅಲ್ಲ. ಇದಕ್ಕೆ ಕೆಲವು ಸ್ಥಳೀಯ ಜನರ ಭೂಮಿಗಳನ್ನು ಮತ್ತು ಮನೆಗಳನ್ನು ವಶಪಡಿಸಿಕೊಳ್ಳಬೇಕಾಗಬಹುದು. ಈ ಬಗೆಯಲ್ಲಿ ಸ್ಥಳಭ್ರಷ್ಟರಾಗುವವರು ಪ್ರಜೆಗಳಲ್ಲಿ ಬಹು ಅಲ್ಪಭಾಗ; ಮತ್ತು ಅವರು ಬೆದರಿ ಹೋಗಿರುತ್ತಾರಾದ್ದರಿಂದ ಅವರಿಂದ ಭೀತಿಯೇನೂ ಪಡಬೇಕಾದ್ದಿಲ್ಲ. ಉಳಿದವರು ತಮ್ಮ ಸ್ವಸ್ಥತೆಗೆ ಏನೂ ತೊಂದರೆ ಇಲ್ಲದ್ದನ್ನು ನೋಡಿ ತಾವು ಪಿತೂರಿ ಮಾಡಿದರೆ ತಮಗೂ ಪದಚ್ಯುತಿಯಾದೀತೆಂಬ ಭೀತಿಯಿಂದ ಶಾಂತಸ್ಥಿತಿಯಲ್ಲಿ ಇರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯವೇನೆಂದರೆ ಹೆಚ್ಚು ಖರ್ಚಿಲ್ಲದ ನೆಲಸು ನಾಡುಗಳನ್ನು ಸ್ಥಾಪಿಸುವುದೇ ಉತ್ತಮವಾದ ಹತೋಟಿಯಮಾರ್ಗ. ಆಳುವವರು ಸುಖದಿಂದಿರಬೇಕೆಂದಿದ್ದರೆ, ಜನರನ್ನು ಸಂತೋಷದಲ್ಲಿಟ್ಟುಕೊಂಡಿರಬೇಕು, ಅಥವಾ ನಾಶಮಾಡಬೇಕು. ಜನಗಳಿಗೆ ಕಿರುಕುಳಕೊಟ್ಟರೆ ಅವರು ಸಾಮಾನ್ಯವಾಗಿ ಸೇಡು ತೀರಿಸಿಕೊಳ್ಳಲು ಯತ್ನಮಾಡುವರು. ಆದರೆ ಚೇತರಿಸಿಕೊಳ್ಳದಷ್ಟು ಬಲವಾದ ಏಟನ್ನು ಕೊಟ್ಟರೆ ಅವರಿಗೆ ಪ್ರತೀಕಾರ ಮಾಡಲೂ ಶಕ್ತಿಯಿರುವುದಿಲ್ಲ. ಅದಕ್ಕೋಸ್ಕರ ಹೊಸ ಪ್ರಾಂತ್ಯದ ಪ್ರಜೆಗಳಿಗೆ ಸಣ್ಣ ಕಿರುಕುಳಗಳನ್ನು ಕೊಟ್ಟು ಪೀಡಿಸಬಾರದು. ಶಿಕ್ಷೆಮಾಡತಕ್ಕದ್ದು ಅವಶ್ಯವಿದ್ದರೆ ಸೇಡಿನ ಶಕ್ತಿಯನ್ನು ನಿರ್ಮೂಲ ಮಾಡುವ ದಂಡವನ್ನೇ ಪ್ರಯೋಗಮಾಡಬೇಕು. ನೆಲಸುನಾಡುಗಳನ್ನು ಸ್ಥಾಪಿಸುವುದರ

ಬದಲು ಅಲ್ಲಿ ಸೈನ್ಯದ ಪಾಳೆಯಗಳನ್ನು ಇಡುವುದೆಂದರೆ ಪಾಳೆಯದ ಖರ್ಚು ಪ್ರಾಂತ್ಯದ ವರಮಾನವನ್ನೆಲ್ಲ ನುಂಗಿ, ಆ ಪ್ರಾಂತ್ಯದಿಂದ ಫಾಯಿದೆಯಾಗುವ ಬದಲು ನಷ್ಟವೇ ಪರಿಣಮಿಸುವಂತೆ ಮಾಡುತ್ತದೆ. ಅಲ್ಲದೆ ಸೈನಿಕರ ಪಾಳೆಯವನ್ನು ಸ್ಥಳದಿಂದ ಸ್ಥಳಕ್ಕೆ ಬದಲಾಯಿಸುವುದರಲ್ಲಿ ಎಲ್ಲಾ ಪ್ರಜೆಗಳಿಗೂ ಹಿಂಸೆಯಾಗುವುದಲ್ಲದೆ ಸಿಪಾಯಿಗಳ ದುರ್ವರ್ತನೆಯಿಂದ ಪ್ರಜೆಗಳಿಗೆ ಕ್ರೋಧ ಹುಟ್ಟುತ್ತದೆ. ಅದಕ್ಕೋಸ್ಕರ ಯಾವ ದೃಷ್ಟಿಕೋಣದಿಂದ ನೋಡಿದರೂ ದಂಡನ್ನು ಇಡುವುದಕ್ಕಿಂತಲೂ ನೆಲಸು ನಾಡುಗಳನ್ನು ಸ್ಥಾಪಿಸುವುದು ಅನುಕೂಲ. ತನ್ನ ದೇಶಕ್ಕೆ ವ್ಯತಿರಿಕ್ತವಾದ ಕಾನೂನು ಅಭ್ಯಾಸಗಳಿರುವ ಪ್ರಾಂತ್ಯವನ್ನು ಸಂಪಾದಿಸಿದವನು ತನ್ನ ಹೊಸ ಪ್ರಾಂತ್ಯದ ನೆರೆಯಲ್ಲಿರುವ ಸಂಸ್ಥಾನಗಳಲ್ಲಿ ಅವನಿಗಿಂತ ದುರ್ಬಲರಾದವರ ಗುಂಪಿನ ಮುಖಂಡನೂ, ರಕ್ಷಕನೂ ಆಗಿ ವರ್ತಿಸಬೇಕು. ನೆರೆಯ ಬಲವಾದ ರಾಜ್ಯಗಳ ಶಕ್ತಿಯನ್ನು ತಗ್ಗಿಸುವ ಸರ್ವಪ್ರಯತ್ನವನ್ನೂ ಮಾಡಬೇಕು. ಮುಖ್ಯವಾಗಿ ಈ ಸನ್ನಿವೇಶದಲ್ಲಿ ಬಲಿಷ್ಠರಾದ ಪರಕೀಯರು ಬರದಂತೆ ನೋಡಿಕೊಳ್ಳಬೇಕು. ಅತೃಪ್ತರಾದ ಪ್ರಜೆಗಳು ಹೊರಗಿನವರನ್ನು ಕರೆಯುವ ಸಂಭವವುಂಟು. ಇದಕ್ಕೆ ನಿದರ್ಶನ ಎಟೋಲಿಯನ್ನ (Etolian) ರು ರೋಮನರನ್ನು ಗ್ರೀಸಿನೊಳಗೆ ಕರೆತಂದದ್ದು; ಹೀಗೆ ಸ್ಥಳವಂದಿಗರ ಆಹ್ವಾನದ ಮೇಲೆ ರೋಮನರು ಗ್ರೀಸನ್ನು ಪ್ರವೇಶಿಸಿದ್ದು. ರೋಮನರು ಗ್ರೀಸಿನಲ್ಲಿ ಸ್ಥಳವಂದಿಗರ ಮಸಲತ್ತಿಲ್ಲದೆ ಎಲ್ಲಿಯೂ ಪ್ರವೇಶ ಪಡೆಯಲಿಲ್ಲ. ಇಂಥಾ ಸಂದರ್ಭದಲ್ಲಿ ಹೊರಗಿನಿಂದ ಬರುವವರು ಆಚರಿಸಬೇಕಾದ ಸಾಮಾನ್ಯವಾದ ಕ್ರಮ ಇದು: ಪ್ರಾಂತ್ಯವನ್ನು ಹೊಕ್ಕಕೂಡಲೆ, ಮೊದಲು ಅಲ್ಲಿನ ಸರಕಾರದ ಮೇಲೆ ಅಸಮಾಧಾನವುಳ್ಳವರಾಗಿ, ತಮಗಿಂತಲೂ ಒಳ್ಳೆಯ ಸ್ಥಿತಿಯಲ್ಲಿರುವವರ ಮೇಲಿನ ಅಸೂಯೆಯಿಂದ ಆಕ್ರಮಿಸುವವನ ಕಡೆಗೆ ಸೇರುವವರಾಗಿರುವ, ಪಂಗಡದ ಅನುರಾಗವನ್ನು ಸಂಪಾದಿಸುವದಕ್ಕೆ ಸರ್ವಪ್ರಯತ್ನವನ್ನೂ ಮಾಡಬೇಕು. ಏಕೆಂದರೆ ಇವರು ಸಲೀಸಾಗಿ ಒಮ್ಮುಖದಿಂದ ಆಕ್ರಮಣಕಾರನ ಕಡೆಗೆ ಸೇರುತ್ತಾರೆ. ಆದರೆ ವಿಜಯಿಯಾದ ಆಕ್ರಮಣಕಾರನು ಈ ದೇಶೀಯ ಮಿತ್ರರು ಹೆಚ್ಚು ಬಲಿಷ್ಠರಾಗದಂತೆಯೂ ಅವರಿಗೆ ಹೆಚ್ಚು ಅಧಿಕಾರ ಕೈಗೂಡದಂತೆಯೂ ನೋಡಿಕೊಳ್ಳಬೇಕು. ತನ್ನ ಬಲದ ಮೇಲೆಯೇ ಮುಖ್ಯವಾದ ಭರವಸೆ ಇಟ್ಟುಕೊಂಡು ಹೊಸ ರಾಜ್ಯವನ್ನು ನಿರಂಕುಶ

ವಾಗಿ ಆಳುವುದಕ್ಕೂ, ತನ್ನ ನೆರೆಹೊರೆಯ ರಾಜರುಗಳನ್ನು ಹದ್ದುಬಸ್ತಿನಲ್ಲಿಟ್ಟಿರುವುದಕ್ಕೂ ಈ ಹೊಸ ಗೆಳೆಯರಿಂದ ಸಹಾಯವನ್ನು ಹೊಂದಲಿಕ್ಕೆ ಅವರಿಗೆ ಎಷ್ಟು ಶಕ್ತಿಯನ್ನು ನಂಬಿ ಬಿಡಬಹುದೋ ಅಷ್ಟು ಮಾತ್ರವನ್ನೇ ಅವರಿಗೆ ಕೊಡಬೇಕು. ಈ ನೀತಿಯನ್ನು ವಿವೇಕದಿಂದ ಅನುಸರಿಸದೇ ಇದ್ದವನು ಸಂಪಾದಿಸಿದ್ದನ್ನು ಕಳೆದುಕೊಳ್ಳುವುದಲ್ಲದೆ, ಅದು ಅವನ ಅಧೀನದಲ್ಲಿದ್ದ ಹಾಗೆಯೇ ಅನೇಕ ತೊಂದರೆಗಳನ್ನೂ ಪ್ರತಿಕೂಲಗಳನ್ನೂ ಅನುಭವಿಸುತ್ತಾನೆ. ರೋಮನರು ತಾವು ಹೊಸದಾಗಿ ಗೆದ್ದ ರಾಷ್ಟ್ರಗಳಲ್ಲಿ ಈ ನೀತಿಯನ್ನು ತಪ್ಪದೆ ಅನುಸರಿಸುತ್ತಿದ್ದರು. ಇಂಥ ರಾಷ್ಟ್ರಗಳಲ್ಲಿ ತಮ್ಮ ನೆಲಸುನಾಡುಗಳನ್ನು ಸ್ಥಾಪಿಸಿ, ಅಲ್ಲಿನ ಕಿರಿಯ ಶ್ರೀಮಂತರನ್ನು ಹೆಚ್ಚು ಅಧಿಕಾರ ಕೊಡದೆ ತಮ್ಮ ಪೋಷ್ಯವರ್ಗದಲ್ಲಿ ಇರಿಸಿಕೊಂಡಿರುತ್ತಿದ್ದರು; ಬಲಾಢ್ಯ ಶ್ರೀಮಂತರನ್ನು ದಬಾಯಿಸಿ ಅಧೀನದಲ್ಲಿಟ್ಟುಕೊಂಡು ಪರಪ್ರಭುಗಳ ಸಂಬಂಧ ಇವರಿಗೆ ಇಲ್ಲದಿರುವ ಹಾಗೆ ನೋಡಿಕೊಳ್ಳುತ್ತಿದ್ದರು. ಇದಕ್ಕೆ ಗ್ರೀಸ್‌ನಲ್ಲಿ ರೋಮನರ ವರ್ತನೆಯನ್ನು ದೃಷ್ಟಾಂತವಾಗಿ ಕೊಡುತ್ತೇನೆ. ರೋಮನರು ಎಟೋಲಿಯನ್ನ (Etolian) ರನ್ನು ಅಕೈಯನ್ನ (Achaians) ರನ್ನು ತಮ್ಮ ಪೋಷ್ಯವರ್ಗದಲ್ಲಿ ಇಟ್ಟುಕೊಂಡರು. ಮೇಸಿಡೋನಿಯಾ (Macedonia) ರಾಜ್ಯವನ್ನು ದಬಾಯಿಸಿ ತಗ್ಗಿಸಿದರು. ಆಂಟಿಯೋಕಸ (Antiochus) ನನ್ನು ಗ್ರೀಸಿನ ಆಚೆಗೆ ತಳ್ಳಿಬಿಟ್ಟರು. ಹೀಗಿದ್ದರೂ ಅಕೈಯನ್ನರು, ಎಟೋಲಿಯನ್ನರು, ಎಷ್ಟು ಒಳ್ಳೆಯತನ, ಭಕ್ತಿಗಳನ್ನು ತೋರಿಸಿದರೂ ರೋಮನರು ಅವರನ್ನು ನಂಬಿ ಅವರಿಗೆ ಹೆಚ್ಚು ಅಧಿಕಾರವನ್ನು ಕೊಡಲಿಲ್ಲ. ಮೇಸಿಡೋನಿಯಾದ ದೊರೆಯಾದ ಫಿಲಿಪ್ ಎಷ್ಟು ಮೃದುಭಾಷೆಯಿಂದ ಪುಸಲಾಯಿಸಿದರೂ ಅವನ ದರ್ಪವನ್ನು ಮುರಿಯುವ ವರೆಗೂ ಅವನನ್ನು ಹತ್ತಿರ ಸೇರಿಸಲಿಲ್ಲ. ಆಂಟಿಯೋಕಸ್ ಎಷ್ಟು ಬಲವಾಗಿ ಹೋರಾಡಿದರೂ ಅವನಿಗೆ ಗ್ರೀಸಿನಲ್ಲಿ ಲೇಸಾದರೂ ಪ್ರಭುತ್ವ ಉಳಿಯಲು ಇವರು ಅವಕಾಶ ಕೊಡಲಿಲ್ಲ. ಈ ರಾಜನೀತಿಯಲ್ಲಿ ರೋಮನರು ಉತ್ಕೃಷ್ಟ ನೈಪುಣ್ಯವನ್ನು ತೋರಿಸಿದರು. ಅವರು ತಾತ್ಕಾಲಿಕ ಅನುಕೂಲ ಮಾತ್ರವನ್ನಲ್ಲದೆ ಭವಿಷ್ಯದಲ್ಲಿರುವ ಪ್ರತಿಬಂಧಕ ನಿವಾರಣೆಗೂ ಗಮನಕೊಟ್ಟು ದೃಢಸಂಕಲ್ಪದಿಂದ ವರ್ತಿಸಿದರು. ದೂರದಲ್ಲಿರುವ ಅಪಾಯಗಳನ್ನು ನಾವು ನೈಪುಣ್ಯದಿಂದ ನೋಡಿದರೆ ಅವುಗಳನ್ನು ಹತ್ತಿರ ಬರುವುದಕ್ಕೆ ಬಿಡದೆ ನಿವಾರಿಸಬಹುದು. ಅವು ಮೇಲೆ ಬೀಳುವ

ವರೆಗೂ ಉದಾಸೀನ ಮಾಡಿದರೆ ರೋಗವು ಚಿಕಿತ್ಸೆಗೆ ಮೀರುವುದು. ಈ ನೀತಿಯ ವಿಚಾರದಲ್ಲಿ ವೈದ್ಯರು ಕ್ಷಯಜ್ವರ (Hectic fever) ವನ್ನು ಕುರಿತು ಹೇಳುವ ಹಾಗೆ—ಪ್ರಾರಂಭದಲ್ಲಿ ತಿಳಿಯುವುದು ಕಷ್ಟ, ಗುಣಮಾಡುವುದು ಸುಲಭ; ಪ್ರಾರಂಭದಲ್ಲೇ ಗುಣಮಾಡದಿದ್ದಲ್ಲಿ ಅದು ಬಲಿತ ಮೇಲೆ ತಿಳಿಯುವುದು ಸುಲಭ, ವಾಸಿ ಮಾಡುವುದು ಪರಮ ಕಷ್ಟ, ರಾಜಕೀಯ ವಿಚಾರಗಳಲ್ಲಿಯೂ ಕೂಡ ದೂರ ಭವಿಷ್ಯದಲ್ಲಿ ಸಂಭವಿಸುವ ಆಪತ್ತುಗಳು ಕೇವಲ ನಿಪುಣ ನೀತಿಜ್ಞರಿಗೆ ಮಾತ್ರವೇ ಗೊತ್ತಾಗುವಷ್ಟು ಕಷ್ಟ. ಆದರೆ ಗೊತ್ತಾದ ಮೇಲೆ ಸುಲಭವಾಗಿ ಮೊದಲೇ ಬಗೆಹರಿಸಲು ಸಾಧ್ಯ. ಇದಕ್ಕೆ ವಿಪರೀತ ಪಕ್ಷದಲ್ಲಿ, ಅಜ್ಞಾನದಿಂದಲೋ, ಅವಜ್ಞೆಯಿಂದಲೋ, ಆಪತ್ತುಗಳು ಕೇವಲ ಉಗ್ರವಾಗಿ ಸಮೀಪಿಸಿ, ಎಲ್ಲರಿಗೂ ಕಾಣುವ ಸ್ಥಿತಿಗೆ ಬಂದುಬಿಟ್ಟರೆ ಚಿಕಿತ್ಸೆಗೆ ಅವಕಾಶ ಇಲ್ಲದೆ ಮೃತ್ಯುವೇ ಸಿದ್ಧ. ರೋಮನರು ಯಾವ ತೊಂದರೆಯನ್ನೂ ದೂರದಲ್ಲಿಯೇ ನೋಡಿ, ಸಕಾಲದಲ್ಲಿ ಎದುರಿಸಿ ನಿವಾರಿಸುತ್ತಿದ್ದರು. ಅವರು ಯುದ್ಧದ ಭೀತಿಯಿಂದ ಯಾವ ಅಪರಾಧವನ್ನೂ, ಅಥವಾ ಅವಲೇಪವನ್ನೂ, ಸಹಿಸುತ್ತಿರಲಿಲ್ಲ. ಈ ತರದ ತಾಳ್ಮೆಯಿಂದ ಯುದ್ಧವು ತಡವಾದೀತೇ ಹೊರತು ತಪ್ಪುವುದಿಲ್ಲವೆಂತಲೂ, ಈ ತಡದಿಂದ ತಮ್ಮ ಶತ್ರುಗಳಿಗೆ ಅನುಕೂಲವಾಗುವುದೆಂತಲೂ ಅವರಿಗೆ ಚೆನ್ನಾಗಿ ಗೊತ್ತು. ಅದಕ್ಕೋಸ್ಕರವೇ ಅವರು ಫಿಲಿಪ್ಪನೂ, ಆಂಟಿಯೋಕಸ್ಸನೂ ಮುಂದೆ ಇಟಲಿಗೆ ದಂಡಯಾತ್ರೆ ಬರಬಹುದೆಂದು ಗಣಿಸಿ ಇದಕ್ಕೆ ಮೊದಲೇ ಉಭಯತ್ರರ ಮೇಲೂ ಸದ್ಯಕ್ಕೆ ಅವಶ್ಯವಿಲ್ಲದಿದ್ದರೂ ಗ್ರೀಸಿನಲ್ಲೇ ಯುದ್ಧಮಾಡಿದರು. ಯುದ್ಧವಿಲ್ಲದೆ ನಿರೀಕ್ಷಣೆಯಲ್ಲೇ ಕಾಲತಳ್ಳಬಹುದಾಗಿತ್ತು; ಆದರೆ ಅದು ರೋಮನರ ನೀತಿಯಲ್ಲ. ಅವರು ಈಗಿನ ಹೊಸ ನೀತಿಜ್ಞರು ಬೋಧಿಸುವಂತೆ ಸದ್ಯದ ಸುಖ ನೋಡೋಣ, ಮುಂದಿನದು ಹಾಗಿರಲಿ, ಎನ್ನುವ ಮತದವರಲ್ಲ. ಚೆನ್ನಾಗಿ ಮೊದಲೇ ಯೋಚನೆ ಮಾಡಿ ರಾಜ್ಯದ ಕ್ಷೇಮವೆಂದು ತಿಳಿದ ಮಾರ್ಗದಲ್ಲಿ ಕೂಡಲೇ ಶೌರ್ಯದಿಂದ ನಡೆಯತಕ್ಕವರು. ಈಗ ಫ್ರಾನ್ಸಿನ ಕಡೆಗೆ ವಾಪಸು ಬರೋಣ. ನಾನು ಹೇಳಬೇಕೆಂದಿರುವುದು ಎಂಟನೆಯ ಚಾರ್ಲ್ಸ್ ದೊರೆಯ ವಿಚಾರವಲ್ಲ. ಹನ್ನೆರಡನೆಯ ಲೂಯಿಪ್ರಭುವಿನ ವಿಚಾರ. ಅವನು ದೀರ್ಘಕಾಲ ಇಟಲಿಯಲ್ಲಿ ಇದ್ದುದರಿಂದ ಅವನ ಕಾರುಬಾರು ಹೆಚ್ಚು ಗೋಚರಕ್ಕೆ ಬಂದಿದೆ. ತನ್ನ ದೇಶಕ್ಕಿಂತಲೂ ಹೆಚ್ಚು ಭಿನ್ನವಾದ ಇಟಲಿ

ಯನ್ನು ವಶಪಡಿಸಿಕೊಳ್ಳಲು ಉದ್ಯುಕ್ತನಾದ ಇವನು, ಮೇಲೆ ವಿವರಿಸಿರುವ ಸಾರಭೂತವಾದ ತತ್ವಕ್ಕೆ ಎಷ್ಟು ವಿರೋಧವಾಗಿ ನಡೆದನೆನ್ನುವುದನ್ನು ಕಾಣಬಹುದು. ಈ ಲೂಯಿಯು ವೆನಿಷಿಯನ್ನರ ಬೇಡಿಕೆಯಂತೆ ಇಟಲಿಗೆ ಬಂದನು. ಲಂಬಾರ್ಡಿ (Lombardy) ಯನ್ನು ಇವನಿಂದ ಗೆಲ್ಲಿಸಿ ಅದರಲ್ಲಿ ಅರ್ಧಭಾಗವನ್ನು ತಾವು ಪಡೆಯಬಹುದೆಂಬ ಆಶೆಯಿಂದ ವೆನಿಷಿಯನ್ನರು ಇವನನ್ನು ಕರೆದದ್ದು. ಲೂಯಿಯು ಆಕ್ರಮಣ ಮಾಡಿದನೆಂದು ನಾನು ಅವನನ್ನು ದೂರುವುದಿಲ್ಲ. ಅವನ ಹಿಂದಲ ದೊರೆಯಾದ ಚಾರ್ಲಸನ ದುರ್ನಡತೆಯ ದೆಶೆಯಿಂದ ಇಟಲಿಯಲ್ಲಿನ ಯಾವ ದೊರೆಯೂ ಲೂಯಿಯನ್ನು ಮಿತ್ರನೆಂದು ಭಾವಿಸಿ ಸ್ವಾಗತಿಸುವಂತೆ ಇರಲಿಲ್ಲವಾದ್ದರಿಂದ ಇವನು ಯಾರಾವರೂ ಸಹಾಯ ನೀಡಿದರೆ ಸಾಕು, ಅವರನ್ನೇ ಮಿತ್ರರನ್ನಾಗಿ ಸ್ವೀಕರಿಸದೆ ಯತ್ನವಿರಲಿಲ್ಲ. ಅವನು ಇಟಲಿಯ ಮೇಲೆ ದಂಡೆತ್ತಿಬಂದದ್ದು ರಾಜನೀತಿ ದೃಷ್ಟಿಯಿಂದ ಸರಿಯಾದ ಮಾರ್ಗವೆಂದು ಹೇಳಬೇಕು. ಗೆದ್ದ ದೇಶದ ಆಡಳಿತದಲ್ಲಿ ಮಾತ್ರ ಇವನು ಕೇವಲ ಅವಿವೇಕವಾಗಿ ವರ್ತಿಸಿ ಭಂಗಕ್ಕೆ ಬಂದನು. ಅವನು ಲಂಬಾರ್ಡಿಯನ್ನು ಜಯಿಸಿದ ಕೂಡಲೆ ಚಾರ್ಲಸ್ ರಾಜನು ಇಟಲಿಯಲ್ಲಿ ಅಪಜಯದಿಂದ ಕಳೆದುಕೊಂಡಿದ್ದ ಕೀರ್ತಿಯೂ ಗೌರವವೂ ಇವನಲ್ಲಿ ಪುನರುಜ್ಜೀವವಾದವು. ಜಿನೋವ (Genova) ಇವನಿಗೆ ಶರಣಾಯಿತು. ಫ್ಲಾರೆನ್ಸ್ ಇವನ ಸ್ನೇಹವನ್ನು ಬಯಸಿತು. ಮಾಂಟುವಾ (Mantua), ಫೆರಾರ (Ferrara), ಬೆಂಟಿವೋಗ್ಲಿಯೋ (Bentivoglio), ಫರ್ಲಿ (Furli) ಫಾಯೆನ್ಜಾ (Faenza), ಪೆಸೋರೋ (Pesoro), ರಿಮಿನಿ (Rimini), ಕ್ಯಾಮೆರಿನೋ (Camerino), ಪಿಯೋಂಬಿನೋ (Piombino), ಲುಚ್ಚೆಸ್ಸಿ (Luchesi), ಪಿಸಾನಿ (Pisani), ಸಾನೇಸಿ (Sanesi) ಇವುಗಳ ನಾಯಕರು ಇವನ ಸ್ನೇಹವನ್ನು ಬಯಸಿ ಬಿನ್ನಹ ಮಾಡಿಕೊಂಡರು. ಆಗ ಲಂಬಾರ್ಡಿಯಲ್ಲಿನ ಎರಡು ಪಟ್ಟಣಗಳ ಆಶೆಯಿಂದ ಇಟಲಿಯ ಮೂರನೇ ಎರಡು ಭಾಗದ ಆಧಿಪತ್ಯವನ್ನು ಫ್ರೆಂಚ್ ದೊರೆಗೆ ಒದಗಿಸಿಕೊಟ್ಟ ಅವಿವೇಕಿಗಳು ನಾವು ಎಂದು ವೆನಿಷಿಯನ್ನರಿಗೆ ಜ್ಞಾನೋದಯವಾಯಿತು. ಇಂಥಾ ಸನ್ನಿವೇಶದಲ್ಲಿ ಫ್ರೆಂಚ್ ದೊರೆಯು ಎಷ್ಟು ಸುಲಭವಾಗಿ ತನ್ನ ಕೀರ್ತಿಯನ್ನೂ ತನ್ನ ಸಂಪಾದನೆಯನ್ನೂ ರಕ್ಷಿಸಿಕೊಳ್ಳಬಹುದಾಗಿತ್ತು ಎನ್ನುವುದು ವಿಚಾರ ಮಾಡಿದರೆ ಯಾರಿಗಾದರೂ ಸ್ಪಷ್ಟವಾಗುತ್ತದೆ. ನಾವು ಮೇಲೆ ವಿವರಿಸಿರುವ

ರಾಜನೀತಿಯಂತೆ ಅಸಂಖ್ಯಾತರಾದ, ಮತ್ತು ಪೋಪನಿಂದಲೋ, ವೆನಿಷಿಯನ್ನರಿಂದಲೋ ತಮಗೆ ಕೇಡಾದೀತೆಂದು ಹೆದರಿದ್ದ ತನ್ನ ಸ್ನೇಹಿತರಾದ, ಕಿರಿಯ ಶ್ರೀಮಂತರನ್ನು ರಕ್ಷಿಸಿ, ಅವರನ್ನು ಸದಾಕಾಲ ತನ್ನ ಅನುಯಾಯಿಗಳನ್ನಾಗಿ ಮಾಡಿಕೊಂಡಿದ್ದರೆ, ಅಲ್ಲಿನ ಯಾವ ಶತ್ರುಗಳ ಭಯವೂ ಅವನಿಗೆ ಇರಬೇಕಾಗಿರಲಿಲ್ಲ. ಆದರೆ ಇವನು ಮಾಡಿದ್ದೇನೆನ್ನುವಿರೋ— ಮಿಲಾನನ್ನು ಹಿಡಿದ ಕೂಡಲೇ ಹೊರಳು ಮಾತನ್ನಾಡಲು ಪ್ರಾರಂಭಿಸಿ, ಪೋಪ್ ಅಲೆಕ್ಸ್ಯಾಂಡರನಿಗೆ ಸರಬರಾಯಿಗಳನ್ನು ಕಳುಹಿಸಿದ್ದಲ್ಲದೆ, ರೋಮಾನ್ಯ(Romagna)ವನ್ನು ಅವನ ಸ್ವಾಧೀನ ಪಡಿಸಿದನು. ಇದರಿಂದ ಲೂಯಿಯ ಶಕ್ತಿ ಕಡಿಮೆಯಾಯಿತು, ಇವನ ಸ್ನೇಹಿತರಿಗೆ ಅಪಕಾರವಾಯಿತು, ಮತ್ತು ಅಧ್ಯಾತ್ಮ ಮಠವಾದ ಪೋಪನ ಸಂಸ್ಥಾನಕ್ಕೆ ಮಹತ್ತರವಾದ ಇಹಲೋಕ ಶಕ್ತಿಯನ್ನು ಕೊಟ್ಟಂತಾಯಿತು: ಇದನ್ನು ಲೂಯಿಯು ಯೋಚಿಸಲಿಲ್ಲ. ಹೀಗೆ ತಪ್ಪುಗಳನ್ನು ಮಾಡಿದ್ದರಿಂದ ಅವನೇ ಪುನಃ ಇಟಲಿಗೆ ಬಂದು ತಾನು ಹೆಚ್ಚಿಸಿದ್ದ ಪೋಪ್ ಅಲೆಕ್ಸ್ಯಾಂಡರನ ಅತ್ಯಾಶೆಯನ್ನು ತಗ್ಗಿಸಲು ಟಸ್ಕನಿ(Tuscaniy)ಯನ್ನು ತನ್ನ ಸ್ವಾಧೀನಪಡಿಸಿಕೊಳ್ಳಬೇಕಾಗಿ ಬಂದಿತು. ಚರ್ಚಿನ (ಪೋಪನ ಅಧ್ಯಾತ್ಮ ಸಂಸ್ಥಾನ; ಇದನ್ನು ಇನ್ನುಮುಂದೆ ಚರ್ಚ್ ಎಂತಲೇ ಕರೆಯುತ್ತೇವೆ) ಸಂಪತ್ತನ್ನು ಹೆಚ್ಚಿಸಿ, ತನ್ನ ಮಿತ್ರರನ್ನು ಕೈಬಿಟ್ಟದ್ದೇ ಸಾಲದೆ ಈ ದೊರೆಯು ಇನ್ನೊಂದು ಅವಿವೇಕವನ್ನು ಮಾಡಿದನು. ನೇಪಲ್ಸ್ (Naples) ರಾಜ್ಯದ ಮೇಲಿನ ದುರಾಶೆಯಿಂದ ಅದನ್ನು ಮುರಿದು, ಸ್ಪೆಯಿನ್ ರಾಜನ ಸಂಗಡ ಹಂಚಿಕೊಂಡನು. ಇದರ ಫಲಿತಾಂಶವಾಗಿ ಇಟಲಿಯಲ್ಲೆಲ್ಲಾ ಏಕ ವಿಮರ್ಶಕನಾಗಿದ್ದ ತಾನು ಒಬ್ಬ ಪಾಲುದಾರನನ್ನು ಮಾಡಿಕೊಂಡದ್ದಾಯಿತು. ಆ ಪಾಲುದಾರನು ಎಂಥವನೆಂದರೆ ಆ ರಾಷ್ಟ್ರಗಳಲ್ಲಿ ಸಂಪತ್ತಿನ ಆಶೆಯುಳ್ಳವರಿಗೂ, ಲೂಯಿಗೆ ಬೇಡದಿದ್ದವರಿಗೂ ಆಶ್ರಯವನ್ನು ಕೊಡುವಂಥವನು. ಲೂಯಿಯು ಬುದ್ಧಿವಂತನಾಗಿದ್ದರೆ ನೇಪಲ್ಸಿನ ರಾಜನನ್ನು ತನ್ನಿಂದ ವೇತನ ಪಡೆಯುವ ಸಾಮಂತನನ್ನಾಗಿ ಇಟ್ಟುಕೊಂಡಿರಬಹುದಾಗಿತ್ತು. ಹೀಗೆ ಮಾಡುವುದರ ಬದಲು ಅವನನ್ನು ಕಿತ್ತುಹಾಕಿ, ಅವನ ಸ್ಥಳದಲ್ಲಿ ತನ್ನನ್ನೇ ಕಿತ್ತುಹಾಕುವಂಥ ಬಲಿಷ್ಠನಾದ ರಾಜನನ್ನು ಸ್ಥಾಪಿಸಿದನು.

ತನ್ನ ರಾಜ್ಯವನ್ನು ವಿಸ್ತರಿಸಲಪೇಕ್ಷಿಸುವ ದೊರೆಯು ತನ್ನ ಶಕ್ತಿಗೆ ಮೀರದ ಸಾಹಸವನ್ನು ಕೈಗೊಂಡು ಉತ್ತೀರ್ಣನಾದರೆ ಅಂಥವನನ್ನು ಸ್ತೋತ್ರ,

ಮಾಡುವುದು ಸಾಮಾನ್ಯವಾಗಿದೆ. ಸ್ತೋತ್ರ ಮಾಡದಿದ್ದರೂ ನಿಂದಿಸುವುದಂತೂ ಇಲ್ಲ. ಶಕ್ತಿಗೆ ಮೀರಿದ ಯತ್ನವನ್ನು ಹಠಾತ್ತಾಗಿ ಮಾಡಿ ಪರಾಜಿತನಾಗುವವನು ನಿಂದೆಗೆ ಗುರಿಯಾಗುವುದು ಯುಕ್ತವೇ ಸರಿ. ಫ್ರಾನ್ಸ್ ತನ್ನ ಶಕ್ತಿಯಿಂದಲೇ ನೇಪಲ್ಸನ್ನು ಜಯಿಸಬಹುದಾಗಿದ್ದರೆ ಅದನ್ನು ಮಾಡಬಹುದಾಗಿತ್ತು. ಶಕ್ತಿ ಸಾಲದಿದ್ದರೂ ಮತ್ತೊಬ್ಬ ಪ್ರಬಲನನ್ನು ಪಾಲುದಾರಿಕೆಗೆ ಕರೆದು ಆ ಕೆಲಸವನ್ನು ಯತ್ನಿಸಬಾರದಾಗಿತ್ತು. ಲಂಬಾರ್ಡಿಯನ್ನು ವೆನಿಷಿಯನ್ನರ ಪಾಲುದಾರಿಕೆಗೆ ಸಮ್ಮತಿಸಿ ಆಕ್ರಮಿಸಿದುದಕ್ಕೆ ಒಪ್ಪಬಹುದಾದ ಕಾರಣವಿತ್ತು: ಅದನ್ನು ಮಾಡಿದ್ದು ಇಟಲಿಯಲ್ಲಿ ಒಂದು ಸ್ಥಾನವನ್ನು ಸಂಪಾದಿಸುವುದಕ್ಕೋಸ್ಕರ. ಅಂದರೆ ನೇಪಲ್ಸನ್ನು ಸ್ಪೆಯಿನ್ ರಾಜನ ಸಂಗಡ ಹಂಚಿಕೊಂಡದ್ದಕ್ಕೆ ಇಂಥಾ ಕಾರಣ ಯಾವುದೂ ಇರಲಿಲ್ಲ. ಆದ್ದರಿಂದ ಇದು ಅತ್ಯಂತ ಖಂಡನೀಯವಾಗಿದೆ. ಲೂಯಿಯು ಈ ಆಕ್ರಮಣ ಯಾತ್ರೆಗಳಲ್ಲಿ ಐದು ತಪ್ಪುಗಳನ್ನು ಮಾಡಿದನು. ಗೆದ್ದ ದೇಶದಲ್ಲಿಯ ಕಿರಿಯ ನಾಯಕರನ್ನು ಹಾಳುಮಾಡಿದನು. ನೆರೆಯವನಾದ ಒಬ್ಬ ಪ್ರಬಲ ಪ್ರಭುವಿನ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದನು. ತನಗೆ ಸಮಬಲನಾದ ಒಬ್ಬ ಪರರಾಜನನ್ನು ಕರೆದು ಅವನಿಗೆ ಅವಕಾಶವನ್ನು ಒದಗಿಸಿಕೊಟ್ಟನು. ತಾನು ಸ್ಥಳದಲ್ಲಿ ವಾಸ ಮಾಡದೇ ಹೋದನು. ಗೆದ್ದ ಪ್ರಾಂತ್ಯಗಳಲ್ಲಿ ತನ್ನ ಕಡೆಯವರ ನೆಲಸುನಾಡುಗಳನ್ನು ಸ್ಥಾಪಿಸದೇ ಹೋದನು. ಇವನು ಇವುಗಳೆಲ್ಲದಕ್ಕಿಂತಲೂ ಹೆಚ್ಚಾದ ಆರನೆಯ ತಪ್ಪನ್ನು ಮಾಡದಿದ್ದಲ್ಲಿ ಇವನು ತನ್ನ ಜೀವಮಾನದಲ್ಲಿ ಈ ತಪ್ಪಿತಗಳೆಲ್ಲದರ ದುಷ್ಪರಿಣಾಮವನ್ನು ಒಂದು ವೇಳೆ ಸುಧಾರಿಸಿಕೊಳ್ಳಬಹುದಾಗಿತ್ತೆನ್ನುತ್ತೇನೆ. ಈ ಆರನೆಯ ಪರಮ ಪ್ರಮಾದವೇನೆಂದರೆ—ಇವನನ್ನು ಬರಮಾಡಿಕೊಂಡ ವೆನಿಷಿಯನ್ನರ ಶಕ್ತಿಯನ್ನು ಕುಗ್ಗಿಸಿದ್ದು. ಇವನು ಚರ್ಚನ್ನು ಹೆಚ್ಚಿಸಿ, ಸ್ಪೆಯಿನ್ ದೊರೆಯನ್ನು ಇಟಲಿಗೆ ಬರಮಾಡಿಕೊಳ್ಳದಿದ್ದರೆ, ಒಂದು ವೇಳೆ ವೆನಿಷಿಯನ್ನರ ಅಧಿಕಾರವನ್ನು ತಗ್ಗಿಸಿದುದು ನಿರ್ದುಷ್ಟವಾಗಿರಬಹುದಾಗಿತ್ತು. ವೆನಿಷಿಯನ್ನರು ಬಲಿಷ್ಠರಾಗಿರುವ ವರೆಗೂ ಲಂಬಾರ್ಡಿಗೆ ಇತರರ ಪ್ರವೇಶವಿಲ್ಲದಂತೆ ತಡೆಗಟ್ಟುತ್ತಿದ್ದರು; ಅಥವಾ ವೆನಿಷಿಯನ್ನರು ಲಂಬಾರ್ಡಿಯ ಹಂಚಿಕೆಗಾಗಿ ಇತರರನ್ನು ಪಾಲುದಾರರಾಗಿ ಸೇರಿಸಿಕೊಳ್ಳಬೇಕೆಂದರೆ, ಆ ಇತರರು ಫ್ರಾನ್ಸಿನ ಭಯಕ್ಕಾಗಿ ಇಂತಹ ತಹನಾಮೆಗೆ ಒಪ್ಪುತ್ತಿರಲಿಲ್ಲ. ಲೂಯಿ ರಾಜನು ರೋಮಾನ್ಯವನ್ನು ಪೋಪನಿಗೂ

ನೇಪಲ್ಸನ್ನು ಸ್ಪೆಯಿನ್ ದೊರೆಗೂ ಯುದ್ಧವನ್ನು ತಪ್ಪಿಸುವುದಕ್ಕೆ ಕೊಟ್ಟ ನೆಂಬುದೇ ಆದರೆ, ಅದಕ್ಕೆ ನನ್ನ ಉತ್ತರ—ಯುದ್ಧ ಭಯಕ್ಕೋಸ್ಕರ ಸದ್ಯದ ಕೆಡುಕನ್ನು ಸಹಿಸುವುದರಿಂದ ಯುದ್ಧವನ್ನು ಸ್ವಲ್ಪಕಾಲ ದೂರವಮಾಡ ಬಹುದೇ ಹೊರತು ತಪ್ಪಿಸಲಾಗುವುದಿಲ್ಲ; ಯುದ್ಧವು ನಿಮಗೆ ಕೇವಲ ಅನಾನುಕೂಲವಾದ ಕಾಲದಲ್ಲೇ ನಿಮ್ಮ ಮೇಲೆ ಬರುತ್ತದೆ.

ಪೋಪನಿಗೆ ಲೂಯಿ ದೊರೆಯು ಒತ್ತಾಸೆಯಾದುದಕ್ಕೆ ಬೇರೆ ಕಾರಣ ಗಳನ್ನು ಹೇಳಬಹುದು. ಲೂಯಿಯ ಮದುವೆಯನ್ನು ರದ್ದುಮಾಡುವುದು ಪೋಪನ ಅಧಿಕಾರದಲ್ಲಿದ್ದಿತು, ಮತ್ತು ಪೋಪನು ಆಂಬ್ವಾಸ್ (Amboise) ಎನ್ನುವವನಿಗೆ ಲೂಯಿ ದೊರೆಯ ಶಿಫಾರಸಿನ ಮೇಲೆ ಕಾರ್ಡಿನಲ್ ಪದವಿ ಯನ್ನು ಕೊಟ್ಟಿದ್ದನು. ಇವೇ ಕಾರಣವೆಂದು ಯಾರಾದರೂ ಹೇಳಿದರೆ ಅದಕ್ಕೆ ನಾನು ಹೇಳುವ ಉತ್ತರವನ್ನು ಆಳುವವರ ಪ್ರತಿಜ್ಞೆಗಳ ವಿಚಾರ ನಾನು ಮುಂದೆ ಬರೆದಿರುವ ಪ್ರಕರಣದಲ್ಲಿ ಕಾಣಬಹುದು. ಲೂಯಿ ದೊರೆಯು ಪ್ರಖ್ಯಾತ ಮತ್ತು ಬುದ್ಧಿವಂತ ರಾಜರುಗಳಿಂದ ಯಾವಾಗಲೂ ಅನುಸರಿಸಲ್ಪಡುತ್ತಿರುವ ನೀತಿಯನ್ನು ಭಂಗಮಾಡಿದ್ದರಿಂದ ಲಂಬಾರ್ಡಿ ಯನ್ನು ಕಳೆದುಕೊಂಡನು. ಇಂಥ ಭಂಗದಿಂದ ಆದ ಕಾರ್ಯಹಾನಿಯು ಹಿಂದೆ ಆದದ್ದೇ ಮತ್ತು ಮುಂದೆ ಆಗುವುದೇ; ಹೊಸದೇನೂ ಅಲ್ಲ. ನನಗೆ ಜ್ಞಾಪಕವಿದೆ—ನಾನು, ವ್ಯಾಲೆಂಟಿನೋ (Valentino) [ಪೋಪ್ ಅಲೆಕ್ಸ್ಯಾಂಡರನ ಮಗ ಸೀಸರ್ ಬೋರ್ಜಿಯಾಗೆ ಆಗ ಈ ಹೆಸರಿತ್ತು] ರೋಮಾನ್ಯವನ್ನು ಸ್ವಾಧೀನಪಡಿಸಿಕೊಂಡಿದ್ದಾಗ, ನ್ಯಾಂಟ್ಸ್ (Nantes) ಪಟ್ಟಣದಲ್ಲಿ ಕಾರ್ಡಿನಲ್ ಡ ಆಂಬ್ವಾಸ (Cardinal d'Amboise)ರ ಸಂಗಡ ಮಾತನಾಡುತ್ತಿದ್ದೆನು. ನಮ್ಮ ವಾದದ ಧೋರಣೆಯಲ್ಲಿ ಕಾರ್ಡಿ ನಲ್ಲರು, "ನೀವು ಇಟಾಲಿಯನ್ನರು ಯುದ್ಧಶಾಸ್ತ್ರವನ್ನು ತಿಳಿದವರಲ್ಲ", ಎಂದರು. ಅದಕ್ಕೆ ನಾನು ಕೂಡಲೇ ಉತ್ತರ ಕೊಟ್ಟೆ, "ನಿಮ್ಮ ಫ್ರೆಂಚರಿಗೆ ರಾಜನೀತಿ ಶಾಸ್ತ್ರದಲ್ಲಿರುವ ತಿಳುವಳಿಕೆಯೂ ಅಷ್ಟೇ!" ಎಂದು. ಫ್ರೆಂಚರಿಗೆ ನೀತಿಜ್ಞತೆ ಎಳ್ಳಷ್ಟಾದರೂ ಇದ್ದರೆ ಚರ್ಚನ್ನು ಅಷ್ಟು ಉನ್ನತ ಪದವಿಗೆ ಏರುವುದಕ್ಕೆ ಬಿಡು ತ್ತಿರಲಿಲ್ಲ. ಇದರ ಪರಿಣಾಮವೇನಾಗಿದೆಯೆಂದರೆ, ಚರ್ಚಿನ ಉನ್ನತಿಗೂ ಇಟಲಿಯಲ್ಲಿ ಸ್ಪೆಯಿನಿನವರ ದೌಲತ್ತಿಗೂ ಫ್ರೆಂಚರೇ ಮೂಲಕಾರಣರಾದರು. ಇದಕ್ಕೆ ಪ್ರತಿಫಲವಾಗಿ ಈ ಇಬ್ಬರೂ ಫ್ರೆಂಚರನ್ನು ಇಟಲಿಯಿಂದ ಉಚ್ಚಾಟನ

ಮಾಡಿದ್ದಾರೆ. ಇದರಿಂದ ಒಂದು ಸಾಮಾನ್ಯ ಸೂತ್ರವನ್ನು ನಿಗಮನ ಮಾಡಬಹುದು. ಏನೆಂದರೆ ಯಾವನು ಒಂದು ಹಂತದಂತೆ ಬೇರೊಬ್ಬರ ಅಭಿವೃದ್ಧಿಗೆ ಅಡಿಯಾಳಾಗುತ್ತಾನೋ, ಅವನು ತನ್ನ ಅವನತಿಗೆ ತಾನೇ ಕಾರಣನಾಗುತ್ತಾನೆ. ಯಾಕೆಂದರೆ ಇತರನ ಅಭಿವೃದ್ಧಿಗೋಸ್ಕರ ತನ್ನ ಶಕ್ತಿಯು ವ್ಯಯ ಮಾಡಬೇಕಾಗುತ್ತದೆ. ತನ್ನ ನೀತಿಯನ್ನು ಇತರನ ಅಧೀನ ಮಾಡಬೇಕಾಗುತ್ತದೆ. ಇವನಿಂದ ಪ್ರಯೋಜನ ಪಡೆದವನೇ ಉತ್ತರೋತ್ತರ ಇವನ ಶಕ್ತಿ ಇವನ ಉದ್ದೇಶಗಳ ವಿಚಾರದಲ್ಲೇ ಶಂಕೆಪಡಲು ಉದ್ಯುಕ್ತನಾಗುತ್ತಾನೆ.

ಮೂರನೆಯ ಅಧ್ಯಾಯ

ಅಲೆಕ್ಸ್ಯಾಂಡರ (Alexander) ನು ಅಪಹರಿಸಿದ ಡೇರಿಯಸ್ಸ (Darius) ನ ರಾಜ್ಯವು ಅಲೆಕ್ಸ್ಯಾಂಡರನ ಮರಣಾನಂತರದಲ್ಲೂ ದಂಗೆ ಏಳದಿದ್ದುದು ಏಕೆ?

ಆಕ್ರಮಿಸಿಕೊಂಡ ಹೊಸರಾಜ್ಯವನ್ನು ಅಧೀನದಲ್ಲಿಟ್ಟುಕೊಳ್ಳುವುದರಲ್ಲಿರುವ ಕಷ್ಟನಷ್ಟಗಳ ಬಗೆ ಹೇಳುವಾಗ, ಏಷ್ಯಾ ಖಂಡವನ್ನು ಕೆಲವೇ ವರ್ಷಗಳಲ್ಲಿ ತನ್ನ ಸಂಪೂರ್ಣ ಅಧಿಕಾರಕ್ಕೆ ಗೆದ್ದು, ಹಾಗೆ ಮಾಡಿದ ಕೆಲವೇ ಕಾಲದ ಮೇಲೆ ಮೃತನಾದ ಅಲೆಕ್ಸ್ಯಾಂಡರ್ ಮಹಾವೀರನ ಅನಂತರವೂ ಆ ರಾಜ್ಯವು ದಂಗೆಕೋರರ ಆಕ್ರಮಣದಿಂದ ದೂರವಾಗಿಯೇ ಉಳಿದ ಸಂಗತಿ ಬಹಳ ಶ್ಲಾಘ್ಯವೆಂಬುದನ್ನು ಸ್ಮರಿಸಬೇಕು. ಅಲೆಕ್ಸ್ಯಾಂಡರನ ಮರಣಾನಂತರ ಮುಂದಿನ ದೊರೆಗಳು ಬಹಳ ಕಾಲ ನೆಮ್ಮದಿಯಾಗಿ, ದಂಗೆಕೋರರ ಗಲಾಟೆ ಇಲ್ಲದೆ ರಾಜ್ಯವಾಳಿದರಾದರೂ, ಕಡೆಗೆ ತಮ್ಮ ಅವಿವೇಕದಿಂದಲೂ, ಅತಿಯಾದ ದುರಾಶೆಯಿಂದಲೂ ತಾವೇ ಕೆಟ್ಟರು. ನಾನು ಹೇಳಬೇಕಾದದ್ದು ಇಷ್ಟೆ. ಇತಿಹಾಸದಲ್ಲಿ ನಮಗೆ ತಿಳಿದಮಟ್ಟಿಗೆ ರಾಜ್ಯಗಳು ಎರಡು ರೀತಿಗಳಲ್ಲೇ ಆಳಲ್ಪಡುತ್ತಿದ್ದುವು: ಒಂದನೆಯದು, ರಾಜ ಅಥವಾ ಅವನ ದಯೆಯಿಂದ ಸಚಿವರಾಗಿ ಅಧಿಕಾರಕ್ಕೆ ಬಂದಿರತಕ್ಕವರು ಆಳುವುದು. ಎರಡನೆಯದು, ರಾಜ ಮತ್ತು ಅವನ ದೊಡ್ಡ ಸರದಾರರು ಆಳುವುದು. ಸರದಾರರು ಎಂದರೆ ನನ್ನ ಅರ್ಥ, ರಾಜನ ದಯೆಯಿಂದಲ್ಲ, ತಮ್ಮ ವಂಶಪಾರಂಪರ್ಯದ ಘನತೆಯಿಂದ, ಅಧಿಕಾರಕ್ಕೆ ಬಂದಿರತಕ್ಕವರು. ಈ ತರದ ಸರದಾರರುಗಳು ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶ

ಗಳಲ್ಲಿ ತಮಗೆ ಅಧೀನರಾದ ಪ್ರಜೆಗಳನ್ನು ಆಳುವವರಾಗಿರುತ್ತಾರೆ. ದೊರೆ ಮತ್ತು ಅವನ ಅನುಯಾಯಿಗಳಿಂದ ಆಳಲ್ಪಡುವ ರಾಜ್ಯಗಳಲ್ಲಿ ರಾಜನೇ ನ್ಯಾಯ ವಿಮರ್ಶಕನೂ, ಸರ್ವಾಧಿಕಾರಿಯೂ ಆಗಿರುತ್ತಿದ್ದನು. ಎಲ್ಲ ಪ್ರಜೆಗಳೂ ಅವನ ಸರ್ವಸ್ವಾಮ್ಯವನ್ನು ಅಂಗೀಕರಿಸುತ್ತಿದ್ದರು. ರಾಜನನ್ನಲ್ಲದೆ ಜನರು ಅವನ ಕೈಕೆಳಗಿನ ದೊಡ್ಡ ಅಧಿಕಾರಿಗಳಿಗೆ ತಲೆಬಾಗುತ್ತಿದ್ದರು. ಈ ಮೇಲ್ಕಂಡ ಬೇರೆ ಬೇರೆ ತರದ ಸರ್ಕಾರದ ಉದಾಹರಣೆಗಳು ನಮ್ಮ ಕಾಲದಲ್ಲಿ ಟರ್ಕಿಯ ಗ್ರಾಂಡ್ ಸೈಗ್ನರ್ (Grand Signor) ಮತ್ತು ಫ್ರಾನ್ಸಿನ ದೊರೆ. ಇಡೀ ಟರ್ಕಿ ಸಾಮ್ರಾಜ್ಯವು ಒಬ್ಬ ದೊರೆಯ ಸಾರ್ವಭೌಮತ್ವಕ್ಕೆ ಒಳಪಟ್ಟಿದ್ದು. ಅಲ್ಲಿ ಮಿಕ್ಕವರು ರಾಜನಾದವನ ಸೇವಕರು ಅಥವಾ ಗುಲಾಮರು. ದೊರೆಯು ತನ್ನ ಸಾಮ್ರಾಜ್ಯ ಭೂವಿಸ್ತಾರವನ್ನು ಬೇರೆ ಬೇರೆ ಪ್ರಾಂತ್ಯಗಳನ್ನಾಗಿಯೂ, ಸರ್ಕಾರಗಳನ್ನಾಗಿಯೂ ಪ್ರತ್ಯೇಕಿಸಿ, [ಅದನ್ನು ಸಂಘಿಯಾಚ್ಚಿ(Sangiacchi) ಎಂದೂ ಕರೆಯುತ್ತಿದ್ದರು] ಅಲ್ಲಿನ ಅಧಿಕಾರಿಗಳನ್ನು ತನ್ನ ಇಚ್ಛೆ ಬಂದಂತೆ ಬದಲಾಯಿಸುತ್ತಲೂ, ಮತ್ತು ತನಗೆ ಯೋಗ್ಯರಾಗಿ ತೋರಿದವರನ್ನು ನೇಮಕ ಮಾಡುತ್ತಲೂ ಇದ್ದನು. ಫ್ರಾನ್ಸ್ ದೇಶದ ದೊರೆಯಾದರೋ ಅನೇಕ ಸಂಸ್ಥಾನಾಧಿಪತಿಗಳ ಮತ್ತು ಸ್ಥಳೀಯ ಶ್ರೀಮಂತ ವರ್ಗದವರ ಗುಂಪಿನ ಮಧ್ಯದಲ್ಲಿ ಆಳುತ್ತಾನೆ. ಆ ಆಶ್ರಿತ ಶ್ರೀಮಂತ ವರ್ಗದವರ ಸ್ಥಳಪ್ರಭುತ್ವವು ವಂಶಪಾರಂಪರ್ಯವಾಗಿ ನಡೆದುಬಂದದ್ದು. ಇವರಲ್ಲಿ ಇವರ ಪ್ರಜೆಗಳಿಗೆ ವಂಶಪಾರಂಪರ್ಯ ಸ್ವಾಮಿಭಕ್ತಿ. ಈ ವರ್ಗದವರನ್ನು ಪದವಿಚ್ಯುತರನ್ನಾಗಿ ಮಾಡಲು ಯತ್ನಿಸಿದರೆ ದೊರೆಗೇ ಆಪತ್ತಿನ ಭಯವುಂಟು. ಆದ್ದರಿಂದ ಮೇಲ್ಕಂಡ ಎರಡು ದೇಶಗಳ ಆಡಳಿತದ ಬಗೆಯನ್ನು ಕುರಿತು ವಿಚಾರಮಾಡಿದರೆ, ಟರ್ಕಿ ದೇಶವನ್ನು ಜಯಿಸುವುದು ಹೆಚ್ಚು ಕಷ್ಟವಾದರೂ, ಸಂಪೂರ್ಣ ಜಯಿಸಿದ ಮೇಲೆ ಈ ದೇಶವನ್ನು ಹತೋಟಿಯಲ್ಲಿಡುವುದು ಸುಲಭವೆಂದು ಗೊತ್ತಾಗುತ್ತದೆ. ಜಯಿಸುವ ಕಷ್ಟಕ್ಕೆ ಕಾರಣವೇನೆಂದರೆ, ಹೊರಗಿನಿಂದ ಬರುವ ಶತ್ರು ಆಕ್ರಮಣಕಾರರಿಗೆ ದೇಶದ ಪುಢಾರಿಗಳಿಂದ ಸಹಾಯವಾಗುವ ಸಂಭವ ಕಡಿಮೆ; ಅಧಿಕಾರಿ ವರ್ಗದವರಿಂದ ತನ್ನ ಉದ್ದಿಶ್ಯ ಸಫಲತೆಗೆ ಸಹಾಯ ದೊರಕುವ ಸಂಭವವೂ ಇಲ್ಲ; ಇದಕ್ಕೆ ಕಾರಣ ಮೇಲೆ ಹೇಳಿದೆ. ದೇಶದಲ್ಲಿ ಪ್ರತಿಯೊಬ್ಬನೂ ಸಾರ್ವಭೌಮನ ಗುಲಾಮನಾಗಿ ಅವನ ಅನುಗ್ರಹಬಲದಿಂದ ಬಾಳತಕ್ಕವನಾದ್ದರಿಂದ ಹೊರಗಿನವನ ಬಲೆಗೆ ಯಾವನೂ ಬೀಳುವುದಿಲ್ಲ. ಒಂದು ವೇಳೆ

ಬಿದ್ದರೂ ಆ ಜನರು ವಿರೋಧ ಪಕ್ಷವನ್ನು ಕಟ್ಟಲು ಮೇಲೆ ತಿಳಿಸಿರುವ ಕಾರಣ ದಿಂದ ಅಸಮರ್ಥರಾಗಿರುವುದರಿಂದ ಶತ್ರುವಿಗೆ ಅವರ ಪಿತೂರಿಯಿಂದ ಏನೂ ಫಲ ಸಿಕ್ಕುವುದಿಲ್ಲ. ಆದ್ದರಿಂದ ಟರ್ಕಿ ದೇಶವನ್ನು ಆಕ್ರಮಿಸಬೇಕೆನ್ನುವವನು ದೇಶದ ಒಳಗೆ ಒಡಕನ್ನುಂಟುಮಾಡಲು ಪ್ರಯತ್ನಿಸುವುದರ ಬದಲು ತನ್ನದೇ ಆದ ಸೈನ್ಯಬಲವನ್ನೇ ನಂಬಬೇಕು. ತನ್ನ ಸ್ವಂತ ಬಲದಿಂದ ಶತ್ರುಸೈನ್ಯ ವನ್ನು ಧ್ವಂಸಮಾಡಿಬಿಟ್ಟರೆ ಎಲ್ಲ ಅಪಾಯವೂ ಧ್ವಂಸವಾದಂತೆಯೇ ಸರಿ. ಯಾಕೆಂದರೆ, ಚಕ್ರವರ್ತಿ ಮತ್ತು ಅವನ ಮನೆತನದವರ ಹೊರತು ಗೆಲ್ಲ ಬೇಕಾದ ಶತ್ರುಗಳು ಅಲ್ಲಿ ಯಾರೂ ಇಲ್ಲ. ಆ ಮನೆತನವೂ ನಿರ್ಮೂಲ ವಾದ ಮೇಲೆ ಬೇರೆ ಯಾರಿಗೂ ಈ ವಿಷಯದ ಆಸಕ್ತಿಯೇ ಇರುವುದಿಲ್ಲ. ಆಕ್ರಮಣಕ್ಕೆ ಮುಂಚೆ ಆ ಜನರು ಹೇಗೆ ಅಸಮರ್ಥರಾಗಿದ್ದರೋ ಹಾಗೆಯೇ ಆಕ್ರಮಣದ ಜಯವಾದ ಮೇಲೂ ಅಷ್ಟೇ ಅನುಪದ್ರವಿಗಳಾಗಿಯೇ ಉಳಿ ಯುವರು. ಆದರೆ ಫ್ರಾನ್ಸ್ ದೇಶದಲ್ಲಿನಂತಹ ಆಡಳಿತವಿರತಕ್ಕ ರಾಜ್ಯಗಳಲ್ಲಿ ಈ ರೀತಿ ಮಾಡಲಾಗುವುದಿಲ್ಲ. ಯಾಕೆಂದರೆ ಅಲ್ಲಿನ ಸ್ಥಳೀಯ ಸರದಾರರು ಗಳು (ಅನೇಕರು ಸಹಜವಾಗಿ ಅತೃಪ್ತಿಯಿಂದ ಹೊರಗಿನವರೊಂದಿಗೆ ಪಿತೂರಿ ನಡೆಸಲು ಕಾತರರಾಗಿರುತ್ತಾರಾದ್ದರಿಂದ) ಕೆಲವರನ್ನು ಪುಸಲಾಯಿಸಿ ನಿಮ್ಮವ ರನ್ನಾಗಿ ಮಾಡಿಕೊಂಡು ದೇಶವನ್ನು ಪ್ರವೇಶಿಸಬಹುದು. ಅವರು ನಿಮಗೆ ಸಹಾಯಮಾಡಿ ವಿಜಯವನ್ನು ಸಾಧಿಸಲೂ ಕಾರಣರಾಗಬಹುದು. ಆ ಮೇಲೆ ದೇಶದಲ್ಲಿ ನಿಮ್ಮಲ್ಲಿರುವ ಬಲಾಬಲಗಳನ್ನು ರಕ್ಷಿಸಿಕೊಂಡು ಆಳತೊಡ ಗಿದಾಗ ನಿಮಗೂ, ನಿಮ್ಮ ಗೆಳೆಯರಿಗೂ ಹಿಂದಿನ ಒಡೆಯರುಗಳಿಗಾದಷ್ಟೇ ಕಷ್ಟನಷ್ಟಗಳ ಪರಂಪರೆಗಳು ತಪ್ಪಿದ್ದಲ್ಲ. ದೊರೆಯ ಮನೆತನ ಒಂದನ್ನು ನಾಶ ಮಾಡುವುದರಿಂದ ಮಾತ್ರವೇ ನಿಮ್ಮ ಕಷ್ಟ ತಪ್ಪುವುದಿಲ್ಲ. ದೊರೆ ಹೋದರೂ ಅನೇಕ ಸಾಮಂತ ರಾಜರುಗಳು ನಿಮ್ಮ ವಿರುದ್ಧ ದಂಗೆಯ ನಾಯಕರಾಗು ವರು. ಅವರನ್ನು ಅಡಗಿಸುವುದಾಗಲೀ, ಅಥವಾ ಅವರ ಇಚ್ಛೆಗೆ ಬಾಗುವು ದಾಗಲೀ ನಿಮಗೆ ಸಾಧ್ಯವಾಗದೇ, ಕಡೆಗೆ ದಂಗೆಯೆದ್ದ ಕ್ಷಣವೇ ದೇಶದಿಂದ ಹೊರಡಬೇಕಾಗುತ್ತದೆ.

ಹಾಗಾದರೆ ಡೇರಿಯಸ್ಸ (Darius)ನ ಸಾಮ್ರಾಜ್ಯದ ಆಡಳಿತವು ಹೇಗಿ ದ್ದಿತೆಂದು ಪರಿಶೀಲಿಸಿದರೆ, ಅದೂ ಹೆಚ್ಚುಕಡಿಮೆ ಟರ್ಕಿಯ ಆಡಳಿತದಂತೆಯೇ ಇದ್ದಿತು. ಆದ್ದರಿಂದಲೇ ಅಲೆಕ್ಸ್ಯಾಂಡರನು ದಂಡೆತ್ತಿ ಬಂದು ಡೇರಿಯಸ್ಸನ

ಸಂಗಡ ಯುದ್ಧಮಾಡಿಯೇ ಆ ಸಾಮ್ರಾಜ್ಯವನ್ನು ವಶಮಾಡಿಕೊಳ್ಳಬೇಕಾಯಿತು. ಡೇರಿಯಸ್ಸನು ಸೋತು ಮರಣಹೊಂದಿದ ಅನಂತರ ಪರ್ಷಿಯಾ ರಾಜ್ಯವು ತಕರಾರೇ ಇಲ್ಲದೆ ಅಲೆಕ್ಸಾಂಡರನ ಆಳ್ವಿಕೆಗೆ ಒಗ್ಗಿತು. ಅಲೆಕ್ಸಾಂಡರನ ಅನಂತರ ರಾಜ್ಯವಾಳಿದ ದೊರೆಗಳೂ ಒಗ್ಗಟ್ಟಿನಿಂದ ಇದ್ದಿದ್ದರೆ ಅನೇಕ ವರ್ಷಗಳು ಶಾಂತಿಯಿಂದ ರಾಜ್ಯವಾಳಬಹುದಾಗಿತ್ತು. ಅವರಲ್ಲೇ ಎದ್ದ ಪರಸ್ಪರ ದಂಗೆಗಳ ಹೊರತು ದೇಶದಲ್ಲಿ ಬೇರೆ ಯಾವ ವಿರೋಧಪಕ್ಷವೂ ಇರಲಿಲ್ಲ. ಆದರೆ ಫ್ರಾನ್ಸಿನಲ್ಲಿರುವಂತೆ ಆಡಳಿತದ ರಚನೆಯುಳ್ಳ ರಾಜ್ಯಗಳನ್ನು ಇಷ್ಟು ಸುಲಭವಾಗಿ ಕೈವಶಮಾಡಿಕೊಳ್ಳುವುದು ಅಸಾಧ್ಯ. ಆದ್ದರಿಂದಲೇ ರೋಮನರು ಸ್ಪೈಯಿನ್, ಫ್ರಾನ್ಸ್ ಮತ್ತು ಗ್ರೀಸ್ ದೇಶಗಳನ್ನು ಆಳಬೇಕಾದರೆ ಅವರಿಗೆ ಸ್ಥಳೀಯರ ಅವಿಶ್ವಾಸದಿಂದ ಬಹಳ ಕಷ್ಟವಾಯಿತು. ಇದರ ಕಾರಣವೇನೆಂದರೆ, ಆ ದೇಶದವರು ತಮ್ಮ ಹಿಂದಿನ ಗೌರವಯುತ ಚರಿತ್ರೆಯನ್ನು ಆದರದಿಂದ ಜ್ಞಾಪಿಸಿಕೊಂಡು ರೋಮನರ ಅಧೀನತೆಗೆ ಒಪ್ಪಿ ತಲೆಬಾಗದೆ ನಿಂತರು. ಆ ಮೇಲೆ ಅವರ ನೆನಪು ಸವೆದು ಹೋಗಿ ಅವರವರಲ್ಲೇ ಕಲಹಹುಟ್ಟಿದ ಮೇಲೆ ರೋಮನ್ ಅಧಿಕಾರಿಗಳು ತಮಗೆ ಅನುಕೂಲವಾದ ಪಂಗಡದವರನ್ನು ಮುಂದಕ್ಕೆ ತರಲು ತೊಡಗಿದರು. ಹೀಗೆ ಮಾಡಲು ಸಾಧ್ಯವಾದದ್ದು ಹೇಗೆಂದರೆ, ಆಗ ಪೂರ್ವ ರಾಜರುಗಳ ಸಂತಾನವು ನಿರ್ಮೂಲವಾಗಿ ನಾಶವಾದದ್ದರಿಂದ ಸ್ಥಳವಂದಿಗರಿಗೆ ರೋಮನರ ಹೊರತು ಬೇರೆ ಆಳುವವರು ಉಳಿದಿರಲಿಲ್ಲ. ಇದನ್ನೆಲ್ಲಾ ಪರಿಶೀಲಿಸಿದರೆ ಅಲೆಕ್ಸಾಂಡರನು ಏಷ್ಯಾ ಚಕ್ರಾಧಿಪತ್ಯವನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಶಕ್ತನಾದನೆನ್ನುವುದು ಆಶ್ಚರ್ಯವಾಗಿ ಕಾಣುವುದಿಲ್ಲ. ಪಿರ್ಹಸ್ (Pyrrhus) ಆದಿಗಳು ತಾವು ಗೆದ್ದ ಪ್ರಾಂತ್ಯಗಳನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಲಾರದೇ ಹೋದದ್ದೂ ಕೂಡ ಆಶ್ಚರ್ಯವಲ್ಲ. ಜಯಿಸಿದ್ದನ್ನು ಅನುಭವಿಸುವುದು, ಮೇಲೆ ಹೇಳಿದಂತೆ ವಿಜಯಿಯ ಸಾಮರ್ಥ್ಯವನ್ನು ಅವಲಂಬಿಸಿರುವುದಿಲ್ಲ, ಸನ್ನಿವೇಶವನ್ನು ಮಾತ್ರ ಅವಲಂಬಿಸಿರುತ್ತದೆ.

ನಾಲ್ಕನೆಯ ಅಧ್ಯಾಯ

ನಮ್ಮಿಂದ ಜಯಿಸಲ್ಪಡುವುದಕ್ಕೆ ಮುಂಚೆ ಸ್ವತಂತ್ರ ವಾಗಿದ್ದು ತಮ್ಮ ತಮ್ಮ ಸ್ವಂತ ಕಾನೂನುಗಳಿಗೆ ಒಳ ಪಟ್ಟು ಇರುತ್ತಿದ್ದ ನಗರಗಳನ್ನೂ ಪ್ರಾಂತ್ಯಗಳನ್ನೂ ಆಳುವ ವಿಧಾನ

ಹೊಸದಾಗಿ ಜಯಿಸಲ್ಪಟ್ಟ ರಾಜ್ಯಗಳು ಹಿಂದೆ ಸ್ವತಂತ್ರವಾದವುಗಳಾಗಿ ತಮ್ಮ ಸ್ವಂತ ಕಾನೂನುಗಳಿಗೇ ಅನುಗುಣವಾಗಿ ವರ್ತಿಸುತ್ತಿದ್ದವುಗಳಾಗಿದ್ದರೆ, ಅವುಗಳನ್ನು ಅಧೀನದಲ್ಲಿ ಇಟ್ಟುಕೊಳ್ಳಬೇಕೆಂದರೆ ಮೂರು ವಿಧಾನಗಳುಂಟು. ಮೊದಲನೆಯದು, ಅವುಗಳ ಶಕ್ತಿಯನ್ನು ಸಂಪೂರ್ಣವಾಗಿ ಧ್ವಂಸಮಾಡುವುದು; ಎರಡನೆಯದು, ಆ ಪ್ರಾಂತ್ಯಗಳಲ್ಲಿಯೇ ವಾಸಮಾಡುವುದು; ಮೂರನೆಯದು, ಅವುಗಳಿಂದ ಒಂದು ನಿಯತ ವರಮಾನವನ್ನು ಗೊತ್ತುಮಾಡಿ ಅವುಗಳ ಆಡಳಿತವನ್ನು ನೋಡಿಕೊಂಡು, ಅಲ್ಲಿಯ ಜನಗಳನ್ನು ನಿಮ್ಮಲ್ಲಿ ವಿಶ್ವಾಸ ಮತ್ತು ವಿಧೇಯತೆ ಇರುವಂತೆ ಸುಧಾರಿಸಿಕೊಂಡು ಬರುವುದಕ್ಕಾಗಿ ನಿಮ್ಮ ಪಕ್ಷದವರಾದ ಕೆಲವು ಜನಗಳನ್ನುಳ್ಳ ಒಂದು ರಾಷ್ಟ್ರ ಸಮಿತಿಯನ್ನು ಸ್ಥಾಪಿಸಿ ಆ ಪ್ರಾಂತ್ಯವನ್ನು ತನ್ನ ಹಿಂದಿನ ಸೌಕರ್ಯಗಳ ಮತ್ತು ಕಾನೂನುಗಳ ಅನುಭವಕ್ಕೆ ಬಿಟ್ಟುಬಿಡುವುದು. ಈ ಸಮಿತಿಯು ನಿಮ್ಮಿಂದಲೇ ನೇಮಿಸಲ್ಪಟ್ಟು ನಿಮ್ಮ ಅನುಗ್ರಹ ಅಧಿಕಾರಗಳಿಂದಲೇ ಜೀವಿಸತಕ್ಕದ್ದಾದ್ದರಿಂದ ನಿಮ್ಮ ಅರ್ಥವನ್ನು ಅಭಿವೃದ್ಧಿಗೆ ತರುವುದರಲ್ಲಿ ಸಂದೇಹವಿಲ್ಲ. ಪೂರ್ವದಲ್ಲಿ ಸ್ವತಂತ್ರವಾಗಿದ್ದ ಪಟ್ಟಣವನ್ನು ಅಧೀನ

ದಲ್ಲಿ ಇಟ್ಟುಕೊಳ್ಳಬೇಕೆಂದರೆ ಅದರ ಪೌರಜನವನ್ನೇ ಅಲ್ಲಿನ ಅಧಿಕಾರಿಗಳನ್ನಾಗಿ ನೇಮಿಸುವುದಕ್ಕಿಂತಲೂ ಸುಲಭವಾದ ಉಪಾಯವಿಲ್ಲ. ಇದಕ್ಕೆ ಸ್ಪಾರ್ಟನ (Spartans)ರ ಮತ್ತು ರೋಮನರ ಚರಿತ್ರೆಯೇ ನಿದರ್ಶನವಾಗಿದೆ. ಸ್ಪಾರ್ಟನರು, ಅಥೆನ್ಸ್ (Athens) ಮತ್ತು ಥೀಬ್ಸ್ (Thebes) ಪಟ್ಟಣಗಳನ್ನು ಆಯಾ ಪಟ್ಟಣಗಳ ನಿವಾಸಿಗಳನ್ನು ನೇಮಿಸಿಕೊಳ್ಳದೆ ತಮ್ಮ ಇಷ್ಟಬಂದ ಅಧಿಕಾರ ವರ್ಗದವರನ್ನು ನೇಮಿಸಿ ಆಳಹೋದರು. ಇದರ ಫಲವಾಗಿ ಈ ಪಟ್ಟಣಗಳನ್ನು ಕಳೆದುಕೊಂಡರು. ರೋಮನರು ಕಾಪುವಾ (Capua) ಕಾರ್ಥೇಜ್ (Carthage) ಮತ್ತು ನ್ಯೂಮಾಂಟಿಯಾ (Numantia) ಇವುಗಳ ಜನಗಳನ್ನು ಧ್ವಂಸಮಾಡುವುದರಿಂದ ಈ ಪಟ್ಟಣಗಳನ್ನು ತಮ್ಮ ತಾಬೆಯಲ್ಲಿ ಇಟ್ಟುಕೊಂಡರು. ಅನಂತರ ಗ್ರೀಸನ್ನು ಸ್ಪಾರ್ಟನರ ಮಾರ್ಗವನ್ನು ಅನುಸರಿಸಿ ಆಳಬೇಕೆಂದು ಯತ್ನಮಾಡಿದರು. ಇದು ತಪ್ಪು ದಾರಿಯೆಂದು ಜಾಗ್ರತೆಯಲ್ಲಿ ಅವರ ಅನುಭವಕ್ಕೆ ಬಂದು, ಆ ರಾಷ್ಟ್ರವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕಾದರೆ ಅಲ್ಲಿನ ಅನೇಕ ನಗರಗಳನ್ನು ನಿರ್ಮೂಲಮಾಡಬೇಕಾಯಿತು. ನನಗೇನೋ ಈ ನಿರ್ಮೂಲನವೇ ಉತ್ತಮವಾದ ನೀತಿಯೆಂದು ತೋರುತ್ತದೆ. ಹಿಂದೆ ಸ್ವತಂತ್ರವಾಗಿದ್ದ ನಗರಗಳನ್ನು ಯಾವನು ಜಯಿಸಿ, ಅನಂತರ ಸ್ಥಳೀಯರ ಶಕ್ತಿಯನ್ನು ನಿರ್ಮೂಲ ಮಾಡದೆ ಬಿಡುತ್ತಾನೆಯೋ ಅಂಥವನು ತನ್ನ ದೊಡ್ಡ ಅವಿವೇಕಕ್ಕೆ ತಾನೇ ಬಲಿಯಾಗಿ ನಾಶವಾಗುವುದನ್ನು ನಿರೀಕ್ಷಿಸಬಹುದು. ನಾಗರಿಕರು ದಂಗೆಯೆದ್ದು, ಸ್ವಾತಂತ್ರ್ಯ, ಸ್ವದೇಶಾಭಿಮಾನ, ಸನಾತನ ಧರ್ಮ, ಎಂಬ ಉದ್ರೇಕಗೊಳಿಸುವ ಗುಂಪು ಕೂಗುಗಳನ್ನು ಎತ್ತಿ ಯುದ್ಧಮಾಡುತ್ತಾರೆ. ಎಷ್ಟು ಕಾಲ ನೀವು ಅವರನ್ನು ಕರುಣೆಯಿಂದ ಪಾಲಿಸುತ್ತಿದ್ದರೂ ಮೇಲೆ ಹೇಳಿದ ಭಾವಗಳು ನಿರ್ಮೂಲವಾಗುವುದಿಲ್ಲ. ಈಗ ನೋಡಿ, ಪೈಸಾ (Pisa) ಪಟ್ಟಣವು ಎಷ್ಟುಕಾಲ ಫ್ಲಾರೆಂಟೈನ (Florentines) ರ ಅಧೀನದಲ್ಲಿದ್ದರೂ ಅವರು ದಂಗೆ ಏಳದೆ ಬಿಟ್ಟರೇನು? ಅದಕ್ಕೋಸ್ಕರ ಹಳೆಯ ಹಕ್ಕುಗಳು, ಹಳೆಯ ಅನುಭವದ ನೆನಪುಗಳು ಅಳಿಸಿ ಹೋಗಬೇಕಾದರೆ ಆ ಜನಗಳಲ್ಲಿ ಕಕ್ಷಿಗಳನ್ನು ಹಬ್ಬಿಸಬೇಕು, ಅಥವಾ ಜನಗಳನ್ನು ಚಲ್ಲಾಪಿಲ್ಲಿಯಾಗಿ ಚೆದರಿಸಿಬಿಡಬೇಕು. ಆದರೆ ಆ ಪಟ್ಟಣ ಅಥವಾ ರಾಜ್ಯದಲ್ಲಿ ಹಿಂದೆ ಒಬ್ಬ ದೊರೆಯೇ ಆಳುತ್ತಿದ್ದು, ಅವನ ವಂಶವೇ ನಿರ್ಮೂಲವಾಗಿ ನಾಶವಾಯಿತೆಂದಿಟ್ಟುಕೊಳ್ಳಿ: ಇಂತಹ ಸಂದರ್ಭದ ಪರಿಣಾಮವೇ

ಬೇರೆ. ಅಲ್ಲಿನ ಪ್ರಜೆಗಳಿಗೆ ರಾಜರ ಆಜ್ಞೆಗೆ ವಿಧೇಯರಾಗಿರುವ ಅಭ್ಯಾಸ ಹೃದ್ಗತವಾಗಿರುತ್ತದೆ. ಅವರು ತಾವಾಗಿಯೇ ಒಮ್ಮತದಿಂದ ಒಬ್ಬ ರಾಜನನ್ನು ನಿರ್ಮಾಣಮಾಡುವ ಹಾಗೂ ಇಲ್ಲ. ಆಳುವವರಿಲ್ಲದೆ ಸ್ವತಂತ್ರವಾಗಿ ಜೀವಿಸಲು ಅನುಭವದಿಂದ ಕಲಿಯುವವರೂ ಅಲ್ಲ. ಅದಕ್ಕೋಸ್ಕರ ಅವರನ್ನು ಜಯಿಸುವ ರಾಜನು ಅವರನ್ನು ಸುಲಭವಾಗಿ ತನ್ನವರನ್ನಾಗಿ ಮಾಡಿಕೊಂಡು ಅವರು ಎದುರು ಬಿದ್ದಾರೆಂಬ ಶಂಕೆಯಿಲ್ಲದೆ ಸ್ವಸ್ಥವಾಗಿ ಆಳಬಹುದು. ಇದಕ್ಕೆ ವಿಪರೀತ ಪಕ್ಷನಾದ ಪ್ರಜಾಪ್ರಭುತ್ವ (Commonwealth) ಕ್ಕೆ ಒಳಪಟ್ಟ ಪ್ರಾಂತ್ಯಗಳಲ್ಲಿನ ಪ್ರಜೆಗಳ ದ್ವೇಷ ಮತ್ಸರ ಶೀಲತೆಯಾದರೋ ಇಷ್ಟು ಬೇಗ ಶಮನವಾಗತಕ್ಕದ್ದಲ್ಲ. ಆ ಪ್ರಜೆಗಳ ಹಿಂದಿನ ಸ್ವಾತಂತ್ರ್ಯದ ನೆನಪು ಎಂದಿಗೂ ಮಾಸುವುದೂಇಲ್ಲ. ಅವರನ್ನು ಸುಮ್ಮನಿರಗೊಡಿಸುವುದೂ ಇಲ್ಲ. ಇಂಥ ರಾಜ್ಯಗಳನ್ನು ಜಯಿಸಿದರೆ ಅವುಗಳನ್ನು ದಕ್ಕಿಸಿಕೊಳ್ಳುವ ವಿವೇಕ ರೀತಿ ಆ ಪ್ರಜೆಗಳನ್ನು ಸಂಪೂರ್ಣವಾಗಿ ಹಾಳುಮಾಡುವುದು; ಅಥವಾ ಅವರ ಮಧ್ಯದಲ್ಲೇ ತಮ್ಮ ನಿವಾಸವನ್ನು ಭದ್ರವಾಗಿ ಸ್ಥಾಪಿಸುವುದು.

ಐದನೆಯ ಅಧ್ಯಾಯ

ತನ್ನ ಸ್ವಂತ ಸಾಮರ್ಥ್ಯದಿಂದ ಮತ್ತು ಶೌರ್ಯದಿಂದ ಸಂಪಾದಿಸಿದ ಪ್ರಾಂತ್ಯಗಳನ್ನು ಕುರಿತು

ಹೊಸದಾಗಿ ಗಳಿಸಿದ ಪ್ರಾಂತ್ಯಗಳ ಆಳ್ವಿಕೆಯನ್ನು ಕುರಿತು ಹೇಳಬೇಕಾದರೆ ನಾನು ಮಹಾಪುರುಷರ ಉಚ್ಚ ಉದಾಹರಣೆಗಳನ್ನು ಕೊಡುತ್ತೇನೆಂದು ಆಶ್ಚರ್ಯಪಡಬಾರದು. ಯಾಕೆಂದರೆ, ಸಾಮಾನ್ಯವಾಗಿ ಮನುಷ್ಯರು ಹಿಂದೆ ಬಿಟ್ಟಿರುವ ದಾರಿಯ ಜಾಡಿನಲ್ಲೇ ನಡೆಯುತ್ತಾರೆ, ಮತ್ತು ಯಾವುದಾದರೂ ಉಪಕಾರ ಯತ್ನಮಾಡಬೇಕಾದರೆ ಉದಾತ್ತ ಪುರುಷನ ಮಾದರಿಯನ್ನೇ ಧ್ಯೇಯದಲ್ಲಿಡುತ್ತಾರೆ. ನಾವು ಅನುಕರಿಸಬೇಕೆಂದಿರುವ ಸಂಪೂರ್ಣ ಸಂಪತ್ತು ನಮ್ಮ ಶಕ್ತಿಗೆ ಮೀರಿದ್ದಾಗ್ಯೂ, ಬುದ್ಧಿವಂತರಾದವರು ಮಹತ್ಕಾರ್ಯಗಳನ್ನು ಸಾಧಿಸಿದ ಮಹಾ ಪುರುಷರ ದೃಷ್ಟಾಂತವನ್ನು ಮನದಲ್ಲಿ ನೆನೆದರೆ ಅದರಿಂದ ಆ ಮಹತ್ವದ ಕೆಲವು ಭಾಗವಾದರೂ ನಮ್ಮ ಸಂಕಲ್ಪದಲ್ಲಿ ಬಂದು ನಮ್ಮ ಧ್ಯೇಯಕ್ಕೆ ಸಾಧ್ಯವಾದಷ್ಟು ಹತ್ತಿರವಾದರೂ ಬರಬಹುದು. ಅನುಭವಸ್ಥರಾದ ಧನ್ವಿಗಳು ದೂರದಲ್ಲಿರುವ ಲಕ್ಷ್ಯಕ್ಕೆ ಗುರಿ ಇಡಬೇಕಾದರೆ, ತಮ್ಮ ಆಯುಧದ ಶಕ್ತಿಯನ್ನು ಅರಿತವರಾಗಿ, ಆ ಲಕ್ಷ್ಯಕ್ಕಿಂತಲೂ ಬಹಳ ಉನ್ನತಿಯಲ್ಲಿಯೇ ಗುರಿಯಿಡುತ್ತಾರೆ. ಇದರಿಂದ ಆಕಾಶವನ್ನು ಭೇದಿಸಬೇಕೆನ್ನುವುದು ಇವರ ಇಚ್ಛೆಯಲ್ಲ. ತಮ್ಮ ಆಯುಧದ ದುರ್ಬಲತೆಯನ್ನೂ, ಲಕ್ಷ್ಯದ ಅಂತರವನ್ನೂ ನೋಡಿಕೊಂಡು ತಾವು ಮೇಲೆ ಕಳುಹಿಸಿದ ಬಾಣ ಲಕ್ಷ್ಯವನ್ನು ತಗಲಬಹುದೆಂಬ ಆಶಯ. ನಾನು ಹೇಳುವುದು, ನವ ವಿಭವದ

ದೊರೆಯು ಸಂಪಾದಿಸಿದ ಪ್ರಾಂತ್ಯಗಳು ಅವನ ಶಕ್ತಿವಿವೇಕಗಳಿಗೆ ಅನುಗುಣ ವಾಗಿ ಆಳುವುದಕ್ಕೆ ಸುಖ ಅಥವಾ ದುಸ್ಸಾಧ್ಯವಾಗಿರುತ್ತವೆ. ಸಾಮಾನ್ಯವಾಗಿ ಒಬ್ಬ ಖಾಸಗಿ ಮನುಷ್ಯ ರಾಜಪದವಿಗೆ ಏರಬೇಕಾದರೆ ಅವನಲ್ಲಿ ಹೆಚ್ಚು ಗುಣವೋ ಅಥವಾ ಅದೃಷ್ಟವೋ ಇರಬೇಕು; ಇವೆರಡೂ ಒಟ್ಟಿಗೆ ಇದ್ದರೆ ಅವನ ರಾಜಾಧಿಪತ್ಯವು ಸುಗಮವಾಗಿ ನಡೆಯುತ್ತದೆ. ಆದರೂ ಇಷ್ಟು ಹೇಳ ಬಹುದು: ಇಂಥವರಲ್ಲಿಯೂ ಯಾರು ಅದೃಷ್ಟದ ಮೇಲೆ ಹೆಚ್ಚು ಭಾರ ಹಾಕದೆ, ಸುನೀತಿಯಿಂದ ರಾಜ್ಯವಾಳುತ್ತಾರೆಯೋ ಅವರ ಸಂಪತ್ತು ಹೆಚ್ಚು ಕಾಲ ನಡೆದುಬಂದಿದೆ. ದೊರೆಗೆ ಬೇರೆ ನಿವಾಸಸ್ಥಾನವಿಲ್ಲದೆ, ಹೊಸರಾಷ್ಟ್ರದ ಪ್ರಜೆಗಳ ಮಧ್ಯದಲ್ಲೇ ವಾಸಮಾಡುವುದು ಅನೇಕ ತೊಂದರೆಗಳನ್ನು ತಡೆ ಗಟ್ಟುತ್ತದೆ. ಕೇವಲ ದೈವಾನುಗ್ರಹವಲ್ಲದೆ ಆತ್ಮ ಪೌರಷದಿಂದ ಈ ಪದವಿಗೆ ಬಂದವರ ಪೈಕಿ ಹೆಚ್ಚು ಪ್ರಖ್ಯಾತರು ಮತ್ತು ಶ್ರೇಷ್ಠರು ಆದವರು ಮೋಸೆಸ್ (Moses), ಕೈರಸ್ (Cyrus), ರೋಮ್ಯುಲಸ್ (Romulus), ಥೀಸಿಯಸ್ (Theseus) ಮುಂತಾದವರು. ಒಂದು ವೇಳೆ ಮೋಸೆಸ್ ದೇವರ ಅಪ ರೋಕ್ಷ ಆಜ್ಞೆಗಳನ್ನು ನೆರವೇರಿಸುವ ದೂತನೆಂದು ಹೇಳಿದಾಗ್ಯೂ, ದೇವರ ಅಪರೋಕ್ಷ ಆಜ್ಞೆಗೆ ಅರ್ಹನಾಗಿದ್ದನೆಂಬುದೇ ದೊಡ್ಡ ಬಿರುದೆಂದು ಭಾವಿಸ ಬಹುದು. ಕೈರಸ್ ಮತ್ತು ರಾಜ್ಯಗಳನ್ನು ಸ್ಥಾಪಿಸಿದ ಇತರ ವಿಜಯಿಗಳ ಕಡೆ ಪರಿಶೀಲಿಸಿದರೆ ಅವರು ಎಂಥ ಅಸಾಮಾನ್ಯ ಮಹಾ ಪುರುಷರು ಎಂಬುದು ಕಂಡುಬರುತ್ತದೆ. ಅವರ ಜೀವನ ಚರಿತ್ರೆಯನ್ನೂ ಅವರು ಸಾಧಿಸಿದ ಮಹ ತ್ಕಾರ್ಯಗಳನ್ನೂ ಪರ್ಯಾಲೋಚಿಸಿದರೆ ಅನುಪಮ ಪ್ರಭುವಿನ ಸೇವಕ ಮೋಸೆ ಸ್ಸಿಗೂ, ಇವರಿಗೂ, ಕಾರ್ಯಸಾಧನೆಯಲ್ಲಿ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. ಅವರ ಸಾಧನೆಗಳಲ್ಲಿ, ಜಯಗಳಲ್ಲಿ ಅವರಿಗೆ ಸಂದರ್ಭ ಮತ್ತು ಅವಕಾಶಗಳನ್ನು ಒದಗಿಸುವುದು ಮಾತ್ರವೇ ದೈವಸಹಾಯ. ಈ ಸಂದರ್ಭ ಅವಕಾಶಗಳಿಲ್ಲದೇ ಇದ್ದರೆ ಇವರುಗಳ ಮಾಹಾತ್ಮ್ಯ ಪ್ರಕಾಶಕ್ಕೆ ಬರುತ್ತಿರಲಿಲ್ಲವೆಂಬುದೇನೋ ನಿಜ. ಆದರೂ ಇವರಲ್ಲಿ ಆ ಮಾಹಾತ್ಮ್ಯ ಇಲ್ಲದೆ ಇದ್ದರೆ ದೈವವು ಕೊಟ್ಟ ಅವ ಕಾಶವು ವ್ಯರ್ಥವಾಗುತ್ತಿತ್ತು. ಮೋಸೆಸ್ಸಿಗೆ ಅವಕಾಶ ದೊರೆಯಬೇಕಾದರೆ ಇಸ್ರೇಯಲಿ (Israel)ನ ಜನಗಳು ಈಜಿಪ್ಟಿ (Egypt) ನಲ್ಲಿ ಬಂದಿಗಳಾಗಿ ದ್ದದ್ದು ಆವಶ್ಯಕವಾಗಿತ್ತು; ಆ ಸನ್ನಿವೇಶವಿದ್ದುದಕ್ಕೆ ತಾನೇ ಅವರು ತಮ್ಮ ಬಿಡುಗಡೆಗಾಗಿ ಮೋಸೆಸ್ಸನ ನೇತೃತ್ವವನ್ನು ಒಪ್ಪಿ ನಡೆದದ್ದು? ರೋಮ್ಯುಲಸ್

ಬಾಲ್ಯದಲ್ಲೇ ಆಲ್ಬೋ (Albo)ವಿನಿಂದ ಹೊರ ಅಟ್ಟಲ್ಪಟ್ಟು ಕಾಡಿನಲ್ಲಿ ಕ್ರೂರಜಂತುಗಳ ಅಪಾಯಕ್ಕೆ ಒಳಗಾಗಿ ಜೀವಿಸಬೇಕಾದದ್ದೂ ಅನುಕೂಲವಾದ ಸಂದರ್ಭವೇ; ಇದರಿಂದಲೇ ಇವನು ಅನಂತರ ರೋಮಿ (Rome)ನ ರಾಜನಾಗಿ ಉತ್ತರೋತ್ತರ ಆ ಮಹಾ ಚಕ್ರಾಧಿಪತ್ಯದ ಮೂಲಕರ್ತೃವಾದನು. ಕೈರಸನ ಕಾಲದಲ್ಲಿ ಪರ್ಷಿಯನ್ನರು ಮೀಡ (Medes)ರ ಘೋರ ಪೀಡಾಪ್ರಭುತ್ವವನ್ನು ಸಹಿಸಲಾರದೆ ದಂಗೆ ಎದ್ದಿದ್ದರು; ಆ ಮೀಡರಾದರೋ ದೀರ್ಘಕಾಲದ ಯುದ್ಧವಿರಾಮ ನೆಮ್ಮದಿಯಲ್ಲಿ ಸುಕುಮಾರ ಬಲಹೀನರಾಗಿದ್ದ ಕಾರಣ ಅವನಿಗೆ ಅನುಕೂಲವಾದ ಸನ್ನಿವೇಶವೇ ಒದಗಿದ ಹಾಗಾಯಿತು. ಅಥೀನಿಯನ್ನ (Athenians)ರು ಬಹಳ ಅವ್ಯವಸ್ಥೆ ಮತ್ತು ಕಷ್ಟಸ್ಥಿತಿಯಲ್ಲಿಲ್ಲದಿದ್ದರೆ ಥೀಸಿಯಸ್ಸನಿಗೆ ತನ್ನ ಪೌರುಷ ಔದಾರ್ಯಗಳನ್ನು ತೋರಿಸಲು ಸಂಧಿ ಇರುತ್ತಿರಲಿಲ್ಲ. ಈ ಅನುಕೂಲವಾದ ಸನ್ನಿವೇಶಗಳು ಈ ಮಹಾಪುರುಷರುಗಳನ್ನು ಉನ್ನತಿಗೆ ತಂದವು; ಅವರ ಗುಣಾತಿಶಯವೇ ಆ ಅವಕಾಶವನ್ನು ಸಾರ್ಥಕಗೊಳಿಸಿ ಅವರ ಮಾತೃಭೂಮಿಯ ಕೀರ್ತಿಯು ಮತ್ತು ಐಶ್ವರ್ಯದ ಅಭಿವೃದ್ಧಿಗೆ ಉಪಯೋಗಿಸಿಕೊಂಡಿತು. ಮೇಲೆ ಹೇಳಿರುವ ಪ್ರಭುಗಳ ಹಾಗೆ ತಮ್ಮ ಪೌರುಷದಿಂದಲೇ ಉನ್ನತಿಗೆ ಬರುವಂಥವರು, ತಮ್ಮ ಕಾರ್ಯಸಾಧನೆಯಾಗುವ ಮುನ್ನ ಅನೇಕ ವಿಘ್ನಗಳನ್ನು ಎದುರಿಸಬೇಕಾಗುತ್ತದೆ; ಅವುಗಳನ್ನೆಲ್ಲಾ ಜಯಿಸಿದ ಮೇಲೆ ತಮ್ಮ ಪದವಿಯನ್ನು ನೆಮ್ಮದಿಯಾಗಿ ಉಳಿಸಿಕೊಳ್ಳುತ್ತಾರೆ. ಇವರ ಮುಖ್ಯ ಕಷ್ಟ, ತಾವು ಗಳಿಸಿರುವ ರಾಜ್ಯದ ಸ್ವಾಸ್ಥ್ಯ ಮತ್ತು ರಕ್ಷಣೆಗಾಗಿ ತಾವು ರಚಿಸಬೇಕಾದ ಹೊಸ ಕಾನೂನುಗಳ ಮತ್ತು ಪದ್ಧತಿಗಳ ಸಂಬಂಧವಾದದ್ದು. ಹೊಸ ರಾಜನಿಗೆ ಈ ಕಾನೂನುಗಳನ್ನು ರಚಿಸುವುದಕ್ಕಿಂತಲೂ ಕಷ್ಟವಾದ, ಅಪಾಯಕರವಾದ, ಭರವಸೆಯಿಲ್ಲದ ರಾಜಕಾರ್ಯ ಬೇರೊಂದಿಲ್ಲ. ಈ ಕಾರ್ಯಕ್ಕೆ ತೊಡಗುವವನಿಗೆ ಹಿಂದಿನ ಕಾನೂನುಗಳಿಂದ ಪ್ರಯೋಜನ ಪಡೆದಿರುವ ಜನರೆಲ್ಲರೂ ವೈರಿಗಳಾಗುತ್ತಾರೆ. ಹೊಸ ಕಾನೂನಿನಿಂದ ಒಂದು ವೇಳೆ ಪ್ರಯೋಜನ ಪಡೆಯಬಹುದಾದವರು ಉದಾಸೀನ ಮಿತ್ರರೇ. ಈ ಔದಾಸೀನ್ಯಕ್ಕೆ ಕಾರಣ—ಹಿಂದಿನ ಕಾನೂನಿನ ಪಕ್ಷದವರಲ್ಲಿನ ಗೌರವ, ಅವರ ಹೆದರಿಕೆ; ಮತ್ತು ಸಾಮಾನ್ಯ ಜನಗಳಿಗೆ ಹೊಸನೀತಿ ಹಳೆಯದಾಗಿ ಸಾಧುವಾದದ್ದೆಂದು ಖಚಿತವಾಗುವವರೆಗೂ ಅದರಲ್ಲಿರುವ ಅಪನಂಬಿಕೆ. ಇದರ ಪರಿಣಾಮವಾಗಿ

ಹೊಸ ಕಾನೂನಿನ ಶತ್ರುಗಳ ವಿರೋಧ ಬಹಳ ಆಗ್ರಹಪೂರ್ವಕವಾಗಿರುತ್ತದೆ. ಅದರ ಮಿತ್ರರ ಸಹಕಾರ ಬಹು ದುರ್ಬಲವಾಗಿರುತ್ತದೆ. ಬಹುವೇಳೆ ಹೊಸ ರಾಜನೂ, ಅವನ ಕಡೆಯವರೂ ಒಟ್ಟಿಗೆ ನಾಶವಾಗುತ್ತಾರೆ. ಆದ್ದರಿಂದ, ಹೊಸ ಕಾನೂನುಗಳನ್ನು ರಚಿಸುವ ನೀತಿಯ ಕ್ರಮವಾದ ವಿವೇಚನೆಗೆ ಮುಂಚೆ ಚೆನ್ನಾಗಿ ವಿಚಾರಮಾಡಬೇಕಾದ ವಿಷಯಗಳು ಇವು: ಹೊಸ ಕಾನೂನಿನ ಕರ್ತೃವಾಗಬೇಕೆಂಬವನು ತಾನು ಸ್ವಯಂಶಕ್ತನೇ? ಅಥವಾ ಇತರರ ಸಾಮರ್ಥ್ಯದ ಆಧಾರದ ಮೇಲಿರುವನೆ? ಅವನು ಮಾತಿನ ಧೋರಣೆ, ನಾಲಿಗೆಯ ಶೌರ್ಯದವನೇ, ಅಥವಾ ಯೋಧ ಸಾಮರ್ಥ್ಯವುಳ್ಳವನೇ? ಬರಿಯ ವಾಕ್ಚಾತುರ್ಯದವನಾದರೆ ಅವನ ಯತ್ನ ಬಹುಶಃ ವ್ಯರ್ಥವೇ. ಅವನಿಗೆ ಇತರರ ಸಹಾಯವಿಲ್ಲದೆ, ತನ್ನ ಆಜ್ಞೆಯ ಅಮಲನ್ನು ನಿರ್ವಹಿಸಲು ಸಾಕಾದಷ್ಟು ತನ್ನದೇ ಸೇನಾಬಲವಿದ್ದರೆ, ಅವನ ಉದ್ಯಮವನ್ನು ಸುಲಭವಾಗಿ, ಅಪಾಯವಿಲ್ಲದೆ ಯಶಸ್ವಿಯಾಗಿ ಸಾಧಿಸಬಹುದು. ನಮ್ಮ ಪವಿತ್ರ ಗ್ರಂಥದಲ್ಲೇ ನೋಡಿ: ಯಾವ ದೈವಪ್ರೇರಿತ ಪ್ರವಾದಿಯು ತನ್ನ ಬೋಧೆಯನ್ನು ಶಸ್ತ್ರಪಾಣಿಯಾಗಿ ಬಲಾತ್ಕಾರದಿಂದ ಸಾಧಿಸುತ್ತಿದ್ದನೋ ಅವನ ಸುಧಾರಣೆಗಳು ಬಹುಶಃ ಜಾರಿಗೆ ಬರುತ್ತಿದ್ದವು; ಯಾವನು ಬರಿಯ ವಾಗ್ವೈಖರಿ, ಮಧುರ ಪ್ರಚೋದನೆಗಳ ಬಲದ ಮೇಲೆ ಸುಧಾರಣೆಗಳನ್ನು ಕೈಗೊಂಡನೋ ಅವನು ಬಹುಶಃ ದೇಶಭ್ರಷ್ಟತೆಗೆ, ಅಥವಾ ಮತವಳರಿಂದ ಕೊಲೆಗೆ ಗುರಿಯಾಗುತ್ತಿದ್ದನು. ಜನಗಳ ಮನಸ್ಸು ಚಂಚಲ; ಹೊಸ ನಂಬಿಕೆಗಳು ಜಾಗ್ರತೆಯಾಗಿ ಅವರಿಗೆ ಹಿತವಾಗಿ ಕಂಡರೂ ಸುಲಭವಾಗಿ ಅವರ ಮನಸ್ಸಿನಲ್ಲಿ ನೆಲೆಗೊಳ್ಳುವುದಿಲ್ಲ. ಆದ್ದರಿಂದ ಹೊಸಮತದಲ್ಲಿನ ಉತ್ಸಾಹ ಇಂಥವರಲ್ಲಿ ಕ್ಷೀಣವಾಗುತ್ತಾ ಬರುವಾಗ ಅದರ ಆಚರಣೆಯನ್ನು ಬಲಾತ್ಕಾರದಿಂದ ಜಾರಿಯಲ್ಲಿರುವಂತೆ ಮಾಡಬೇಕು. ಈ ರೀತಿಯ ಬಲಾತ್ಕಾರದ ಶಕ್ತಿಯಿಲ್ಲದಿದ್ದಲ್ಲಿ ಮೋಸೆಸ್, ಕೈರಸ್, ಥೀಸಿಯಸ್, ರೋಮ್ಯುಲಸ್ ಇವರುಗಳಿಗೂ ಕೂಡ ತಮ್ಮ ಜನಗಳು ತಾವು ಪ್ರತಿಪಾದಿಸಿದ ನೀತಿಯನ್ನು ದೀರ್ಘಕಾಲ ಆಚರಿಸುವಂತೆ ಮಾಡುವುದಕ್ಕೆ ಆಗುತ್ತಿರಲಿಲ್ಲ; ಈ ಶಕ್ತಿಯಿಲ್ಲದಿದ್ದದ್ದರಿಂದಲೇ ಜೆರೋಂ ಸಾವೋನರೋಲಾ ತಾನು ಪ್ರಾಚುರ್ಯಕ್ಕೆ ತರಲು ಯತ್ನಿಸಿದ ಕಾನೂನುಗಳು, ಸುಧಾರಣೆಗಳು ಪ್ಲಾರೆನ್ಸ್ ಜನಕ್ಕೆ ಬೇಸರವನ್ನುಂಟುಮಾಡಿದ ಮೇಲೆ ಮಡಿದದ್ದು. ಈ ಅಪಾಯಗಳು ಸುಧಾರಕರ ಪ್ರಗತಿಯ ಹಜ್ಜೆ

ಹಜ್ಜೆಗೂ ಒದಗುವುವು; ಇವುಗಳನ್ನು ಪರಿಹಾರ ಮಾಡುವುದು ಮಹತ್ತಾದ ಪೌರುಷ ಗುಣಾಧಿಕ್ಯಕ್ಕೆ ಮಾತ್ರ ಸಾಧ್ಯ. ಇವುಗಳನ್ನೆಲ್ಲ ದಾಟಿ, ಅಡ್ಡ ಬಂದ ಅಸೂಯಾಪರ ವೈರಿಗಳನ್ನು ಜಯಿಸಿ ಪೂಜ್ಯಪದವಿಗೆ ಬಂದವರು, ಐಶ್ವರ್ಯ, ಯಶಸ್ಸುಗಳನ್ನು ಚಿರಕಾಲ ಅನುಭವಿಸುವರು. ಇದಕ್ಕೆ ಇನ್ನೊಂದು ದೃಷ್ಟಾಂತವನ್ನು ಕೊಡುವೆನು. ಈಗ ನಾನು ಹೇಳುವ ಪುರುಷನು ನಾನು ಮೊದಲು ಹೇಳಿರುವಷ್ಟು ಪ್ರಖ್ಯಾತನಲ್ಲದಿದ್ದರೂ ಅವನ ನಿದರ್ಶನವು ನಾನು ಹೇಳುವ ಪ್ರಮೇಯಕ್ಕೆ ಸಾಕಾಗುವಷ್ಟು ಪ್ರಮಾಣವಾಗಿದೆ. ಈ ಪುರುಷನು ಸೈರಾಕ್ಯೂಸಿನ ಹೀರೋ (Hiero of Syracuse). ಇವನು ಸಾಮಾನ್ಯ ಪ್ರಜೆಯಾಗಿ ಹುಟ್ಟಿದ್ದವನಾದರೂ ಆಗ ಪರರ ದಬ್ಬಾಳಿಕೆಗೆ ಸಿಕ್ಕಿ ಕಷ್ಟಪಡುತ್ತಿದ್ದ ಸೈರಾಕ್ಯೂಸಿನ ಜನಗಳಿಂದ ನಾಯಕನಾಗಿ ಚುನಾಯಿಸಲ್ಪಟ್ಟು, ಆ ಅಧಿಕಾರದಲ್ಲಿ ಅವನು ತೋರಿಸಿದ ಗುಣಾತಿಶಯವನ್ನು ಮೆಚ್ಚಿದ ಆ ನಗರದವರಿಂದ ರಾಜನಾಗಿ ನೇಮಕಪಡೆದನು. ಅವನಲ್ಲಿ ಸ್ವಾಭಾವಿಕವಾಗಿ ಎಂಥ ಮಹದ್ಗುಣಗಳಿದ್ದುವೆಂದರೆ, ಅವನ ವಿಚಾರ ಬರೆದ ಇತಿಹಾಸಕಾರರು— ಈ ಮಹಾನುಭಾವನು ಆದರ್ಶ ರಾಜನಾಗುವುದಕ್ಕೆ ರಾಜ್ಯವೊಂದೇ ಕಡಿಮೆ— ಎಂದು ಗುಣಗಾನ ಮಾಡುತ್ತಿದ್ದರು. ಈ ಹೀರೋ ಹಿಂದಿನ ಸೇನಾರಚನೆಯನ್ನು ರದ್ದುಮಾಡಿ, ಹೊಸ ಮಾದರಿಯನ್ನು ಸ್ಥಾಪಿಸಿದನು. ಹಿಂದಿನ ಮಿತ್ರ ರಾಜರುಗಳ ಅನುಬಂಧವನ್ನು ತೊರೆದು, ಹೊಸ ಅನುಬಂಧಗಳನ್ನು ಬೆಳೆಸಿ, ತನ್ನ ಸ್ವಂತ ಬಲವನ್ನು ಅಭಿವೃದ್ಧಿಪಡಿಸಿ, ಸ್ವಂತಮಿತ್ರರನ್ನು ಸಂಪಾದಿಸಿ, ತನ್ನ ರಾಜ ವೈಭವವನ್ನು ತನ್ನ ಇಷ್ಟಾನುರೂಪವಾಗಿ ನಿಶ್ಚಲ ತಳಹದಿಯ ಮೇಲೆ ಸ್ಥಾಪಿಸಿಕೊಂಡನು. ಪರಿಣಾಮವಾಗಿ ಮಹತ್ತರವಾದ ಶ್ರಮದಿಂದ ಸಂಪಾದಿಸಿದ ಈ ಪದವಿಯನ್ನು ಕಾಪಾಡಿಕೊಂಡು ಅನುಭವಿಸಲು ಇವನು ಹೆಚ್ಚು ಶ್ರಮಪಡಬೇಕಾಗಲಿಲ್ಲ.

ಆರನೆಯ ಅಧ್ಯಾಯ

ಅಕಸ್ಮಾತ್ತಾಗಿ ಮತ್ತು ಪರರ ಸಹಾಯದಿಂದ ಒದಗಿದ ರಾಜ್ಯಗಳನ್ನು ಕುರಿತು

ಸಾಮಾನ್ಯ ಸ್ಥಿತಿಯಿಂದ ರಾಜಪದವಿಗೆ ಹೆಚ್ಚು ಶ್ರಮವಿಲ್ಲದೆ, ಕೇವಲ ಅದೃಷ್ಟದ ದೆಶೆಯಿಂದ ಏರುವಂಥವರು, ಪದವಿಗೆ ಏರಿದ ಮಾರ್ಗವು ಸುಲಭವಾಗಿದ್ದರೂ, ಅದನ್ನು ಉಳಿಸಿಕೊಳ್ಳುವುದು ಬಹಳ ಕಷ್ಟವೆಂಬುದನ್ನು ಅನುಭವಿಸುತ್ತಾರೆ. ತಮ್ಮದಲ್ಲದ ರೆಕ್ಕೆಗಳಿಂದ ಹಾರಿ ಒಂದು ಎತ್ತರವಾದ ಪ್ರದೇಶದಲ್ಲಿ ಕುಳಿತು, ಆ ರೆಕ್ಕೆಗಳು ಹೊರಟುಹೋದರೆ ಉಂಟಾಗಬಹುದಾದ ಕಳವಳವನ್ನು ಇವರು ಅನುಭವಿಸುತ್ತಾರೆ. ಇವರಿಗೆ ಉಚ್ಚಸ್ಥಾನ ದೊರಕಿದ್ದು ಲಂಚರುಷುವತ್ತುಗಳಿಂದಲೋ, ಅಥವಾ ಮತ್ತಾರೋ ಬಲಾಢ್ಯನಾದ ದೊರೆಯ ದಯೆಯಿಂದಲೋ ಆಗಿರಬೇಕು. ಇಂಥ ನಿದರ್ಶನಗಳು ಗ್ರೀಸಿ (Greece)ನಲ್ಲಿ ಅಯೋನಿಯಾ (Ionia) ಮತ್ತು ಹೆಲ್ಲೆಸ್ಪಾಂಟ್ (Hellespont) ಪಟ್ಟಣಗಳಲ್ಲಿ ಅನೇಕ ಕಂಡುಬರುತ್ತವೆ. ಇವು ಡೇರಿಯಸ್ (Darius) ತನ್ನ ಭದ್ರತೆಗೆ ಮತ್ತು ಖ್ಯಾತಿಗಾಗಿ ನಿರ್ಮಾಣ ಮಾಡಿದವು, ಅಥವಾ ಲಂಚದಿಂದ ಸೈನ್ಯದ ಒತ್ತಾಸೆಯನ್ನು ಪಡೆದು ಸಾಮ್ರಾಟ್ ಪದವಿಗೆ ಬಂದವರು ಸ್ಥಾಪಿಸಿದವು. ಇಂಥ ರಾಜರುಗಳು ತಮ್ಮನ್ನು ಮುಂದಕ್ಕೆ ತಂದವರ ಅನುಗ್ರಹ ಮತ್ತು ಸೌಭಾಗ್ಯದಿಂದ ಬಾಳತಕ್ಕಂಥವರಾಗಿರುತ್ತಾರೆ. ಅನುಗ್ರಹ ಮತ್ತು ಸೌಭಾಗ್ಯ ಎರಡೂ ಬಹಳ ಚಂಚಲ ವಸ್ತುಗಳಾದ್ದರಿಂದ ಇಂಥ ಪರೋಪಜೀವಿ ದೊರೆಗಳು ತಮಗೆ ಯಾವ ಹೊತ್ತಿನಲ್ಲಿ ಏನಾಗುತ್ತದೆಂಬು

ದನ್ನು ಅರಿಯದ ಅಲ್ಪಜೀವಿಗಳಾಗಿರುತ್ತಾರೆ. ಅಸಾಧಾರಣ ಶಕ್ತಿವಂತರಲ್ಲದಿದ್ದರೆ, ಸಾಮಾನ್ಯ ಸ್ಥಿತಿಯಲ್ಲಿ ಹುಟ್ಟಿಬೆಳೆದ ಇವರಿಗೆ ಇತರರನ್ನು ತಮ್ಮ ಆಜ್ಞೆಗೆ ವಿಧೇಯರನ್ನಾಗಿ ಇಟ್ಟುಕೊಳ್ಳುವ ತಿಳುವಳಿಕೆ ಇರುವುದಿಲ್ಲ. ಅದೂ ಅಲ್ಲದೆ ತಮ್ಮಲ್ಲಿ ಭಕ್ತಿಯುಳ್ಳ ಸೈನ್ಯವಿಲ್ಲದುದರಿಂದ ಇವರ ಸ್ಥಿತಿಯು ಅಂತತ್ರವಾಗಿರುತ್ತದೆ. ಪ್ರಪಂಚದಲ್ಲಿ ಅಕಸ್ಮಾತ್ ಹುಟ್ಟಿ, ಅಲ್ಪಕಾಲದಲ್ಲಿ ಅಧಿಕವಾಗಿ ಬೆಳೆಯುವ ಇತರ ವಸ್ತುಗಳಂತೆಯೇ ಏಕಾಏಕಿ ಜಯಿಸಲ್ಪಟ್ಟ ರಾಜ್ಯಗಳು ಗಾಢವಾದ ಬೇರು ಅಥವಾ ಸ್ಥಿರವಾದ ತಳಹದಿಯಿಲ್ಲದವಾಗಿರುತ್ತವೆ. ಆದ್ದರಿಂದ ಅವು ಆಪತ್ತಿನ ಮೊದಲನೆಯ ಹೊಡೆತದಲ್ಲಿಯೇ ಕದಲಿ ನೆಲಸಮವಾಗುತ್ತವೆ. ಹೀಗಾಗುವುದನ್ನು ತಪ್ಪಿಸಬೇಕಾಗಿದ್ದರೆ ಅದೃಷ್ಟವಶಾತ್ ಏಕಾಏಕಿ ಪದವಿಗೆ ಬಂದ ರಾಜರು ಮುನ್ನೋಟದಿಂದ, ತಮ್ಮ ಸುದೈವದಿಂದ ಬಂದ ಪದವಿಯನ್ನು, ತಮ್ಮ ಜಾಣ್ಮೆಯಿಂದಲೂ, ಪೌರುಷದಿಂದಲೂ ಕಾಪಾಡಿಕೊಳ್ಳುವ ಏರ್ಪಾಡನ್ನು ಮಾಡಿಕೊಳ್ಳಬೇಕು. ಹೀಗೆ ಅಕಸ್ಮಾತ್ತಾಗಿ ಬಂದ ಐಶ್ವರ್ಯವನ್ನು ಕಾಪಾಡಿಕೊಂಡವರ ಒಂದು ನಿದರ್ಶನವನ್ನೂ, ಕಳೆದುಕೊಂಡವರ ಒಂದು ನಿದರ್ಶನವನ್ನೂ ಕೊಡುತ್ತೇನೆ. ಕಾಪಾಡಿಕೊಂಡವನು ಫ್ರಾನ್ಸಿಸ್ ಸ್ಫೋರ್ಜಾ (Francis Sforza). ಕಳೆದುಕೊಂಡವನು ಸೀಸರ್ ಬೋರ್ಜಿಯಾ (Caeser Borgia). ಸ್ಫೋರ್ಜಾ ಅಸಾಧಾರಣ ಶೌರ್ಯದಿಂದ ಮತ್ತು ನ್ಯಾಯವಾದ ಮಾರ್ಗದಿಂದ ಬಹಳ ಶ್ರಮಪಟ್ಟು ಮಿಲಾನ್ ಪ್ರಭು (Duke of Milan) ಪದವಿಯನ್ನು ಗೆದ್ದುಕೊಂಡವನು ಅದನ್ನು ಬಹಳ ಕ್ಷೇಮದಿಂದ, ಶಾಂತತೆಯಿಂದ ಅನುಭವಿಸಿದನು. ಬೋರ್ಜಿಯ ನಾದರೊ (ಇವನನ್ನು ವ್ಯಾಲೆಂಟೈನಿನ ಡ್ಯೂಕ್ ಎಂದು ಸಾಮಾನ್ಯವಾಗಿ ಕರೆಯುತ್ತಾರೆ) ಅನೇಕ ಸೊಗಸಾದ ಪ್ರಾಂತ್ಯಗಳನ್ನು ತನ್ನ ತಂದೆಯಾದ ಪೋಪ್ ಅಲೆಕ್ಸಾಂಡರನ ಸಂಪತ್ತಿನಿಂದ ಪಡೆದನು. ಆದರೆ ತಂದೆಯ ಮರಣಾನಂತರ ಬೋರ್ಜಿಯಾ ಎಷ್ಟು ಶ್ರಮ ಪಟ್ಟರೂ, ಬುದ್ಧಿವಂತನೂ, ಶೂರನೂ ಆದವನು ಪ್ರಯೋಗಿಸಬಹುದಾದ ನೀತಿಗಳನ್ನೆಲ್ಲಾ ಎಷ್ಟು ಅತಂದ್ರಿಕನಾಗಿ ಅನುಸರಿಸಿದರೂ, ಈ ಪ್ರಾಂತ್ಯಗಳನ್ನೆಲ್ಲಾ ಕಳೆದುಕೊಂಡನು. ಇದಕ್ಕೆ ಕಾರಣವೇನೆಂದರೆ, ಸರಿಯಾದ ತಳಹದಿಯಿಲ್ಲದಿದ್ದರೂ ಮೇಲ್ಕಟ್ಟಡವನ್ನು ಕಟ್ಟಬಹುದು; ಆದರೆ ಕಟ್ಟುವುದು ಶ್ರಮಸಾಧ್ಯ; ನಿಲ್ಲುವುದು ಅಸಂಭವ. ಬೋರ್ಜಿಯನ ಚರಿತ್ರೆಯನ್ನು ವಿವೇಚಿಸಿದರೆ ಅವನು ಎಷ್ಟು ಮಜಬೂತಾಗಿ ತಾನು ಸಂಪಾದಿ

ಸಿದ ಅಧಿಕಾರದ ತಳಹದಿಯನ್ನು ಕಟ್ಟಿದನೆಂಬುದು ಚೆನ್ನಾಗಿ ವ್ಯಕ್ತಪಡುತ್ತದೆ. ಇದನ್ನು ನಾನು ದೃಷ್ಟಾಂತವಾಗಿ ಹೇಳುವುದು ಅಪ್ರಕೃತವಲ್ಲ; ಏಕೆಂದರೆ ಈ ಉದಾಹರಣೆಗಿಂತಲೂ ಶ್ರೇಷ್ಠವಾದ ನೀತಿಬೋಧೆಯು ಹೊಸ ರಾಜನಿಗೆ ದುರ್ಲಭ. ಸೀಸರ್ ಬೋರ್ಜಿಯಾ ಮಾಡಿದ ಸಾಹಸವು ಶ್ರೇಷವಾದದ್ದೇ; ಆದರೆ ಅವನ ದೈವವು ಕ್ರೂರವಾದದ್ದರಿಂದ ಅದು ನಿಷ್ಫಲವಾಯಿತು.

ಪೋಪ್ ಅಲೆಕ್ಸಾಂಡರ್ (Pope Alexander) ತನ್ನ ಮಗ ಡ್ಯೂಕ್ ವ್ಯಾಲೆಂಟೈನ (Duke Valentine—Caesar Borgia)ನನ್ನು ದೊಡ್ಡ ಸ್ಥಾನಕ್ಕೆ ತರಲು ಆಶಿಸಿಪಟ್ಟನು; ಆದರೆ ಇದಕ್ಕೆ ಸದ್ಯದಲ್ಲೂ, ಮುಂದೆಯೂ, ಬಹುಪ್ರತಿಬಂಧಕಗಳನ್ನು ಕಂಡನು. ಮೊದಲು, ಇವನ ರಾಜ್ಯವನ್ನು ಹೆಚ್ಚು ಮಾಡುವುದಕ್ಕೆ ತನ್ನ ಚರ್ಚಿ (Church)ನ ಹತೋಟಿಯಲ್ಲಿರುವ ಪ್ರಾಂತ್ಯ ಗಳನ್ನು ಕೊಡುವುದರ ಹೊರತು ಬೇರೆ ಮಾರ್ಗ ಅಥವಾ ನಿಧಿ ಇರಲಿಲ್ಲ. ಆದರೆ ಆ ನಾಡುಗಳನ್ನು ಕೊಡುವುದಕ್ಕೆ ಮಿಲಾನ್ ಅಧಿಪತಿ (Duke of Milan)ಯೂ ವೆನಿಷಿಯನ್ನ (Venetians)ರೂ ಎಂದಿಗೂ ಒಪ್ಪುತ್ತಿರಲಿಲ್ಲ ವೆಂದು ಇವನಿಗೆ ಚೆನ್ನಾಗಿ ಗೊತ್ತು. ಈ ಪ್ರಾಂತ್ಯಗಳಾದ ಫಾಯೆನ್‌ಜಾ (Faenza), ಮತ್ತು ರೆಮಿನಂ (Reminum) ವೆನಿಸ್ಸನ್ನು ಶರಣು ಹೊಕ್ಕಿದ್ದವು. ಇದೂ ಅಲ್ಲದೆ, ಇವನಿಗೆ ಸಹಾಯಮಾಡಲು ತಕ್ಕಷ್ಟು ಬಲವುಳ್ಳ ಇಟಲಿಯ ಪಂಗಡಗಳು—ಅರ್ಸಿನಿ (Ursini) ಕೊಲೊನ್ನೆಸಿ, (Colonnesi) ಮೊದಲಾದವು—ಪೋಪನ ಅಧಿಕಾರ ಪ್ರಬಲವಾದರೆ ತಮಗೆ ಅಪಾಯವೆಂದು ಭೀತರಾಗಿದ್ದರು. ಇಂಥವರನ್ನು ನಂಬುವುದು ವಿವೇಕವಲ್ಲ. ಇಟಲಿಯ ಇತರ ಪ್ರಾಂತ್ಯಗಳನ್ನು ತನ್ನ ವಶಮಾಡಿಕೊಳ್ಳಬೇಕಾದರೆ ಸದ್ಯಕ್ಕೆ ಜಾರಿಯಲ್ಲಿರುವ ಕಾನೂನು, ಸಮಯಗಳನ್ನು ಮುರಿದು ಅಲ್ಲೋಲಕಲ್ಲೋಲ ಮಾಡಬೇಕಾಗುತ್ತದೆ. ಆದರೆ ಇದೇನೂ ಅಪೂರ್ವ ಅಥವಾ ಶ್ರಮಸಾಧ್ಯ ವಾದ ಕೃತ್ಯವಲ್ಲ. ವೆನಿಷಿಯನ್ನರು ತಾವೇ ತಮ್ಮ ಯಾವುದೋ ಸ್ವಾರ್ಥ ಕ್ಕಾಗಿ ಫ್ರೆಂಚರನ್ನು ಇಟಲಿಗೆ ಪುನಃ ದಂಡಯಾತ್ರೆ ಬರಲು ಆಹ್ವಾನಿಸಿದ್ದಾರೆ. ಇದು ಪೋಪನಿಗೆ ಹಿತವಾದ ಸಮಾಚಾರವೇ ಹೌದು ಎಂಬುದನ್ನು ಪೋಪನು ಫ್ರೆಂಚ್ ದೊರೆಯು ಕೋರಿದಂತೆ ಅವನ ವಿವಾಹ ವಿಚ್ಛೇದಕ್ಕೆ ಅಪ್ಪಣೆ ಕೊಟ್ಟ ದ್ದರಿಂದ ಅರಿಯಬಹುದು. ಆದ್ದರಿಂದಲೆ ಫ್ರೆಂಚ್ ದೊರೆ ಲೂಯಿ (Louis) ವೆನಿಷಿಯನ್ನರ ಕರೆ ಮತ್ತು ಪೋಪ್ ಅಲೆಕ್ಸಾಂಡರನ ಅನುಮತಿಯಿಂದ

ಆಲ್ಪ್ಸ್ (Alps) ಪರ್ವತಗಳನ್ನು ದಾಟಿ ಮಿಲಾನ್ (Milan) ನಗರಕ್ಕೆ ತಲಪಿದ ಕೂಡಲೇ, ಪೋಪನು ಸಾಧಿಸಬೇಕೆಂದಿದ್ದ ರೋಮಾನ್ಯ (Romagna)ಕ್ಕೆ ಪೋಪನ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಿದನು; ಆ ಪ್ರಾಂತ್ಯವು ಅವನ ಹೆಸರುವಾಸಿಗೆ ಬೆರಗಾಗಿ ಕೈವಶವಾಯಿತು. ರೋಮಾನ್ಯ ಹೀಗೆ ಒಂದು ರೀತಿಯಲ್ಲಿ ಡ್ಯೂಕ್ ವ್ಯಾಲೆಂಟೈನನಿಂದ ಜಯಿಸಲ್ಪಟ್ಟಿತೆಂದು ಹೇಳಬಹುದು. ಇವನಿಂದ ಕೊಲೊನ್ನೆಸಿ (Colonnesi) ಯರು ಪರಾಜಿತರಾದರೆನ್ನಬಹುದು. ಆದರೆ ಇಷ್ಟರಿಂದ ತೃಪ್ತನಾಗದೆ, ಇನ್ನೂ ಮುಂದುವರಿಯಬೇಕೆಂಬ ಇವನ ಆಶೆಗೆ ಎರಡು ಪ್ರತಿಬಂಧಕಗಳು ಒದಗಿದವು. ಒಂದು ಇವನ ಸೈನ್ಯದ ನಿಷ್ಠಾಶೂನ್ಯತೆ, ಎರಡು ಫ್ರೆಂಚರ ಜುಗುಪ್ಸೆ, ವಿಮುಖತೆ. ಇವನಿಗೆ ಇವನ ಸೈನ್ಯದಲ್ಲಿ ಸೇರಿದ ಆರ್ಸಿನಿಯವರಲ್ಲಿ ಅಪನಂಬಿಕೆ; ಇವರು ಸಂದರ್ಭ ಒದಗಿದರೆ ತನ್ನನ್ನು ಕೈಬಿಟ್ಟಾರು, ಒಂದು ವೇಳೆ ತಾನು ಗೆದ್ದಿರುವುದನ್ನು ಅಪಹರಿಸಿದರೂ ಅಪಹರಿಸಿಯಾರು, ಎಂಬ ಶಂಕೆ. ಫ್ರೆಂಚರ ವಿಚಾರದಲ್ಲಿಯೂ ಮೇಲಿನಂತೆಯೇ ಸಂಶಯ. ಇವನು ಬೊಲೋನಾವನ್ನು ಮುತ್ತಿದಾಗ ಆರ್ಸಿನಿಯವರು ಉದಾಸೀನರಾಗಿದ್ದುದನ್ನು ಕಂಡು ಈ ಶಂಕೆ ಇನ್ನೂ ತೀವ್ರವಾಯಿತು. ಫ್ರೆಂಚ್ ದೊರೆಯ ಮನೋಗತವಾದರೋ—ಡ್ಯೂಕನು ಅರ್ಬಿನ್ ಡಚ್ಚಿ (Duchy of Urbin) ಪ್ರದೇಶವನ್ನು ಹಿಡಿದು ಟಸ್ಕನಿ (Tuscany) ಯನ್ನು ಮುತ್ತಲು ಪ್ರವರ್ತಿಸಿದಾಗ ದೊರೆಯು ಅವನಿಗೆ ಹಾಗೆ ಮಾಡಬೇಡವೆಂದು ನಿರೋಧಿಸಿದಾಗಲೇ ಬಯಲಾಯಿತು. ಇದರಿಂದ ಅದೃಷ್ಟವನ್ನೂ ನಂಬದೆ, ಪರರ ಸಹಾಯದ ಭರವಸೆಯನ್ನೂ ಬಿಟ್ಟು ತನ್ನ ಸ್ವಂತ ಬಲದ ಮೇಲೆಯೇ ತನ್ನ ಪುರೋಭಿವೃದ್ಧಿಯನ್ನು ಸಾಧಿಸಬೇಕೆಂದು ನಿರ್ಧಾರವಾಯಿತು. ಇವನು ಮೊದಲು ರೋಮ್ ಪಟ್ಟಣದಲ್ಲಿನ ಆರ್ಸಿನಿ ಮತ್ತು ಕೊಲೊನ್ನಿ ಪಕ್ಷದವರನ್ನು ಲಂಚ ರುಷುವತ್ತುಗಳ ಮೂಲಕ ಕೆಡಿಸಿ, ಆ ಪಂಗಡದ ಬಲವನ್ನು ಕ್ಷೀಣಗೊಳಿಸಿದನು. ಆ ಪಕ್ಷದ ಗಣ್ಯರಾದ ಕೆಲವರನ್ನು ತನ್ನಲ್ಲಿ ಉಚಿತವಾದ ಚಾಕರಿಗಳಲ್ಲಿರಿಸಿಕೊಂಡನು; ಇನ್ನೂ ಕೆಲವರನ್ನು ಅವರವರ ಯೋಗ್ಯತಾನುಸಾರ ಪೆನ್‌ಷನ್‌ಗಳಿಂದಲೋ, ಸೈನ್ಯದಲ್ಲಿ ಅಧಿಕಾರಗಳಿಂದಲೋ, ಸರಕಾರಿ ನೌಕರಿಗಳಿಂದಲೋ ಸಂಭಾವಿಸಿದನು. ಕೆಲವು ಕಾಲದ ಅನಂತರ ಇವರುಗಳೆಲ್ಲ ಶತ್ರುಪಕ್ಷವನ್ನು ಬಿಟ್ಟು ಇವನವರೇ ಆದರು. ಆರ್ಸಿನಿ ಮತ್ತು ಕೊಲೊನ್ನಿ, ಹೀಗೆ ಇವನು ಈ ಉಭಯ ಪಕ್ಷದವರನ್ನೂ

ಪಕ್ಷಭ್ರಷ್ಟರನ್ನಾಗಿ ಮಾಡಿದನು. ಅರ್ಸಿನಿಯುವರು ಪಶ್ಚಿಮ ವಿವೇಕದಿಂದ ಈ ಡ್ಯೂಕನ ಅಭ್ಯುದಯುವು ತಮ್ಮ ವಿನಾಶಕ್ಕೆ ಹೇತುವೆಂದು ತಿಳಿದು ಪೆರೂಗಿಯಾದಲ್ಲಿನ ಮಾಗಿಯೋನಿನಲ್ಲಿ (Magione in Perugia) ಸಭೆಸೇರಿ ಅರ್ಬಿನಿನಲ್ಲಿ ದಂಗೆಯನ್ನೂ, ರೋಮಾನ್ಯದಲ್ಲಿ ಗಲಭೆಯನ್ನೂ, ಇತರ ದುರಂತಗಳನ್ನೂ ಎಬ್ಬಿಸಿದರು. ಸೀಸರ್ ಇವೆಲ್ಲವನ್ನೂ ಫ್ರೆಂಚರ ಸಹಾಯದಿಂದ ಅಡಗಿಸಿ ತನ್ನ ಪೂರ್ವಖ್ಯಾತಿಯನ್ನು ಸ್ಥಿರಪಡಿಸಿಕೊಂಡನು. ಆದರೆ ಪುನಃ ಪುನಃ ಪರರ ಸಹಾಯ ಕೋರುವುದು ಇವನಿಗೆ ಅಸಹ್ಯ; ಸಹಾಯಕ್ಕೆ ಪ್ರತಿಯಾಗಿ ಬೆಲೆಕೊಡಲು ತನ್ನಲ್ಲೇನೂ ಇಲ್ಲ ಎಂದು ತಿಳಿದು ಬೇರೊಂದು ಉಪಾಯವನ್ನು ಎಷ್ಟು ಜಾಣ್ಮೆಯಿಂದ ಮಾಡಿದನೆಂದರೆ, ತನ್ನ ಶತ್ರುಗಳಾಗಿದ್ದ ಅರ್ಸಿನಿಯುವರೊಡನೆ ಸೀನರ್ ಪಾಲೋ (Seignor Paulo) ವಿನ ಮಧ್ಯಸ್ಥಿಕೆಯಿಂದ ರಾಜಿಮಾಡಿಕೊಂಡನು. ಈ ಪಾಲೋವಿಗೆ ತನ್ನಲ್ಲಿ ಭಕ್ತಿಯುತ ಸಹಕಾರವನ್ನು ಸ್ಥಿರಪಡಿಸುವುದಕ್ಕೆ ಹಣ, ಬೆಲೆಯುಳ್ಳ ಸರಕು ಸರಂಜಾಮು ವಾಹನಾದಿಗಳನ್ನು ಬಹುಮಾನವಾಗಿ ಕೊಟ್ಟು ಎಷ್ಟುಮಟ್ಟಿಗೆ ತನ್ನವನನ್ನಾಗಿ ಮಾಡಿಕೊಂಡನೆಂದರೆ, ಅವನು ಡ್ಯೂಕನಲ್ಲಿ ಸಂಪೂರ್ಣ ನಂಬಿಕೆ ಇಟ್ಟು ಅರ್ಸಿನಿಯುವರನ್ನು ಸಿನಿಗಾಗ್ಲಿಯಾ (Sinigaglia)ಕ್ಕೆ ಕರೆತಂದು ಡ್ಯೂಕನ ವಶಮಾಡಿದನು. ಹೀಗೆ ತನ್ನ ಮುಖ್ಯಶತ್ರುಗಳ ನಿಗ್ರಹ ಮತ್ತು ಶಿಥಿಲೀಕರಣದಿಂದಲೂ, ರೋಮಾನ್ಯ ಮತ್ತು ಅರ್ಬಿನ್ ಡಚ್ಚಿ (Romagna and Duchy of Urbin) ಪ್ರದೇಶಗಳನ್ನು ಗೆದ್ದದ್ದರಿಂದಲೂ, ತನ್ನ ನೀತಿಯಿಂದ ಜನಗಳ ಅನುರಾಗವನ್ನು ಸಂಪಾದಿಸಿದ್ದರಿಂದಲೂ ಡ್ಯೂಕ್ ವ್ಯಾಲೆಂಟೈನನು ತನ್ನ ಉತ್ತರಾಭಿವೃದ್ಧಿಗೆ ಭದ್ರವಾದ ಪಾಯವನ್ನು ಹಾಕಿದನು. ಈ ಸಂದರ್ಭದಲ್ಲಿ ಅವನು ಆಚರಿಸಿದ ನೀತಿಯು ಅನುಕರಣಕ್ಕೆ ಯೋಗ್ಯವಾದುದರಿಂದ ಅವನ ವಿಚಾರದಲ್ಲಿ ನಾನು ಮೌನವಾಗಿರುವುದು ಉಚಿತವಲ್ಲ. ಡ್ಯೂಕನು ರೋಮಾನ್ಯವನ್ನು ಸ್ವಾಧೀನಪಡಿಸಿಕೊಂಡಾಗ ಅದು ಕ್ಷುದ್ರ ಅಧಿಪತಿಗಳ ದುಷ್ಟ ಆಡಳಿತದಿಂದ ಕಂಗೆಟ್ಟಿತ್ತು. ಅವರು ಪ್ರಜೆಗಳನ್ನು ರಕ್ಷಿಸುವುದರ ಬದಲು ಸೂರೆಮಾಡುತ್ತಿದ್ದರು. ಪ್ರಜೆಗಳಲ್ಲಿ ಒಗ್ಗಟ್ಟನ್ನು ಉಂಟುಮಾಡುವುದರ ಬದಲು ಕಕ್ಷಿಗಳಿಗೆ ಅವಕಾಶ ಕೊಡುತ್ತಿದ್ದರು. ಪ್ರಾಂತ್ಯದಲ್ಲಿ ತುಂಬಾ ದರೋಡೆಗಳೂ, ದಂಗೆಗಳೂ, ಅಕ್ರಮಗಳೂ ತಾಂಡವವಾಡುತ್ತಿದ್ದುವು. ಈ ಪ್ರದೇಶದಲ್ಲಿ ಒಮ್ಮತವನ್ನೂ, ಪ್ರಭುವಿಗೆ ವಿಧೇಯುತೆಯನ್ನೂ

ಸ್ಥಾಪಿಸುವುದಕ್ಕೆ ಒಳ್ಳೆಯ ರಾಜ್ಯಪಾಲರನ್ನು ಕಳುಹಿಸತಕ್ಕದ್ದು ಅವಶ್ಯಕವೆಂದು ಭಾವಿಸಿ ಡ್ಯೂಕನು ಈ ಜವಾಬ್ದಾರಿಯನ್ನು ರೆಮಿರೋ ಡಾರ್ಕೋ (Remiro d'Orco)ವಿಗೆ ವಹಿಸಿ, ಅವನು ದಯಾಶೂನ್ಯನೂ, ಕೋಪಿಷ್ಟನೂ ಆಗಿದ್ದರೂ ಅವನಿಗೆ ನಿರಂಕುಶ ಅಧಿಕಾರವನ್ನು ಕೊಟ್ಟನು. ಅಚಿರದಲ್ಲಿಯೇ ಡಾರ್ಕೋ ದೊಂಬಿಗಳನ್ನೆಲ್ಲಾ ಅಡಗಿಸಿ, ಶಾಂತಿಯನ್ನು ಸ್ಥಾಪಿಸಿ, ಒಳ್ಳೆಯ ಖ್ಯಾತಿಯನ್ನು ಪಡೆದನು. ಅನಂತರ ಅಷ್ಟು ಘನವಾದ ಅಧಿಕಾರ ಒಬ್ಬನಲ್ಲಿರುವುದು ಪ್ರಜೆಗಳಿಗೆ ಅಸಹ್ಯವಾದೀತೆಂದು ತೋರಿ, ಡ್ಯೂಕನು ಈ ಪ್ರಾಂತ್ಯದ ಮಧ್ಯದಲ್ಲಿ ಒಬ್ಬ ಶಕ್ತಿವಂತನಾದ ನ್ಯಾಯಾಧಿಪತಿಯ ಅಧ್ಯಕ್ಷತೆಯಲ್ಲಿ ಒಂದು ನ್ಯಾಯಸ್ಥಾನವನ್ನು ಸ್ಥಾಪಿಸಿ, ಪ್ರತಿಯೊಂದು ಪಟ್ಟಣದಲ್ಲಿಯೂ ಒಬ್ಬೊಬ್ಬ ನ್ಯಾಯವಾದಿಗೆ ಇರಲು ಅವಕಾಶ ಕೊಟ್ಟನು. ತನ್ನ ಪ್ರತಿನಿಧಿ ಡಾರ್ಕೋವಿನ ಆಡಳಿತದ ಕ್ರೌರ್ಯದಿಂದ ತನಗೆ ಅನೇಕ ಜನ ಶತ್ರುಗಳು ಆಗಿದ್ದಾರೆಂದು ಡ್ಯೂಕನಿಗೆ ತಿಳಿಯಿತು. ಆ ಅಪವಾದವನ್ನು ತೊಡೆದು ಜನಗಳ ಪ್ರೀತಿಯನ್ನು ಸಂಪಾದಿಸುವುದಕ್ಕೆ ಅವನು ಒಂದು ಉಪಾಯವನ್ನು ಹುಡುಕಿದನು. ಹಿಂದೆ ಕಠೋರ ಕೃತ್ಯಗಳು ನಡೆದಿದ್ದರೆ ಅವು ತನ್ನ ತಾಬೇದಾರನ ದುರಹಂಕಾರದಿಂದ ನಡೆದುವೇ ಹೊರತು ತಾನು ಅವಕ್ಕೆ ಹೊಣೆ ಅಲ್ಲವೆಂದು ಪ್ರಚುರಪಡಿಸಿ, ಇದನ್ನು ಸ್ಥಿರಪಡಿಸುವುದಕ್ಕೋಸ್ಕರ ತನ್ನ ಆ ಮಾಜಿ ರಾಜ್ಯಪಾಲನನ್ನು ಹಿಡಿತರಿಸಿ, ಅವನನ್ನು ಒಂದು ಪ್ರಾತಃಕಾಲ ಸೆಸೇನಾ (Cesena) ಪಟ್ಟಣದ ಬಹಿರಂಗ ಪಣ್ಯಸ್ಥಾನದಲ್ಲಿ ಶಿರಚ್ಛೇದ ಮಾಡಿಸಿದನು. ಅವನ ತಲೆ ಕಡಿಯುವುದಕ್ಕೆ ಮುಂಚೆ ಅವನ ಒಂದು ಪಾರ್ಶ್ವದಲ್ಲಿ ಮರದ ಕಠಾರಿಯನ್ನೂ ಇನ್ನೊಂದು ಪಾರ್ಶ್ವದಲ್ಲಿ ರಕ್ತಲೇಪಿತವಾದ ಚಾಕುವನ್ನೂ ಕಟ್ಟಿಸಿದನು. ಈ ಭಯಂಕರ ದಂಡನೆಯು ಜನಗಳಿಗೆ ವಿಸ್ಮಯವನ್ನೂ ಸಮಾಧಾನವನ್ನೂ ಉಂಟುಮಾಡಿತು, ಇರಲಿ. ಡ್ಯೂಕನು, ತನ್ನಲ್ಲಿ ತಕ್ಕಷ್ಟು ಶಕ್ತಿಯಿದೆ, ತನಗೆ ಸದ್ಯದಲ್ಲಿ ಯಾವ ಭೀತಿಯೂ ಇಲ್ಲ, ತನ್ನ ನೆರೆಹೊರೆಯ ರಾಜರುಗಳು ತನಗೆ ತೊಂದರೆಕೊಡಲು ಬಲಹೀನರಾಗಿದ್ದಾರೆ, ಆದ್ದರಿಂದ ಇತರ ಪ್ರಾಂತ್ಯಗಳನ್ನು ಗೆಲ್ಲುವ ಧೋರಣೆ ಮಾಡುವುದಕ್ಕೆ ಫ್ರಾನ್ಸಿನವರ ಅಸೂಯೆ ಹೊರತು ಇನ್ನು ಯಾವ ಪ್ರತಿಬಂಧಕವೂ ಇಲ್ಲ, ಎಂದು ತಿಳಿದನು. ಫ್ರಾನ್ಸ್ ದೇಶದ ದೊರೆ ತಾನು ಡ್ಯೂಕನಿಗೆ ಸಹಾಯ ಮಾಡಿದ್ದು ಅವಿವೇಕವೆಂದು ಕಂಡುಕೊಂಡಿದ್ದನು; ಆದ್ದರಿಂದ ಇವನು

ಡ್ಯೂಕನ ಯತ್ನಗಳಿಗೆ ಅಡ್ಡಿಬರುವುದು ಖಂಡಿತ. ಈ ಕಾರಣದಿಂದ ಡ್ಯೂಕನು ಹೊಸಮಿತ್ರರನ್ನು ಹುಡುಕಲಾರಂಭಿಸಿ, ಫ್ರಾನ್ಸಿನವರ ವಿಚಾರದಲ್ಲಿ ಉದಾಸೀನತೆಯನ್ನೂ, ಶಂಕೆಯನ್ನೂ ತೋರಿಸಹತ್ತಿದನು. ಇದು ಫ್ರೆಂಚ್ ಸೈನ್ಯವು ಕೆಜಿಟಾ (Cajata) ಮುಂದೆ ಹಲ್ಲಾ ಕುಳಿತಿದ್ದ ಸ್ಪ್ಯಾನಿಯಾರ್ಡ್ ಮೇಲೆ ದಂಡೆತ್ತಿ ನೇಪಲ್ಸ್ ರಾಜ್ಯವನ್ನು ಪ್ರವೇಶಿಸಿದಾಗ ಸ್ಪಷ್ಟಪಟ್ಟಿತು. ಅವನ ದೊಡ್ಡ ಗುರಿ ಫ್ರೆಂಚರಿಂದ ತಾನು ಭದ್ರವಾಗಿ ರಕ್ಷಿತವಾಗಿರಬೇಕು ಎನ್ನುವುದು. ಪೋಪ್ ಅಲೆಕ್ಸಾಂಡರ್ ಬದುಕಿದ್ದರೆ ಈ ಉದ್ದೇಶ ಕೈಗೂಡುತ್ತಿತ್ತು ಎಂಬುದಕ್ಕೆ ಸಂದೇಹವಿಲ್ಲ. ಮೇಲ್ಕಂಡವೇ ಡ್ಯೂಕನ ಸದ್ಯದ ಅಪಾಯಗಳನ್ನು ಎದುರಿಸುವ ನೀತಿ. ದೂರದ ಅಪಾಯಗಳು ಯಾವುವು, ಅವುಗಳನ್ನು ಪರಿಹರಿಸುವುದು ಹೇಗೆ, ಎಂಬುದು ಸ್ಪಷ್ಟವಾಗಿ ಗೊತ್ತಾಗುವಂತೆ ಇರಲಿಲ್ಲ. ಮೊದಲನೆಯ ಶಂಕೆ, ಅಲೆಕ್ಸಾಂಡರನ ಅನಂತರ ಬರುವ ಪೋಪನು ತನಗೆ ವಿರೋಧಿಯಾಗಿ, ಅಲೆಕ್ಸಾಂಡರ್ ಕೊಟ್ಟಿರುವ ಸರಂಜಾಮನ್ನೆಲ್ಲಾ ವಾಪಸು ಕಸಿದುಕೊಂಡಾನೋ ಎಂಬುದು. ಇದನ್ನು ತಡೆಗಟ್ಟುವುದಕ್ಕೆ ಡ್ಯೂಕನು ನಾಲ್ಕು ಉಪಾಯಗಳನ್ನು ಮಾಡಿದನು. ಮೊದಲನೆಯ ಉಪಾಯ, ಈ ಸರಂಜಾಮುಗಳನ್ನು ತಮಗೆ ವಾಪಸು ಕೊಡಬೇಕೆಂದು ಕೇಳಬಹುದಾದ ಹಿಂದಿನ ದಣಿಗಳನ್ನೆಲ್ಲಾ ನಾಶಮಾಡಿದನು. ಅವರು ಇದ್ದರಲ್ಲವೇ ವಾಪಸು ಕೇಳುವುದು? ಎರಡನೆಯ ಉಪಾಯ, ಪೋಪನಲ್ಲಿ ಭೀತಿಯನ್ನು ಹುಟ್ಟಿಸಿ, ತನ್ನ ಹದ್ದಿನಲ್ಲಿಟ್ಟುಕೊಳ್ಳಲು, ರೋಮ್ ಪಟ್ಟಣದ ದೊಡ್ಡ ಮನೆತನದವರನ್ನು ಪುಸಲಾಯಿಸಿ ತನ್ನ ಪಕ್ಷಕ್ಕೆ ಸೇರಿಸಿಕೊಳ್ಳಲು ಯತ್ನ ಮಾಡಿದನು. ಮೂರನೆಯ ಉಪಾಯ, ಪೋಪನನ್ನು ಚುನಾಯಿಸುವ ಸಂಸ್ಥೆ (Electoral College)ಯ ಸದಸ್ಯರನ್ನು ಸಾಧ್ಯವಾದಷ್ಟು ಮಟ್ಟಿಗೆ ತನಗೆ ಬೇಕಾದವರನ್ನಾಗಿ ಮಾಡಿಕೊಂಡನು. ನಾಲ್ಕನೆಯ ಉಪಾಯ, ತನ್ನ ತಂದೆಯು ಜೀವಂತನಾಗಿದ್ದ ಹಾಗೆಯೇ ಮುಂದೆ ಯಾರೂ ಜಯಶಾಲಿಗಳಾಗಿ ತನ್ನನ್ನು ಕೆಣಕಲಾರದಷ್ಟು ಬಲವನ್ನು ಸಂಗ್ರಹಿಸಬೇಕು ಎನ್ನುವುದು. ಅಲೆಕ್ಸಾಂಡರನು ಸಾಯುವುದಕ್ಕೆ ಮುಂಚೆ ಇವನು ಮೇಲಿನವುಗಳ ಪೈಕಿ ಮೂರು ಉಪಾಯಗಳನ್ನು ಕೂಡಿದ ಮಟ್ಟಿಗೆ ಸಾಧಿಸಿದ್ದನು. ನಾಲ್ಕನೆಯದರಲ್ಲೂ ಸಾಧ್ಯವಾದಷ್ಟು ದೂರ ನಡೆದಿದ್ದನು. ಪ್ರಾಂತ್ಯಗಳನ್ನು ಕಳೆದುಕೊಂಡ ದಣಿಗಳ ಪೈಕಿ ಇವನ ಕೈಗೆ ಸಿಕ್ಕಿದವರನ್ನೆಲ್ಲಾ ಕೊಲ್ಲಿಸಿದನು. ಅವರ

ಪೈಕಿ ಉಳಿದಿದ್ದವರು ಬಹು ಸ್ವಲ್ಪಜನ. ರೋಮ್ ಪಟ್ಟಣದ ದೊಡ್ಡ ಮನುಷ್ಯರನ್ನೂ ತನಗೆ ಬೇಕಾದವರನ್ನಾಗಿ ಮಾಡಿಕೊಂಡಿದ್ದನು. ಪೋಪನನ್ನು ಚುನಾಯಿಸುವ ಕಾರ್ಡಿನಲ್‌ಗಳ ಸಭೆ (College of Cardinaly) ಯಲ್ಲಿ ಬಲವಾದ ಕಕ್ಷಿಯನ್ನು ಏರ್ಪಡಿಸಿಕೊಂಡಿದ್ದನು. ತನ್ನ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕಾಗಿ ಪೆರೂಗಿಯಾ (Perugia) ಮತ್ತು ಪಯಾಂಬಿನೋ (Piombino) ಇವುಗಳನ್ನು ಆಗಲೇ ತನ್ನ ಸ್ವಾಧೀನಪಡಿಸಿಕೊಂಡು, ಪೈಸಾ (Pisa) ವನ್ನು ತನ್ನ ರಕ್ಷಣೆಯಲ್ಲಿ ಇಟ್ಟುಕೊಂಡಿದ್ದನು. ಇಷ್ಟರಲ್ಲೇ ನೇಪಲ್ಸ್ (Naples) ರಾಜ್ಯದಿಂದ ಸ್ಪೈಯಿನಿನವರು ಫ್ರೆಂಚರನ್ನು ಅಟ್ಟಿಬಿಟ್ಟಿದ್ದರಿಂದ ಇವನಿಗೆ ಫ್ರೆಂಚರ ಭಯವು ತಪ್ಪಿತು. ಅವರು ಉಭಯತ್ರರೂ ಇವನ ಸ್ನೇಹವನ್ನೇ ಬಯಸುವರಾದರು. ಈಗ ಅವನು ಮುಚ್ಚುಮರೆಯಿಲ್ಲದೆ ಪೈಸಾವನ್ನು ಆಕ್ರಮಿಸಿಕೊಂಡನು. ಇದನ್ನು ನೋಡಿ ಅರ್ಧಭಯದಿಂದ, ಅರ್ಧ ಫ್ಲಾರೆಂಟೈನಿನ ಮೇಲಿನ ದ್ವೇಷದಿಂದ ಲಕ್ಕಾ (Lucca) ಮತ್ತು ಸಿಯನ್ನಾ (Sienna) ತಾವಾಗಿಯೇ ಇವನ ವಶವಾದುವು. ಫ್ಲಾರೆಂಟೈನರಾದರೋ ನಿಸ್ಸಹಾಯಕರಾಗಿ, ನಿರಾಶರಾಗಿ ಉಳಿದರು. ಈ ಘಟನೆಗಳೆಲ್ಲಾ ಅಲೆಕ್ಸಾಂಡರನು ಸಾಯುವ ವರ್ಷದಲ್ಲಲ್ಲದೆ ಅದಕ್ಕೆ ಸ್ವಲ್ಪ ಮುಂಚಿತವಾಗಿಯೇ ಸಂಭವಿಸಿದ್ದರೆ ಡ್ಯೂಕನು ದೈವದ ಮೇಲೂ, ಪರರ ಮೇಲೂ ಭಾರಹಾಕದೆ, ತನ್ನ ಶಕ್ತಿ ಮತ್ತು ಖ್ಯಾತಿ ಇವುಗಳ ಆಧಾರದ ಮೇಲೆ ಸ್ವತಂತ್ರವಾಗಿ ಪ್ರಭಾವದಿಂದ ಇರುತ್ತಿದ್ದನು. ಆದರೆ ಈ ಉದ್ಯಮವನ್ನು ಇವನು ಕೈಗೊಂಡ ಐದು ವರ್ಷಗಳೊಳಗಾಗಿ ಇವನ ತಂದೆಯು ಸತ್ತನು. ಇವನ ತಂದೆಯಿಂದ ಇವನಿಗೆ ವಸ್ತುತಃ ಕಡ್ಡಾಯವಾಗಿ ಬಂದದ್ದು ರೋಮಾನ್ಯ ಒಂದೇ. ಉಳಿದ ಪ್ರದೇಶಗಳು ಎರಡು ಅಮಿತ್ರ ಸೈನ್ಯಗಳಿಂದ ತುಂಬಿದ ಮುಗಿಲು ರಾಜ್ಯಗಳು ಮಾತ್ರ ಆಗಿದ್ದುವು. ಅಲ್ಲದೆ, ತಂದೆಯ ಸಾವಿನ ಕಾಲದಲ್ಲಿ ಡ್ಯೂಕನು ಅತ್ಯಂತ ರೋಗಿಷ್ಠನಾಗಿದ್ದನು. ಈ ಎರಡು ಶತ್ರು ಸೈನ್ಯಗಳೂ, ಶರೀರದ ಈ ದುಸ್ಥಿತಿಯೂ ಇಲ್ಲದಿದ್ದಲ್ಲಿ ಸಾಮ, ಭೇದ, ದಂಡ, ಉಪಾಯಗಳಲ್ಲಿ ಅಪ್ರತಿಮನಿಪುಣನಾದ ಡ್ಯೂಕನು ಅಡ್ಡಬಂದ ಪ್ರತಿಬಂಧಕಗಳನ್ನೆಲ್ಲಾ ನಿವಾರಣೆಮಾಡಿ ತನ್ನ ಉದ್ದೇಶಗಳನ್ನು ಸಂಪೂರ್ಣವಾಗಿ ಸಾಧಿಸುತ್ತಿದ್ದನು. ಅವನು ಹಾಕಿದ ತಳಹದಿ ಎಷ್ಟು ಭದ್ರವಾಗಿತ್ತೆನ್ನುವುದಕ್ಕೆ ರೋಮಾನ್ಯ ಪಟ್ಟಣದಲ್ಲಿನ ಇವನ ಪ್ರಜೆಗಳ ವರ್ತನೆಯು ನಿದರ್ಶನವೇ ಸಾಕು. ಈ ಪ್ರಜೆಗಳಿಗೆ, ಇವನು ಸಾವಿನ

ದವಡೆಯಲ್ಲಿ ಇದ್ದಾನೆ, ರೋಮಿನಿಂದ ಎಂದಿಗೂ ಹೊರಬರಲಾರ, ಎಂಬ ಮನದಟ್ಟು ಇದ್ದಾಗ್ಯೂ ಕೂಡ, ಹಿಂದಿನ ನಾಯಕರಾದ ಬಾಗ್ಲಿಯೋನಿ (Baglioni), ವಿಟೆಲ್ಲಿ (Vitelli) ಮತ್ತು ಅರ್ಸಿನಿ (Ursini) ಇವರುಗಳು ವಾಪಸು ಬಂದಾಗ್ಯೂ ನಗರದವರು ಪೂರ್ಣ ಒಂದು ತಿಂಗಳು ಶತ್ರುಗಳ ಬೋಧನೆಗೆ ಒಳಪಟ್ಟು ಅವರ ಪಕ್ಷ ಸೇರದೆ, ಡ್ಯೂಕನ ಪಕ್ಷದಂತೆಯೇ ಭಕ್ತಿಯಿಂದ ವರ್ತಿಸಿದರು. ಇವನಿಗೆ ಬೇಕಾದಂಥವರನ್ನು ಪೋಪ್ ಪದವಿಗೆ ಏರಿಸಲು ಶಕ್ತಿ ಇವನಿಗೆ ಇರಲಿಲ್ಲವೆನ್ನುವುದು ನಿಜ. ಆದರೆ ಬೇಡದವರನ್ನು ಆ ಪದವಿಯಿಂದ ತಡೆಗಟ್ಟಲು ಇವನು ಸಮರ್ಥನಾಗಿದ್ದನು. ಅಲೆಕ್ಸಾಂಡರ್ ಸತ್ತಾಗ ಇವನು ಸುದೈವದಿಂದ ಆರೋಗ್ಯವಾಗಿದ್ದಿದ್ದರೆ ಇವನ ಇಷ್ಟಾರ್ಥ ಪೂರ್ತಿಯಾಗುತ್ತಿತ್ತು. ಹನ್ನೊಂದನೆಯ ಜೂಲಿಯಸ್ (Julius the Eleventh) ಪೋಪ್ ಆಗಿ ಚುನಾಯಿಸಲ್ಪಟ್ಟಾಗ ನನ್ನಲ್ಲಿ ಡ್ಯೂಕನೇ ಈ ರೀತಿ ಹೇಳಿದನು: "ನಮ್ಮ ತಂದೆಯು ತೀರಿಕೊಂಡರೆ ಏನೇನು ಅಕಸ್ಮಾತ್ತು ಆಪತ್ತುಗಳು ಏಳಬಹುದು ಎಂಬುದನ್ನು ಚೆನ್ನಾಗಿ ಮೊದಲೇ ಪರಿಗಣಿಸಿದ್ದೆ. ಅವುಗಳೆಲ್ಲವಕ್ಕೂ ನಿವಾರಣೋಪಾಯಗಳನ್ನು ಸಿದ್ಧಪಡಿಸಿದ್ದೆ. ಆದರೆ ನಾನೇ ಸಾವಿನ ಬಾಯ ಹತ್ತಿರ ತುತ್ತಾಗಿ ಹೋಗುತ್ತೇನೆಂದು ಊಹಿಸಲಿಲ್ಲ." ಇದು ನಿಜವಾದ ಮಾತು. ಗಾಢವಾಗಿ ಶೋಧಿಸಿನೋಡಲು ಡ್ಯೂಕ್ ವ್ಯಾಲೆಂಟೈನನ ನೀತಿಯಲ್ಲಿ ಈಷತ್ತು ನ್ಯೂನತೆಯೂ ಕಂಡುಬರುವುದಿಲ್ಲ. ಆದ್ದರಿಂದ ಅವನನ್ನು ಹೊಸದಾಗಿ ದೇವಾನುಗ್ರಹದಿಂದಲೋ, ಇತರರ ಸಹಾಯದಿಂದಲೋ ರಾಜ್ಯಕ್ಕೆ ಬಂದಿರುವ ಪುರುಷರ ಅನುಕರಣೆಗೆ ಯೋಗ್ಯನಾದ ಆದರ್ಶ ಪುರುಷನೆಂದು ಎತ್ತಿಹಿಡಿಯಲು ಬಯಸುತ್ತೇನೆ. ಅವನ ಮೇಧಾಶಕ್ತಿಯು ಮಹತ್ತರವಾದುದು. ಅವನ ಧ್ಯೇಯಗಳು ಬಹಳ ಉನ್ನತವಾದವುಗಳು. ಅವನ ಯತ್ನವಿಲ್ಲದ ಅವನ ತಂದೆಯ ಸಾವು, ಅವನ ದೇಹಸ್ಥಿತಿಯ ಕುಸಿತ, ಇವುಗಳಿಲ್ಲದಿದ್ದಲ್ಲಿ ಅವನ ಉದ್ದೇಶಗಳೆಲ್ಲವೂ ಸಂಪೂರ್ಣವಾಗಿ ನೆರವೇರುವುದಕ್ಕೆ ಪ್ರತಿಬಂಧಕವೇನೂ ಇರುತ್ತಿರಲಿಲ್ಲ. ಆದ್ದರಿಂದ ಹೊಸ ದೊರೆಗಳ ಪ್ರಧಾನ ಸಮಸ್ಯೆಗಳ ನಿವಾರಣೋಪಾಯಗಳಿಗೆ ಮಾದರಿ ಅಥವಾ ಉದಾಹರಣೆ ಬೇಕಾದರೆ ಡ್ಯೂಕ್ ವ್ಯಾಲೆಂಟೈನನಿಗಿಂತ ಪ್ರಕೃತವಾದ ಅಥವಾ ಶ್ರೇಷ್ಠವಾದ ಆದರ್ಶ ಯಾವುದೂ ಸಿಕ್ಕಲಾರದೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ಸಮಸ್ಯೆಗಳು—ಶತ್ರುಗಳನ್ನು ಎದುರಿಸಿ ಮಿತ್ರ

ರನ್ನು ಸಂಗ್ರಹಿಸುವುದು ಹೇಗೆ? ಬಲದಿಂದ ಅಥವಾ ಮೋಸದಿಂದ ಶತ್ರುಗಳನ್ನು ಗೆಲ್ಲುವುದು ಹೇಗೆ? ಪ್ರೀತಿಯಿಂದ ಅಥವಾ ಭೀತಿಯಿಂದ ಪ್ರಜೆಗಳ ಭಕ್ತಿಯನ್ನು ಸಂಪಾದಿಸುವುದು ಹೇಗೆ? ತನ್ನ ಸೈನ್ಯದ ಸಿಪಾಯಿಗಳ ನಿಯತ್ತನ್ನೂ ಪೂಜ್ಯ ಭಾವನೆಯನ್ನೂ ಪಡೆದು ಅವರನ್ನು ಸದಾ ತನ್ನ ಅನುಚರರನ್ನಾಗಿ ಮಾಡಿಕೊಳ್ಳುವುದು ಹೇಗೆ? ತನಗೆ ಕೇಡು ಬಯಸುವವರನ್ನು ನಿರ್ಮೂಲವಾಗಿ ಧ್ವಂಸಮಾಡುವುದು ಹೇಗೆ? ಅನಾನುಕೂಲವಾದ ಹಳೆಯ ಕಾನೂನುಗಳನ್ನು ರದ್ದುಮಾಡಿ ಅನುಕೂಲವಾದ ಹೊಸ ಕಾನೂನುಗಳನ್ನು ವಿಧಾನಮಾಡುವುದು ಹೇಗೆ? ಏಕ ಕಾಲದಲ್ಲಿ ಕ್ರೌರ್ಯ, ಮಾಧುರ್ಯ, ಔದಾರ್ಯ ಇವುಗಳನ್ನು ಉಚಿತ ಪಾತ್ರಗಳಲ್ಲಿ ಪ್ರಯೋಗಿಸಿ, ಅಹಿತವನ್ನು ನಿರ್ಮೂಲಮಾಡಿ ಹಿತವನ್ನು ಬಲಪಡಿಸಿಕೊಳ್ಳುವುದು ಹೇಗೆ? ದೊರೆಗಳೇ ಮೊದಲಾದ ಪ್ರಭುಗಳ ಸಂಗಡ ಸಂಧಿಸಮಯಗಳನ್ನು ಮಾಡಿಕೊಳ್ಳುವುದರಲ್ಲಿ, ಅವರು ತನ್ನಿಂದ ಪಡೆದ ಉಪಕಾರಕ್ಕೆ ಪ್ರತ್ಯುಪಕಾರಮಾಡಬೇಕು ಎಂಬ ಕೃತಜ್ಞತೆಯನ್ನೋ, ಅಥವಾ ತನ್ನ ಶಕ್ತಿಯನ್ನು ಕಂಡು ಬಲವದ್ವೈರ ಬೇಡವೆಂಬ ಭೀತಿಯನ್ನೋ ಉತ್ಪಾದನೆಮಾಡುವ ಮಾರ್ಗ ಹೇಗೆ? ಇವೇ ಹೊಸ ರಾಜರಿಗೆ ಎದುರು ಬರತಕ್ಕ ದೊಡ್ಡ ಸಮಸ್ಯೆಗಳು. ಇವುಗಳ ಪರಿಹಾರಕ್ಕೆ ಡ್ಯೂಕ್ ವ್ಯಾಲೆಂಟೈನನ ಆಚರಣೆಯು ಅದ್ವಿತೀಯ ಮೇಲ್ಪಂಕ್ತಿಯಾಗಿದೆ. ಅದರಲ್ಲಿ ತಪ್ಪನ್ನು ಹುಡುಕಬೇಕೆಂದರೆ, ಇವನು ಜೂಲಿಯಸನ ಚುನಾವಣೆಯನ್ನು ತಡೆಗಟ್ಟಬಹುದಾಗಿತ್ತು; ಇವನು ಹಾಗೆ ಮಾಡದೆ ಇದ್ದುದರಿಂದ ಇವನಿಗೆ ಬಹಳ ಅನಾನುಕೂಲವಾಯಿತು ಎಂದು ಹೇಳಬಹುದು. ಪೋಪನನ್ನು ಚುನಾಯಿಸುವ ಶಕ್ತಿ ಇವನಿಗಿಲ್ಲದಿದ್ದರೂ, ಬೇಡದಿದ್ದವನ ಚುನಾವಣೆಗೆ ಅಡ್ಡಿ ಬರುವ ಶಕ್ತಿ ಇವನಿಗಿತ್ತೆಂದು ಹೇಳಿದ್ದೇನೆ. ಈ ಪೋಪನು ಕಾರ್ಡಿನಲ್ ಆಗಿದ್ದಾಗ ಡ್ಯೂಕನು ಇವನನ್ನು ಅಸಮಾಧಾನಪಡಿಸಿದ್ದನು. ಅವನು ಅದನ್ನು ಮರೆಯುವಂತಿರಲಿಲ್ಲ. ಇನ್ನೂ ಇವನು ಅಸಮಾಧಾನಪಡಿಸಿದ್ದ ಕಾರ್ಡಿನಲ್‌ಗಳು ಸೆಂಟ್‌ಪೀಟರ್ ಆ್ಯಡ್ ವಿಂಕ್ಯುಲಾ (St. Peter ad Vincula), ಕೊಲೊನ್ನೊ (Colonno), ಸೆಂಟ್ ಜಾರ್ಜ್ (St. George), ಆಸ್ಕೇನಿಯಸ್ (Ascaniaus), ಸ್ಪ್ಯಾನಿಷ್ (Spanish) ಕಾರ್ಡಿನಲ್‌ಗಳ ಮತ್ತು ರೋನ್ (Roan) ಕಾರ್ಡಿನಲ್‌ಗಳ ಹೊರತು, ಇನ್ನು ಯಾರು ಪೋಪ್ ಪದವಿಗೆ ಬಂದಿದ್ದರೂ

ಡ್ಯೂಕನ್ನು ಕಂಡರೆ ಹೆದರುತ್ತಿದ್ದರು. ಸ್ಪ್ಯಾನಿಯಾರ್ಡರಿಗೆ ಅವರ ಋಣದ ಕಾರಣವೂ ಅವರ ಸ್ನೇಹದ ಕಾರಣವೂ ನಿರ್ಭಯ; ರೋನ್ ಕಾರ್ಡಿನಲ್‌ಗೆ ಅವನಿಗೆ ಫ್ರಾನ್ಸ್ ರಾಜ್ಯದಲ್ಲಿದ್ದ ಪ್ರಯೋಜನದ ಕಾರಣ ನಿರ್ಭಯ. ಹೀಗಿದ್ದದ್ದರಿಂದ ಡ್ಯೂಕ್ ವ್ಯಾಲೆಂಟೈನ್ ಸ್ಪೆಯಿನಿನ ಕಾರ್ಡಿನಲ್ ಒಬ್ಬನನ್ನು ಪೋಪ್ ಮಾಡುವುದು ಬೇರೆ ಯಾವ ಮಾತಿಗಿಂತಲೂ ಮುಖ್ಯವಾಗಿತ್ತು. ಹಾಗೂ ಇದು ಅಸಾಧ್ಯವಾಗಿದ್ದಲ್ಲಿ ಸೆಂಟ್‌ಪೀಟರ್ ಆ್ಯಡ್ ವಿಂಕ್ಯುಲಾನಿಗಿಂತಲೂ ರೋನನನ್ನು ಚುನಾಯಿಸಿದರೆ ಬಾಧಕ ಕಡಮೆಯಿರುತ್ತಿತ್ತು. ದೊಡ್ಡ ಮನುಷ್ಯರಲ್ಲಿ ಹೊಸ ಉಪಕಾರಗಳಿಂದ ಹಳೆಯ ಅಪಕಾರಗಳನ್ನು ಮರೆಸಿಬಿಡಬಹುದು ಎಂಬುದು ಅವಿವೇಕ. ಹನ್ನೊಂದನೆಯ ಜೂಲಿಯಸನ ಚುನಾವಣೆಯನ್ನು ತಡೆಯದಿದ್ದದ್ದು ದೊಡ್ಡ ತಪ್ಪಾಗಿ ಡ್ಯೂಕ್ ವ್ಯಾಲೆಂಟೈನನ ಸರ್ವನಾಶಕ್ಕೆ ಕಾರಣವಾಯಿತು.

ಏಳನೆಯ ಅಧ್ಯಾಯ

ದುಷ್ಟ ಅಥವಾ ಅನ್ಯಾಯವಾದ ಸಾಧನೆಗಳಿಂದ ಆಳ್ವಿಕೆಗೆ ಬಂದವರನ್ನು ಕುರಿತು

ಸಂಪೂರ್ಣವಾಗಿ ಒಳ್ಳೆಯ ಅದೃಷ್ಟ ಅಥವಾ ಪ್ರಯತ್ನಗಳ ವಿನಾ ಖಾಸಗೀ ಮನುಷ್ಯನು ಪ್ರಭುತ್ವಕ್ಕೆ ಬರುವ ಮಾರ್ಗಗಳು ಎರಡುಂಟು. ಅವುಗಳ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುವುದು ಸಾಧುವಾಗಿದೆ. ಅವುಗಳ ಪೈಕಿ ಪ್ರಜಾಧಿಪತ್ಯದ ರಾಷ್ಟ್ರಗಳ ವಿಚಾರ ಬಂದಾಗ ಒಂದನ್ನು ಕುರಿತು ಸ್ವಲ್ಪ ಹೆಚ್ಚಾಗಿ ಪ್ರಸಂಗ ಮಾಡುತ್ತೇನೆ. ಒಂದನೆಯ ಮಾರ್ಗ ಅನ್ಯಾಯದ ಮತ್ತು ಅತಿ ದುಷ್ಟವಾದ ಸಾಧನೆಗಳಿಂದ ಪ್ರಭುತ್ವಕ್ಕೆ ಬರುವುದು. ಎರಡನೆಯದು, ಒಬ್ಬ ಸಾಮಾನ್ಯ ನಾಗರಿಕನು ಇತರ ನಾಗರಿಕರ ಅನುಗ್ರಹ ಅಥವಾ ಪಕ್ಷಪಾತದಿಂದ ಪ್ರಭುತ್ವಕ್ಕೆ ಏರಿಸಲ್ಪಡುವುದು. ಇವುಗಳ ಪೈಕಿ ಮೊದಲನೆಯ ಮಾರ್ಗವನ್ನು ಕುರಿತು ಈ ಅಧ್ಯಾಯದಲ್ಲಿ ಹೇಳುತ್ತೇನೆ. ನಾನು ಹೇಳುವ ಅಂಶಗಳಿಗೆ ಆಧಾರವಾಗಿ ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಅವುಗಳ ಪೈಕಿ ಒಂದು ಪುರಾತನದ್ದು; ಮತ್ತೊಂದು ಈಚಿನದು; ಇವುಗಳ ಗುಣ ದೋಷಗಳನ್ನು ಚರ್ಚಿಸದೆ ಇವುಗಳನ್ನು ಓದುಗರ ತೀರ್ಮಾನಕ್ಕೆ ಬಿಟ್ಟರೆ ಸಾಕಾಗಿದೆ ಎಂದು ನನ್ನ ಅಭಿಪ್ರಾಯ. ಸಿಸಿಲೀ (Sicily) ದ್ವೀಪದ ಆಗಾಥೋಕ್ಲಿಸ್ (Agathocles) ಎಂಬವನು ಬರಿಯ ಖಾಸಗೀ ಮನುಷ್ಯ ಮಾತ್ರನಲ್ಲ; ಅದರಲ್ಲಿಯೂ ಅಧಮ ದರ್ಜೆಯವನಾಗಿದ್ದನು. ಇವನನ್ನು ಸಿಸಿಲಿಯ ರಾಜಧಾನಿಯಾದ ಸೈರಾಕ್ಯೂಸಿನ ದೊರೆಯನ್ನಾಗಿ ಮಾಡಿದರು. ಇವನು ಕುಂಬಾರನ ಮಗನಾಗಿ ಹುಟ್ಟಿ ಅವನ

ಯಾವಜ್ಜೀವವೂ, ಎಂಥ ಸಂಪತ್ತು ಬಂದಾಗ್ಯೂ ಅವನ ಹುಟ್ಟುಬುದ್ಧಿ ಯಾದ ದುರ್ವ್ಯಸನಗಳನ್ನು ಬಿಡಲಿಲ್ಲ. ಆದರೂ ಅವನ ಲಂಪಟಗಳ ಜೊತೆಗೆ ಅವನಲ್ಲಿ ಇಂಥ ಪೌರುಷ ಸಾಹಸಗಳು ಬೆರತಿದ್ದುವೆಂದರೆ ಅವನು ಶ್ರೇಷ್ಠ ಯೋಧನಾಗಿ, ಅವನ ಶ್ರಮ ಸಂಪತ್ತಿನಿಂದ ಸೈರಾಕ್ಯೂಸಿನ ಮುಖ್ಯ ನಗರಾಧಿಕಾರಿ ಪದವಿಗೆ ಬಂದನು. ಆ ಪದವಿಗೆ ಬಂದ ಮೇಲೆ ದೊರೆಯಾಗಲು ದೃಢಸಂಕಲ್ಪ ಮಾಡಿಕೊಂಡನು. ಜನಗಳ ಸಮ್ಮತಿಯಿಂದ ಬಂದಿದ್ದ ತನ್ನ ಈ ಮುಖ್ಯಾಧಿಕಾರವನ್ನು ಮುಂದೆ ಯಾರ ಉಪಕಾರವನ್ನೂ ಬಯಸದೆಯೇ ತನ್ನ ಸ್ವಂತ ಬಲದಿಂದಲೇ ರಾಜನಾಗಿ ಅನುಭವಿಸಲು ನಿಶ್ಚಯ ಮಾಡಿದನು. ಆ ಕಾಲದಲ್ಲಿ ಅಮಿಲ್‌ಕಾರ್ (Amilcar) ಎಂಬ ಕಾರ್ಥೇಜ್ ಸೇನಾಪತಿಯು ತನ್ನ ಸೈನ್ಯದೊಂದಿಗೆ ಸಿಸಿಲಿಯಲ್ಲಿ ಇದ್ದನು. ಇವನೊಂದಿಗೆ ಒಂದು ಒಳಸಂಚು ಮಾಡಿಕೊಂಡು ಅಗಾಥೋಕ್ಲಿಸ್ ಒಂದು ಪ್ರಾತಃಕಾಲ ಸೈರಾಕ್ಯೂಸಿನ ರಾಜಸಭೆಯವರನ್ನೂ ನಾಗರಿಕರನ್ನೂ ಏನೋ ಒಂದು ಮುಖ್ಯಪ್ರಮೇಯದ ಚರ್ಚೆಗೆಂಬಂತೆ ಒಟ್ಟುಗೂಡಿಸಿದನು. ಇವರೆಲ್ಲಾ ಕಲೆತ ತರುವಾಯ ಇವನು ಗೊತ್ತುಮಾಡಿದ್ದ ಸಂಕೇತದ ಮೇಲೆ ಕೂಡಲೇ ಇವನ ಸಿಪಾಯಿಗಳು ಒಳಗೆ ನುಗ್ಗಿ ಅಲ್ಲಿಗೆ ಬಂದಿದ್ದ ರಾಜ್ಯ ಸಭೆಯವರೆಲ್ಲರನ್ನೂ ಮತ್ತು ನಾಗರಿಕರ ಪೈಕಿ ಹೆಚ್ಚು ಐಶ್ವರ್ಯವಂತರನ್ನೂ ಕೊಂದುಬಿಟ್ಟರು. ಇವರನ್ನು ನಾಶಪಡಿಸಿದ ಅನಂತರ ಯಾವ ಪ್ರತಿಬಂಧಕವೂ ಇಲ್ಲದೆ ಅಗಾಥೋಕ್ಲಿಸ್ ಸೈರಾಕ್ಯೂಸ್ ಪಟ್ಟಣದ ಸ್ವಾಮಿತ್ವವನ್ನು ನಿರಾತಂಕವಾಗಿ ಸ್ವಾಧೀನಪಡಿಸಿಕೊಂಡನು. ಆ ಮೇಲೆ ಇವನು ಕಾರ್ಥೇಜಿನಿಯನ್ನರಿಂದ ಎರಡು ದೊಡ್ಡ ಕದನಗಳಲ್ಲಿ ಪರಾಜಿತನಾಗಿ, ತನ್ನ ಪಟ್ಟಣದಲ್ಲಿ ಮುತ್ತಿಗೆಯನ್ನನುಭವಿಸಬೇಕಾಗಿದ್ದರೂ, ಪರಿಣಾಮದಲ್ಲಿ ತನ್ನ ಪಟ್ಟಣವನ್ನು ರಕ್ಷಿಸಿಕೊಂಡದ್ದೇ ಅಲ್ಲದೆ ತನ್ನ ಸೈನ್ಯದ ಕೆಲವು ಭಾಗವನ್ನು ಆಫ್ರಿಕಕ್ಕೆ ದಾಟಿಸಿಕೊಂಡುಹೋಗಿ, ಕಾರ್ಥೇಜಿನಿಯನ್ನರನ್ನು ಎಂಥಾ ಕಷ್ಟಗತಿಗೆ ತಂದನೆಂದರೆ ಅವರೇ ಅವನ ಜೊತೆಗೆ ಸಂಧಿಮಾಡಿಕೊಂಡು ಸಿಸಿಲಿಯನ್ನು ಅಗಾಥೋಕ್ಲಿಸನಿಗೆ ಬಿಟ್ಟು, ತಮಗೆ ಆಫ್ರಿಕಾ ಸಾಕು ಎಂದು ಒಪ್ಪಿಕೊಳ್ಳಬೇಕಾಯಿತು. ಇವನು ಆಫ್ರಿಕಕ್ಕೆ ದಂಡೆತ್ತಿ ನುಗ್ಗಿದ ಸ್ವಲ್ಪ ಕಾಲದಲ್ಲಿಯೇ ಸೈರಾಕ್ಯೂಸಿನ ಮುತ್ತಿಗೆಯನ್ನು ಕಾರ್ಥೇಜಿಯನ್ನರು ಬಿಡಬೇಕಾಯಿತು. ಈಗ ಅಗಾಥೋಕ್ಲಿಸನ ಚರಿತ್ರೆಯನ್ನು ಪರೀಕ್ಷಿಸಿ ನೋಡಿದರೆ ಅವನು ಅದೃಷ್ಟದಿಂದಲೂ ಮೇಲೆ

ಬಂದವನಲ್ಲ; ಜನಗಳ ಮೆಹರಬಾನಿಯಿಂದಲೂ ಮೇಲೆ ಬಂದವನಲ್ಲ; ಸಾವಿರಾರು ಕಷ್ಟಗಳನ್ನೂ ಆಪತ್ತುಗಳನ್ನೂ ತನ್ನ ಸ್ವಂತ ಸಾಹಸದಿಂದ, ಸಂಗ್ರಾಮ ಶೌರ್ಯದಿಂದ ನಿವಾರಿಸಿಕೊಂಡು ದೌಲತ್ತಿಗೆ ಬಂದು, ಆ ದೌಲತ್ತನ್ನು ಆ ಮೇಲೆ ಅನೇಕ ಉದಾತ್ತ ಕೃತ್ಯಗಳಿಂದ ಕಾಪಾಡಿಕೊಂಡನು ಎಂದು ಸ್ಪಷ್ಟಪಡುತ್ತದೆ. ಆದಾಗ್ಯೂ ಅವನು ಸಂಗಡಿಗ ನಾಗರಿಕರನ್ನು ಕೊಲೆ ಮಾಡಿ, ತನ್ನ ಮಿತ್ರರಿಗೆ ದ್ರೋಹಮಾಡಿ, ಕರುಣೆ ಕಕುಲಾತಿಯಿಲ್ಲದೆ ಪ್ರವರ್ತಿಸಿದ್ದು ಒಳ್ಳೆಯತನವೆಂದು ಹೇಳುವುದು ಅಸಾಧ್ಯ. ಇದರಿಂದ ಒಂದುವೇಳೆ ಚಕ್ರಾಧಿಪತ್ಯವನ್ನು ಸಂಪಾದಿಸಬಹುದು; ಆದರೆ ಕೀರ್ತಿ ಅಥವಾ ಒಳ್ಳೆಯ ಹೆಸರು ಎಂದಿಗೂ ಬರಲಾರದು. ಈ ಅಗಾಥೋಕ್ಲಿಸನ ಗಣ್ಯವಾದ ಗುಣಗಳನ್ನು ಪರ್ಯಾಲೋಚಿಸಿದರೆ ಅವನ ವಿವೇಕ, ಬಂದ ಆಪತ್ತುಗಳನ್ನೂ ಕಷ್ಟಗಳನ್ನೂ ಎದುರಿಸುವುದರಲ್ಲಿ ಅವನ ನೈಪುಣ್ಯ, ಯಾವ ದುರ್ದೈವಕ್ಕೂ ದುರವಸ್ಥೆಗೂ ಹೆದರದ ಅವನ ಅಜೇಯ ಧೀರತನ, ಇವುಗಳನ್ನು ತುಲನ ಮಾಡಿದಲ್ಲಿ, ಅವನ ಕಾಲದ ಯಾವ ಧೀರ ಸೇನಾಧಿಪತಿಗೂ ಅವನನ್ನು ಕಡಮೆಯೆಂದು ಹೇಳಲು ಕಾರಣವಿಲ್ಲ. ಆದರೆ ಅವನ ನಿಸ್ಸೀಮ ಅಮಾನುಷ ಕೊಲೆಪಾತಕತನ, ನಿರ್ದಯೆ ಹಾಗೂ ಇನ್ನೂ ಅನಂತ ದುರ್ಗುಣಗಳನ್ನು ನೋಡಿದರೆ ಅವನನ್ನು ಶ್ರೇಷ್ಠ ಜನರಲ್ಲಿ ಗಣಿಸುವುದಕ್ಕೂ ಆಗುವುದಿಲ್ಲ. ಅವನು ಮಾಡಿದ ಮಹತ್ಕಾರ್ಯಗಳನ್ನು ಅದೃಷ್ಟಕ್ಕೆ ಆಗಲಿ, ಒಳ್ಳೆಯತನಕ್ಕೆ ಆಗಲಿ ಅನ್ವಯಿಸುವುದಕ್ಕೇ ಆಗುವುದಿಲ್ಲ; ಒಂದೇ ಮಾತಿನಲ್ಲಿ ಅವು ಕೇವಲ ಅವನೇ ಸಾಧಿಸಿದವು ಎಂದು ಹೇಳಬಹುದು.

ಈಗ ನಮ್ಮ ಕಾಲದ್ದೆ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಆರನೆಯ ಅಲೆಕ್ಸ್ಯಾಂಡರ್ ಪೋಪ್ ಆಗಿದ್ದಾಗ ಆಲಿವೊರೋಟ್ಟೋ (Olivorotto da Fermo) ಎಂಬವನು ಬಹಳ ಚಿಕ್ಕಂದಿನಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು, ಅವನ ಸೋದರಮಾವ ಜಾನ್ ಫೋಗ್ಲಿಯಾನಿ (John Fogliani) ಎಂಬವನಿಂದ ಸಾಕಲ್ಪಟ್ಟನು. ಅವನ ಪ್ರಾಯದಲ್ಲಿ ಪಾಲೊ ವಿಟೆಲ್ಲಿ (Paulo Vitelli ಯ ಸೈನ್ಯದಲ್ಲಿ ಸಿಪಾಯಿಯಾಗಿ ಸೇರಿ, ತಾನು ಆ ಶಿಸ್ತಿನಿಂದ ಉನ್ನತ ನಾಯಕತ್ವಕ್ಕೆ ಏರ ಬಯಸಿದನು. ಪಾಲೋವಿನ ಮರಣಾನಂತರ ಅವನ ತಮ್ಮ ವಿಟೆಲ್ಲೆಜೋ (Vitelezzo) ಎಂಬವನ ಹತ್ತಿರ ಸಿಪಾಯಿ ನೌಕರಿಯಲ್ಲಿದ್ದು,

ತನ್ನ ಜಾಣ್ಮೆಯಿಂದಲೂ ಶೌರ್ಯದಿಂದಲೂ ಆ ಸೈನ್ಯದ ಶಕ್ತ ಸರದಾರರ ಪೈಕಿ ಒಬ್ಬನೆನ್ನಿಸಿಕೊಂಡನು ಆದರೆ ಅವನಿಗೆ ಒಬ್ಬರ ತಾಬೆಯಲ್ಲಿರುವುದು ತನ್ನ ಯೋಗ್ಯತೆಗೆ ಕಡಮೆಯೆಂದು ತೋರಿದ್ದರಿಂದ ಅವನು ಫರ್ಮ್ಮೋ (Fermo) ವಿನ ಸಹಚರ ನಾಗರಿಕರೊಡನೆ ಪಿತೂರಿ ನಡಿಸಿಕೊಂಡು,—ಇವರಿಗೆ ತಮ್ಮದೇಶದ ಸ್ವಾತಂತ್ರ್ಯಕ್ಕಿಂತ ಅದರ ದಾಸ್ಯರುಚಿಯಾಗಿತ್ತು—ವಿಟೆಲ್ಲೆಸ್ಕೋ (Vitellesco) ವಿನ ಸಹಾಯದಿಂದ ಫರ್ಮ್ಮೋವನ್ನು ತನ್ನ ಸ್ವಾಧೀನಪಡಿಸಿಕೊಳ್ಳಲು ಸಂಚುಮಾಡಿದನು. ಈ ಉದ್ದೇಶದಿಂದ ಇವನ ಸೋದರ ಮಾವ ಜಾನ್ ಫೋಗ್ಲಿಯಾನಿಗೆ ಬರೆದ ಕಾಗದದಲ್ಲಿ ತಾನು ಫರ್ಮ್ಮೋವನ್ನು ಬಿಟ್ಟು ಬಹಳ ದಿವಸವಾದ್ದರಿಂದ ಪುನಃ ಅಲ್ಲಿಗೆ ಬಂದು ತನ್ನ ಜನ್ಮಸ್ಥಾನವಾದ ಆ ಊರಿನಲ್ಲಿ ಕೆಲವು ದಿನ ಸುಖವಾಗಿರಬೇಕೆಂದು ತನಗೆ ಆಶೆಯಾಗುತ್ತದೆಂತಲೂ, ತಾನು ನೌಕರಿಗೆ ಸೇರಿದ್ದು ಕೇವಲ ಒಳ್ಳೆಯ ಹೆಸರು ಪಡೆಯುವುದಕ್ಕಾದ್ದರಿಂದ ತನ್ನ ಕಾಲವನ್ನು ತಾನು ನಿರರ್ಥಕವಾಗಿ ಕಳೆದಿಲ್ಲವೆಂಬುದನ್ನು ತನ್ನ ಸಂಗಡಿಗರಿಗೆ ತೋರಿಸಲು ಇಷ್ಟಪಡುವುದಾಗಿಯೂ, ತಾನು ಬರಬೇಕಾದರೆ ತನ್ನ ಸಂಗಡ ನೂರುಜನ ಸವಾರರನ್ನೂ, ತನ್ನ ಸ್ನೇಹಿತರನ್ನೂ ಕರೆದುಕೊಂಡು ಬರುವುದಾಗಿಯೂ, ಇವರೆಲ್ಲರನ್ನೂ ಮರ್ಯಾದೆಯಾಗಿ ಬರಮಾಡಿಕೊಂಡರೆ ತನಗೆ ಮಾತ್ರವಲ್ಲ, ತನ್ನನ್ನು ಸಾಕಿದ ಸೋದರ ಮಾವನಿಗೂ ಮಾನ ಬರುತ್ತದೆಂತಲೂ ವಿವರಿಸಿದನು. ಜಾನ್ ಫೋಗ್ಲಿಯಾನಿ ಅದಕ್ಕೆ ಮರುಳಾಗಿ ತನ್ನ ಸೋದರಳಿಯನಿಗೆ ಯಾತರಲ್ಲಿಯೂ ಏನೂ ಕಡಮೆ ಮಾಡಲಿಲ್ಲ. ಅವನನ್ನು ಆದರದಿಂದ ಬರಮಾಡಿಕೊಂಡು ತನ್ನ ಮನೆಯಲ್ಲಿಯೇ ಕೆಲವುಕಾಲ ಉಳಿಸಿಕೊಂಡನು. ಅಲ್ಲಿದ್ದಾಗ ಅವನು ತನ್ನ ದುಷ್ಕೃತ್ಯಕ್ಕೆ ಬೇಕಾದ ಏರ್ಪಾಡನ್ನೆಲ್ಲಾ ಪಕ್ವಪಡಿಸಿಕೊಂಡನು. ಆ ಮೇಲೆ ಒಂದು ದೊಡ್ಡ ಮೇಜವಾನಿಯನ್ನು ಏರ್ಪಡಿಸಿ, ಅದಕ್ಕೆ ತನ್ನ ಸೋದರ ಮಾವನನ್ನೂ, ಆ ಪಟ್ಟಣದ ಮುಖ್ಯ ನಾಗರಿಕರನ್ನೂ ಔತಣ ಕೊಟ್ಟು ಬರಮಾಡಿಕೊಂಡನು. ಔತಣದ ಕೊನೆಗೆ ಜನಗಳು ಪರಸ್ಪರ ಮನೋರಂಜನೆಯಲ್ಲಿ ಉದ್ಯುಕ್ತರಾಗಿದ್ದಾಗ, ಆಲಿವೊರೋಟ್ಟೋ ಬಹಳ ಉಪಾಯದಿಂದ ಪೋಪ್ ಅಲೆಕ್ಸಾಂಡರ್ ಮತ್ತು ಅವನ ಮಗ ಸೀಸರ್ ಅವರ ಮಹತ್ವ ಮತ್ತು ಉದ್ದೇಶಗಳನ್ನು ಕುರಿತು ಚರ್ಚೆಗೆ ಬರುವಂತೆ ಮಾಡಿದನು. ಜಾನನೂ ಮತ್ತು ಇತರರೂ ಧಾರಾಳವಾಗಿ ತಮ್ಮ ಅಭಿ

ಪ್ರಾಯಗಳನ್ನು ಹೇಳುತ್ತಾ ಇದ್ದಾಗ ಆಲಿವೋರೋಟ್ಟೋ ಹುಸಿನಗೆಯಿಂದ ಇಂಥ ಮಹಾ ವಿಷಯಗಳನ್ನು ರಹಸ್ಯವಾಗಿಯೇ ಚರ್ಚಿಸಬೇಕೆಂದು ಕೊಠಡಿಯ ಒಳಕ್ಕೆ ಕರೆದುಕೊಂಡು ಹೋದನು. ಅವರು ಕೊಠಡಿಯನ್ನು ಪ್ರವೇಶಿಸಿ ಕುಳಿತದ್ದೇ ತಡ, ಅಲ್ಲಿ ಅವಿತುಕೊಂಡಿದ್ದ ಸಿಪಾಯಿಗಳು ಅವರ ಮೇಲೆ ಬಿದ್ದು, ಸೋದರಮಾವನನ್ನೂ ಬಿಡದೆ ಎಲ್ಲರನ್ನೂ ನಿರ್ಮೂಲವಾಗಿ ಕೊಂದುಬಿಟ್ಟರು. ಈ ಕೊಲೆಪಾತಕವನ್ನು ತೀರಿಸಿಕೊಂಡು ಆಲಿವೋರೋಟ್ಟೋ ಅಶ್ವಾರೋಹಿಯಾಗಿ ಪಟ್ಟಣವನ್ನೆಲ್ಲಾ ಸುತ್ತಿ, ಸೂರೆಮಾಡಿ, ಮುಖ್ಯ ನಗರಾಧಿಕಾರಿಯನ್ನು ಅವನ ಮನೆಯಲ್ಲಿ ಮುತ್ತಿದನು. ಊರಿನವರೆಲ್ಲಾ ಹೆದರಿ ಇವನಿಗೆ ಶರಣಾದರು. ಆ ಮೇಲೆ ಪಟ್ಟಣದಲ್ಲಿ ತಾನೇ ಅಧಿಪತಿಯಾಗಿ ಒಂದು ಸರಕಾರವನ್ನು ರಚಿಸಿದನು. ಅತೃಪ್ತಿಯನ್ನು ತೋರಿಸಿದವರನ್ನೂ, ತನಗೆ ಕೆಡುಕು ಮಾಡಲು ಶಕ್ತರಾದವರನ್ನೂ ಇವನು ಕ್ರಮೇಣ ಕೊಲ್ಲಿಸಿ, ತನ್ನ ಅಧಿಕಾರವನ್ನು ಸ್ಥಿರಪಡಿಸಿಕೊಂಡು ಫೌಜುದಾರೀ ಮತ್ತು ಸಾಮಾನ್ಯ ಕಾನೂನುಗಳನ್ನು ತನಗೆ ಬೇಕಾದ ಹಾಗೆ ನಿರ್ಮಾಣಮಾಡಿಕೊಂಡು ಫರ್ಮೋದಲ್ಲಿ ಸ್ಥಿರವಾಗಿ ಬೇರೂರಿ ನಿಂತನು. ಆ ಪಟ್ಟಣದಲ್ಲೇ ಅಲ್ಲ; ನೆರೆಹೊರೆಯವರಿಗೂ ಇವನು ಭಯಂಕರನಾಗಿದ್ದನು. ಇವನು ಸೀಸರ್ ಬೋರ್ಜಿಯನ ತಂತ್ರಕ್ಕೆ ಸಿಕ್ಕದಿದ್ದಲ್ಲಿ, ಅಗಾಥೋಕ್ಲಿಸನಂತೆಯೇ ಅಜೇಯನಾಗಿರಬಹುದಾಗಿತ್ತು. ಆದರೆ ಮೊದಲೇ ಹೇಳಿರುವಂತೆ ಸೀಸರ್ ಬೋರ್ಜಿಯಾ ಸಿಂಗೇಲಿಯಾ (Singalia) ದಲ್ಲಿ ಅರ್ಸಿನಿ, ವಿಟೆಲ್ಲಿಗಳನ್ನು ಸೆರೆಹಿಡಿದಾಗ ಆಲಿವೋರೋಟ್ಟೋವನ್ನೂ ಸೆರೆಹಿಡಿದು, ಅವನನ್ನೂ ಅವನ ಯಜಮಾನ ಮತ್ತು ಗುರು ವಿಟೆಲ್ಲೆಜೋವನ್ನೂ ಉರುಳುಹಾಕಿ ಕೊಲ್ಲಿಸಿದನು.

ಕ್ರೂರಕೃತ್ಯಗಳಿಂದ ದೌಲತ್ತಿಗೆ ಏರಿದ ಅನೇಕರು ಅವರ ಕ್ರೌರ್ಯದ ದೆಶೆಯಿಂದ ಯುದ್ಧದಲ್ಲಿ ಹಾಗಿರಲಿ, ಯುದ್ಧವಿಲ್ಲದ ಕಾಲದಲ್ಲಿಯೂ ಕೂಡಾ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಶಕ್ತರಲ್ಲದೇ ಹೋದಾಗ, ಅಗಾಥೋಕ್ಲಿಸ್ ಮತ್ತು ಅವನಂಥ ಕಡು ಕ್ರೂರರು ಅನೇಕ ದ್ರೋಹಗಳನ್ನೂ, ಅಮಾನುಷ ಕೃತ್ಯಗಳನ್ನೂ ಮಾಡಿಯೂ ಕೂಡ ತಮ್ಮ ದೇಶದಲ್ಲಿ ಬಹುಕಾಲ ಕ್ಷೇಮದಿಂದ ಬಾಳಿದ್ದೂ ಅಲ್ಲದೆ, ಪರದೇಶೀಯ ಶತ್ರುಗಳ ಹಾವಳಿಯನ್ನು ನಿವಾರಿಸಿಕೊಂಡದ್ದು ಹೇಗೆಂಬುದು ಅನೇಕರಿಗೆ ಆಶ್ಚರ್ಯಕರವಾಗಿ ಕಾಣಬಹುದು. ಕ್ರೌರ್ಯವೇನೋ ಸರಿ, ಆದರೆ ವಿವೇಕವಾದ ಕ್ರೌರ್ಯವೋ,

ಅವಿವೇಕವಾದದ್ದೋ ಎಂಬುದರ ಮೇಲೆ ಕ್ಷೇಮವೋ ಅಥವಾ ಪತನವೋ ಎಂಬುದನ್ನು ನಿರ್ಣಯಿಸಬೇಕಾಗುತ್ತದೆ ದುಷ್ಟ ಕೃತ್ಯದಲ್ಲಿ ವಿವೇಕದ ನಿರೂಪಣ ಮಾಡಬಹುದಾದರೆ, ಯಾವ ಕಠೋರ ಕೃತ್ಯವು ಒಂದೇ ಸಲ್ಯ ಅದೂ ಆತ್ಮರಕ್ಷಣೆಗಾಗಿ ಮಾಡಲ್ಪಟ್ಟು, ಅದರ ಫಲಿತಾಂಶವು ಪ್ರಜೆಗಳ ಕ್ಷೇಮ ಕ್ಕಾಗಿ ಉಪಯೋಗಿಸ್ಪಡುತ್ತದೆಯೋ ಅದನ್ನು ವಿವೇಕ ಕ್ರೌರ್ಯವೆಂದು ಹೇಳಬಹುದು. ಯಾವುದು ಪ್ರಾರಂಭದಲ್ಲಿ ಅಲ್ಪ ಸಂಖ್ಯೆಯಾದರೂ, ದಿನೇ ದಿನೇ ಕಡಿಮೆಯಾಗುವುದರ ಬದಲು ಹೆಚ್ಚುತ್ತಾ ಬರುತ್ತದೆಯೋ, ಆ ದೌಷ್ಟ್ಯ ವನ್ನು ಅವಿವೇಕವೆಂದು ಹೇಳಬಹುದು. ಮೊದಲನೆಯ ತರದ ಪಾಪಕೃತ್ಯ ವನ್ನು ಮಾಡಿದಂಥವರಿಗೆ ದೈವವೂ, ಮನುಷ್ಯರೂ ಅನೇಕವೇಳೆ ಸಹಾಯಕ ರಾಗುತ್ತಾರೆ. ಅಗಾಥೋಕ್ಲಿಸನ ವಿಷಯ ಇಂತಹದು. ಎರಡನೆಯ ತರದ ಪಾತಕಿಗಳು ಎಂದಿಗೂ ಬಹುಕಾಲ ಉಳಿಯುವುದಿಲ್ಲ. ಇದರಿಂದ ಅನು ಮೇಯವಾಗುವ ರಾಜನೀತಿ ಇದು: ಯಾವನು ಒಂದು ರಾಜ್ಯದ ಆಧಿಪತ್ಯ ವನ್ನು ಅಪಹರಿಸುತ್ತಾನೋ, ಅವನು ತನ್ನ ಸ್ಥೈರ್ಯಕ್ಕೆ ಅವಶ್ಯಕವಾದ ಎಲ್ಲಾ ಕಠೋರ ಕೃತ್ಯಗಳನ್ನೂ ಒಂದೇ ಸಲ ನಡೆಸಿಬಿಡಬೇಕು. ಮುಂದೆ ನಡೆಸಲು ಬಾಕಿ ಉಳಿಸಬಾರದು. ಮುಂದೆ ದಯಾಳುವಾಗಿದ್ದು ಜನಗಳ ಅನುರಾಗ ವನ್ನು ಪಡೆದು ಅವರಿಗೆ ಉಪಕಾರಗಳನ್ನು ಮಾಡಿ ಅವರನ್ನು ತಮ್ಮವರನ್ನಾಗಿ ಮಾಡಿಕೊಳ್ಳಬೇಕು. ಯಾವನು ಭಯದಿಂದಲೇ ಆಗಲಿ, ಅವಿವೇಕ ಮಂತ್ರ ದಿಂದಲೇ ಆಗಲಿ ಇದಕ್ಕೆ ವಿಪರೀತವಾಗಿ ನಡೆಯುತ್ತಾನೆಯೋ, ಅವನು ಸದಾಕಾಲ ಕೈಯಲ್ಲಿ ಕಠಾರಿಯನ್ನು ಹಿಡಿದೇ ಇರಬೇಕಾಗಿರುತ್ತದೆ. ಇವನಿಗೆ ಇವನ ಪ್ರಜೆಗಳಲ್ಲಿ ನಂಬಿಕೆ ಇಡಲು ಆಗುವುದಿಲ್ಲ; ಪ್ರಜೆಗಳಿಗೂ ಇವನು ಪುನಃ ಪುನಃ ಗೈಯುತ್ತಿರುವ ಕ್ರೂರಕೃತ್ಯಗಳ ದೆಶೆಯಿಂದ ಇವನ ಆಳ್ವಿಕೆ ಯಲ್ಲಿ ಸ್ವಾಸ್ಥ್ಯದ ಭರವಸೆ ಇರುವುದಿಲ್ಲ. ಅದಕ್ಕೋಸ್ಕರ ಮಾಡುವ ನಿರ್ದಯ ಕೃತ್ಯಗಳನ್ನೆಲ್ಲಾ ಒಂದೇ ಸಲ ಮಾಡಿಬಿಡಬೇಕು. ಹಾಗೆ ಮಾಡುವುದ ರಲ್ಲಿಯೂ ಘೋರತೆಯನ್ನು ಕ್ರಮೇಣ ಕಡಮೆಮಾಡಬೇಕು. ಹೀಗೆ ಮಾಡು ವುದರಿಂದ ಜನಗಳ ಜುಗುಪ್ಸೆ ಕ್ರಮೇಣ ಕಡಮೆಯಾಗುತ್ತದೆ. ಜನಗಳ ಅನುರಾಗ ಸಂಪಾದನೆಗಾಗಿ ಮಾಡುವ ಹಿತಕಾರ್ಯಗಳನ್ನಾದರೋ ಹನಿಹನಿ ಯಾಗಿ ಸ್ರವಿಸಬೇಕು. ಇದರಿಂದ ಜನಗಳಿಗೆ ಆ ಪ್ರಯೋಜನಗಳ ಬೆಲೆಯೂ, ರುಚಿಯೂ ಹೆಚ್ಚಾಗಿ ತೋರುತ್ತವೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರಭುವು

ತನ್ನ ಪ್ರಜೆಗಳ ವಿಚಾರದಲ್ಲಿ ತನ್ನ ಉಚ್ಛ್ರಾಯ ಕಾಲದಲ್ಲಿಯೂ, ದುರದೃಷ್ಟದ ಕಾಲದಲ್ಲಿಯೂ ಒಂದೇ ರೀತಿಯಲ್ಲಿ ಆಚರಿಸಬೇಕು. ದೊರೆಯು ತನಗೆ ಕಷ್ಟವೊದಗಿದಾಗ ಮಾತ್ರ ಪ್ರಜೆಗಳ ಅನುರಾಗವನ್ನು ಪಡೆಯಲು ಯತ್ನಿಸಿದರೆ, ಇದು ಇವನು ವಿಧಿಯಿಲ್ಲದೆ ಮಾಡುತ್ತಿರುವ ಕೆಲಸ, ನಮ್ಮ ಉಪಕಾರಕ್ಕಲ್ಲವೆಂದು ಪ್ರಜೆಗಳು ಉದಾಸೀನರಾಗುತ್ತಾರೆ. ಆ ದೆಶೆಯಲ್ಲಿ ಅವರಿಗೆ ಕೆಡುಕುಮಾಡಲೂ ಅವನಿಗೆ ಶಕ್ತಿಯಿರುವುದಿಲ್ಲ.

ಎಂಟನೆಯ ಅಧ್ಯಾಯ

ಪ್ರಜಾಸಮಾಜದಿಂದ ಚುನಾಯಿತವಾದ ಆಳ್ವಿಕೆಯನ್ನು ಕುರಿತು

ಒಬ್ಬ ಮುಖಂಡನಾದ ಸ್ಥಳಿಕನನ್ನು ಅವನ ಕುಯುಕ್ತಿ ಅಥವಾ ಬಲಪ್ರಯೋಗವಿಲ್ಲದೆ ಅವನ ದೇಶದ ಪ್ರಭುತ್ವಕ್ಕೆ ಜನಗಳೇ ಏರಿಸಬಹುದು. ಇಂಥಾ ಆಳ್ವಿಕೆಯನ್ನು ಪ್ರಜೆಗಳಿಂದ ಚುನಾಯಿಸಲ್ಪಟ್ಟ ಆಳ್ವಿಕೆ ಎನ್ನಬಹುದು. ಈ ಆಳ್ವಿಕೆಯು ಕೇವಲ ಶಕ್ತಿಯಿಂದಲೇ ಆಗಲಿ, ಕೇವಲ ಅದೃಷ್ಟದಿಂದಲೇ ಆಗಲಿ ಬರತಕ್ಕದ್ದಲ್ಲ. ಇದು ಬರಬೇಕಾದರೆ ಅದೃಷ್ಟ ಬೆರಕೆಯಾಗಿ ಫಲಕಾರಿಯಾಗುವ ಯುಕ್ತಿಬೇಕು. ಇಂಥ ಪದವಿಗೆ ಮನುಷ್ಯನು ಬರಬೇಕಾಗಿದ್ದರೆ ಅವನಿಗೆ ಸಾಮಾನ್ಯ ಜನರ ಅಥವಾ ಶ್ರೀಮಂತರ ಅನುಗ್ರಹ ಮತ್ತು ಆಸರೆ ಆವಶ್ಯಕ. ಪ್ರತಿಯೊಂದು ನಗರದಲ್ಲಿಯೂ ಶ್ರೀಮಂತರದೇ ಒಂದು ತಂಡ, ಸಾಮಾನ್ಯ ಪ್ರಜೆಗಳದೇ ಒಂದು ತಂಡ, ಹೀಗೆ ಇತ್ತಂಡ ಇರುತ್ತವೆ. ಇವರ ಅಭಿಪ್ರಾಯಗಳು, ಇವರ ಧ್ಯೇಯಗಳು ಬೇರೆಬೇರೆಯಾಗಿರುತ್ತವೆ. ತಮ್ಮನ್ನು ಶ್ರೀಮಂತರು ದಬ್ಬಾಳಿಕೆಯಿಂದ ಆಜ್ಞಾಧಾರಕರನ್ನಾಗಿ ಮಾಡುವುದಕ್ಕೆ ಸಾಮಾನ್ಯ ಜನರು ಎಂದಿಗೂ ಒಪ್ಪುವುದಿಲ್ಲ. ಹೀಗೆ ಮಾಡಿದ ಹೊರತು ಶ್ರೀಮಂತರಿಗೆ ತೃಪ್ತಿಯಿಲ್ಲ. ಈ ಹಾರೈಕೆಗಳ ಭಿನ್ನತೆಯಿಂದ ಮೂರು ವಸ್ತುಸ್ಥಿತಿ ಹುಟ್ಟುತ್ತವೆ. ಚುನಾಯಿತ ಅಧಿಕಾರ, ಸ್ವಾತಂತ್ರ್ಯ ಅಥವಾ ಅನಾಯಕ ಸ್ವೇಚ್ಛಾಚಾರ. ಪ್ರಭುವನ್ನು ಚುನಾಯಿಸುವುದಕ್ಕೆ ಸಾಮಾನ್ಯರೇ ಕಾರಣರಾಗಬಹುದು ಅಥವಾ ಶ್ರೀಮಂತರೇ ಆಗಬಹುದು. ಇದು ಆ

ಕಾಲದಲ್ಲಿ ಯಾವ ಕಕ್ಷಿಯು ಪ್ರಬಲವಾಗಿರುತ್ತದೆಂಬುದರ ಮೇಲೆ ಹೋಗುತ್ತದೆ. ಅಥವಾ ಶ್ರೀಮಂತರು ಸಾಮಾನ್ಯ ಜನರ ರಭಸವನ್ನು ತಡೆಯಲಾರದೆ, ತಮ್ಮ ರಕ್ಷಣೆಗಾಗಿ ತಮ್ಮ ಸಮಸ್ತ ಅಧಿಕಾರವನ್ನೂ ಒಬ್ಬನಲ್ಲಿ ವಹಿಸಿ ಅವನನ್ನು ಪ್ರಭುವಾಗಿ ಮಾಡಿಕೊಳ್ಳಬಹುದು. ಇದಕ್ಕೆ ವಿಪರೀತವಾಗಿ ಪ್ರಜೆಗಳು ಶ್ರೀಮಂತರ ದಬ್ಬಾಳಿಕೆಯನ್ನು ತಡೆಯಲಾರದೆ ತಮ್ಮ ರಕ್ಷಣೆಗಾಗಿ ಒಬ್ಬ ವ್ಯಕ್ತಿಗೆ ತಮ್ಮ ಸಂಪೂರ್ಣ ಅಧಿಕಾರವನ್ನು ವಹಿಸಬಹುದು. ಶ್ರೀಮಂತರಿಂದ ಚುನಾಯಿತನಾದ ಪ್ರಭು ತನ್ನ ಅಧಿಕಾರವನ್ನು ಕಾಪಾಡಿಕೊಳ್ಳುವುದು ಕಷ್ಟ. ಏಕೆಂದರೆ ಅವನ ಸುತ್ತಲೂ, ಹಿಂದೆ ತನ್ನ ಸಮಾನರಾಗಿದ್ದ ಸಹವಾಸಿಗಳೇ ತುಂಬಿಕೊಂಡಿದ್ದು, "ನಾವು ಅವನಿಗಿಂತ ಯಾತರಲ್ಲಿ ಕಡಮೆ; ಅವನ ನಿಯಮಕ್ಕೆ ನಾವು ಏಕೆ ಒಳಪಡಬೇಕು?" ಎಂದು ಭಾವಿಸುತ್ತಾರೆ. ಸಾಮಾನ್ಯವಾದ ಜನಗಳಿಂದ ಚುನಾಯಿತನಾದ ಪ್ರಭುವಾದರೋ ಸಮಾನರಿಲ್ಲದ ಶ್ರೇಷ್ಠತೆಯಲ್ಲಿ ನಿಂತು ಎಲ್ಲರ ವಿಧೇಯತೆಯನ್ನು ಪಡೆಯುತ್ತಾನೆ. ಇದಲ್ಲದೆ ಜನಗಳ ಮನೋಭಾವದಲ್ಲಿಯೂ ವ್ಯತ್ಯಾಸವುಂಟು. ದೊಡ್ಡವರಾದರೋ ಇತರರಿಗೆ ಕೆಡುಕುಮಾಡದೆ, ತಮ್ಮ ಹೆಮ್ಮೆಯನ್ನು ತೋರಿಸದೆ ಇರತಕ್ಕವರಲ್ಲ. ತಮಗಿಂತಲೂ ಬಡವರಾಗಿದ್ದವರನ್ನು ದಬ್ಬಾಳಿಕೆಯಿಂದ ಆಜ್ಞೆಗೆ ಒಳಪಡಿಸಿಕೊಳ್ಳಲು ಯತ್ನಮಾಡದೆ ಇರುವವರಲ್ಲ. ಸಾಮಾನ್ಯ ಜನರಾದರೋ ತಮ್ಮ ನೆಮ್ಮದಿಯನ್ನು ಕಾಪಾಡಿಕೊಳ್ಳಲು ಮಾತ್ರ ಇಷ್ಟಪಡುವವರಾಗಿರುತ್ತಾರೆ. ಅಲ್ಲದೆ ಸಾಮಾನ್ಯ ಜನರು ಎಲ್ಲರೂ ವಿರೋಧಿಗಳಾದರೆ, ಅವರ ಸಂಖ್ಯೆ ಹೆಚ್ಚಾದುದರಿಂದ ದೊರೆಯು ಕ್ಷೇಮವಾಗಿ ಉಳಿಯುವುದು ಕಷ್ಟ. ಶ್ರೀಮಂತರು ಅಲ್ಪ ಸಂಖ್ಯಾಕರಾದ್ದರಿಂದ ಅವರ ವೈರ ಅಷ್ಟು ಅಪಾಯಕರವಾದದ್ದಲ್ಲ, ಆದರೆ ಇದನ್ನು ನೆನೆಯಬೇಕು: ದೊರೆಯಿಂದ ಕೆಡುಕನ್ನು ಅನುಭವಿಸಿ ಅವನಲ್ಲಿ ಅಸಹ್ಯಪಟ್ಟ ಸಾಮಾನ್ಯ ಜನರು ಹೆಚ್ಚು ಮಾಡುವುದೆಂದರೆ ಅವನ ಪಕ್ಷವನ್ನು ಬಿಟ್ಟುಬಿಡಬಹುದು ಅಷ್ಟೇ; ಆದರೆ ಶ್ರೀಮಂತರು ಜುಗುಪ್ಸಿತರಾದರೆ ಅವರು ದೊರೆಯನ್ನು ಬಿಡುವುದೂ ಅಲ್ಲದೆ ಅವನ ಮೇಲೆ ಸಂಚುಕಟ್ಟಿ, ಅವನಿಗೆ ವಿರೋಧವಾಗಿ ಇನ್ನೊಬ್ಬನನ್ನು ಎತ್ತಿಕಟ್ಟಿ ಅವನ ಅನುಗ್ರಹವನ್ನು ಸಂಪಾದಿಸುತ್ತಾರೆ. ಈ ಶ್ರೀಮಂತರು ಎರಡು ಬಗೆಯವರಾಗಿರುತ್ತಾರೆ. ಕೆಲವರು ಪ್ರಭುವಿನ ಆಳ್ವಿಕೆ ಯಶಸ್ವಿಯಾಗಿ ನಡೆಯಬೇಕು ಎಂಬ ಧ್ಯೇಯದವರಾಗಿರುತ್ತಾರೆ. ಇನ್ನು ಕೆಲವರು ಅದಕ್ಕೆ

ವಿಪರೀತವಾಗಿ, ತಮ್ಮ ಯೋಗಕ್ಷೇಮವನ್ನೇ ನೋಡಿಕೊಳ್ಳುವರಾಗಿರುತ್ತಾರೆ. ಇವರ ಪೈಕಿ ದೊರೆಯ ಕ್ಷೇಮವನ್ನು ಮುಖ್ಯಗುರಿಯಾಗಿಟ್ಟುಕೊಂಡು, ದುರಾಶಾರಹಿತರಾಗಿರುವವರು ಉತ್ತಮರು. ಈ ರೀತಿಯ ಏಕ ಭಕ್ತಿಯಿಲ್ಲದೆ ಇರುವಂಥವರು ಸೋಮಾರಿತನದಿಂದಲೋ, ಭಯದಿಂದಲೋ ಹೀಗೆ ಇರಬಹುದು. ಅಥವಾ ದೊರೆಯ ಯೋಗಕ್ಷೇಮಕ್ಕಿಂತಲೂ ತಮ್ಮ ಸ್ವಂತ ಪ್ರಯೋಜನವೇ ಹೆಚ್ಚೆಂದು ಭಾವಿಸುವವರಾಗಿರಬಹುದು. ಸೋಮಾರಿಗಳೂ, ಭೀರುಗಳೂ ಆದವರಿಂದ ಹೆಚ್ಚು ಬಾಧಕವಿಲ್ಲ. ಅವರ ಕೆಲಸದಿಂದ ಏನಾದರೂ ಪ್ರಯೋಜನವಿದ್ದರೆ ಒಳ್ಳೆಯದು; ಅವರು ಅಪ್ರಯೋಜಕರಾದರೆ ಅವರೇ ಕೆಡುತ್ತಾರೆ; ದೊರೆಗೇನೂ ಭಯವಿಲ್ಲ. ಸ್ವಪ್ರಯೋಜನಕ್ಕಾಗಿ ಆಶ್ರಯಮಾಡುವ ಜನಗಳ ವಿಚಾರದಲ್ಲಿ ದೊರೆಯು ಶತ್ರುಗಳ ವಿಚಾರದಲ್ಲಿ ಹೇಗೆ ಜಾಗರೂಕನಾಗಿರುತ್ತಾನೋ ಹಾಗೆಯೇ ವಿಶೇಷ ಜಾಗರೂಕನಾಗಿರಬೇಕು. ಇಂಥವರು ದೈವ ಪ್ರತಿಕೂಲವಾದಾಗ ಅವನನ್ನು ನಾಶಪಡಿಸಲು ಕೈಯಲ್ಲಾದ್ದನ್ನೆಲ್ಲಾ ಮಾಡತಕ್ಕವರು. ಯಾವ ದೊರೆಯು ಸಾಮಾನ್ಯ ಜನಗಳ ಅನುಗ್ರಹದಿಂದ ಚುನಾಯಿತನಾಗಿ ಬರುತ್ತಾನೆಯೋ ಅವನು ಆ ಜನಗಳ ಅನುರಾಗವನ್ನು ಕಾಪಾಡಿಕೊಂಡೇ ಬರಬೇಕು. ಇದು ಕಷ್ಟವೂ ಅಲ್ಲ. ಏಕೆಂದರೆ ತಮ್ಮ ಸ್ವಾತಂತ್ರ್ಯವನ್ನು ದೊರೆಯು ಕಾಪಾಡಿದರೆ ಅವರು ಧನ್ಯರಾಗುತ್ತಾರೆ. ಆದರೆ ಶ್ರೀಮಂತರಿಂದ ಸಾಮಾನ್ಯ ಜನರ ಅನುಮತಿಗೆ ವಿರೋಧವಾಗಿ ಚುನಾಯಿತನಾದ ದೊರೆಯು ಸರ್ವ ಪ್ರಯತ್ನದಿಂದಿರಲೂ ಸಾಮಾನ್ಯ ಜನರ ಅನುರಾಗವನ್ನು ಸಂಪಾದಿಸುವುದಕ್ಕೆ ಯತ್ನಮಾಡಲೇಬೇಕು. ಅವನು ಅವರ ಭದ್ರತೆಯ ರಕ್ಷಣೆಯನ್ನು ಮಾಡಿದರೆ ಅವರು ಅವನನ್ನು ಖಂಡಿತವಾಗಿ ಪ್ರೀತಿಸುವರು. ತಮ್ಮಿಂದ ಚುನಾಯಿತನಾಗದೆ, ಶ್ರೀಮಂತರಿಂದ ಚುನಾಯಿತನಾದರೂ ಇವನು ತಮಗೆ ಇಷ್ಟು ಅನುಕೂಲವಾಗಿದ್ದಾನಲ್ಲ ಎಂದು ಇವರಿಗೆ ಇವನಲ್ಲಿ ಇನ್ನೂ ಹೆಚ್ಚು ಪ್ರೇಮವೂ, ಭಕ್ತಿಯೂ ಉಂಟಾಗುತ್ತದೆ. ಜನಗಳ ಪ್ರೀತಿಯನ್ನು ಸಂಪಾದಿಸುವ ಮಾರ್ಗಗಳನ್ನೆಲ್ಲಾ ವಿವರಿಸುವುದು ಸಾಧ್ಯವಿಲ್ಲ; ಒಂದೇ ನಿಯಾಮಕವಾದ ಮಾರ್ಗವೂ ಇಲ್ಲ. ಸಂದರ್ಭ, ಸ್ವಭಾವ, ಇವುಗಳನ್ನು ಪರ್ಯಾಲೋಚಿಸಿ ಆಚರಿಸಬೇಕಾದ ನೀತಿಯನ್ನು ರಾಜನು ವಿವೇಕದಿಂದ ಸಮಯಾನುಸಾರ ನಿರ್ಣಯಿಸಿಕೊಳ್ಳಬೇಕಾಗಿದೆ. ಈಗ ಇಷ್ಟು ಹೇಳಿದರೆ ಸಾಕು. ಸರ್ವ ಪ್ರಕಾರದಿಂದಲೂ ಪ್ರಭುತನ್ನ ಪ್ರಜೆಗಳ ಪ್ರೇಮವನ್ನು ಪಡೆಯಲು ಯತ್ನಮಾಡಬೇಕು. ಇಲ್ಲದಿದ್ದಲ್ಲಿ

ಇವನ ಕಷ್ಟದಲ್ಲಿ ಇವನಿಗೆ ಸಹಾಯವೇ ಆಗಲಿ, ಸ್ವಸ್ಥಸ್ಥಾನವೇ ಆಗಲೀ ಇಲ್ಲ. ಸ್ಪಾರ್ಟಾ ದೇಶದ ರಾಜನಾದ ನಬೈಡಿಸ್ (Nabides) ಎಂಬವನು ಜನಗಳ ಪ್ರೀತಿಯನ್ನು ಸಂಪಾದಿಸಿ, ಕೇವಲ ಅಲ್ಪ ಸಂಖ್ಯಾತರ ಕುತಂತ್ರವನ್ನು ಅಡಗಿಸಿ ಕೊಂಡದ್ದರಿಂದ, ಸಂಪೂರ್ಣ ಗ್ರೀಸನ್ನು ಒಂದು ಜಯಶಾಲಿ ರೋಮನ್ ಸೈನ್ಯ ದಿಂದ ರಕ್ಷಿಸುವ ಮಹತ್ಕಾರ್ಯವನ್ನು ಸಾಧಿಸಿದನು. ಜನಗಳು ಇವನ ವಿರೋಧಿಗಳಾಗಿದ್ದರೆ ಇದು ಇವನ ಕೈಯಲ್ಲಾಗುತ್ತಿರಲಿಲ್ಲ. "ಜನರ ಪ್ರೇಮ ವನ್ನು ನಂಬುವವನು ಹುಡಿಮರಳಿನ ಮೇಲೆ ಮನೆಕಟ್ಟುತ್ತಾನೆ" ಎಂಬ ನಾಣ್ನುಡಿಯನ್ನು ಜನರು ಹೇಳಿ ನನ್ನ ಮಾತನ್ನು ಧಿಕ್ಕರಿಸದಿರಲಿ. ಈ ನುಡಿಯು ಖಾಸಗೀ ಸ್ಥಿತಿಯ ಸಾಮಾನ್ಯರ ವಿಷಯದಲ್ಲಿ ಸತ್ಯವೇ ಸರಿ. ಯಾಕೆಂದರೆ ಇವರು ಜನಗಳ ಮಾತನ್ನು ನಂಬಿ ಅಧಿಕಾರಿಗಳ ಅಥವಾ ಬಲ ವಂತರ ವಿರೋಧಕಟ್ಟಿಕೊಂಡು ತಮ್ಮನ್ನು ಜನರು ಬಿಡಿಸಿಕೊಳ್ಳುತ್ತಾರೆಂದು ನಂಬಿದರೆ ತಾವು ಕೆಡುವುದು ಖಂಡಿತ. ಇದಕ್ಕೆ ಪ್ರಮಾಣವಾಗಿ ಅನೇಕ ನಿದರ್ಶನಗಳನ್ನು ಕೊಡಬಹುದು. ಅವುಗಳಲ್ಲಿಯೂ ರೋಮಿನಲ್ಲಿ ಗ್ರಾಕಿ (Gracchi) ಮತ್ತು ಫ್ಲಾರೆನ್ಸಿನಲ್ಲಿ ಜಾರ್ಜಿಯೋ ಸ್ಕೇಲಿ (Georgeo Scali) ಇವರ ಸಂಗತಿ ಬಹಳ ಮನದಟ್ಟುವುದಾಗಿದೆ. ಆದರೆ ಜನಗಳ ಪ್ರೀತಿಗೆ ಪಾತ್ರನಾದ ಪ್ರಭು ಆಜ್ಞಾಶಕ್ತಿಯುಳ್ಳವನೂ, ಧೀರನೂ, ಕಷ್ಟದಲ್ಲಿ ಎದೆಗುಂದದವನೂ, ತನ್ನ ಸನ್ನಾಹದಿಂದಲೂ ಪೌರುಷದಿಂದಲೂ ಜನಗಳ ಮೆಚ್ಚಿಗೆಯನ್ನು ಪಡೆದು ಅವರಿಗೆ ಹುರಿದುಂಬಿಸುವಂಥ ಪುರುಷನೂ ಆಗಿದ್ದಲ್ಲಿ ಜನಗಳು ಎಂದಿಗೂ ಅವನನ್ನು ಕೈಬಿಡುವುದಿಲ್ಲ. ಅವರ ಪ್ರೇಮದ ಮೇಲೆ ಅವನು ರಚಿಸಬಹುದಾದ ಕಟ್ಟಡವು ಸ್ಥಿರವಾದದ್ದೇ ಹೊರತು ಮರಳು ತಳಹದಿಯದು ಆಗುವುದಿಲ್ಲ. ಪ್ರಜೆಗಳಿಂದ ಚುನಾಯಿತವಾದ ಸರ್ಕಾರಗಳು ಅತಿ ಅಸ್ಥಿರವಾಗಿ ತತ್ತರಿಸುವುದು ಯಾವಾಗೆಂದರೆ, ಪ್ರಭು ವಾದವನು ಏಕಾಏಕಿ, ಒಂದೇ ನೆಗೆತದಲ್ಲೆಂಬಂತೆ ನಿರಂಕುಶ ಅಧಿಕಾರಕ್ಕೆ ಪ್ರವರ್ತಿಸಲು ಯತ್ನಿಸಿದಾಗ. ಈ ವರ್ತನೆಯನ್ನು ಪ್ರಭು ಸ್ವಂತವಾ ಗಿಯೇ ಅನುಸರಿಸಬಹುದು; ಅಥವಾ ಅವನ ಸಚಿವರ ಮೂಲಕವೇ ಆಗಲಿ, ನಿಯಮಿತರಾದ ಅಧಿಕಾರಿಗಳ ಮೂಲಕವೇ ಆಗಲಿ, ನಡೆಸಬಹುದು. ಇತರರ ಮೂಲಕ ನಡೆಸುವ ಸ್ವೇಚ್ಛಾಧಿಕಾರ ಕೇವಲ ದುರ್ಬಲವಾದದ್ದು; ಮತ್ತು ಅನಾಹುತಕ್ಕೆ ಈಡಾದದ್ದು; ಏಕೆಂದರೆ ಈಷತ್ತು ಕಷ್ಟಕಾಲ ಒದಗಿ

ದರು ಕೂಡ ಈ ನಿಯಮಿತ ಅಧಿಕಾರಿಗಳು ದೊರೆಯ ಅನುಜ್ಞೆಗೆ ಎದುರು ಬೀಳಬಹುದು. ಇವನ ಪ್ರಭುತ್ವವು ಈ ನಿಯಮಿತ ಅಧಿಕಾರಿಗಳ ಇಷ್ಟ ಮತ್ತು ಒಪ್ಪಿಗೆಯ ಮೇಲೆ ನಿಂತಿರುತ್ತದೆ. ಅಂಥ ಕಷ್ಟಕಾಲದಲ್ಲಿ ಅವನು ಅವಿಧೇಯ ಅಧಿಕಾರಿಗಳನ್ನು ತಳ್ಳಿಹಾಕಿ ತಾನೇ ಅಧಿಕಾರವನ್ನು ವಹಿಸಿ ಕೊಳ್ಳುವ ಹಾಗೂ ಇಲ್ಲ. ಏಕೆಂದರೆ, ಹಿಂದಿನ ಅಧಿಕಾರಿಗಳಲ್ಲೇ ಜನಕ್ಕೆ ಪರಿಚಯವೂ, ಅಭ್ಯಾಸವೂ, ಇರುವುದರಿಂದ ಅವರ ಮಾತೇ ಜನಗಳಲ್ಲಿ ನಡೆಯುತ್ತದೆ. ಅವರು ಇವನ ಸ್ವೇಚ್ಛಾಧಿಕಾರಕ್ಕೆ ಎಂದಿಗೂ ಸಹಾಯಿಗಳಾ ಗುವುದಿಲ್ಲ. ಆಪತ್ಕಾಲದಲ್ಲಿ ಇವನು ನಂಬಬಹುದಾದಂಥ ಸಹಾಯಕರು ಇವನಿಗೆ ದೊರೆಯುವುದಿಲ್ಲ. ಸುಖದ ಕಾಲದಲ್ಲಿ ಪ್ರಜೆಗಳೆಲ್ಲರೂ ಏನು ಬೇಕಾದರೂ ಮಾಡುತ್ತಾರೆ. ಮೃತ್ಯು ದೂರದಲ್ಲಿರುವಾಗ ಪ್ರಾಣಕೊಡಲು ಸಿದ್ಧರಾಗಿದ್ದೇವೆ ಎಂದೂ ಹೇಳುತ್ತಾರೆ. ಬುದ್ಧಿವಂತನಾದ ರಾಜ ಇದಕ್ಕೆ ಹಿಗ್ಗಿ, ಸಂತೋಷಪಟ್ಟು, ಈ ವಿಧೇಯತೆ, ಸತ್ಯಸಂಕಲ್ಪ, ಪ್ರಾಣತ್ಯಾಗದ ಸಿದ್ಧತೆ, ತನಗೆ ಕಷ್ಟ ವೊದಗಿದಾಗ ಕೈಗೂಡುತ್ತವೆಂದು ನಂಬಿ ನಡೆಯಬಾರದು. ರಾಜ ಕೀಯ ಸಮುದ್ರವು ಚಂಡ ಮಾರುತದಿಂದ ಕ್ಷುಭಿತವಾಗಿ ರಾಜ್ಯವೆಂಬ ಹಡಗು ಮಹದೂರ್ಮಿಗಳಲ್ಲಿ ಪ್ರಾಣಾಪಾಯದಿಂದ ಒದ್ದಾಡುತ್ತಿರುವಾಗ, ಪಂಚ ಭೂತಗಳ ಹೊಡೆತವನ್ನು ಲಕ್ಷಿಸದೆ ಸೇವೆಗಾಗಿ ಮುಂದು ಬರುವ ಜನಗಳು ಅತಿ ವಿರಳ. ಅಪಾಯ ಸಂಭವಿಸಿದರೆ ತಿದ್ದಿಕೊಳ್ಳುವ ಪುನರವ ಕಾಶವೂ ಇರುವುದಿಲ್ಲ. ಅದಕ್ಕೋಸ್ಕರ ನೀತಿವಂತನೂ, ವಿವೇಕಿಯೂ ಆದ ಪ್ರಭು ಎಲ್ಲಾ ದೇಶ, ಕಾಲ, ಅವಕಾಶಗಳಲ್ಲಿಯೂ ಜನಗಳು ತನ್ನ ಆಳ್ವಿಕೆ ಯನ್ನು ಹಾರೈಸುವಷ್ಟು ಒಳ್ಳೆಯ ನೀತಿಯಿಂದ ನಡೆದುಕೊಳ್ಳಬೇಕು. ಹೀಗಿ ದ್ದರೆ ತಾನೆ ಅವರು ಅವನಿಗೆ ಸತ್ಯವಂತರಾಗಿಯೂ, ಕ್ರಿಯಾವಂತರಾಗಿಯೂ ನಡೆದುಕೊಳ್ಳುತ್ತಾರೆ.

ಒಂಭತ್ತನೆಯ ಅಧ್ಯಾಯ

ಪ್ರಾಂತಗಳ ಬಲಾಬಲಗಳನ್ನು ಗುಣಿಸುವುದು ಹೇಗೆ?

ಸಂಸ್ಥಾನಗಳ ಸ್ವರೂಪವನ್ನು ಪರಿಶೀಲಿಸುವವರು ಸದರೀ ಸಂಸ್ಥಾನದ ಅಧಿಪತಿಗೆ ಇತರರ ಸಹಾಯವಿಲ್ಲದೆ ಸ್ವತಂತ್ರವಾಗಿ ಬಾಳುವುದಕ್ಕೆ ಸಾಕಾದಷ್ಟು ಶಕ್ತಿ ಮತ್ತು ಭೂಭಾಗ ಇವೆಯೋ ಅಥವಾ ಅವನ ಆಳ್ವಿಕೆಗೆ ಇತರರ ಸಹಾಯ ಮತ್ತು ರಕ್ಷಣೆ ಆವಶ್ಯಕವೇ ಎಂಬುದನ್ನು ವಿಚಾರಮಾಡಬೇಕು. ಈ ಅಂಶ ವನ್ನು ಸ್ವಲ್ಪಸ್ಪಷ್ಟಪಡಿಸೋಣ. ಸ್ವತಂತ್ರ ಆಳ್ವಿಕೆಯ ಅಧಿಪತಿಗಳು ಎಂದರೆ ತಮ್ಮ ರಾಜ್ಯವನ್ನು ಆಕ್ರಮಿಸಲು ಬಯಸುವ ಶತ್ರುಗಳನ್ನು ತಮ್ಮ ಸಂಸ್ಥಾನದ ಪ್ರಜಾಬಲದಿಂದ ಅಥವಾ ತಮ್ಮಲ್ಲಿ ಇರತಕ್ಕ ಧನಸಂಪತ್ತಿನಿಂದಲೇ ಎದುರಿಸು ವಷ್ಟು ದೊಡ್ಡ ಸೈನ್ಯವನ್ನು ಕಟ್ಟಬಲ್ಲವರು, ಎಂದು ಅರ್ಥ. ಅಸ್ವತಂತ್ರರು ಎಂದರೆ ಶತ್ರುಗಳನ್ನು ರಣರಂಗದಲ್ಲಿ ಎದುರಿಸಲು ಸಾಮರ್ಥ್ಯವಿಲ್ಲದೆ ತಮ್ಮ ಸರಹದ್ದಿ ನಲ್ಲಿ ತಾವಿದ್ದುಕೊಂಡು ತಮ್ಮ ಶಕ್ತಿಯಿಂದ ಎಷ್ಟು ಸಾಧ್ಯವೋ ಅಷ್ಟು ಆತ್ಮ ರಕ್ಷಣೆಯ ಯತ್ನ ಮಾಡುವವರು. ಶಕ್ತರಾದ ಪ್ರಭುಗಳ ವಿಚಾರ ಈ ಮೊದಲೇ ಹೇಳಿದೆ; ಮುಂದೆಯೂ ಹೇಳಲಾಗುತ್ತದೆ. ಅಪರ್ಯಾಪ್ತ ಬಲದ ರಾಜರ ವಿಚಾರ ಹೇಳತಕ್ಕ ನೀತಿವಾದ ಇಷ್ಟೇ; ಅವರು ತಮ್ಮ ತಮ್ಮ ರಾಜ್ಯದ ಸಮಗ್ರ ವಿಸ್ತೀರ್ಣವನ್ನು ಭದ್ರಪಡಿಸಲು ಯತ್ನಿಸದೆ, ತಮ್ಮ ರಾಜಧಾನಿಯನ್ನು ಮಾತ್ರ ಕೋಟೆಕೊತ್ತಳಗಳಿಂದ ಬಲಪಡಿಸಿಕೊಂಡು, ತಮ್ಮ ಪ್ರಜೆಗಳ ಅನು ರಾಗವನ್ನು ಸಂಪಾದಿಸಿಕೊಂಡವರಾಗಿದ್ದರೆ ಅವರ ರಾಜ್ಯವನ್ನು ಆಕ್ರಮಿಸು ವುದು ಬಹಳ ದುರ್ಗಮವಾದ ಸಾಹಸವೆಂದು ತಿಳಿದು, ಶತ್ರುಗಳು ಸುಲಭ

ವಾಗಿ ದುಡುಕುವುದಿಲ್ಲ. ಯಾಕೆಂದರೆ ಬಲವಾದ ಕೋಟಿಕೊತ್ತಳಗಳಲ್ಲಿ ಇರುವ, ಪ್ರಜೆಗಳಿಗೆ ಪ್ರಿಯನಾದ ರಾಜನು ಕಬ್ಬಿಣದ ಕಡಲೆಯ ಹಾಗೆ ದುರ್ಭಕ್ಷ್ಯ ಎಂದು ಭಾವಿಸಬೇಕು.

ಜರ್ಮನಿಯಲ್ಲಿ ಸಣ್ಣ ಭೂವಿಸ್ತಾರ ಮಾತ್ರವಿರುವ ಅನೇಕ ಪಟ್ಟಣಗಳು ಸ್ವತಂತ್ರವಾಗಿವೆ. ಅವು ಜರ್ಮನ್ ಚಕ್ರವರ್ತಿಯ ಆದೇಶಗಳನ್ನು ತಮ್ಮ ಇಷ್ಟಬಂದರೆ ಗೌರವಿಸುತ್ತವೆ; ಇಲ್ಲವಾದರೆ ಇಲ್ಲ. ಆ ಪಟ್ಟಣಗಳಿಗೆ ಬಲವಾದ ಕೋಟಿಕೊತ್ತಳಗಳಿವೆ. ಕೋಟೆಗಳ ಗೋಡೆ ಬಹಳ ಬಂದೋಬಸ್ತು, ಕೊತ್ತಳಗಳು ಬಹಳ ಮಜಬೂತು, ಕಂದಕಗಳು ದುಸ್ತರ. ಅವುಗಳಲ್ಲಿ ಸಾಕಾದಷ್ಟು ಫಿರಂಗಿಗಳು, ಒಂದು ವರ್ಷಕ್ಕಾದರೂ ಸಾಕಾಗುವಷ್ಟು ಮೋತೀಖಾನೆ ಮತ್ತು ಬಾರ್‌ಖಾನೆಗಳು ಇರುವುದರಿಂದ ಇವುಗಳನ್ನು ಹಲ್ಲಾ ಮಾಡಿ ಜಯಿಸುವುದು ಬಹು ದೀರ್ಘವಾದ, ಶ್ರಮಸಾಧ್ಯವಾದ ಸಾಹಸವೆಂದು ಪ್ರತಿಯೊಬ್ಬರಿಗೂ ಚೆನ್ನಾಗಿ ಗೊತ್ತು. ಅಲ್ಲದೆ, ಈ ಸ್ವತಂತ್ರ ಪಟ್ಟಣಗಳಲ್ಲಿ ಜನಗಳ ಪುಷ್ಟಿ ಮತ್ತು ಸಮೃದ್ಧಿಗಾಗಿ ಅನೇಕ ಕೈಗಾರಿಕೆಗಳ ಕಾರ್ಖಾನೆಗಳು ಇವೆ. ಇಂಥವುಗಳಲ್ಲಿ ದುಡಿವ ಬಡಬಗ್ಗರು ತಮ್ಮ ಜೀವನದ ಭಾರವನ್ನು ರಾಜ್ಯದ ಮೇಲೆ ಹೇರದೆ ತಮ್ಮ ಯತ್ನದಿಂದ ತಾವು ಬಾಳಲು ಅನುಕೂಲವಾಗುತ್ತದೆ. ಈ ಕಾರ್ಖಾನೆಗಳು ತಮ್ಮ ಉದ್ಯಮಗಳಿಂದ ಬಡವರ ಪೋಷಣೆ ಮಾಡುವುದಲ್ಲದೆ ರಾಜ್ಯದ ಸ್ನಾಯು ಖಂಡವನ್ನು ಬಿಗಿಯುವ ನರಗಳಾಗಿರುತ್ತವೆ. ಇದಲ್ಲದೆ ಸೇನೆಯ ಶಿಸ್ತನ್ನು, ಶಕ್ತಿಯನ್ನು ವರ್ಧಿಸುವ ವ್ಯಾಯಾಮ ಆಚರಣೆಗಳು ಇಲ್ಲಿ ಕಾನೂನಿನಿಂದಲೂ, ಜನಗಳ ಆದರದಿಂದಲೂ ಜಾರಿಯಲ್ಲಿರುತ್ತವೆ. ಮುಖ್ಯವಾಗಿ ಪ್ರಜೆಗಳ ಪ್ರೀತಿಗೆ ಪಾತ್ರನಾಗಿ ತನ್ನ ಬಲವಾದ ಕೋಟೆಯಲ್ಲಿ ಇರತಕ್ಕ ದೊರೆಯನ್ನು ಆಕ್ರಮಣ ಮಾಡುವುದು ಅಷ್ಟು ಸುಲಭವಾದ ಕೆಲಸವಲ್ಲ. ಹಾಗೆ ದುಡುಕಿ ಆಕ್ರಮಿಸುವವನು ತಾನೇ ಕೆಟ್ಟು ಪಶ್ಚಾತ್ತಾಪ ಪಟ್ಟಾನು. ಯಾವ ಸೈನ್ಯವಾದರೂ ಒಂದು ದುರ್ಗದ ಎದುರಿಗೆ ಒಂದು ವರ್ಷ ಮುತ್ತಿ ಕೂತಿರುವುದು ಸಾಧ್ಯವಲ್ಲ. "ಕೋಟೆ ಭದ್ರವಾಗಿದ್ದರೂ ಕೋಟೆಯ ಹೊರಗಿನ ತಮ್ಮ ಮನೆ, ಮಠ, ಸಾಮಾನು, ಸರಂಜಾಮುಗಳನ್ನು ಶತ್ರುಗಳು ನಾಶಪಡಿಸುವುದನ್ನು ನೋಡಿ ಸಂಕಟದಿಂದ ಜನರು ತಮ್ಮ ದೊರೆಯನ್ನು ಮರೆಯಲಾರರೇ?" ಎಂದು ಆಕ್ಷೇಪಕರು ಹೇಳಬಹುದು. ಇದಕ್ಕೆ ಉತ್ತರ: ಬುದ್ಧಿವಂತನಾದ ನೀತಿಶಾಸ್ತ್ರಜ್ಞ ದೊರೆಯು

ಇದಕ್ಕೆ ಅನೇಕ ತೋಡುಗಳನ್ನು ಮಾಡಬಲ್ಲ. "ಈ ವಿಪತ್ತು ಅಲ್ಪಕಾಲದ್ದು, ಜಾಗ್ರತೆಯಲ್ಲಿ ನಿವಾರಣೆಯಾಗುತ್ತೆ" ಎನ್ನಬಹುದು. ಅಥವಾ "ಶತ್ರುಗಳು ಸ್ವಲ್ಪವೂ ಕನಿಕರವಿಲ್ಲದ ದುರ್ಜನರು, ಇವರು ಸಾಮಕ್ಕೆ ಅರ್ಹರಲ್ಲ, ಇವರ ಸಂಗಡ ಕಾದಲೇಬೇಕು" ಎಂದು ಹೇಳಬಹುದು, ಅಥವಾ ಮಿತಿಮೀರಿ ಬಂದರೆ ಹದ್ದುತಪ್ಪಿ ದಂಗೆಯೇಳತಕ್ಕವರನ್ನು ದಂಡಿಸಿ ತಿದ್ದಬಹುದು. ಅದೂ ಅಲ್ಲದೆ ಇಂಥಾ ಸಂದರ್ಭಗಳಲ್ಲಿ ಆಕ್ರಮಿಸಬಂದ ಶತ್ರುಗಳು ಬಂದ ಹುರುಪಿನಲ್ಲೇ ತಮಗೆ ಕೈಗೆ ಸಿಕ್ಕಿದ್ದನ್ನು ನಾಶಮಾಡುವ ಹಾವಳಿಯನ್ನು ಹಿಡಿಯುತ್ತಾರೆ. ಆ ವೇಳೆಯಲ್ಲಿ ಜನಗಳಿಗೆ ಕೋಪೋದ್ರೇಕಗಳು ಏರಿ ಶತ್ರುಗಳನ್ನು ಶಿಕ್ಷಿಸ ಬೇಕು, ಸೇಡು ತೀರಿಸಿಕೊಳ್ಳಬೇಕು ಎಂಬ ರೋಷವಿರುತ್ತದೆಯೇ ಹೊರತು ಅವರಿಗೆ ತಗ್ಗಿ ನಡೆಯಬೇಕು ಎಂಬ ಭಾವವಿರುವುದಿಲ್ಲ. ಆ ಮೇಲೆ, "ನಾಶ ವಾದದ್ದು ಹೋಯಿತು. ಇನ್ನೇನನ್ನು ಇವರು ಧ್ವಂಸ ಮಾಡಿಯಾರು, ಇವರು ಮಾಡಿದ್ದಕ್ಕೆ ತಕ್ಕ ಬುದ್ಧಿ ಕಲಿಸುವುದಲ್ಲದೆ ನಮ್ಮನ್ನು ನಾವು ರಕ್ಷಿಸಿ ಕೊಳ್ಳಬೇಕು. ನಮಗಾಗಿರತಕ್ಕ ಲುಕ್ಸಾನಿಗೆ ಪರಿಹಾರವನ್ನು ಮುಂದೆ ನಮ್ಮ ದೊರೆ ನಮಗೆ ಕೊಡದೇ ಇರಲಾರ" ಎಂಬ ಭಾವ ಉತ್ಪತ್ತಿಯಾಗುವುದು. ಅಲ್ಲದೆ ಮನುಷ್ಯನ ಸ್ವಭಾವದಲ್ಲಿ ನಿಯತ್ತು ಮತ್ತು ಸೇವೆ ಎಂಬವುಗಳ ಪ್ರೇರಕ ಶಕ್ತಿಯು ಬಹಳ ಉತ್ಸಾಹವನ್ನು ಕೊಡುತ್ತದೆ. ಇವುಗಳನ್ನೆಲ್ಲಾ ಯೋಚಿಸಿದರೆ ಬುದ್ಧಿವಂತನಾದ ಒಳ್ಳೆಯ ದೊರೆ, ಎಂದರೆ ತನ್ನ ರಕ್ಷಣಾಶಕ್ತಿ ಮತ್ತು ಪ್ರಜಾವಾತ್ಸಲ್ಯದಿಂದ ಪ್ರಜೆಗಳ ಅನುರಾಗವನ್ನು ಪಡೆದಿರುವಂಥವನು, ತನ್ನ ಪಟ್ಟಣವನ್ನು ಕೋಟೆಕೊತ್ತಳಗಳಿಂದ ಬಲಪಡಿಸಿಕೊಂಡು ಇದ್ದಲ್ಲಿ ಎಂಥಾ ದೀರ್ಘಕಾಲದ ಮುತ್ತಿಗೆಯನ್ನಾದರೂ ಪ್ರಜೆಗಳು ತಾಳ್ಮೆಯಿಂದ ಸಹಿಸುವಂತೆ ಮಾಡಿಕೊಳ್ಳಬಹುದೆಂದು ನನ್ನ ಮತ.

ಹತ್ತನೆಯ ಅಧ್ಯಾಯ

ಚರ್ಚ್ (Church)ಗೆ ಸೇರಿದ ಪ್ರಾಂತಗಳನ್ನು ಕುರಿತು

ಈಗ ಕ್ರೈಸ್ತ ಧರ್ಮ ಮಠಗಳ ಆಳ್ವಿಕೆಗೆ ಒಳಪಟ್ಟ ಸಂಸ್ಥಾನಗಳ ವಿಷಯವೊಂದನ್ನು ಪರಿಶೀಲಿಸಿಬಿಟ್ಟರೆ ಅಲ್ಲಿಗೆ ಈ ವಿಚಾರ ಮುಗಿದಂತೆಯೇ ಸರಿ. ಈ ಧರ್ಮಕ್ಕೊಳಪಟ್ಟ ಸಂಸ್ಥಾನಗಳ ಅಧಿಪತ್ಯ ಸಿಕ್ಕುವುದು ತುಂಬಾ ಕಷ್ಟ. ಏಕೆಂದರೆ, ಈ ಯೋಗ ಲಭಿಸುವವನಿಗೆ ಅದೃಷ್ಟ ಅಥವಾ ಶ್ರೇಷ್ಠತೆ ಆವಶ್ಯಕ. ಆದರೆ ಲಭಿಸಿದಮೇಲೆ ಆಳ್ವಿಕೆಯಲ್ಲಿ ಈ ಗುಣಾತಿಶಯಗಳು ಏನೂ ಉಪಯೋಗಕ್ಕೆ ಬರುವುದಿಲ್ಲ. ಏಕೆಂದರೆ ಆಳುವ ವ್ಯಕ್ತಿಯ ಯೋಗ್ಯತೆ ಮತ್ತು ನಡತೆ ಹೇಗೇ ಇರಲಿ, ಆಳ್ವಿಕೆಗೆ ಕ್ರೈಸ್ತ ಮತೀಯರ ಸರ್ವಾನುಮತ ಪಡೆದಿರುವ ಪುರಾತನ ಕಾನೂನುಗಳ ಒತ್ತಾಸೆ ಇರುವುದರಿಂದ ಆಳುವ ವ್ಯಕ್ತಿಗೆ ಈ ಕಾನೂನುಗಳ ಮಹತ್ತಿನಿಂದಲೇ ಮಾನ್ಯತೆ ಮತ್ತು ಪ್ರತಿಷ್ಠೆ ಸ್ಥಿರವಾಗಿ ನಿಲ್ಲುತ್ತವೆ. ಇಂಥವರಿಗೆ ಬೇಕಾದಷ್ಟು ಭೂ ಸ್ವತ್ತು ಇದ್ದರೂ ಅದರ ರಕ್ಷಣೆಯ ಭಾರವಿರುವುದಿಲ್ಲ; ಪ್ರಜೆಗಳಿದ್ದರೂ ಅವರನ್ನು ಆಳಬೇಕಾದ ಜವಾಬ್ದಾರಿ ಕಾಣುವುದಿಲ್ಲ. ಹೀಗಿದ್ದರೂ ಕೂಡಾ ಅವರ ಸ್ವತ್ತನ್ನು ಯಾರೂ ಅಪಹರಿಸುವುದಿಲ್ಲ. ಪ್ರಜೆಗಳ ಯೋಗಕ್ಷೇಮಕ್ಕೆ ಗಮನಕೊಡದಿದ್ದಾಗ್ಯೂ ಪ್ರಜೆಗಳು ಅತೃಪ್ತರಾಗುವುದಿಲ್ಲ. ಆಳ್ವಿಕೆಯ ಪೂರ್ಣ ಜವಾಬ್ದಾರಿಯ ಹೊರೆಯನ್ನು ಹೊತ್ತಿರುವುದು ಕ್ರೈಸ್ತ ಧರ್ಮಕ್ಕೆ ಇರುವ ಶ್ರೇಷ್ಠತೆ. ಈ ಶ್ರೇಷ್ಠತೆಯ ಸಲುವಾಗಿ ಮಠಗಳ ಆಳ್ವಿಕೆಗೊಳಪಟ್ಟ ಸಂಸ್ಥಾನಗಳು ಮನುಷ್ಯನ ಬುದ್ಧಿಶಕ್ತಿ ಮತ್ತು ಸಾಧನೆಗಳಿಗೆ ಮೀರಿದ ದೈವಿಕ ಬಲವೊಂದರ ಆಶ್ರಯ

ದಲ್ಲಿದ್ದು ಜಗತ್ತಿನಲ್ಲೇ ಅತ್ಯಂತ ಸೌಖ್ಯ ಮತ್ತು ಭದ್ರತೆಯುಳ್ಳವಾಗಿವೆ. ಸಾಕ್ಷಾತ್ ದೇವರಿಂದಲೇ ಸೃಷ್ಟಿಯಾಗಿ ಆತನಿಂದಲೇ ನಡೆಸಲ್ಪಡುತ್ತಿರುವ ಈ ಆಡಳಿತಕ್ಕೆ ವಿರುದ್ಧವಾಗಿ ಅಧಿಕಪ್ರಸಂಗ ಮಾಡುವುದಕ್ಕಿಂತ ಇನ್ನು ಹೆಚ್ಚಿಗೆ ಈ ವಿಷಯವಾಗಿ ಹೇಳದಿರುವುದೇ ಲೇಸು. ಅಷ್ಟಾದರೂ, ಈ ಕ್ರೈಸ್ತ ಮತಾಧಿಕಾರವು ಈ ರೀತಿಯ ಪ್ರಾಪಂಚಿಕ ವ್ಯವಹಾರಗಳಲ್ಲಿ ಕೂಡಾ ಹೇಗೆ ಅಷ್ಟು ಉನ್ನತಾಧಿಕಾರವನ್ನು ಗಳಿಸಿದೆ ಎಂಬುದು ಆಶ್ಚರ್ಯಕರವಾದ ಸಂಗತಿ. ಏಕೆಂದರೆ, ಪೋಪ್ ಅಲೆಕ್ಸಾಂಡರನಿಗೆ ಪೂರ್ವದಲ್ಲಿ, ಉನ್ನತಾಧಿಕಾರದಲ್ಲಿದ್ದ ದೊರೆಗಳ ಮಾತಿರಲಿ; ಸಣ್ಣಪುಟ್ಟ ಪಾಳೆಯಗಾರರೂ ಕೂಡ ಪೋಪನ ಪದವಿಗೆ ಅಷ್ಟು ಮರ್ಯಾದೆಯನ್ನು ಕೊಡುತ್ತಿರಲಿಲ್ಲ. ಅಲೆಕ್ಸಾಂಡರನ ಕಾಲದಲ್ಲಿ ಆ ಪೋಪ್ ಫ್ರಾನ್ಸಿನ ದೊರೆಯನ್ನು ಎದುರಿಸಿ, ಅವನನ್ನು ಇಟಲಿ ಯಿಂದ ಓಡಿಸಿ, ವೆನಿಷಿಯನ್ನರನ್ನು ಹಾಳುಮಾಡಿ ತನ್ನ ಸ್ಥಾನವನ್ನು ಉನ್ನತ ಗೊಳಿಸಿದನು. ಇದು ಸರ್ವರಿಗೂ ತಿಳಿದ ವಿಷಯ; ಆದರೂ ನಾನು ಇಲ್ಲಿ ಪುನಃ ಸ್ವಲ್ಪ ಹೇಳಿದರೆ ಪುನರುಕ್ತಿಯಾಗಲಾರದೆಂದು ಭಾವಿಸಿದ್ದೇನೆ.

ಫ್ರಾನ್ಸಿನ ದೊರೆಯಾದ ಚಾರ್ಲ್ಸನು ಇಟಲಿಗೆ ಬರುವುದಕ್ಕೆ ಮುಂಚೆ ಇಟಲಿಯು ಪೋಪ್, ನೇಪಲ್ಸಿನ ದೊರೆ, ಮಿಲಾನಿನ ಸೇನಾನಾಯಕ, ವೆನಿಷಿ ಯನ್ನರು, ಮತ್ತು ಫ್ಲಾರೆಂಟೈನಿನವರು, ಇವರುಗಳ ಆಳ್ವಿಕೆಯಲ್ಲಿತ್ತು. ಈ ಬಲ ಶಾಲಿಗಳಲ್ಲಿ ಕೆಲವರಿಗೆ ತಮ್ಮ ದೇಶವನ್ನು ಹೊರಗಿನವರು ಬಂದು ಆಕ್ರಮಿಸದಿರು ವಂತೆ ರಕ್ಷಿಸಬೇಕೆಂಬ ಆಶಯವಿತ್ತು. ಮತ್ತೆ ಕೆಲವರಿಗೆ ತಮ್ಮಲ್ಲೇ ಯಾರಾ ದರೂ ಒಬ್ಬನು ಈ ಸಂದರ್ಭದಲ್ಲಿ ಪಿತೂರಿ ಮಾಡಿ ಇತರರ ಸ್ಥಾನವನ್ನು ಆಕ್ರಮಣ ಮಾಡದಂತೆ ನೋಡಿಕೊಳ್ಳುವ ಗುರಿಯೂ ಇತ್ತು; ಒಟ್ಟಿನಲ್ಲಿ ಎಲ್ಲರೂ ಈ ಪ್ರಾಂತದ ರಕ್ಷಣೆಯ ಭಾರವನ್ನು ಹೊತ್ತಿದ್ದರು. ಹೀಗೆ ಈ ಸನ್ನಿವೇಶದಲ್ಲಿ ಪಿತೂರಿಯ ಮೂಲಕ ಇತರರ ರಾಜ್ಯವನ್ನು ಅಪಹರಿಸಿಯಾ ರೆಂಬ ಗುಮಾನಿ ವಿಶೇಷವಾಗಿ ಪೋಪ್ ಮತ್ತು ವೆನಿಷಿಯನ್ನರ ವಿಚಾರ ದಲ್ಲಿತ್ತು. ವೆನಿಷಿಯನ್ನರ ವ್ಯೂಹವನ್ನು ತಡೆಗಟ್ಟಲು ಉಳಿದವರೆಲ್ಲಾ ಒಟ್ಟುಗೂಡಲು ಸಿದ್ಧರಾಗಿದ್ದರು. ಇದಕ್ಕೆ ಇವರುಗಳು ಒಟ್ಟು ಸೇರಿ ಫೆರಾರದ ಹಲ್ಲಾವನ್ನು ತಡೆಗಟ್ಟಿದ್ದೇ ನಿದರ್ಶನವಾಗಿದೆ. ಪೋಪರನ್ನು ತಗ್ಗಿಸಲು ರೋಮನ್ ರಾಜಮಾನ್ಯ ಶ್ರೀಮಂತರು ಹೆಚ್ಚಾಗಿ ಬೆಂಬಲ ಕೊಟ್ಟರು. ಇವರ ಐಕ್ಯಮತ್ಯ ಒಡೆದುಹೋಗಿ, ಅರ್ಸಿನಿ, ಕೊಲೊನ್ನೆಸಿಗ

ಳೆಂಬವೆರಡು ಪಂಗಡಗಳು ಹುಟ್ಟಿಕೊಂಡು ಒಬ್ಬರನ್ನೊಬ್ಬರು ಸತತವಾಗಿ ದ್ವೇಷಿಸುತ್ತಾ ಪೋಪನ ಸಮ್ಮುಖದಲ್ಲೇ ಆಯುಧಪಾಣಿಗಳಾಗಿ ಹೊಡೆದಾಡುತ್ತಲಿದ್ದರು. ಆದರೂ ಇವರು ಪೋಪ್ ಗುರುವಿನ ಅಧಿಕಾರ ಬಲವನ್ನು ಕೀಳುಮಟ್ಟಕ್ಕಿಳಿಸಿ ಶಿಥಿಲಗೊಳಿಸಿಬಿಟ್ಟರು. ಒಂದೊಂದು ವೇಳೆ ಸೆಕ್ಸ್ಟಸ್ (Sextus) ನಂತಹ ಧೈರ್ಯಶಾಲಿ ಪೋಪರು ಅಧಿಕಾರಕ್ಕೆ ಬಂದಿದ್ದರೂ ಕೂಡಾ ಈ ದುರ್ದೆಶೆಯನ್ನು ತಪ್ಪಿಸುವುದು ಅಂಥವರ ಸ್ಥೈರ್ಯ, ಬುದ್ಧಿಶಕ್ತಿ ಮತ್ತು ಅದೃಷ್ಟಗಳಿಗೆ ಮೀರಿದ ಕೆಲಸವಾಗಿತ್ತು. ಇದಕ್ಕೆ ಕಾರಣ, ಅವರ ಅಧಿಕಾರಾವಧಿ ಕೇವಲ ಸ್ವಲ್ಪವಾಗಿದ್ದುದು. ಅವರಲ್ಲಿ ಹತ್ತು ವರ್ಷಕ್ಕಿಂತ ಹೆಚ್ಚು ಯಾರೂ ಅಧಿಕಾರದಲ್ಲಿರಲಿಲ್ಲ. ಮತ್ತು ಈ ಅಲ್ಪಾವಧಿಯಲ್ಲಿ ಈ ಪಂಗಡಗಳವರನ್ನು ಹತೋಟಿಗೆ ತರುವುದೂ ಕೂಡ ಅಸಾಧ್ಯವಾಗಿದ್ದಿತು. ಕೊನೆಗೆ, ಅಂತೂ ಕೊಲೊನ್ನೆಸಿ ಪಂಗಡದವರು ನಿರ್ನಾಮವಾಗಿ ಹೋದರು ಎಂದು ತಿಳಿದುಕೊಂಡಿದ್ದ ಅರ್ಸಿನಿಯವರಿಗೆ ವಿರುದ್ಧವಾಗಿ ಮತ್ತೊಂದು ಹೊಸ ಶತ್ರು ಪಂಗಡ ಅತಿ ಶೀಘ್ರದಲ್ಲಿಯೇ ಪ್ರಬಲತೆಗೆ ಬಂತು. ಈ ಹೊಸ ಪಂಗಡವು ಕೊಲೊನ್ನೆಸಿಯವರಿಗೆ ಪುನರ್ಜನ್ಮವಿತ್ತು ಮತ್ತೆ ಅವರನ್ನು ಬಲಪಡಿಸಿಬಿಟ್ಟಿತು. ಪೋಪರು ಇಟಲಿಯಲ್ಲಿ ಆಗ ಪ್ರಬಲರಾಗಿಲ್ಲದ ಕಾರಣ ಈ ರೀತಿಯಾದ ಈರ್ಷೆ ಮತ್ತು ದ್ವೇಷೋದ್ರೇಕಗಳು ತಲೆದೋರಲು ಮೊದಲಾದುವು. ಇಷ್ಟಾದ ಮೇಲೆ ಆರನೆಯ ಅಲೆಕ್ಸಾಂಡರನು ಪೋಪ್ ಪದವಿಗೆ ಬಂದು, ದ್ರವ್ಯಬಲ ಮತ್ತು ಅಧಿಕಾರವುಳ್ಳ ಪೋಪನು ಎಷ್ಟು ಪ್ರಬಲನಾಗಿರಬಲ್ಲನೆಂಬುದನ್ನು ಹಿಂದಿದ್ದ ಯಾವ ಪೋಪರೂ ತೋರದಿದ್ದ ರೀತಿಯಲ್ಲಿ ಪ್ರದರ್ಶಿಸಿದನು. ಆಗ ಇಟಲಿಯನ್ನೆ ಫ್ರೆಂಚರು ಆಕ್ರಮಿಸಿದ್ದರು. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಅಲೆಕ್ಸಾಂಡರನು ಡ್ಯೂಕ್ ವ್ಯಾಲೆಂಟೈನನ ಸಹಕಾರ ಮತ್ತು ಮುಂದಾಳುತನದಲ್ಲಿ, ಈ ಹಿಂದೆ ಡ್ಯೂಕನ, ವಿಚಾರ ಬಂದಾಗ ಹೇಳಿದ ಕೆಲಸಗಳನ್ನೆಲ್ಲಾ ಮಾಡಿಸಿ ದೇಶವನ್ನು ರಕ್ಷಿಸಿದನು. ಇವನ ಈ ಉದ್ಯಮದ ಗುರಿಯು ಚರ್ಚಿಗೆ ಸೌಲಭ್ಯ ಒದಗಿಸಿಕೊಡುವುದಕ್ಕಿಂತ ಹೆಚ್ಚಾಗಿ ಡ್ಯೂಕನ ಘನತೆಯನ್ನು ಅತಿಶಯಗೊಳಿಸುವುದು ಆಗಿದ್ದರೂ ಅಂತ್ಯದಲ್ಲಿ ಒಂದರ ಏಳಿಗೆಗಾಗಿ ಪಟ್ಟ ಪ್ರಯತ್ನ ಮತ್ತೊಂದರ ಅನುಕೂಲಕ್ಕೆ ಕಾರಣವಾಯಿತು. ಏಕೆಂದರೆ, ಪೋಪನು ಸತ್ತು ವ್ಯಾಲೆಂಟೈನನ ಹೆಸರು ಅಳಿಸಿ ಹೋದ ನಂತರ ಇವರ ಸಾಹಸದ ಫಲ ಚರ್ಚಿನ ಏಳಿಗೆಗೇ ನೆರವಾ

ಯಿತು. ಅಲೆಕ್ಸಾಂಡರನ ನಂತರ ಜೂಲಿಯಸ್ ಗುರುಪೀಠಕ್ಕೆ ಬಂದಾಗ ಚರ್ಚ್ ಬಹು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ರೋಮಾನ್ಯ ಸಂಪೂರ್ಣವಾಗಿ ಅದರ ವಶದಲ್ಲಿತ್ತು. ರೋಮಿನ ಶ್ರೀಮಂತರೆಲ್ಲರೂ ನಿಶ್ಶೇಷವಾಗಿ ಅಳಿದು ಹೋಗಿ ಅವರ ಕಕ್ಷಿಗಳೆಲ್ಲ ಪೋಪ್ ಅಲೆಕ್ಸಾಂಡರನಿಂದ ಭೂಗತ ಮಾಡ ಲ್ಪಟ್ಟಿದ್ದವು. ಈ ಪ್ರಶಾಂತ ವಾತಾವರಣವು ಹಣವನ್ನು ಗಳಿಸಿ ಸಂಗ್ರಹಿಸಿಡು ವುದಕ್ಕೆ ಒಂದು ಅಪೂರ್ವ ಅವಕಾಶವನ್ನು ಒದಗಿಸಿಕೊಟ್ಟಿತು. ಜೂಲಿ ಯಸನ ಮನಸ್ಸಿನಲ್ಲಿ ಈ ಆಕಾಂಕ್ಷೆ ಹೂಬಿಟ್ಟು, ಫಲಿಸಿ ಪರಿಣತೆಗೆ ಬಂದು ಅವನು ಬೋಲೋಗ್ನಾವನ್ನು ವಶಪಡಿಸಿಕೊಂಡುದಲ್ಲದೇ, ವೆನಿಷಿಯನ್ನರನ್ನು ಕೂಡ ತನ್ನ ಅಧೀನದಲ್ಲಿರಿಸಿಕೊಂಡು, ಫ್ರೆಂಚರನ್ನು ಇಟಲಿಯಿಂದ ಹೊರ ದೂಡುವ ಆಲೋಚನೆಯನ್ನು ಮಾಡಿದನು. ಕೊನೆಗೆ ಈ ಸಾಹಸೋದ್ಯಮ ಗಳಲ್ಲೆಲ್ಲಾ ಜಯಶೀಲನಾಗಿ ಅದರಿಂದ ತನಗೆ ಲಭಿಸಿದ ಗೌರವವನ್ನೆಲ್ಲಾ ಚರ್ಚಿಗೇ ಒಪ್ಪಿಸಿದನು. ಅಲ್ಲದೆ ಕೊಲೊನ್ನೆಸಿ ಮತ್ತು ಆರ್ಸಿನಿ ಪಂಗಡದವ ರನ್ನು ತಾನು ಪದವಿಗೆ ಬಂದಾಗ ಅವರು ಯಾವ ಸ್ಥಿತಿಯಲ್ಲಿದ್ದರೋ ಅದೇ ಸ್ಥಿತಿಯಲ್ಲಿ ಕಾಪಾಡಿಕೊಂಡು ಬಂದನು. ಇವನ ವಿರುದ್ಧವಾಗಿ ಸಂಚು ಮಾಡಲು ಶಕ್ತರಾಗಿದ್ದವರು ಉಭಯತ್ರರಲ್ಲೂ ಇದ್ದರೂ ಎರಡು ಕಾರಣ ಗಳಿಗಾಗಿ ಅವರು ಆ ಗೋಜಿಗೆ ಹೋಗದೆ ಶಾಂತಿಯಿಂದಿದ್ದರು. ಒಂದು, ಚರ್ಚಿನ ಹಿರಿಮೆ ಅವರಲ್ಲಿ ಭಯಭಕ್ತಿಗಳನ್ನು ಹುಟ್ಟಿಸಿತ್ತು. ಮತ್ತೊಂದು ಅವರ ಅತೃಪ್ತಿಗೆ ಮೂಲಕಾರಣ ತಮ್ಮಲ್ಲಿ ಸಾಕಾದಷ್ಟು ಮಂದಿ ಕಾರ್ಡಿನಲ್ ಪದವಿಯಲ್ಲಿಲ್ಲವೆಂಬುದು. ಆ ಗುಂಪಿನ ಕೆಲವರು ಆ ಪದವಿಯನ್ನು ಪಡೆ ಯುವವರೆಗೂ ಆ ಅತೃಪ್ತಿ ಕೊನೆಗಾಣುವುದಿಲ್ಲ. ಚರ್ಚಿನ ಪ್ರಧಾನ ಅಧಿ ಕಾರಿಗಳೇ ರೋಮಿನಲ್ಲಿನ ಮತ್ತು ಹೊರಪ್ರದೇಶಗಳಲ್ಲಿನ ಪಂಗಡಗಳನ್ನು ಕಟ್ಟುವವರು; ಈ ಪಂಗಡಗಳ ನೆರವಿಗಾಗಿಯೇ ರೋಮಿನ ಶ್ರೀಮಂತರು ಹೋರಾಡುವುದು. ಇವರಲ್ಲಿ ಈ ಪದವಿಯವರು ಸಾಕಾದಷ್ಟು ಇಲ್ಲದುದ ರಿಂದ ಇವರು ಪಿತೂರಿ ಮಾಡಲು ಶಕ್ತಿಯಿಲ್ಲದೆ ಸುಮ್ಮನಿರಬೇಕಾಯಿತು. ಶ್ರೀಮಂತರ ಗಲಭೆಗಳಿಗೆ ಸಾಮಾನ್ಯವಾಗಿ ಪೋಪರುಗಳ ಹೆಬ್ಬಯಕೆಯೇ ಕಾರಣವೆಂದು ಹೇಳಬಹುದು.

ಪೋಪರು ಅತ್ಯಂತ ಪ್ರಬಲರಾಗಿದ್ದ ಸಮಯದಲ್ಲಿ ಈಗಿನ ಪೂಜ್ಯಶ್ರೀ ಲಿಯೋ (Leo) ಗುರುಗಳು ಪೀಠಕ್ಕೆ ಆರಿಸಲ್ಪಟ್ಟಿರುವರಾಗಿದ್ದಾರೆ. ಹಿಂದಿ

ನವರು ಆಯುಧಬಲದಿಂದ ಚರ್ಚನ್ನು ಉನ್ನತಸ್ಥಿತಿಗೇರಿಸಿದಂತೆ ಇವರು ತಮ್ಮ ವಾಕ್ಚಾತುರ್ಯ ಮತ್ತು ಇತರ ಸಹಸ್ರಾರು ಗುಣಸಂಪತ್ತಿನಿಂದ, ಚರ್ಚಿನ ಗೌರವವನ್ನು ದ್ವಿಗುಣಗೊಳಿಸಿ ಅದನ್ನು ಇತೋಪ್ಯಧಿಕ, ಪೂಜ್ಯ ಮತ್ತು ಮಹಿಮಾನ್ವಿತವಾದುದನ್ನಾಗಿ ಮಾಡುವರೆಂದು ಆಶಿಸಲಾಗಿದೆ.

ಹನ್ನೊಂದನೆಯ ಅಧ್ಯಾಯ

ಸೈನ್ಯಗಳ ಶಿಸ್ತಿನ ರೂಪಗಳು ಮತ್ತು ಕೂಲಿಕಾರ ಯೋಧರ ವಿಚಾರ

ನಾನು ಮೊದಲಿನಲ್ಲಿಯೇ ಸೂಚಿಸಿರುವ ಅನೇಕ ರೀತಿಯ ಸಂಸ್ಥಾನಗಳ ಆಡಳಿತಗಳ ಬಗ್ಗೆ ವಿಚಾರ ಮಾಡಿ, ಅವುಗಳ ವ್ಯವಸ್ಥೆ, ಅವುಗಳಿಂದಾಗಬಹುದಾದ ದುಷ್ಪರಿಣಾಮ ಮತ್ತು ಅವುಗಳನ್ನು ಗಳಿಸಿ ಉಳಿಸಲು ಅನೇಕರು ಅನುಸರಿಸಿದ ಮಾರ್ಗಗಳ ಬಗ್ಗೆ, ನಾವು ಒಂದು ಮುಖವನ್ನು ಮಾತ್ರ ಅವಲೋಕಿಸಿದ್ದೇನೆ. ಈಗ ಅವುಗಳಿಂದ ಒದಗತಕ್ಕ ಉಪಾಯ ಅಥವಾ ಅಪಾಯಗಳ ಬಗ್ಗೆ ಸರ್ವತೋಮುಖ ದೃಷ್ಟಿಯಿಂದ ಪರಿಶೀಲನೆ ಮಾಡಲು ಇಚ್ಛಿಸುತ್ತೇನೆ.

ಆಳುವ ದೊರೆ ಮೊದಲು ತನ್ನ ಅಡಿಪಾಯವನ್ನು ಭದ್ರಪಡಿಸಿಕೊಳ್ಳತಕ್ಕದ್ದು ಯುಕ್ತಮಾತ್ರವೇ ಅಲ್ಲದೆ ಆವಶ್ಯಕವೂ ಹೌದು; ಇಲ್ಲದಿದ್ದರೆ ಅವನ ಮೇಲ್ಕಟ್ಟಡ ಮುರಿದು ಮುಗುಚುವುದು ಖಂಡಿತ ಎಂಬ ಅಂಶವನ್ನು ನಾವು ಈ ಮೊದಲೇ ಸ್ಪಷ್ಟಪಡಿಸಿದ್ದೇವೆ.

ಯಾವ ರಾಜ್ಯಕ್ಕಾದರೂ—ಹೊಸದಾಗಲಿ ಹಳೆಯದಾಗಲಿ ಅಥವಾ ಇವೆರಡರ ಬೆರಕೆಯದಾಗಲಿ—ತಳಹದಿ ಒಳ್ಳೆಯ ಕಾನೂನು ಮತ್ತು ಒಳ್ಳೆಯ ಆಯುಧ ಸಂಪತ್ತು. ಆಯುಧ ಬಲವು ಇಲ್ಲದ ಕಡೆ ಒಳ್ಳೆಯ ಕಾನೂನುಗಳಿರುವುದು ಅಸಾಧ್ಯವಾದ್ದರಿಂದಲೂ, ಮತ್ತು ಆಯುಧಬಲವಿದ್ದ ಕಡೆ ಒಳ್ಳೆಯ ಕಾನೂನುಗಳು ಇರಲೇ ಬೇಕಾದ್ದರಿಂದಲೂ, ಕಾನೂನುಗಳ ವಿಷಯವಾಗಿ ಏನೂ ಚರ್ಚೆಮಾಡದೆ ಈ ಆಯುಧಬಲದ ವಿಷಯವಾಗಿ ಮಾತ್ರ ಮುಂದುವರಿಯುತ್ತೇನೆ.

ಆಳುವ ದೊರೆ ತನ್ನ ರಾಜ್ಯದ ರಕ್ಷಣೆಗಾಗಿ ಇಟ್ಟಿರುವ ಸೈನ್ಯ ಅವನ ಸ್ವಂತ ಪ್ರಜೆಗಳದಾಗಿರಬಹುದು; ಕೂಲಿಗಾಗಿ ಕೆಲಸ ಮಾಡುವ ಸಿಪಾಯಿದಳವಾಗಿರಬಹುದು; ಸಹಾಯಕ ಸೈನ್ಯವೃಂದವಾಗಿರ ಬಹುದು; ಅಥವಾ ಇವೆಲ್ಲದರ ಬೆರಕೆಯಾಗಿರಬಹುದು. ಕೂಲಿ ದಳ ಮತ್ತು ವಿದೇಶೀಯ ಸಹಾಯಕ ದಳಗಳು ಎರಡೂ ಅಪ್ರಯೋಜಕ ಮತ್ತು ಅಪಾಯಕರ. ಕೂಲಿ ದಳದ ಮೇಲೆ ಭರವಸೆಯಿಟ್ಟು ಆಡಳಿತ ನಡೆಸಲೆಣಿಸುವ ರಾಜನು ಕ್ಷೇಮವಾಗಿರುವುದು ಅಥವಾ ಅವನ ಸ್ಥಾನ ಭದ್ರವಾಗಿರುವುದು ಸಲ್ಲದ ಮಾತು. ಏಕೆಂದರೆ, ಅವರುಗಳೆಲ್ಲ ಐಕಮತ್ಯವಿಲ್ಲದ, ಅತ್ಯಾಶೆಯ, ಅಶಿಸ್ತಿನ ಕೃತಘ್ನರು; ಅವರಿಗೆ ತಮ್ಮ ಧಣಿಗಳಲ್ಲಿ ದುರಹಂಕಾರ; ಶತ್ರುಗಳನ್ನು ಕಂಡರೆ ದೈನ್ಯ; ಅವರಿಗೆ ಮನುಷ್ಯರಲ್ಲಿ ಸತ್ಯವಿಲ್ಲ; ದೇವರಲ್ಲಿ ಭಕ್ತಿಯಿಲ್ಲ. ಇಂಥವರ ಮೇಲೆ ನಂಬಿಕೆ ಇಟ್ಟಿರುವ ದೊರೆಯ ಅವನತಿ ಬಹು ದೂರದಲ್ಲಿರುವುದಿಲ್ಲ; ಶತ್ರುಪ್ರಯತ್ನವನ್ನೇ ಕಾದಿರುತ್ತದೆ. ಇಂತಹ ರಾಜನಿಗೆ ಯಾರೂ ಮನ್ನಣೆಕೊಡುವುದಿಲ್ಲ. ರಾಜ್ಯದಲ್ಲಿ ಶಾಂತಿ ನೆಲಸಿದಾಗ ಈ ಕೂಲಿ ಯೋಧರು ನಿಮ್ಮನ್ನು ಉದಾಸೀನ ಮಾಡುತ್ತಾರೆ. ಮತ್ತು ಯುದ್ಧಕಾಲದಲ್ಲಿ ನಿಮ್ಮನ್ನು ಕೈಬಿಟ್ಟು ಬಿಡುತ್ತಾರೆ. ಏಕೆಂದರೆ, ನಿಮ್ಮೊಡನೆ ಅವರನ್ನು ಬಂಧಿಸಿರುವುದು ಪ್ರೇಮವಲ್ಲ, ನಿಷ್ಠೆಯೂ ಅಲ್ಲ; ಅವರಿಗೆ ದೊರಕುವ ಕೂಲಿ ಮಾತ್ರ. ಈ ಪ್ರತಿಫಲ ಅವರನ್ನು ನಿಮಗಾಗಿ ಪ್ರಾಣಕೊಡುವಂತೆ ಪ್ರೇರೇಪಿಸುವಷ್ಟು ಶಕ್ತಿಯುಳ್ಳದ್ದಲ್ಲ. ಯುದ್ಧದ ಮಾತೇ ಇಲ್ಲದಿರುವಾಗ ಅವರು ಒಳ್ಳೆಯ ಅಲಂಕಾರದ ಭಟರು; ಆದರೆ ಅವರಿಗೆ ಕಾಳಗದ ಕರೆ ಕೊಟ್ಟುನೋಡಿ, ಮುಂಚೆಯೇ ಕೆಲಸ ಬಿಟ್ಟು ಹೋಗುತ್ತಾರೆ, ಇಲ್ಲವೇ ಸಮರದಲ್ಲಿ ನಿಮ್ಮ ಕೈತಪ್ಪಿ ಓಡಿಹೋಗುತ್ತಾರೆ.

ಇದನ್ನು ವ್ಯಕ್ತಪಡಿಸುವುದಕ್ಕೆ ಹೆಚ್ಚು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ; ಈಗಿನ ಇಟಲೀ ದೇಶದ ಅವನತಿಗೆ ಕಾರಣವೇ ಇದು. ಈ ದೇಶವು ಕೂಲಿಯ ಸೇನಾಬಲದ ಮೇಲೆ ಅನೇಕ ವರ್ಷಗಳಿಂದ ನೆಚ್ಚಿಗೆಯನ್ನಿಟ್ಟುಕೊಂಡದ್ದಕ್ಕೇ ಈ ಗತಿಗೆ ಬಂದಿರುವುದು. ಈ ಕೂಲಿಗಳು ಹಿಂದೆ ಯಾರ ಬಳಿಯಲ್ಲಿಯೋ ಚೆನ್ನಾಗಿಯೇ ಐಕ್ಯಮತ್ಯದಿಂದ ಸೇವೆಸಲ್ಲಿಸಿ ಇಲ್ಲಿಗೆ ಬಂದಿದ್ದರೂ ಬಂದಿರಬಹುದು. ಆದರೆ ಪರದೇಶದ ಶತ್ರು ನಮ್ಮ ಮೇಲೆ ಧಾಳಿಗೆ ಆರಂಭಿಸಿದ ಕೂಡಲೆ ತಮ್ಮ ನಿಜಸ್ವರೂಪವನ್ನು ಬಹಿರಂಗಪಡಿಸಿದರು. ಹೀಗಾಗಿ ಎಂಟನೆಯ ಚಾರ್ಲ್ಸ್ ತನ್ನದೇ ಒಂದು ನಿರ್ದಿಷ್ಟವಾದ ಮಾರ್ಗವನ್ನನುಸರಿಸಿ ಇಟಲಿಗೆ

ಬಂದು, ನಾವು ಮಾಡುವ ತಪ್ಪುಗಳೇ ನಮ್ಮ ದುಃಖಕ್ಕೆ ಮೂಲ ಎಂಬುದನ್ನು ದೃಢೀಕರಿಸಿದನು. ಇದನ್ನೆನೋ ಒಪ್ಪಿಕೊಳ್ಳಬೇಕಾದ್ದೇ; ಆದರೆ ಇದಕ್ಕೆ ಕಾರಣ ಮಾತ್ರ ಇವನು ತಿಳಿದುಕೊಂಡದ್ದಲ್ಲ. ನಾನು ಮೇಲೆ ಹೇಳಿದ್ದೆ ಅದರ ನಿಜವಾದ ಕಾರಣ. ಈ ತಪ್ಪುಗಳನ್ನು ಅನೇಕ ದೊರೆಗಳು ದುಡುಕಿ ಮಾಡಿ ಅದಕ್ಕೆ ತಕ್ಕ ಶಿಕ್ಷೆಯಾಗಿ ಮರೆಯಲಾಗದ ರೀತಿಯಲ್ಲಿ ದುರಂತಗಳನ್ನು ಅನುಭವಿಸಿದ್ದಾರೆ. ಇನ್ನೂ ಆಳವಾಗಿ ಪರ್ಯಾಲೋಚಿಸಿದರೆ, ಈ ದಳಗಳ ವಿಷಯದಲ್ಲಿ ಕಂಡುಬರುವ ನ್ಯೂನತೆ ಮತ್ತು ಅಯುಕ್ತತೆಗಳನ್ನು ನಿಮಗೆ ಇನ್ನೂ ಸ್ಪಷ್ಟವಾಗಿ ತಿಳಿಸಬಹುದು. ಈ ಕೂಲಿ ಸೈನ್ಯದ ಸೇನಾನಾಯಕರು ಅತ್ಯಂತ ಸಾಹಸಿಗಳಾಗಿದ್ದರೆ ನೀವು ಕ್ಷೇಮವಾಗಿರುವಂತೆಯೇ ಇಲ್ಲ. ಏಕೆಂದರೆ, ಅವರು ಅವರ ಒಡೆಯರಾದ ನಿಮ್ಮನ್ನು ದುರಾಕ್ರಮಿಸಲು ಸದಾ ಹೊಂಚು ಕಾಯುತ್ತಿರುತ್ತಾರೆ; ಇಲ್ಲವೇ ನೀವು ಕಾಪಾಡಬೇಕೆಂದಿರುವ ಪ್ರಜೆಗಳನ್ನು ಹಿಂಸಿಸುತ್ತಾರೆ. ಈ ನಾಯಕರು ಹೇಡಿಗಳಾದರೋ, ಪುನಃ ನಿಮಗೆ ದುರ್ದೆಶೆ ಖಂಡಿತ. ಕೂಲಿ ದಳದವರೇ ಆಗಲಿ ಅಥವಾ ಇನ್ನು ಯಾರೇ ಆಗಲಿ, ಎಲ್ಲ ಸೇನಾನಿಗಳೂ ಹೀಗೆ ಮಾಡುವವರೇ ಎಂದು ನೀವು ಹೇಳಿದರೆ ಅದಕ್ಕೆ ನಾನು ಸಮಾಧಾನ ಹೇಳುವುದಿಷ್ಟೆ: ಪ್ರತಿಯೊಂದು ಯುದ್ಧವೂ ದೊರೆಯ ನೇತೃತ್ವದಲ್ಲಿ ನಡೆಯಬೇಕು. ಇಲ್ಲವೇ ಪ್ರಜಾಪ್ರತಿನಿಧಿಗಳ ಅಧೀನದಲ್ಲಿ ನಡೆಯಬೇಕು. ದೊರೆಯಾದರೆ ಅವಶ್ಯವಾಗಿ ತಾನೇ ಖುದ್ದಾಗಿ ಹೋಗಿ ಸೇನಾನಿಯ ಕರ್ತವ್ಯವನ್ನು ಮಾಡುತ್ತಾನೆ. ಜನತೆಯಾದರೋ, ತಾವು ಒಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಬೇಕು; ಪ್ರತಿನಿಧಿಯು ಅಸಮರ್ಥನಾದರೆ ಅವನನ್ನು ತೆಗೆದು ಹಾಕಿ ಮತ್ತೊಬ್ಬನನ್ನು ನೇಮಿಸಬೇಕು. ಆತ ಯೋಗ್ಯನಾಗಿದ್ದಲ್ಲಿ ಆತನ ಅಧಿಕಾರ ಮುಂದುವರಿಯಬೇಕು. ಅದರೂ ಅವನು ತನ್ನ ಕಾರ್ಯವನ್ನು ಅತಿಕ್ರಮಿಸದಂತೆ ಕಟ್ಟಾದ ಆಜ್ಞೆಯಿಂದ ಸುತ್ತುವರಿದವನಾಗಬೇಕು. ದೊರೆಯೊಬ್ಬನೇ ಮತ್ತು ಪ್ರಜಾಪಭುತ್ವವೊಂದೇ ತನ್ನ ಸ್ವಂತ ಸೇನಾಬಲದಿಂದ ಅನೇಕ ಮಹತ್ಕಾರ್ಯಗಳನ್ನು ಸಾಧಿಸಿರುವುದು ಅನುಭವವೇದ್ಯವಾಗಿದೆ. ಆದರೆ ಕೂಲಿ ದಳದಿಂದ ಯಾವಾಗಲೂ ವಿಪತ್ತು ಒದಗಿರುವುದೇ ಹೊರೆತು ಲಾಭವಾಗಿಲ್ಲ. ಹೊರಗಿನ ಯಾರ ಸಹಾಯವೂ ಇಲ್ಲದೆ ತನ್ನ ಪ್ರಜೆಗಳ ಶೌರ್ಯದಿಂದಲೇ ಸಂಪತ್ತನ್ನು ಗಳಿಸಿರುವ ಪ್ರಜಾಪ್ರಭುತ್ವದಲ್ಲಿ, ಪ್ರಜೆಗಳನ್ನು ದಬ್ಬಾಳಿಸಿ ನಿರಂಕುಶ ಸರ್ವಾಧಿಕಾರವನ್ನು ಯಾರಾದರೂ ಒಬ್ಬನು

ದುರಾಕ್ರಮಣಮಾಡುವುದು ಬಹುಕಷ್ಟ. ಪರಸ್ಥಳದ ಸೇನೆ ಮಾತ್ರವಿದ್ದರೆ ಪಿತೂರಿಗೆ ತೆರೆದ ಬಾಗಿಲು. ರೋಮ್ ಮತ್ತು ಸ್ಪಾರ್ಟನ್ ಜನತೆ ತಮ್ಮ ಸ್ವಂತ ಸೇನಾ ಬಲದಿಂದ ತಮ್ಮ ಸ್ವಾತಂತ್ರ್ಯವನ್ನು ಬಹುಕಾಲ ಉಳಿಸಿಕೊಂಡು ಬಾಳಿದರು. ಸ್ವಿಸ್ ಜನರು ನೆರೆಹೊರೆಯವರಿಗಿಂತ ಹೆಚ್ಚು ಕೆಚ್ಚಾಳುಗಳಾದ್ದರಿಂದ ಅವರಿಗಿಂತ ಹೆಚ್ಚು ಸ್ವತಂತ್ರರಾಗಿದ್ದಾರೆ. ಅಂದರೆ ಕೂಲಿ ದಳದವರಿಂದಾಗುವ ಅಪಾಯವನ್ನು ಮನದಟ್ಟುಮಾಡಲು ಒಂದು ಪ್ರಾಚೀನದ ಉದಾಹರಣೆ ಇಲ್ಲಿದೆ. ಕಾರ್ಥೇಜಿಯನ್ನರು ರೋಮನರೊಡಗೆ ಮೊದಲ ಯುದ್ಧಮಾಡಿದ ನಂತರ ತಮ್ಮ ಕೂಲಿ ದಳ ತಮ್ಮ ಸ್ವಂತ ದೇಶೀಯ ಸೇನಾನಿಗಳ ಅಧೀನದಲ್ಲಿದ್ದರೂ ಕೂಡ, ಆ ಸೈನ್ಯಗಳ ಪಿತೂರಿಯಿಂದ ತಾವು ನಿರ್ಮೂಲವಾಗಿ ನಾಶವಾಗಿ ಹೋಗುವುದರಲ್ಲಿದ್ದರು.

ಇಪಾಮಿನೋನ್‌ದಾಸ(Epaminondas)ನ ಮರಣಾನಂತರ ಥೀಬ್ಸ್ ಜನರು ಮೆಸಿಡೋನಿಯದ ದೊರೆ ಫಿಲಿಪ್ಪನನ್ನು ಸೇನಾನಿಯನ್ನಾಗಿ ಮಾಡಿಕೊಂಡು, ತನ್ಮೂಲಕ ತಮ್ಮ ಶತ್ರುಗಳನ್ನು ಜಯಿಸಿ, ತಮ್ಮ ಕೈಗೆ ತಾವೇ ಸಂಕೋಲೆ ಹಾಕಿಕೊಂಡು ಅಡಿಯಾಳುಗಳಾದರು. ಇನ್ನೊಂದು ಉದಾಹರಣೆ: ಸೇನಾನಿ ಫಿಲಿಪ್ಪನ ಮರಣಾನಂತರ ಮಿಲಾನೀಸರು ಫ್ರಾನ್ಸಿಸ್ಕೋ ಸ್ಫೋರ್ಜಾ (Francesco Sforza)ನಿಗೆ ಸೈನ್ಯಾಧಿಕಾರವನ್ನು ವಹಿಸಿ ವೆನಿಷಿಯನ್ನರ ಮೇಲೆದಂಡೆತ್ತಿ ಹೋದರು. ಫ್ರಾನ್ಸಿಸ್ಕೋ ಶತ್ರುಗಳನ್ನು ಕಾರಾವೆಗ್ಗಿಯೋ (Caravaggio)ದಲ್ಲಿ ಸದೆಬಡಿದು, ಆ ಮೇಲೈ ಆ ಶತ್ರುವನ್ನೇ ಕೂಡಿಕೊಂಡು ತನ್ನನ್ನು ಸೇನಾನಿಯನ್ನಾಗಿ ಮಾಡಿದವರನ್ನೇ ತನ್ನ ಅಧೀನದಲ್ಲಿಡಲು ಪಿತೂರಿ ಮಾಡಿದನು. ಫ್ರಾನ್ಸಿಸ್ಕೋವಿನ ತಂದೆ ಮೊದಲು ನೇಪಲ್ಸಿನ ರಾಣಿ ಜೋನಳ ಸೈನ್ಯದಲ್ಲಿದ್ದು, ಏಕಾಏಕಿ ತನ್ನ ಸೈನ್ಯದೊಂದಿಗೆ ತಲೆಮರೆಸಿಕೊಂಡು ಹೊರಟು ಹೋಗಿ ರಾಣಿಯನ್ನು ಅಸಹಾಯಕ ಸ್ಥಿತಿಯಲ್ಲಿ ನಿಲ್ಲಿಸಿಬಿಟ್ಟನು. ಕೊನೆಗೆ ರಾಣಿ ವಿಧಿಯಿಲ್ಲದೆ ಅರಗಾನ್ (Arragon) ದೊರೆಯ ಆಶ್ರಯವನ್ನು ಹುಡುಕಿಕೊಂಡು ಹೋಗಬೇಕಾಯಿತು. ವೆನಿಷಿಯನ್ ಮತ್ತು ಫ್ಲಾರೆಂಟೈನರು ಈ ಸೈನ್ಯಗಳ ಸಹಾಯದಿಂದ ತಮ್ಮ ಆಧಿಪತ್ಯವನ್ನು ವಿಸ್ತರಿಸಿದ್ದೂ ಮತ್ತು ಅವರ ಸೇನಾನಿಗಳೇ ಅವರನ್ನು ಅಡಿಯಾಳುಗಳನ್ನಾಗಿ ಮಾಡದೆ ಬಿಟ್ಟಿದ್ದೂ ಕೇವಲ ಫ್ಲಾರೆಂಟೈನರ ಅದೃಷ್ಟವೆಂದೇ ಹೇಳುತ್ತೇನೆ. ಏಕೆಂದರೆ ಇವರನ್ನು ಅಡಿಯಾಳುಗಳಾಗಿ ಮಾಡ ಬಹುದಾಗಿದ್ದ ಹಲವು ನಾಯಕರು

ಜಯಶಾಲಿಗಳಾಗಲಿಲ್ಲ, ಮತ್ತೆ ಹಲವರಿಗೆ ಪ್ರತಿಬಂಧಕಗಳು ಒದಗಿದವು; ಉಳಿದವರು ತಮ್ಮ ಸ್ವಾರ್ಥಗಳಿಸುವುದಕ್ಕೆ ಬೇರೆ ಮಾರ್ಗಗಳನ್ನು ಹಿಡಿದರು. ಇದರಲ್ಲಿ ಜಯಶಾಲಿಯಾಗದಿದ್ದವನು ಗಿಯೋವಾನಿ ಅಕ್ಯ್ಯೂಟೊ (Giovanni Acuto) ಎಂಬಾತನು. ಆತನಿಗೆ ಸರಿಯಾದ ಸಂದರ್ಭ ಒದಗಲಿಲ್ಲವಾದ ಕಾರಣ ಆತನ ನಿಷ್ಠೆಯ ನಿಜತ್ವ ಜನಗಳಿಗೆ ಗೊತ್ತಾಗಲಿಲ್ಲ. ಆದರೂ ಆತನೇನಾದರೂ ಜಯಶಾಲಿಯಾಗಿದ್ದರೆ ಫ್ಲಾರೆಂಟೈನರೆಲ್ಲಾ ಆತನ ಕೃಪೆಗೆ ಪಾತ್ರರಾಗಬೇಕಿತ್ತೆಂಬುದು ಎಲ್ಲರಿಗೂ ತಿಳಿದೇ ಇತ್ತು. ಸ್ಫೋರ್ಜಾನಿಗೆ ವಿರುದ್ಧವಾಗಿ ಬ್ರಾಛೆಷಿ (Braccheschi)ಸದಾ ನಿಂತಿರುತ್ತಿದ್ದುದರಿಂದ ಇವರಿಬ್ಬರೂ ಒಬ್ಬರಿಗೊಬ್ಬರು ಅಡಚಣೆಯಾಗಿದ್ದರು. ಫ್ರಾನ್ಸಿಸ್ಕೋಗೆ ಲಂಬಾರ್ಡಿಯನ್ನು ತನ್ನದು ಮಾಡಿಕೊಳ್ಳುವ ಮಹದಾಶೆಯೂ, ಬ್ರೇಚಿಯೋ (Braccio)ಗೆ ಚರ್ಚ್ ಮತ್ತು ನೇಪಲ್ಸ್ ರಾಜಧಾನಿಯ ಮೇಲೆ ಮನಸ್ಸೂ ಇದ್ದವು. ಇತ್ತೀಚಿನ ಘಟನೆಗಳನ್ನು ಗಮನಿಸಿದರೆ, ಫ್ಲಾರೆಂಟೈನರು ಪಾಲ್ ವಿಟೆಲ್ಲಿ (Paul Vitelli)ಯನ್ನು ಸೇನಾನಿಯನ್ನಾಗಿ ಮಾಡಿದರು. ಈತ ಬುದ್ಧಿವಂತ. ಅದೃಷ್ಟದ ದೆಶೆಯಿಂದ ಈತ ಆಗಲೇ ಬೇಕಾದಷ್ಟು ಹೆಸರು ಗಳಿಸಿದ್ದ. ಈತನೇನಾದರೂ ಪೈಸಾ ನಗರವನ್ನು ವಶಪಡಿಸಿಕೊಂಡಿದ್ದರೆ ಫ್ಲಾರೆಂಟೈನರು ಹೇಗೆ ಇವನ ಬಳಿ ವರ್ತಿಸಬೇಕಾಗಿತ್ತೆಂಬುದು ಗಮನಾರ್ಹವಾದ ವಿಷಯ. ಏಕೆಂದರೆ, ಇವನೇನಾದರೂ ಇವರನ್ನು ತ್ಯಜಿಸಿ ಶತ್ರುಪಕ್ಷವನ್ನು ಸೇರಿದ್ದನೆಂದರೆ ಇವರು ಪರಿಹಾರವೇ ಇಲ್ಲದಂತೆ ನಾಶವಾಗುತ್ತಿದ್ದರು; ಮತ್ತು ಇವರೇನಾದರೂ ಇವನನ್ನು ತಮ್ಮಲ್ಲೇ ಬಲಯುತವಾದ ಅಧಿಕಾರದಲ್ಲೇ ಇಟ್ಟಿದ್ದಲ್ಲಿ ಕೇವಲ ಸ್ವಲ್ಪ ಕಾಲದಲ್ಲೇ ಎಲ್ಲರೂ ಇವನ ಅಡಿಯಾಳುಗಳಾಗುತ್ತಿದ್ದರು.

ವೆನಿಷಿಯನ್ನರ ಮುನ್ನಡೆಯನ್ನು ಗಮನಿಸಿದಲ್ಲಿ ಅವರ ವ್ಯವಹಾರಗಳೆಲ್ಲಾ ಅವರ ಸ್ವಂತ ಬಲದ ಅಧೀನದಲ್ಲಿದ್ದು, ಅವರುಗಳು ತಮ್ಮ ದಾರಿಯಲ್ಲಿ ಸುರಕ್ಷಿತವಾಗಿ ಗೌರವಾರ್ಹವಾದ ರೀತಿಯಲ್ಲಿ ಮುಂಬರಿದಿದ್ದಾರೆಂಬುದು ಕಂಡುಬರುತ್ತದೆ. ಇವರ ಎಲ್ಲಾ ಕೆಲಸಕಾರ್ಯಗಳೂ ನಗರದ ಮಾನ್ಯರಾದ ಸಾಮಾನ್ಯ ಜನಗಳಿಂದಲೇ ನಡೆಸಲ್ಪಟ್ಟು ಅನೇಕ ಮಹತ್ಕಾರ್ಯಗಳು ಕೂಡ ಇವರಿಂದ ಸಾಧಿಸಲ್ಪಟ್ಟಿವೆ. ಆದರೆ, ಇವರು ಆ ಮೇಲೆ ಭೂಸ್ವತ್ತನ್ನು ಆಕ್ರಮಿಸುವ ಉದ್ಯಮದಲ್ಲಿ ತೊಡಗಿದಾಗ ಇವರ ಹಿಂದಿನ ಯಶಸ್ಸು ಮತ್ತು ಶಿಸ್ತು ಕ್ರಮೇಣ ಕಡಮೆಯಾಗಿ ಕೊನೆಗೆ ಇವರೂ ಇಟಲಿ ದೇಶದ ಇತರರ ರೀತಿನೀತಿಗಳನ್ನು ಅನುಸರಿಸಿದರು.

ಭೂಮಿಯ ಆಕ್ರಮಣಕ್ಕೆ ತೊಡಗುವುದಕ್ಕೆ ಮುನ್ನ ಇವರ ಕೀರ್ತಿ ಹೊರದೇಶದಲ್ಲಿ ತುಂಬಾ ಪ್ರಭಾವಯುತವಾಗಿದ್ದದರಿಂದ ಇವರು ತಮ್ಮ ಸೈನ್ಯಾಧಿಕಾರಿಗಳ ವಿಷಯದಲ್ಲಿ ಅಷ್ಟೇನೂ ಜಾಗರೂಕರಾಗಿರಬೇಕಾದ ಆವಶ್ಯಕತೆಯಿರಲಿಲ್ಲ. ಆದರೆ, ಕಾರ್ಮಿಗ್ನೋಲ (Cormignol) ನ ನಾಯಕತ್ವದಲ್ಲಿ ತಮ್ಮ ರಾಷ್ಟ್ರವನ್ನು ವಿಸ್ತರಿಸುವ ಕಾರ್ಯದಲ್ಲಿ ಉನ್ಮುಖರಾದಾಗ ಅವರ ತಪ್ಪಿನ ಅರಿವು ಅವರಿಗೇ ಉಂಟಾಯಿತು. ಏಕೆಂದರೆ, ಇವನು ತಮಗೆ ಜಯ ಗಳಿಸಿಕೊಟ್ಟದ್ದರಿಂದಲೂ ಮತ್ತು ಡ್ಯೂಕ್ ಆಫ್ ಮಿಲಾನನ ವಿರುದ್ಧ ಯುದ್ಧಮಾಡಿದಾಗ ಇವನು ತೋರಿದ ಶೌರ್ಯದಿಂದಲೂ, ಇವನು ಪ್ರಭಾವಶಾಲಿಯಾದ ಸೇನಾನಾಯಕನೆಂದರಿತಿದ್ದ ವೆನಿಷಿಯನ್ನರಿಗೆ ಕೊನೆಯಲ್ಲಿ ಇವನು ಕ್ರಮೇಣ ನಿರುತ್ಸಾಹಿಯೂ, ದುರ್ಬಲನೂ ಆಗಿ ಕಂಡುಬಂದು, ಈತನಿಂದ ಮುಂದೆ ತಮಗೇನೂ ಪ್ರಯೋಜನವಿಲ್ಲವೆಂದು ತಿಳಿದುಕೊಂಡರು. ಆದರೂ ಕೂಡ ಇವನಿಂದ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಇವರಿಗೆ ಇಷ್ಟವೂ, ಕೊನೆಗೆ ಶಕ್ತಿಯೂ ಇರಲಿಲ್ಲ; ಕಿತ್ತುಕೊಂಡರೆ ತಾವು ಸಂಪಾದಿಸಿರುವುದೆಲ್ಲಾ ಕೈಬಿಡುವುದು ಖಂಡಿತನೆಂದು ಯೋಚಿಸಿ, ಕೊನೆಗೆ ತಮ್ಮ ಭದ್ರತೆಗೆ ಬೇರೆ ದಾರಿಕಾಣದೆ ಅವನನ್ನು ಕೊಂದುಬಿಟ್ಟರು. ಇವನ ತರುವಾಯ ಬರ್ಗಾಮೋದ ಬಾರ್ಟೊಲೋಮಿಯೋ (Bartolomeo da Bergamo), ರಾಬರ್ಟೋಡ ಸಾನ್‌ಸವರಿನೋ (Roberto da San Severeno), ಮತ್ತು ಕಾಂಟ್ ಡಿ ಪಿಟಿಗ್ಲಿಯಾನೋ (Conte de Pitigliano), ಇವರುಗಳು ಸೇನಾನಿಗಳಾಗಿದ್ದರು. ಇವರುಗಳ ನೇತೃತ್ವದಲ್ಲಿ ವೆನಿಷಿಯನ್ನರಿಗೆ ಜಯಕ್ಕಿಂತ ಸೋಲು ಹೆಚ್ಚು ಸಂಭವವಾಗಿ ತೋರಿತು. ಇದು ವ್ಯಕ್ತಪಡಲು ಹೆಚ್ಚು ದಿನಗಳೇನೂ ಬೇಕಾಗಲಿಲ್ಲ. ವೈಲಾ (Vaila) ದಲ್ಲಿ ನಡೆದ ಒಂದೇ ಒಂದು ಕದನದಲ್ಲಿ ಇವರು ಕಳೆದ ಎಂಟು ಸಂವತ್ಸರಗಳಿಂದ ಸತತವಾದ ಶ್ರಮ ಮತ್ತು ಕಷ್ಟದಿಂದ ಗಳಿಸಿದ್ದನ್ನೆಲ್ಲಾ ಕಳೆದುಕೊಂಡರು. ನನಗೆ ಇದೇನೂ ಆಶ್ಚರ್ಯಕರವಾಗಿ ಕಾಣುವುದಿಲ್ಲ. ಏಕೆಂದರೆ ನಾನು ಮೇಲೆ ಹೇಳಿದ ರೀತಿಯ ಸೈನ್ಯಬಲದಿಂದ ಮಾಡುವ ಧಾಳಿ ಚುರುಕಿಲ್ಲದುದಾಗಿಯೂ, ಶೋಚನೀಯವಾದ್ದಾಗಿಯೂ ಮತ್ತು ದುರ್ಬಲವಾದ್ದಾಗಿಯೂ ಇರುತ್ತದೆ. ಆದರೆ ಅದರಿಂದಾಗುವ ನಷ್ಟ ಮಾತ್ರ ಬಹುಬೇಗ ಮತ್ತು ಆಶ್ಚರ್ಯಕರವಾದ ರೀತಿಯಲ್ಲಿ ಘಟಿಸು

ತ್ತದೆ. ಇಟಲೀ ದೇಶದ ಎಲ್ಲಾ ವ್ಯವಹಾರಗಳೂ ಅನೇಕ ವರ್ಷಗಳಿಂದ ಕೂಲಿ ದಳದ ವಹಿವಾಟಿನಲ್ಲಿ ನಡೆಸಲ್ಪಡುತ್ತಿರುವುದಕ್ಕಾಗಿ ಇಷ್ಟೊಂದು ಉದಾಹರಣೆಗಳನ್ನು ಕೊಟ್ಟು ನನ್ನ ಹೇಳಿಕೆಯನ್ನು ಸಮರ್ಥಿಸುತ್ತಿದ್ದೇನಾದ್ದರಿಂದ, ಈಗ ನನ್ನ ಈ ವಿಷಯುವನ್ನು ಕುರಿತು ಚರ್ಚೆಯನ್ನು ಇನ್ನೂ ಸ್ವಲ್ಪ ಮೇಲಿನ ಸ್ಥಾಯಿಗೆ ಕೊಂಡೊಯ್ಯುತ್ತೇನೆ. ಈ ಸೈನ್ಯಗಳ ಮೂಲ ಮತ್ತು ಚರಿತ್ರೆಯನ್ನು ಚೆನ್ನಾಗಿ ತಿಳಿದರೆ, ಇವುಗಳಲ್ಲಿ ನ್ಯೂನತೆಗಳನ್ನು ತಿದ್ದಿ ಇವುಗಳನ್ನು ಸುಲಭವಾಗಿ ಹತೋಟಿಗೆ ತರಲು ಸಾಧ್ಯವಿದೆ. ಹಿಂದೆ ಇಟಲಿಯಲ್ಲಿ ರೋಮನ್ ಚಕ್ರಾಧಿಪತ್ಯ ಕ್ಷೀಣಗತಿಗೆ ಬಂದು ನಂತರ ಪೋಪರು ಪ್ರಬಲರಾಗಿ ಪ್ರಾಪಂಚಿಕ ವ್ಯವಹಾರಗಳಲ್ಲೆಲ್ಲಾ ತಮ್ಮ ಅಧಿಕಾರವನ್ನು ವಿಸ್ತರಿಸಿದಾಗ ಇಟಲೀ ದೇಶ ಒಡೆದುಹೋಗಿ ಅನೇಕ ಛಿದ್ರ ಸಂಸ್ಥಾನಗಳಾಗಿ ಮಾರ್ಪಟ್ಟಿತು. ಏಕೆಂದರೆ ಹಲವಾರು ದೊಡ್ಡ ಪಟ್ಟಣಗಳು ಅದು ವರೆಗೆ ಆಳುತ್ತಿದ್ದ ಶ್ರೀಮಂತರ ವಿರುದ್ಧವಾಗಿ ಆಯುಧವನ್ನು ಹಿರಿದು ಅವರನ್ನು ಉರುಳಿಸಿದುವು. ಇದಕ್ಕೆ ಕಾರಣ, ಇವರುಗಳೆಲ್ಲಾ ಹಿಂದಿನ ಚಕ್ರವರ್ತಿಗಳ ಬೆಂಬಲದ ದರ್ಪದಿಂದ ಪ್ರಜೆಗಳನ್ನು ಹಿಂಸಿಸುವುದಕ್ಕೆ ತೊಡಗಿದಾಗ, ಪ್ರಾಪಂಚಿಕ ವ್ಯವಹಾರಗಳಲ್ಲಿ ಮಾನ್ಯತೆ ಮತ್ತು ಹೆಸರು ಗಳಿಸುವ ಅಭಿಲಾಷೆಯಿಂದ ಚರ್ಚು ಇವರನ್ನು ಎದುರಿಸಿತು. ಇತರ ನಗರಗಳಲ್ಲಿ ಪ್ರಜೆಗಳಲ್ಲಿ ಪ್ರಾಮುಖ್ಯತೆ ಪಡೆದವರು ತಾವೇ ದೊರೆಗಳಾದರು. ಹೀಗೆ ಒಂದು ಅಖಂಡ ಚಕ್ರಾಧಿಪತ್ಯ ಒಡೆದುಹೋಗಿ ಸೈನ್ಯ ಮತ್ತು ಬಲ ಪ್ರಯೋಗಗಳ ಅನುಭವವೇ ಇಲ್ಲದ ಪೋಪ್ ಮತ್ತು ಹಲವು ಪ್ರಜಾಪ್ರಭುತ್ವಗಳ ಕೈಗೆ ಸಿಕ್ಕಿದ ನಂತರ ಇಟಲಿ ದೇಶ ತನ್ನ ರಕ್ಷಣೆಗೆ ಪರಕೀಯರನ್ನು ಸಂಬಳದ ಮೇಲೆ ಸೇರಿಸಿಕೊಳ್ಳ ತೊಡಗಿತು. ಕೂಲಿ ದಳದ ಯುದ್ಧಾಚರಣೆಯನ್ನು ಮೊದಲು ಪ್ರಖ್ಯಾತಿಗೆ ತಂದವನು ರೋಮಾನ್ಯದ ಆಲ್ಬರಿಗೋ ಡ ಕೋಮೋ (Alberigo da Como) ಎಂಬಾತ; ಇವನಲ್ಲದೆ ಇವನ ಶಿಕ್ಷಣದಲ್ಲಿ ತರಬೇತಾಗಿ ಅವರ ಕಾಲದಲ್ಲಿ ಇಟಲಿಯ ವ್ಯವಹಾರದ ಪರಮನಾಯಕರೆಂದು ಹೆಸರು ಪಡೆದ ಬ್ರಾಚ್ಚಿಯೋ (Braccio) ಮತ್ತು ಸ್ಫೋರ್ಜಾ (Sforja) ಎಂಬವರು ಪ್ರಖ್ಯಾತಿಗೆ ಬಂದರು. ಇವರು ಇಟಲಿಯ ಸೇನಾನಿಗಳಾಗಿ ನಮ್ಮ ಕಾಲದವರೆಗೂ ನಡೆಸಿಕೊಂಡು ಬಂದಿದ್ದಾರೆ. ಇವರ ಸೇವಾ ಪರಿಣಾಮದಲ್ಲಿ ಇಟಲಿಯು ಚಾರ್ಲ್ಸನಿಂದ ಆಕ್ರಮಿತವಾಗಿ, ಲೂಯಿಸನಿಂದ ಕೊಳ್ಳೆ ಹೊಡೆಯಲ್ಪಟ್ಟು

ಫೆರ್ರಾಂಡ (Ferranda) ನಿಂದ ಭಂಗಹೊಂದಿ, ಸ್ವಿಸ್‌ನವರಿಂದ ಯಶಸ್ಸಿನ ಅಳಿವನ್ನು ಕಂಡಿತು. ಇವರು ಅನುಸರಿಸುತ್ತಿದ್ದ ಕ್ರಮದಲ್ಲಿ ಮೊದಲನೆಯದು, ದೇಶೀಯ ಕಾಲಾಳು ಸೈನ್ಯದ ಬಲದಿಂದ ಜಯಗಳಿಸಿ, ಜಯದ ಕೀರ್ತಿಯನ್ನು ತಾವು ಅಪಹರಿಸುವುದು. ನಮ್ಮ ರಾಜ್ಯಗಳು ಚಿಕ್ಕವಾಗಿ, ಅವುಗಳಲ್ಲಿ ಪ್ರಜೆಗಳೇ ಬೇಸಾಯದ ಕೆಲಸ ಮಾಡಬೇಕಾದ್ದರಿಂದ, ಪದಾತಿ ಸಂಖ್ಯೆಯು ಹೆಚ್ಚಾಗಿರಲು ಸಾಧ್ಯವಿರುತ್ತಿರಲಿಲ್ಲ. ಈ ನೆವದ ಮೇಲೆ ಪದಾತಿ ಸೈನ್ಯವನ್ನು ಬಿಟ್ಟು ರಾವುತ ಸೈನ್ಯವನ್ನು ರಚಿಸಿದರು. ಅವರು ಹೀಗೆ ತಮ್ಮ ಸೈನ್ಯವನ್ನು ಅಶ್ವಸೈನ್ಯವನ್ನಾಗಿ ಮಾರ್ಪಡಿಸಿ, ಅದನ್ನೂ ಗುಂಪುಗಳಾಗಿ ವಿಂಗಡಿಸಿ, ಅದರಿಂದ ಒಳ್ಳೆಯ ಪ್ರತಿಫಲವನ್ನು ಹೊಂದಿದರು. ಕ್ರಮೇಣ ಈ ರೀತಿಯ ಸೈನ್ಯದ ರಚನೆ ಎಷ್ಟು ಮಟ್ಟಿಗೆ ಆಚರಣೆಗೆ ಬಂದಿತೆಂದರೆ ೩೦,೦೦೦ ಸೈನಿಕರನ್ನುಳ್ಳ ಒಂದು ದಳದಲ್ಲಿ ಕೇವಲ ೩,೦೦೦ ಪದಾತಿಗಳಿದ್ದಿದ್ದರೆ ಹೆಚ್ಚು.

ಇದಲ್ಲದೆ ಈ ಕೂಲಿ ಸಿಪಾಯಿಗಳು ತಮಗಾಗಲಿ ಅಥವಾ ತಮ್ಮ ಜನಗಳಿಗಾಗಲಿ ತೊಂದರೆ ಅಥವಾ ಪ್ರಾಣಭಯವಿಲ್ಲದಂತೆ ನೋಡಿಕೊಳ್ಳಲು ತಮ್ಮ ಕೈಯಲ್ಲಾದ ಮಟ್ಟಿಗೆ ಶ್ರದ್ಧೆಯಿಂದ ಪ್ರಯತ್ನಪಡುತ್ತಿದ್ದರು. ಶತ್ರು ಪಕ್ಷದ ಕೂಲಿ ಸಿಪಾಯಿಗಳನ್ನು ಯುದ್ಧದಲ್ಲಿ ಯಾರನ್ನೂ ಕೊಲ್ಲದೆ, ಅವರನ್ನು ಸೆರೆಹಿಡಿದು, ಅವರನ್ನು ತೊಂದರೆ ಇಲ್ಲದೆ, ಪರಿಹಾರವಿಲ್ಲದೆ ಬಿಟ್ಟುಬಿಡುತ್ತಿದ್ದರು. ಮುತ್ತಿಗೆಯ ಕೂಲಿ ಸೈನ್ಯ ಪಟ್ಟಣದ ಹೊರಗೆ ಬೀಡುಬಿಟ್ಟಾಗ ಪಟ್ಟಣದ ಕೂಲಿ ಸೈನಿಕರ ಮೇಲೆ ಏಕಾಏಕಿ ಗುಂಡು ಹಾರಿಸಿ ಧಾಳಿ ಮಾಡುವ ಒರಟುತನಕ್ಕೆ ಹೋಗುತ್ತಿರಲಿಲ್ಲ; ಪಟ್ಟಣದಲ್ಲಿನ ಕೂಲಿ ಸಿಪಾಯಿಗಳು ಹೊರಗಿನ ಶತ್ರು ಪಾಳೆಯದ ಮೇಲೆ ಕುತಂತ್ರದಿಂದ ಥಟ್ಟನೆ ಬೀಳುತ್ತಿರಲಿಲ್ಲ. ಮುತ್ತಿದವರೂ ಕೂಡ ಅವೇಳೆಯಲ್ಲಿ ಶತ್ರುಗಳ ಮೇಲೆ ಆಕ್ರಮಣವನ್ನು ಮಾಡುತ್ತಿರಲಿಲ್ಲ; ಅಲ್ಲದೆ ಚಳಿಗಾಲದಲ್ಲಿ ಅವರ ಆಹಾರ ಸರಬರಾಯಿಯನ್ನು ತಡೆಯುತ್ತಿರಲಿಲ್ಲ. ಇವುಗಳೆಲ್ಲಾ ಸೈನ್ಯದ ಆಗಿನ ಅಧಿಕಾರಿಗಳ ಅಲಕ್ಷ್ಯದಿಂದ ನಡೆಯುತ್ತಿದ್ದವೆಂದು ಹೇಳಲಾಗುವುದಿಲ್ಲ. ಇವು ಅವರ ಶಿಸ್ತಿನ, ಅವರ ಕಸಬಿನ ಧರ್ಮವೆಂದು ಅಂಗೀಕರಿಸಲ್ಪಟ್ಟಿತ್ತು. ಹೊಟ್ಟೆಪಾಡಿಗಾಗಿ ಬಂದ ಬಡ ಸಿಪಾಯಿಗಳನ್ನು ಕಷ್ಟ ಮತ್ತು ಅಪಾಯದಿಂದ ತಪ್ಪಿಸುವ ಸದುದ್ದೇಶದಿಂದ ಈ ಧರ್ಮ ನಿರ್ಮಿತವಾದದ್ದು. ಈ ಧರ್ಮಯೋಧರು ಇಟಲಿಯನ್ನು ಗುಲಾಮಗಿರಿಗೆ ತಳ್ಳಿ ಎಲ್ಲರೂ ಧಿಕ್ಕರಿಸುವಂತೆ ಮಾಡಿದ್ದಾರೆ.

ಹನ್ನೆರಡನೆಯ ಅಧ್ಯಾಯ

ವಿದೇಶೀಯ ಬೆಂಬಲ, ಕೂಲಿ ಸಿಪಾಯಿಗಳು ಮತ್ತು ದೇಶೀಯ ದಳಗಳನ್ನು ಕುರಿತು

ದೊರೆಯು ತನ್ನ ಸಹಾಯಕ್ಕೋ ರಕ್ಷಣೆಗೋ ಬಲವಂತನಾದ ವಿದೇಶೀಯ ಪ್ರಭುವನ್ನು ಕರೆದಾಗ ಬರುವ ವಿದೇಶೀಯ ಸೈನ್ಯದ ಒತ್ತಾಸೆಯನ್ನು ವಿದೇಶೀಯ ಬೆಂಬಲವೆನ್ನುತ್ತೇನೆ. ಇದು ಕೇವಲ ಅಪ್ರಯೋಜಕವಾದ ಬೆಂಬಲ. ಇದರ ದೋಷಗಳು ಇತ್ತೀಚಿನ ಚರಿತ್ರೆಯಲ್ಲಿ ಪೋಪ್ ಜೂಲಿಯಸನು ತನ್ನ ಫೆರಾರ (Ferrara) ಮೇಲಿನ ದಂಡಯಾತ್ರೆಯ ಸಹಾಯಕ್ಕಾಗಿ ಸ್ಪೆಯಿನ್ ದೊರೆಯಾದ ಫೆರಾಂಡ (Ferrand) ನನ್ನು ಬರಮಾಡಿಕೊಂಡಾಗ ಸಂಭವಿಸಿದ ಸಂಗತಿಗಳಿಂದ ಚೆನ್ನಾಗಿ ಮನದಟ್ಟಾಗುತ್ತದೆ. ಪೋಪ್ ಜೂಲಿಯಸನು ತನಗೆ ತನ್ನ ಕೂಲಿ ಸಿಪಾಯಿಗಳ ಸಂಬಂಧದಿಂದ ಭಂಗದ ಅನುಭವವಾದ ಮೇಲೆ ಸ್ಪೆಯಿನ್ ದೊರೆಯನ್ನು ಸೈನ್ಯಸಮೇತ ತನ್ನ ಸಹಾಯಕ್ಕೆ ಬರಬೇಕೆಂದು ಕೇಳಿಕೊಂಡನು. ವಿದೇಶದಿಂದ ಬರುವ ಸೈನ್ಯಗಳ ಜನ ಸ್ವಪ್ರಯೋಜನವನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ. ಆದರೆ ಅವರನ್ನು ಕರೆದವನು ಸಂಕಟವನ್ನು ಅನುಭವಿಸುವುದೇನೋ ಖಂಡಿತ. ಸೋತರೆ ಸೋಲಿನ ನಷ್ಟವೆಲ್ಲಾ ಅವರು ಇವನ ತಲೆಯಮೇಲೆ ಹೊರಿಸುತ್ತಾರೆ; ಗೆದ್ದರೆ ಅವನು ಅವರ ಶರಣಾಗತಿಯಲ್ಲಿ ಇರಬೇಕಾಗುತ್ತದೆ. ಇದರ ನಿದರ್ಶನಗಳು ಪುರಾತನ ಇತಿಹಾಸಗಳಲ್ಲಿ ತುಂಬಿವೆ. ಆದರೂ ಪೋಪ್ ಹನ್ನೊಂದನೆಯ ಜೂಲಿಯಸನ ಫೆರಾರ ಮೇಲಿನ ಅವಿವೇಕ ಮತ್ತು ದುಡುಕು ದಂಡಯಾತ್ರೆ

ಇನ್ನೂ ನಮ್ಮೆಲ್ಲರ ನೆನಪಿನಲ್ಲಿರುವುದರಿಂದ ಅದನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ. ಈತನು ಬುದ್ಧಿಇಲ್ಲದೆ ತನ್ನ ಸರ್ವಸ್ವವನ್ನೂ ಪರದೇಶೀಯರಿಗೆ ವಶಮಾಡಿದಾಗ್ಯೂ ಅವನ ಅದೃಷ್ಟವಶಾತ್ ಒಂದು ಆಕಸ್ಮಿಕ ಸಂಭವದಿಂದ ಅವನ ಅವಿವೇಕಕ್ಕೆ ಆಗಬೇಕಾಗಿದ್ದ ಪರಿಣಾಮ ಅವನಿಗೆ ತಪ್ಪಿತು. ಅವನ ವಿದೇಶೀಯ ಬೆಂಬಲಿಗರು ರ್‍ಯಾವೆನ್ನಾ (Ravenna) ಕದನದಲ್ಲಿ ಸೋತು ಛಿದ್ರವಾದರು. ಕದನದಲ್ಲಿ ಸೋಲಿಸಿದವರನ್ನು ಸ್ವಿಸ್ಸರು ಅನಿರೀಕ್ಷಿತರಾಗಿ ಬಂದು ಹೊಡೆದಟ್ಟಿದರು. ಹೀಗೆ ಇವನ ವಿದೇಶೀಯ ಬೆಂಬಲ, ಇವನ ಶತ್ರುಗಳು ಉಭಯತ್ರರೂ ಸೋತು ಪರಾರಿಯಾದ್ದರಿಂದ ಇವನ ನಿರೀಕ್ಷಣೆಗೆ ಮೀರಿ ಇವನು ಬಂದಿಯಾಗದೆ ಉಳಿದುಕೊಂಡನು. ಇನ್ನೊಂದು ನಿದರ್ಶನ ಬೇಕಾದರೆ ಫ್ಲಾರೆಂಟೈನರ ಅನುಭವವನ್ನು ತೆಗೆದುಕೊಳ್ಳಬಹುದು. ಇವರು ಪೈಸಾ (Pisa) ನಗರವನ್ನು ತಮ್ಮದು ಮಾಡಿಕೊಳ್ಳಲು ಇಚ್ಛೆಪಟ್ಟು, ತಮ್ಮಲ್ಲಿ ಸ್ವಂತ ಸೈನ್ಯವಿಲ್ಲದ್ದರಿಂದ ಹತ್ತು ಸಾವಿರ ಫ್ರೆಂಚರನ್ನು ಕೂಲಿಗೆ ಗೊತ್ತು ಮಾಡಿಕೊಂಡರು. ಇವರ ಸಹವಾಸದಿಂದ ಫ್ಲಾರೆಂಟೈನರಿಗೆ ಹಿಂದೆ ಎಂದೂ ಅನುಭವಿಸದೇ ಇದ್ದ ಯಾತನೆಗಳೂ, ಅಪಾಯವೂ ಉಂಟಾದವು. ಇನ್ನೊಂದು ನಿದರ್ಶನ ಕಾನ್‌ಸ್ಟ್ಯಾಂಟಿನೋಪಲಿನ (ಕ್ರಿಸ್ತ) ಚಕ್ರವರ್ತಿಗಳದು. ಇವರು ತಮ್ಮ ನೆರೆಯವರ ಮೇಲಿನ ಸೇಡುತೀರಿಸಿಕೊಳ್ಳುವುದಕ್ಕಾಗಿ ಹತ್ತು ಸಾವಿರ ತುರುಕರ ವಿದೇಶೀಯ ಬೆಂಬಲವನ್ನು ಗ್ರೀಸಿನ ಒಳಕ್ಕೆ ನುಗ್ಗಿಸಿದರು. ಯುದ್ಧವೇನೋ ಮುಗಿಯಿತು. ಆದರೆ ಗ್ರೀಸಿನಲ್ಲಿ ಪ್ರವೇಶಮಾಡಿದ್ದ ತುರುಕರು ಅಲ್ಲೇ ಬೇರೂರಿ ನಿಂತು, ಆ ದೇಶದ ಕ್ರಿಶ್ಚಿಯನರನ್ನು ಗುಲಾಮರನ್ನಾಗಿ ಮಾಡಿಬಿಟ್ಟರು. ತನ್ನ ಏಳಿಗೆಯ ಮೇಲೆ ಅಪೇಕ್ಷೆಯಿಲ್ಲದವನು ಇಂತಹ ವಿದೇಶೀಯ ಬೆಂಬಲವನ್ನು ಉಪಯೋಗಿಸಬಹುದೇ ಹೊರತು ಮತ್ತೆ ಯಾರೂ ಇದರ ಗೋಜಿಗೆ ಹೋಗಬಾರದು. ಸಹಾಯಕ್ಕೆ ಬರುವ ವಿದೇಶೀಯ ಸೈನ್ಯವು ಕೂಲಿ ದಳಕ್ಕಿಂತಲೂ ನೂರು ಪಾಲು ಹೆಚ್ಚು ಅಪಾಯದ್ದು. ತಮ್ಮನ್ನು ಬರಮಾಡಿಕೊಂಡವರನ್ನು ಈ ವಿದೇಶೀಯ ಬೆಂಬಲಿಗರು ನಿಶ್ಚಿಂತೆಯಾಗಿ ಹಾಳುಮಾಡುತ್ತಾರೆ. ಕೂಲಿ ಸಿಪಾಯಿಗಳು ಅನೇಕ ದೇಶಗಳವರು, ಅನೇಕ ಮತಗಳವರು. ಆದರೆ ವಿದೇಶೀಯ ಬೆಂಬಲದವರು ಐಕಮತ್ಯವುಳ್ಳ ಏಕ ದೇಶೀಯರು, ಮತ್ತು ಒಬ್ಬನ ನೇತೃತ್ವದಲ್ಲಿ ನಡೆಯತಕ್ಕವರು. ಕೂಲಿಗಳಿಗೆ ನೀವು ಸರಿಯಾಗಿ ಸಂಬಳಕೊಟ್ಟು, ನಿಮ್ಮ ಸ್ವಂತ ನಾಯಕರ ಹತೋಟಿ

ಯಲ್ಲಿ ಇಟ್ಟಿದ್ದರೆ ಅವರು ಏಕಾಏಕಿ ತಿರುಗಿ ಬೀಳುವುದೂ ಇಲ್ಲ. ಅವರು ಒಂದು ವೇಳೆ ತಿರುಗಿಬಿದ್ದು ಅಕಸ್ಮಾತ್ ಜಯಶೀಲರಾದರೂ ತಮ್ಮ ಬೇರೆ ಬೇರೆ ದೇಶಗಳಿಗೆ ಚೆದರಿ ಹೊರಟುಹೋಗುತ್ತಾರಾದ್ದರಿಂದ ಹೆಚ್ಚು ಅಪಾಯ ಮಾಡಲು ಅವರಿಗೆ ಕಾಲವೇ ಆಗಲಿ, ಶಕ್ತಿಯೇ ಆಗಲಿ ಇರುವುದಿಲ್ಲ. ಕೂಲಿ ಸಿಪಾಯಿಗಳನ್ನಿಟ್ಟುಕೊಂಡವರು "ಇವರು ಎಲ್ಲಿ ಹೇಡಿಗಳು ಅಥವಾ ಸೋಮಾರಿಗಳು ಆಗಿರುತ್ತಾರೆಯೋ" ಎಂದು ಭಯಪಡಬೇಕಾದರೆ, ವಿದೇಶೀಯ ಸೈನ್ಯವನ್ನು ಸಹಾಯಕ್ಕೆ ಕರೆದವರು "ಇವರು ಎಲ್ಲಿ ಧೀರರೂ ಮತ್ತು ಸಾಹಸಿಗಳೂ ಆಗಿರುತ್ತಾರೆಯೋ" ಎಂದು ಭಯಪಡಬೇಕಾಗಿದೆ. ಬುದ್ಧಿವಂತ ಪ್ರಭುವು ಯಾವಾಗಲೂ ಇಂಥವರ ಸಹಾಯವನ್ನು ಬೇಡುವುದಿಲ್ಲ; ಜಯವೋ, ಅಪಜಯವೋ, ತನ್ನ ಸೈನ್ಯದಿಂದಲೇ ತಾನು ಪಡೆಯಬೇಕು, ಅನುಭವಿಸಬೇಕು. ಅವನು ಕಂಡವರ ಬಲದಿಂದ ಗೆಲ್ಲುವುದಕ್ಕಿಂತಲೂ ತನ್ನವರ ಸಂಗಡ ಸೋಲುವುದೇ ಮೇಲು ಎಂದು ಭಾವಿಸುತ್ತಾನೆ. ಕಂಡವರ ಜಯ ತನ್ನದು ಹೇಗಾದೀತು? ಉದಾಹರಣೆಗಾಗಿ ನಾನು ಸೀಸರ್ ಬೋರ್ಜಿಯನ ಚರಿತ್ರೆಯನ್ನು ಸಂಕೋಚವಿಲ್ಲದೆ ಮುಂದಿಡುತ್ತೇನೆ. ಬೋರ್ಜಿಯನು ಮೊದಲೇ ಸಂಪೂರ್ಣವಾಗಿ ಫ್ರೆಂಚರದಾಗಿದ್ದ ವಿದೇಶೀಯ ಬಲದೊಡನೆ ರೊಮಾನ್ಯ (Romagna) ವನ್ನು ಆಕ್ರಮಿಸಿದನು. ಈ ವಿದೇಶೀಯ ಬಲದಿಂದ ಇಮೋಲ (Imola) ಮತ್ತು ಫರ್ಲಿ (Furli) ಪಟ್ಟಣಗಳನ್ನು ಹಿಡಿದುಕೊಂಡನು. ಅನಂತರ ಇವರು ತಮ್ಮ ಸತ್ಯದಲ್ಲಿ ತತ್ತರಿಸುವುದನ್ನು ಕಂಡು ಶಂಕಿತನಾಗಿ ಇಂಥ ಮಿತ್ರರ ಇವರ ಸಹವಾಸಕ್ಕಿಂತಲೂ ಕೂಲಿ ದಳವೇ ಮೇಲೆಂದು ಅರ್ಸಿನಿ(Ursine) ಮತ್ತು ವಿಟೆಲ್ಲೀ (Vitelli) ಜನಗಳನ್ನು ತನ್ನಲ್ಲಿ ಸಂಬಳಕ್ಕೆ ಸೇರಿಸಿಕೊಂಡನು. ಇವರೂ ಕೂಡ ಅನಿಶ್ಚಿತ ಬುದ್ಧಿಯವರೂ, ಸತ್ಯಹೀನರೂ ಘಾತಕಿಗಳೂ ಎಂದು ತಿಳಿದು ಅವರನ್ನು ತ್ಯಜಿಸಿ, ಸಂಪೂರ್ಣವಾಗಿ ತನ್ನ ಪ್ರಜೆಗಳೇ ಇರುವ ಸೈನ್ಯವನ್ನು ರಚಿಸಿಕೊಂಡನು. ಈಗ ಈ ಮೂರು ತರದ ಸೈನ್ಯಗಳ ತಾರತಮ್ಯವನ್ನು ಗಣಿಸಬೇಕಾದರೆ, ಆಯಾ ಕಾಲಗಳಲ್ಲಿ ಡ್ಯೂಕನಿಗೆ ಇದ್ದ ಕೀರ್ತಿಯನ್ನು ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಅವನು ಯಾವಾಗ ತನ್ನ ಜನವನ್ನೇ ನಂಬಿ, ತನ್ನ ಜಂಘಾಬಲದ ಮೇಲೆ ನಿಲ್ಲಲಾರಂಭಿಸಿದನೋ, ಅಂದಿನಿಂದ ಅವನ ಕೀರ್ತಿ, ತೇಜಸ್ಸು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬಂದುವು.

ನನ್ನ ನೀತಿಗೆ ನಿದರ್ಶನಗಳಾದ ಉದಾಹರಣೆಗಳು ಬೇಕಾದಷ್ಟು ನಮ್ಮೆಲ್ಲರ ನೆನಪಿನಲ್ಲೂ ಇರತಕ್ಕವು ಇಟಲಿಯಲ್ಲೇ ಇರುವಾಗ ಅವುಗಳನ್ನು ಹೇಳದೇ ಇರಲು ನನಗೆ ಸಮಾಧಾನವಿಲ್ಲ. ಆದರೂ ನಾನು ಮೊದಲೇ ಹೆಸರೆತ್ತಿರುವ ಸೈರಾಕ್ಯೂಸ್ (Syracuse) ದೊರೆ ಹೀರೊ (Hiero) ವಿನ ಪ್ರಾಚೀನ ಉದಾಹರಣೆಯನ್ನು ತಿಳಿಸದೆ ಬಿಡಲಾರೆ. ಈತನು ಸೈರಾಕ್ಯೂಸಿನ ಸೈನ್ಯದ ಅಧಿಪತಿಯಾಗಿ ನೇಮಿಸಲ್ಪಟ್ಟ ಸ್ವಲ್ಪ ದಿನದಲ್ಲಿಯೇ ಅಲ್ಲಿನ ಕೂಲಿದಳವೂ ಮತ್ತು ಅದರ ನಾಯಕರುಗಳೂ ನಂಬಿಕೆಗೆ ಅರ್ಹರಲ್ಲವೆಂದು ಕಂಡುಕೊಂಡನು. ಅವರನ್ನು ಇಟ್ಟುಕೊಳ್ಳುವುದು ಅವಿವೇಕವಲ್ಲದೆ ಅವರನ್ನು ಕೆಲಸದಿಂದ ತೆಗೆದು ಹಾಕುವುದು ಸಹ ಅಪಾಯಕರವೆಂದು ಕಂಡು ಅವನು ಯುದ್ಧಗಳಲ್ಲಿ ಅವರೆಲ್ಲರೂ ಹತರಾಗುವಂತೆ ಅವರನ್ನು ಉಪಯೋಗಿಸಿದನು. ಆಮೇಲೆ ತನ್ನ ದೇಶದವರು ಮಾತ್ರ ಉಳಿದ ಸೈನ್ಯದಿಂದ ಯುದ್ಧವನ್ನು ಯಶಸ್ವಿಯಾಗಿ ನಡೆಸಿದನು. ಕ್ರಿಸ್ತ ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ ಇದಕ್ಕೆ ಸರಿಯಾಗಿ ಹೊಂದುವ ಕಥೆಯೊಂದು ದೊರೆಯುತ್ತದೆ. ಡೇವಿಡನು ಸಾಲ್ ದೊರೆಯ ಸಾನ್ನಿಧ್ಯದಲ್ಲಿ ಫಿಲಿಸ್ಟೀನರ ವೀರನಾಯಕನಾದ ಗೋಲಿಯಾತ (Goliath) ನೊಡನೆ ಕಾದಲು ಸಿದ್ಧತೆಯನ್ನು ತಿಳಿಸಿದಾಗ ದೊರೆಯು ಇವನ ಪ್ರೋತ್ಸಾಹಕ್ಕಾಗಿ ತನ್ನ ಕವಚವನ್ನು ತೊಡಿಸಿ, ಆಯುಧಗಳನ್ನು ಕೊಟ್ಟನು. ಆದರೆ ಡೇವಿಡನು ಅವುಗಳು ತನಗೆ ಸರಿಯಾಗಿ ಹೊಂದುವುದಿಲ್ಲವಾದ್ದರಿಂದ ಹೋರಾಟದಲ್ಲಿ ಅವುಗಳಿಂದ ತನಗೆ ಅಡ್ಡಿಯಾದೀತು, ಅದಕ್ಕೋಸ್ಕರ ತಾನು ತನಗೆ ಅನುಭವವಿರುವ ಕವಣೆ ಕತ್ತಿಗಳಿಂದ ಕಾಳಗ ಮಾಡುತ್ತೇನೆಂದು ಹೊರಟನು. ಇದರಿಂದ ಕಲಿಯಬಹುದಾದ ಪಾಠ ಇಷ್ಟೇ, ಕಾಳಗಕ್ಕೆ ಇತರರ ಆಯುಧಗಳು ನಮಗೆ ಕ್ಷೇಮಕರವೇ ಅಲ್ಲ; ಅವು ಬಹಳ ದೊಡ್ಡವೋ, ಬಹಳ ಚಿಕ್ಕವೋ ಅಥವಾ ಬಹಳ ಭಾರವೋ ಆಗಿರುವುದು ಖಂಡಿತ.

ಫ್ರಾನ್ಸಿನ ಹನ್ನೊಂದನೆಯ ಲೂಯಿಯ ತಂದೆಯಾದ ಏಳನೆಯ ಚಾರ್ಲ್ಸನು ತನ್ನ ಶೌರ್ಯದಿಂದಲೂ, ಸುದೈವದಿಂದಲೂ ತನ್ನ ದೇಶವನ್ನು ಇಂಗ್ಲಿಷರ ಕೈಯಿಂದ ಬಿಡಿಸಿಕೊಂಡಾಗ ತನ್ನ ದೇಶೀಯರ ದಂಡನ್ನು ರಚಿಸಿಕೊಳ್ಳುವುದರ ಶ್ರೇಷ್ಠತೆಯನ್ನು ಅರಿತು, ಕುದುರೆ ಮತ್ತು ಪದಾತಿ ಸಹಿತವಾದ ಒಂದು ಸ್ವದೇಶೀ ಸೈನ್ಯವನ್ನು ರಚಿಸಿಕೊಂಡಿದ್ದನು. ಇವನ

ನಂತರ ಇವನ ಮಗನಾದ ಲೂಯಿ ರಾಜನು ಫ್ರೆಂಚ್ ಪದಾತಿ ದಳವನ್ನು ನಿವೃತ್ತಿ ಮಾಡಿ ಅದರ ಸ್ಥಾನದಲ್ಲಿ ಸ್ವಿಸ್ಸರನ್ನು ಕೂಲಿ ಸಿಪಾಯಿಗಳಾಗಿ ನೇಮಿಸಿ ಕೊಂಡನು. ಈ ತಪ್ಪನ್ನು ತಿದ್ದಿಕೊಳ್ಳದೇ ಇದ್ದುದು ಇವನ ನಂತರ ಬಂದವರ ದೊಡ್ಡ ಸಮಸ್ಯೆಯಾಗಿದೆ. ಈಚೆಗೆ ಫ್ರಾನ್ಸ್ ರಾಜ್ಯದಲ್ಲಿ ಸಂಭವಿಸಿರುವ ಯಾವ ಯಾವ ಅನಾಹುತಗಳಿಂದ ಆ ರಾಜ್ಯಕ್ಕೆ ಕೆಟ್ಟಹೆಸರು ಬಂದಿದೆಯೋ ಅವಕ್ಕೆಲ್ಲಾ ಈ ತಪ್ಪೇ ಕಾರಣವೆಂದು ಹೇಳಬಹುದು. ಈ ಕೆಟ್ಟ ನೀತಿಯಿಂದ ಸ್ವಿಸ್ಸರ ಶೌರ್ಯದ ಖ್ಯಾತಿ ಹೆಚ್ಚಾಗಿ, ಲೂಯಿಯು ತನ್ನ ದೇಶದ ಜನರ ಖ್ಯಾತಿಗೆ ಕುಂದು ತಂದನು. ಅದೂ ಅಲ್ಲದೆ ತನ್ನ ದೇಶದವರಾದ ಕುದುರೆ ಪಡೆಯು ದೇಶೀಯ ಪದಾತಿಯ ಸಹಕಾರವಿಲ್ಲದೆ, ವಿದೇಶೀಯ ಸ್ವಿಸ್ ಪದಾತಿಯ ಸಹಾಯದಿಂದಲೇ ಯುದ್ಧಮಾಡುವ ಅಭ್ಯಾಸಕ್ಕೆ ಬಿದ್ದು, ಆ ಸಹಾಯವಿಲ್ಲದೆ ತಾವು ಯಾವ ಸಾಹಸವನ್ನೂ ಮಾಡಲಾರೆವೆಂಬ ದುರ್ಮಾನಕ್ಕೆ ಈಡಾದರು. ಈಗ ಫ್ರೆಂಚ್ ಸೈನ್ಯವು ಮಿಶ್ರ ಅಂದರೆ ಕೂಲಿ ಸಿಪಾಯಿಗಳು ಮತ್ತು ಸ್ವದೇಶೀ ಸೈನಿಕರು ಸಹಾ ಉಳ್ಳದ್ದಾಗಿದೆ. ಇದು ಬರೀ ಕೂಲಿ ದಳಕ್ಕಿಂತ ಉತ್ತಮವಾದುದು. ವಿದೇಶೀ ಬೆಂಬಲಕ್ಕಿಂತ ಬಹಳ ಉತ್ತಮವೆಂದು ಹೇಳಬೇಕಾಗಿಯೇ ಇಲ್ಲ. ಆದರೆ ಸಂಪೂರ್ಣವಾಗಿ ಫ್ರೆಂಚ್ ದಳವೆಲ್ಲಾ ಫ್ರೆಂಚ್ ದೇಶೀಯವೇ ಆಗಿದ್ದರೆ ಸರ್ವೋತ್ಕೃಷ್ಟವಾಗಿರುತ್ತಿತ್ತು. ಚಾರ್ಲ್ಸ್ ದೊರೆಯು ಏರ್ಪಾಡನ್ನೇ ಅವಶ್ಯವಾದಂತೆ ಕ್ರಮೇಣ ಸುಧಾರಿಸಿ ಜಾರಿಯಲ್ಲಿಟ್ಟಿದ್ದರೆ ಫ್ರಾನ್ಸ್ ಅಜೇಯವಾಗಿರುತ್ತಿತ್ತು. ಪ್ರಾರಂಭದಲ್ಲಿ ಅನುಕೂಲವೆಂದು ಕಂಡರೂ ನಿಜವಾಗಿ ಉಗ್ರಜ್ವರದಂತೆ ಗುಪ್ತವಿಷಯವನ್ನು ಧರಿಸಿರುವ ಅನೇಕ ಕಾರ್ಯಗಳನ್ನು ಮನುಷ್ಯನು ಅವಿವೇಕದಿಂದ ಪ್ರಾರಂಭ ಮಾಡುತ್ತಾನೆ. ದುರಂತ ತಲೆಯ ಮೇಲೆ ಬೀಳುವ ವರೆಗೂ ಸುಮ್ಮನಿರದೆ ತನ್ನ ಮುನ್ನೋಟ ಮತ್ತು ಮೇಧಾ ಶಕ್ತಿಯಿಂದ ಅದು ಬಾರದಂತೆ ಜಾಗ್ರತನಾಗಿ ಕ್ರಮ ಕೈಗೊಳ್ಳದಿದ್ದರೆ ರಾಜನಾದವನು ನೀತಿಜ್ಞ ರಾಜನೆನ್ನಿಸಿಕೊಳ್ಳಲಾರ. ಪ್ರಾಜ್ಞನಾದ ರಾಜನು ಇರುವುದು ದೇಶಕ್ಕೆ ಭಗವಂತನ ವಿಶೇಷ ಅನುಗ್ರಹವೆಂಬುದು ಸತ್ಯವಾದ ಮಾತು. ರೋಮನ್ ಚಕ್ರಾಧಿಪತ್ಯ ನಾಶವಾಗುವುದಕ್ಕೆ ಮೂಲಕಾರಣ ಯಾವುದೆಂದು ವಿಚಾರಿಸಿದರೆ ರೋಮನರು ಗಾಥ (Goth) ರನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡುದೇ ಎಂದು ಕಂಡು ಬರುತ್ತದೆ. ಇದರಿಂದ ರೋಮನರ ಸ್ವಾಭಾವಿಕ ಪೌರುಷವು ಸ್ರವಿಸಿಹೋಗಿ

ಈ ಗಾಥರಲ್ಲಿ ತುಂಬಿ, ರೋಮನರು ದುರ್ಬಲರೂ, ಉತ್ಸಾಹ ಹೀನರೂ ಆದರು. ಇದರಿಂದ ತಿಳಿಯ ಬೇಕಾದ ನೀತಿ ಏನೆಂದರೆ, ತನ್ನ ಸ್ವಂತದ್ದೆಂದು ಹೇಳಬಹುದಾದ ಸೈನ್ಯವಿಲ್ಲದೆ ಯಾವ ದೊರೆಯೂ ತಾನು ಸ್ವಸ್ಥನಾಗಿದ್ದೇನೆಂದು ತಿಳಿಯಕೂಡದು. ಅವನ ಪದವಿಯು ಬರೀ ಅದೃಷ್ಟವಶವಾದದ್ದು; ತನ್ನ ಬಲದ ಮೇಲೆ ನೆಲಸಿರತಕ್ಕದ್ದಲ್ಲದ್ದರಿಂದ ಆಪತ್ಕಾಲದಲ್ಲಿ ನಿಲ್ಲತಕ್ಕದ್ದಲ್ಲ. ಸ್ವಶಕ್ತಿಯ ತಳಹದಿ ಇಲ್ಲದೆ ಹೆಸರು ಮಾತ್ರವಾದ ಅಧಿಕಾರದಷ್ಟು ದುರ್ಬಲವಾದ್ದು, ಅಸ್ಥಿರವಾದದ್ದು ಮತ್ತೆ ಯಾವುದೂ ಇಲ್ಲವೆಂದು ನೀತಿಜ್ಞರು ಯಾವಾಗಲೂ ಅಭಿಪ್ರಾಯಪಟ್ಟಿದ್ದಾರೆ. ನಿಮ್ಮ ಶಕ್ತಿಯೆಂದರೆ ನಿಮ್ಮ ಪ್ರಜೆಗಳು, ನಿಮ್ಮ ನಾಗರಿಕರು, ನಿಮ್ಮ ಸೇವಕರು; ಇದಲ್ಲದವರೆಲ್ಲಾ ಚೆಂಗೂಲಿಗಳು ಅಥವಾ ಸ್ವಪ್ರಯೋಜನಕ್ಕೋಸ್ಕರ ಬಂದಿರುವ ವಿದೇಶೀಯರು. ಈ ನಮ್ಮ ನೈಜ ಶಕ್ತಿಯೆಂಬ ನಮ್ಮವರನ್ನು ಯಾವ ರೀತಿ ತರಬೇತುಮಾಡಿ ಶಿಸ್ತಿನಲ್ಲಿ ಇಟ್ಟಿರಬೇಕೆಂಬದನ್ನು ತಿಳಿಯಬೇಕಾಗಿದ್ದರೆ ಇದುವರೆಗೆ ನಾನು ಹೇಳಿರುವುದನ್ನು ಪರಿಶೀಲಿಸಬಹುದು. ಅದೂ ಅಲ್ಲದೆ ಮಹಾ ಅಲೆಕ್ಸಾಂಡರನ ತಂದೆಯಾದ ಫಿಲಿಪ್ಪನೂ ಇತರ ರಾಜರೂ, ಪ್ರಜಾಪ್ರಭುತ್ವದ ನಾಯಕರೂ, ಯಾವ ರೀತಿಯಲ್ಲಿ ಈ ಕಾರ್ಯವನ್ನು ಮಾಡುತ್ತಿದ್ದರು ಎಂಬುದನ್ನು ಪಠಿಸಿ, ಪರ್ಯಾಲೋಚನೆಗೆ ತರಬೇಕು.

ಹದಿಮೂರನೆಯ ಅಧ್ಯಾಯ

ಯೋಧರ ಸಂಬಂಧದಲ್ಲಿ ದೊರೆಯ ಕರ್ತವ್ಯ

ಆದ್ದರಿಂದ ನಾನು ಹೇಳುವುದು: ಆಳುವವನ ಪ್ರಧಾನ ವ್ಯಾಸಂಗ, ಮುಖ್ಯಧ್ಯೇಯ, ತಾನು ಯುದ್ಧದಲ್ಲಿ ಅಜೇಯನಾಗಿರುವುದು ಆಗಿರಬೇಕು. ಇದರ ಸಾಮಗ್ರಿ, ಇದಕ್ಕೆ ಸಿದ್ಧತೆ, ಇದರಲ್ಲಿ ನೈಪುಣ್ಯ, ಇವುಗಳಿಗಿಂತಲೂ ಯೋಗ್ಯವಾದ, ಶ್ರೇಷ್ಠವಾದ ಹವ್ಯಾಸವು ಆಳುವ ಅರಸನಿಗೆ ಮತ್ತೊಂದಿಲ್ಲ. ಇದೇ ಅವನಿಗೆ ಯೋಗ್ಯವಾದ ಕಸಬು. ಇದೊಂದಿದ್ದರೆ ಹುಟ್ಟು ರಾಜರುಗಳು ತಮ್ಮ ಪಿತ್ರಾರ್ಜಿತವಾದ ರಾಜ್ಯ ಸಂಪತ್ತನ್ನು ಕಾಪಾಡಿಕೊಳ್ಳಬಹುದಲ್ಲದೆ, ಇದರ ಸಹಾಯದಿಂದ ಸಮರ್ಥರಾದ ಸಾಮಾನ್ಯ ಜನರೂ ರಾಜಪದವಿಗೆ ಏರಬಹುದು. ಈ ಕಸಬಿಗೆ ಗಮನಕೊಡದೆ, ಆಯುಧಗಳ ಗೋಜಿಗೆ ಹೋಗದೆ, ಶರೀರ ಸುಖದಲ್ಲಿ ಲೋಲರಾದ ದೊರೆಗಳ ಗತಿ ಏನಾಯಿತೆಂಬು ದನ್ನು ನೋಡಿ. ಅವರು ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿ ತಮ್ಮ ರಾಜ್ಯದಿಂದ ಹೊರತಳ್ಳಿಸಿಕೊಂಡಿದ್ದಾರೆ. ದೊರೆಗೆ ಗೌರವ ಬರುವುದು ಸಂಗ್ರಾಮ ಸಾಮರ್ಥ್ಯದಿಂದ; ಅವನು ಲಾಘವಕ್ಕೆ ಬರುವುದು ಸಂಗ್ರಾಮ ಶಾಸ್ತ್ರದ ಔದಾಸೀನ್ಯ, ದುರ್ಬಲತೆಗಳಿಂದ. ನಮ್ಮ ಇತಿಹಾಸದಲ್ಲಿ ಫ್ರಾನ್ಸಿಸ್ಕೊ ಸ್ಫೋರ್ಜಾ (Froncesco Sforza) ಸಾಮಾನ್ಯ ಮನುಷ್ಯನಾಗಿ ಹುಟ್ಟಿದರೂ, ತನ್ನ ಸಂಗ್ರಾಮ ನೈಪುಣ್ಯ, ಅನುಭವಗಳ ದೆಸೆಯಿಂದ ಮಿಲಾನ್ ಅಧಿಪತಿ (Duke of Milan) ಆದನು; ಅವನ ಮಕ್ಕಳು ಯುದ್ಧದ ಶ್ರಮ ಮತ್ತು ಬಳಲಿಕೆಗಳನ್ನು ತಪ್ಪಿಸಿಕೊಳ್ಳಲು ಉದ್ಯುಕ್ತರಾಗಿ, ತಂದೆಯ ಪದವಿ

ಯಿಂದ ಜಾರಿ, ಸಾಮಾನ್ಯ ಮನುಷ್ಯರಾದರು. ಯುದ್ಧಶಾಸ್ತ್ರದಲ್ಲಿ ಅಜ್ಞರಾದವರು ಅಮಾನ್ಯರಾಗುತ್ತಾರೆ. ನಗೆಗೇಡಾಗುವುಕ್ಕಿಂತಲೂ ಹೆಚ್ಚು ದೂಷಿತವಾದ ಐಬು ಅರಸರಲ್ಲಿ ಮತ್ತೊಂದಿಲ್ಲ. ಧೀರ ಮತ್ತು ಹೇಡಿ, ದಕ್ಷ ಮತ್ತು ಪಡಪೋಸಿ, ಇವುಗಳಗಿಂತಲೂ ಗುಣಾವಗುಣಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಶೂರನಾದ ಮತ್ತು ಉದಾರನಾದ ಪುರುಷ, ದುರ್ಬಲನಾದ ಹೇಡಿಯ ತಾಬೆಯಲ್ಲಿ ಅಥವಾ ಅಧೀನತೆಯಲ್ಲಿ ಇರುವುದು ಯಾವ ನ್ಯಾಯ? ದಕ್ಷತೆಯಿಲ್ಲದ ಹೇಡಿ ಶೂರರ ಗುಂಪಿನಲ್ಲಿ ಇರಲಾರ. ಏಕೆಂದರೆ, ಅವನ ಮತ್ತು ಅವರ ಗುಣಗಳು ಪರಸ್ಪರ ವಿರುದ್ಧವಾಗಿರುತ್ತವೆ. ಅದೇ ಕಾರಣದಿಂದ ಯುದ್ಧದಲ್ಲಿ ಆಸಕ್ತಿ ಇಲ್ಲದ ಮತ್ತು ಶಿಸ್ತನ್ನೇ ಅರಿಯದ ದೊರೆಗೂ, ಅವನ ಸೈನ್ಯಕ್ಕೂ ಪರಸ್ಪರ ಪ್ರೀತಿಯೇ ಆಗಲಿ, ನಂಬಿಕೆಯೇ ಆಗಲಿ ಇರುವುದು ಅಸಾಧ್ಯ. ಅದಕ್ಕೋಸ್ಕರವೇ ದೊರೆಯು ಯಾವಾಗಲೂ ಯುದ್ಧ ವ್ಯಾಪಾರ ಮತ್ತು ಅದಕ್ಕೆ ಸಂಬಂಧಪಟ್ಟ ವ್ಯಾಯಾಮ ಅಭ್ಯಾಸಗಳ ಆಚರಣೆಯನ್ನು, ಯುದ್ಧವಿಲ್ಲದ ಕಾಲದಲ್ಲಿಯೂ ವಿರಾಮವಿಲ್ಲದೆ ಆಚರಿಸಬೇಕೆಂದು ನಾನು ಹೇಳುವುದು. ವಿರಾಮವಿರುವ ಶಾಂತಿಯ ಕಾಲದಲ್ಲೇ ಈ ಅಭ್ಯಾಸವನ್ನು ಕಾಯಾ ವಾಚಾ ಮನಸಾ ಹೆಚ್ಚು ಶ್ರದ್ಧೆಯಿಂದ ಆಚರಿಸಬೇಕು. ಕಾಯಾ ಆಚರಿಸುವುದು ಎಂದರೆ, ತನ್ನ ಸೈನ್ಯಗಳ ಕವಾಯತು ಮತ್ತು ಶಿಕ್ಷಣಗಳಲ್ಲಿ ತಾನು ಸ್ವತಃ ಭಾಗವಹಿಸುವುದಲ್ಲದೆ ತಾನೂ ಶಿಕಾರಿ ಮೊದಲಾದ ವ್ಯಾಯಾಮಗಳಿಂದ ತನ್ನ ಶರೀರವನ್ನು ಸಹಿಷ್ಣುವನ್ನಾಗಿ ಮಾಡಿಕೊಂಡು, ಆಯಾಸ ಹಸಿವು ಬಾಯಾರಿಕೆಗಳನ್ನು ತಡೆದುಕೊಳ್ಳುವ ಶಕ್ತಿಯನ್ನು ಪಡೆಯುವುದು. ಅದೂ ಅಲ್ಲದೆ, ಸೈನ್ಯದ ಅಭ್ಯಾಸಗಳಲ್ಲಿ ಭಾಗವಹಿಸುವುದರಿಂದ ದೊರೆಯಾದವನಿಗೆ ದೇಶದ ಭೂಲಕ್ಷಣಗಳು—ತೀರಗಳು, ನದಿಗಳು, ಬೆಟ್ಟಗುಡ್ಡಗಳು ಮೊದಲಾದ ತಪಸೀಲುಗಳು—ಚೆನ್ನಾಗಿ ಮನದಟ್ಟು ಆಗುತ್ತವೆ. ಈ ಜ್ಞಾನವು ದೇಶವನ್ನು ಶತ್ರುಗಳಿಂದ ಸಂರಕ್ಷಿಸುವುದಕ್ಕೆ ಆವಶ್ಯಕವಾದ ಸಲಕರಣೆ. ಅದೂ ಅಲ್ಲದೆ, ತನ್ನ ದೇಶಗಳ ವೈವಿಧ್ಯವನ್ನು ಚೆನ್ನಾಗಿ ಅರಿತವನಿಗೆ ಇತರ ದೇಶಗಳ ಬಗೆಯನ್ನು ತಿಳಿಯುವುದು ಕಷ್ಟವಾಗುವುದಿಲ್ಲ. ಭೂಮಿಯ ನಾನಾ ಬಗೆಯ ಸ್ವರೂಪಗಳನ್ನೂ ವೈಲಕ್ಷಣ್ಯಗಳನ್ನೂ ತಿಳಿಯದವನು ಸೇನಾಧಿಪತಿಯಾಗುವುದಕ್ಕೆ ಆವಶ್ಯಕವಾದ ಮುಖ್ಯ ತಿಳುವಳಿಕೆ ಇಲ್ಲದವನಾಗಿರುತ್ತಾನೆ. ಯಾವ ಪ್ರದೇಶದಲ್ಲಿ ಶತ್ರುಗಳನ್ನು ಎದುರಿಸಿ ಜಯಿಸಬೇಕು, ಎಲ್ಲಿ ತನ್ನ ಬಿಡಾರವನ್ನು ಸ್ಥಾಪಿಸ

ಬೇಕು, ಎಲ್ಲಿ ಪಡೆಯನ್ನು ನಡೆಸಬೇಕು, ಯಾವ ಕಡೆಯಿಂದ ಶತ್ರುವಿನ ಪಾಳೆಯವನ್ನು ಮುತ್ತಬೇಕು, ಎಂದು ನಿರ್ಣಯಿಸುವದಕ್ಕೆ ಬೇಕಾದ ಸ್ಥಳ ಜ್ಞಾನವಿಲ್ಲದವನು ಎಂಥಾ ಸೇನಾನಾಯಕನಾದಾನು? ಐತಿಹಾಸಿಕರು ಅಕಾಯಿಯ (Achaia) ದೊರೆಯಾದ ಫಿಲೊಪೋಮೆನಸ್ (Philopomenes) ಎಂಬವನ ಸ್ತೋತ್ರ ಪಾಠದಲ್ಲಿ ಈ ರೀತಿಯಾಗಿ ಅವನ ಮುಖ್ಯ ಗುಣವನ್ನು ವರ್ಣಿಸುತ್ತಾರೆ:

"ಶಾಂತಿಕಾಲದಲ್ಲಿ ಅವನು ಸಂಗ್ರಾಮ ನೀತಿಯ ಹೊರತು ಬೇರೆ ವ್ಯಾಸಂಗವನ್ನು ಇಟ್ಟುಕೊಂಡಿರಲಿಲ್ಲ. ಅನೇಕ ವೇಳೆ ತನ್ನ ಸ್ನೇಹಿತರ ಜೊತೆಗೂ, ಅಮಾತ್ಯರ ಜೊತೆಗೂ ಮಾತನಾಡುತ್ತಿದ್ದಾಗ ಏಕಾಏಕಿ ಹೀಗೆ ಹೇಳುವನು: 'ಇದೋ ನೋಡಿ, ಆ ಗುಡ್ಡದ ಮೇಲೆ ಶತ್ರು ಇದ್ದರೆ, ನಮ್ಮ ಸೈನ್ಯ ನಾವಿರುವ ಕಡೆ ಇದ್ದರೆ, ಯಾರಿಗೆ ಸ್ಥಳದ ಅನುಕೂಲ್ಯ ಜಾಸ್ತಿ? ಅವರ ಮೇಲೆ ನಾವು ಬೀಳಬೇಕಾದರೆ ಎತ್ತಕಡೆಯಿಂದ ಹೋಗಬೇಕು? ಅಥವಾ ನಾವು ಹಿಂಜರಿಯಬೇಕಾದರೆ ಯಾವುದು ಶ್ರೇಷ್ಠವಾದ ಮಾರ್ಗ? ಅಥವಾ ಅವರು ಹಿಂಜರಿದರೆ ನಾವು ಅವರನ್ನು ಹೇಗೆ ಬೆನ್ನು ಹತ್ತಬಹುದು?'"

"ಹೀಗೆಯೇ ಎಲ್ಲಾದರೂ ಪ್ರಯಾಣ ಮಾಡುತ್ತಿದ್ದರೂ ಅವನು ಸೈನ್ಯಕ್ಕೆ ಸಂಭವಿಸಬಹುದಾದ ಅಕಸ್ಮಾತ್ತುಗಳನ್ನು ಊಹಿಸಿ ಅವುಗಳ ನಿವಾರಣೆ ಹೇಗೆ ಎಂಬ ಸಮಸ್ಯೆಯನ್ನು ಅವನ ಜೊತೆಗಿದ್ದವರ ಸಂಗಡ ಚರ್ಚೆಮಾಡುವನು. ಸದಾಕಾಲ ಇದೇ ಪರಿಶ್ರಮದಿಂದ ಇವನು ಯುದ್ಧ ಶಾಸ್ತ್ರದಲ್ಲಿ ಪಾರಂಗತನಾಗಿ ಎಂಥಾ ಕಷ್ಟ ಸಂದರ್ಭ ಒದಗಿದಾಗ್ಯೂ ನಿವಾರಿಸಿಕೊಳ್ಳಲು ಶಕ್ತನಾದನು."

ಯುದ್ಧ ಶಾಸ್ತ್ರದಲ್ಲಿ "ಮನಸ್ಸಿನ ಶಿಕ್ಷಣ"ವೆಂದರೆ ರಾಜನಾದವನು ಇತಿಹಾಸವನ್ನು ಏಕಾಗ್ರ ಬುದ್ಧಿಯಿಂದ ಪರಿಶೀಲಿಸಿ, ಶ್ರೇಷ್ಠರಾದಂಥ ಚರಿತ್ರ ಪುರುಷರ ಆಚರಣೆಗಳನ್ನು ಮನನಮಾಡಿ, "ಅವರು ಯುದ್ಧಗಳಲ್ಲಿ ಯಾವ ಪ್ರಕಾರ ವರ್ತಿಸಿದರು? ಪಲಾನೆಯವರು ಜಯಶಾಲಿಗಳಾದದ್ದು ಯಾವ ಕಾರಣದಿಂದ? ಅವರ ಮಾರ್ಗವನ್ನೇ ನಾವು ಅನುಸರಿಸೋಣ," ಎಂದು ಚಿಂತಿಸಬೇಕು. ಅದೂ ಅಲ್ಲದೆ ತನ್ನ ವ್ಯಾಸಂಗದಲ್ಲಿ ಕಂಡುಬರಬಹುದಾದ ಒಬ್ಬ ಶ್ರೇಷ್ಠನಾಯಕನನ್ನು ತನ್ನ ಆದರ್ಶವಾಗಿ ಇಟ್ಟುಕೊಂಡು ಸದಾಕಾಲ ಅವನ ಆಚರಣೆಯ ಮೇಲೆ ತನ್ನದನ್ನೂ ರೂಪಿಸಿಕೊಳ್ಳಬೇಕು. ಹೀಗೆ

ಅಲೆಕ್ಸ್ಯಾಂಡರನು ಅಖಿಲಿಸ(Achilles)ನನ್ನೂ, ಸೀಸರನು ಅಲೆಕ್ಸ್ಯಾಂಡರನನ್ನೂ, ಸಿಪಿಯೋ (Scipio) ಕೈರಸನನ್ನೂ ತಮ್ಮ ಆದರ್ಶಪುರುಷರನ್ನಾಗಿ ಇಟ್ಟು ಕೊಂಡಿದ್ದರಂತೆ. ಜೆನಾಫನ್ (Zenaphn) ಬರೆದಿರುವ ಕೈರಸ್ ಜೀವನ ಚರಿತ್ರೆಯನ್ನು ಓದಿದರೆ ಸಿಪಿಯೋ ಶೌರ್‍ಯದಲ್ಲಿ, ವಿನಯದಲ್ಲಿ, ದಯೆಯಲ್ಲಿ, ಔದಾರ್‍ಯದಲ್ಲಿ ತನ್ನ ಗುರುವಿನಿಂದ ಎಷ್ಟು ಪ್ರಯೋಜನ ಪಡೆದನು ಎಂಬದು ಸ್ಪಷ್ಟವಾಗುತ್ತದೆ. ಆದ್ದರಿಂದ ಬುದ್ಧಿವಂತನಾದ ದೊರೆಯು ಯುದ್ಧವಿಲ್ಲದ ಕಾಲಗಳಲ್ಲಿಯೂ ಯುದ್ಧಶಾಸ್ತ್ರದಲ್ಲಿ ವಿರಾಮವಿಲ್ಲದೆ ನಿರತನಾಗಿರಬೇಕು. ಹೀಗಿದ್ದರೆ ತಾನೆ ಕಷ್ಟಕಾಲ ಒದಗಿದರೆ ಇವನು ಈ ಯೋಗದ ಫಲವನ್ನು ಅನುಭವಿಸಿ, ದುರ್ದೈವವನ್ನು ಎದುರಿಸಿ ಜಯಿಸಲು ಸಮರ್ಥನಾಗುತ್ತಾನೆ.

ಹದಿನಾಲ್ಕನೆಯ ಅಧ್ಯಾಯ

ಮನುಷ್ಯರನ್ನು, ಅದರಲ್ಲಿಯೂ ರಾಜ ಪುರುಷರನ್ನು ಸ್ತುತಿಗೆ ಅಥವಾ ನಿಂದೆಗೆ ಅರ್ಹರನ್ನಾಗಿ ಮಾಡುವ ಸಂಗತಿಗಳನ್ನು ಕುರಿತು

ಆಳುವವರು ತಮ್ಮ ಪ್ರಜೆಗಳ ಮತ್ತು ಮಿತ್ರರ ಸಂಗಡ ಯಾವರೀತಿ ವರ್ತಿಸ ಬೇಕೆಂಬುದನ್ನು ಈಗ ವಿಚಾರಮಾಡೋಣ. ಇದರ ವಿಷಯವಾಗಿ ಹಿಂದೆ ಅನೇಕರು ಬರೆದಿರುತ್ತಾರಾಗಿ ಈಗ ನಾನು ಬರೆಯುವುದು ಅಧಿಕ ಪ್ರಸಂಗವಾಗಿ ಕಾಣಬಹುದು. ಹಿಂದೆ ಬರೆದಿರುವವರ ಅಭಿಪ್ರಾಯವನ್ನು ನಾನು ಬಿಟ್ಟು ದೂರ ಹೋಗುವುದರಿಂದ ನಾನು ದುರಹಂಕಾರಿಯಾಗಿಯೂ ಕಾಣಬಹುದು. ಆದರೂ ನನ್ನ ಉದ್ದೇಶ ತಿಳುವಳಿಕಸ್ತನಾದ ಪ್ರಭುವಿಗೆ ಪ್ರಯೋಜನವನ್ನುಂಟುಮಾಡ ಬೇಕೆಂಬುದಾದ್ದರಿಂದ, ನಾನು ಈಗಿನ ಪರಿಸ್ಥಿತಿಯ ವಾಸ್ತವ್ಯವನ್ನು ಪರಿಗಣಿಸಿ, ಯಾವ ವರ್ತನೆ ಕ್ಷೇಮಕರ, ಯಾವುದು ಕೇಡು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅನೇಕರು ಇರತಕ್ಕ ಸ್ಥಿತಿಯನ್ನು ಬಿಟ್ಟು, ತಮ್ಮ ಕೋರಿಕೆಯಲ್ಲಿ ಇರಬೇಕೆಂದು ತೋರಿದ ಸ್ಥಿತಿ, ಸನ್ನಿವೇಶಗಳನ್ನು ಕಲ್ಪಿಸಿಕೊಂಡು, ಮೃಗ ತೃಷ್ಣಿಕಾ ರಾಜ್ಯಗಳನ್ನು ರಚಿಸಿಕೊಂಡು, ಅವುಗಳಿಗೆ ಅನುಗುಣವಾದ ನೀತಿಗಳನ್ನು ಪ್ರತಿಪಾದಿಸುತ್ತಾರೆ. ಈ ಮಿಥ್ಯಾ ಸನ್ನಿವೇಶದಲ್ಲಿ ಯುಕ್ತವಾಗಿರಬಹುದಾದ ನೀತಿಯನ್ನು ಅದರಿಂದ ಸಂಪೂರ್ಣವಾಗಿ ಭಿನ್ನವಾದ ನಿಜದ ಪರಿಸ್ಥಿತಿಯಲ್ಲಿ ಆಚರಿಸಿದರೆ ಅನಾಹುತವೇ ಪರಿಣಾಮವಾದೀತು. ಆದ್ದರಿಂದ ಶ್ರೇಯೋಭಿಲಾಷಿಯಾದ ರಾಜನು ತನ್ನ ಸನ್ನಿವೇಶವನ್ನು,

ತನ್ನ ಸ್ಥಾನ, ಸಾಮರ್ಥ್ಯ ಮೊದಲಾದವುಗಳನ್ನು ಚೆನ್ನಾಗಿ ಪರಿಗಣಿಸಿ, ಅವು ಗಳಿಗೆ ಅನುಗುಣವಾಗಿ ನಡೆಯಬೇಕು. ಆದುದರಿಂದ ಊಹಾಪೋಹಗಳನ್ನು ಬಿಟ್ಟು, ವಾಸ್ತವವನ್ನೇ ಮೂಲ ಮಂತ್ರವನ್ನಾಗಿಟ್ಟುಕೊಂಡು ಈ ವಿಚಾರವನ್ನು ಪ್ರಾರಂಭಮಾಡೋಣ. ಪ್ರತಿಯೊಬ್ಬ ಮನುಷ್ಯನೂ ಯಾವುದಾದರೂ ಗುಣ ಗಳಿಗಾಗಲಿ ಅವಗುಣಗಳಿಗಾಗಲಿ ಸ್ಥಾನವಾಗಿ ಅವುಗಳಿಂದ ಕೀರ್ತಿಗೋ ಧಿಕ್ಕಾರಕ್ಕೋ ಪಾತ್ರನಾಗುತ್ತಾನೆ. ರಾಜನೂ ಮನುಷ್ಯನೇ; ಇತರ ಮನುಷ್ಯರಿಗಿಂತಲೂ ಸ್ಥಾನಮಾನಗಳಿಂದ ಅಧಿಕನೆಂದು ಹೇಳಬಹುದು; ಅಷ್ಟೆ. ಆದುದರಿಂದಲೇ ಕೆಲವು ರಾಜರನ್ನು ಉದಾರರೆಂದೂ, ಇನ್ನು ಕೆಲವರನ್ನು ಕೃಪಣರೆಂದೂ, ಹಾಗೆಯೇ ಇತರರನ್ನು ಬಗೆ ಬಗೆಯಾಗಿ ಧರ್ಮಿಷ್ಠ, ಖಳ, ದಯಾಳು, ನಿರ್ಘೃಣ, ಧೀರ, ಹೇಡಿ, ಸತ್ಯವಂತ, ಮೋಸಗಾರ, ಸುಸಂಸ್ಕೃತ, ಪಾಮರ, ಶೀಲವಂತ, ಪೋಕರಿ—ಇವೇ ಮೊದಲಾದ ವಿಶೇಷಣಗಳಿಂದ ವರ್ಣಿಸುತ್ತಾರೆ. ದೊರೆಯಾದ ಪುರುಷನಿಗೆ ಸಕಲ ಸದ್ಗುಣಗಳೂ ಇರ ಬೇಕು; ದುರ್ಗುಣಗಳು ಯಾವುವೂ ಇರಬಾರದು ಎಂಬುದನ್ನು ಯಾರೂ ಅಲ್ಲವೆನ್ನುವುದಿಲ್ಲ. ಆದರೆ ಮನುಷ್ಯ ಸ್ವಭಾವ ಕಲ್ಯಾಣಗುಣ ಪರಿಪೂರ್ಣ ವಲ್ಲ; ಅನೇಕವೇಳೆ ಒಬ್ಬನಲ್ಲಿರಬಹುದಾದ ಶ್ರೇಷ್ಠ ಗುಣಗಳನ್ನೂ ಕೂಡ ಸನ್ನಿವೇಶ ನಿಮಿತ್ತದಿಂದ ಆಚರಣೆಯಲ್ಲಿ ತೋರಿಸುವುದು ಅಸಾಧ್ಯವಾಗುತ್ತದೆ. ಆದರೆ ರಾಜನು ದುರ್ಗುಣಗಳ ದೂರನ್ನು ಹೇಗೆ ತಪ್ಪಿಸಿಕೊಳ್ಳಬೇಕು; ಕೆಟ್ಟ ಸ್ವಭಾವವನ್ನು ಹೇಗೆ ಮುಚ್ಚಿಕೊಳ್ಳಬೇಕು; ತನ್ನ ಆಳ್ವಿಕೆಗೆ ಅಪಾಯವನ್ನು ತರಬಹುದಾದ ಅಸಹ್ಯವಾದ ಕೆಟ್ಟದಾದ ಬುದ್ಧಿಯ ಅಪಖ್ಯಾತಿಯನ್ನು ಹೇಗೆ ತಡೆಗಟ್ಟಿ ದೂರ ಮಾಡಬಹುದು—ಈ ಮುಖ್ಯ ವಿವೇಚನೆಯನ್ನು ಚೆನ್ನಾಗಿ ಕಲಿತಿರಬೇಕು. ರಾಜ್ಯಕ್ಕೆ ಅಪಾಯ ತರತಕ್ಕವಲ್ಲವಾದರೂ, ಕೀರ್ತಿಗೆ ಕುಂದು ಮಾಡತಕ್ಕವಾದರೆ, ಅವುಗಳನ್ನೂ ದೂರ ಮಾಡಬೇಕು. ಆದರೆ ಒಂದು ಅಂಶವನ್ನು ಚೆನ್ನಾಗಿ ಗಮನಿಸಬೇಕು—ಅಪಕೀರ್ತಿ ಅಥವಾ ನಿಂದೆ ಬರುತ್ತದೆಂಬ ಶಂಕೆಯಿಂದಲೆ ರಾಜ್ಯದ ರಕ್ಷಣೆಗೆ, ಅಥವಾ ಕ್ಷೇಮಕ್ಕೆ ಆವಶ್ಯಕ ವಾದ ಕಾರ್ಯಗಳನ್ನು ಮಾತ್ರ ಎಂದಿಗೂ ಬಿಡಬಾರದು. ರಾಜನೀತಿಯನ್ನು ಚೆನ್ನಾಗಿ ಪರಿಶೀಲಿಸಿದರೆ, ಮೊದಲು ನೋಟಕ್ಕೆ ಬಹಳ ಒಳ್ಳೆಯದೆಂದು ತೋರುವ ಕಾರ್ಯವೂ ಕೂಡ ಅಕಾಲದಲ್ಲಿ ಆಚರಿಸಿದರೆ ಸರ್ವ ನಾಶಕ್ಕೆ ಹೇತು ವಾಗಬಹುದು. ಇದಕ್ಕೆ ವಿಪರೀತವಾಗಿ ಮೇಲೆ ನೋಡಿದರೆ ದುಷ್ಟವೆಂದು

ಕಾಣುವ ಆಚರಣೆಯೂ ಫಲದಲ್ಲಿ ರಾಜನ ಶ್ರೇಯಸ್ಸಿಗೂ, ಶಾಂತಿಗೂ ಕಾರಣವಾಗಬಹುದು.

ಹದಿನೈದನೆಯ ಅಧ್ಯಾಯ

ಔದಾರ್ಯ ಮತ್ತು ಜಿಪುಣತನ

ಪ್ರಾರಂಭದಲ್ಲಿ ಇಷ್ಟು ಮಟ್ಟಿಗೆ ಹೇಳುತ್ತೇನೆ—ಉದಾರನೆಂದು ಪರಿಗಣಿಸಲ್ಪಡುವುದು ಪ್ರಯೋಜನಕರ; ಆದರೆ ಜನಗಳಲ್ಲಿ ನಿಮ್ಮ ದರ್ಪವನ್ನು ಹೆಚ್ಚಿಸದೆ ಇರುವಂಥ ಕೊಡುಗೈತನವು ನಿಮಗೆ ಕೆಟ್ಟದನ್ನೇ ಮಾಡುತ್ತದೆ. ಪುಣ್ಯಾಪೇಕ್ಷೆಯಿಂದ ಕೊಡುವ ದಾನವು ರಹಸ್ಯವಾಗಿ ಕೊಡಲ್ಪಡಬೇಕಾದ್ದರಿಂದ ಅದು ಪ್ರಕಾಶಕ್ಕೆ ಬರುವುದಿಲ್ಲ. ಅದರಿಂದ ಜಿಪುಣತನದ ಆಪಾದನೆ ನಿವಾರಣೆಯಾಗುವುದಿಲ್ಲ. ಜನ ಸಮುದಾಯದಲ್ಲಿ ಧಾರಾಳನೆಂಬ ಖ್ಯಾತಿಯನ್ನು ಸಂಪಾದಿಸಬೇಕಾದರೆ ಆಡಂಬರದ ಭೋಗ ವಸ್ತುಗಳನ್ನೂ, ಖರ್ಚುಗಳನ್ನೂ ಬಿಡುವುದಕ್ಕಾಗುವುದಿಲ್ಲ. ಇದರಲ್ಲಿ ಆಸಕ್ತಿಯುಳ್ಳ ದೊರೆಯು ತನ್ನ ವರಮಾನವನ್ನೆಲ್ಲಾ ವ್ಯಯಮಾಡಿಕೊಂಡು, ಅದೂ ಸಾಲದೆ ತನ್ನ ಕೀರ್ತಿಯನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ತನ್ನ ಪ್ರಜೆಗಳಿಂದ ಸಾಧ್ಯವಾದಷ್ಟು ದ್ರವ್ಯವನ್ನು ಹೀರಿಕೊಂಡು, ಸಾಧ್ಯವಾದ ಎಲ್ಲಾ ರೀತಿಗಳಲ್ಲಿಯೂ ಹಣವನ್ನು ದೋಚಿಕೊಳ್ಳಬೇಕಾಗುತ್ತದೆ. ಇದರಿಂದ ಪ್ರಜೆಗಳ ದ್ವೇಷ ಸಂಪಾದನೆಯಾಗುವುದು ಖಂಡಿತ. ಅದೂ ಅಲ್ಲದೆ, ಹಣವೆಲ್ಲಾ ವೆಚ್ಚವಾಗಿ ರಿಕ್ತದೆಶೆ ಬಂದಾಗ ಇವನು ಸರ್ವರ ಧಿಕ್ಕಾರಕ್ಕೆ ಗುರಿಯಾಗುವುದು ನಿಶ್ಚಯ. ಇವನ ದಾತೃತ್ವದಿಂದ ಕೆಲವರಿಗೆ ಪ್ರಯೋಜನವುಂಟಾಗಬಹುದಾದರೂ ಇವನ ತೆರಿಗೆಗಳಿಂದ ಅನೇಕರಿಗೆ ಅಸಮಾಧಾನವೂ, ಕಷ್ಟವೂ ಆಗುತ್ತವೆ. ಈ ಅಸಮಾಧಾನದಿಂದ ಅಪಾಯ ಒದಗಿದ ಕೂಡಲೆ ಇವನು ಅಸಹಾಯನಾಗಿ

ನಾಶವಾಗುವ ಸಂಭವವುಂಟು. ಅಥವಾ ಜನರ ಜುಗುಪ್ಸೆಗೆ ಪಾತ್ರನಾದ ನೆಂದು ತಿಳಿದು ಇವನು ಇದರ ನಿವಾರಣೆಗಾಗಿ ಔದಾರ್ಯಕ್ಕೆ ವಿಪರೀತವಾದ ಹಿಡತದ ಮಾರ್ಗಕ್ಕೆ ತಿರುಗಿದನೆಂದರೆ ಇವನು ಎಂಥಾ ಜಿಪುಣ ಎಂಬ ಜುಗುಪ್ಸೆಗೆ ಗುರಿಯಾಗುತ್ತಾನೆ. ಪರಿಣಾಮದಲ್ಲಿ ಪ್ರಭುವು ತನಗೆ ತೊಂದರೆಯಿಲ್ಲದೆ ಮತ್ತು ಜನಗಳಿಗೆಲ್ಲಾ ಪ್ರಕಾಶವಾಗುವಂತೆ ಔದಾರ್ಯವನ್ನು ಆಚರಿಸುವುದಕ್ಕೆ ಆಗದಿದ್ದರೆ, ಅವನು ಬುದ್ಧಿವಂತನಾದರೆ ಜನಗಳು ತನ್ನನ್ನು ಲೋಭಿಯೆಂದು ಕರೆಯುತ್ತಾರೆಂಬುದನ್ನು ಲಕ್ಷಿಸಕೂಡದು. ಕಾಲಕ್ರಮೇಣ, ಮಿತವ್ಯಯದಿಂದ ಅವನು ರಾಜ್ಯದ ಬೊಕ್ಕಸವನ್ನು ತುಂಬಿಸಿ, ತನ್ನ ರಾಜ್ಯದ ಬಲವನ್ನು ಅಭಿವೃದ್ಧಿಗೆ ತಂದಿದ್ದಾನೆಂಬುದು ಜನಗಳಿಗೆ ಗೊತ್ತಾದ ಮೇಲೆ ಅವರೇ ಇವನು ಎಂಥಾ ಉದಾರ ದೀರ್ಘದರ್ಶಿಯೆಂದು ಸ್ತೋತ್ರ ಮಾಡುತ್ತಾರೆ. ಇವನಿಂದ ಸುಲಿಗೆಯ ಹಿಂಸೆಯನ್ನು ಅನುಭವಿಸದೇ ಸುಖವಾಗಿರುವ ಅಸಂಖ್ಯಾತರು ಇವನು ಎಂಥ ಉದಾತ್ತ ದಣಿ ಎಂದು ಹೊಗಳುತ್ತಾರೆ. ಇವನಿಂದ ಪ್ರಯೋಜನಕ್ಕಾಗಿ ಹಾತೊರೆಯುತ್ತಿದ್ದ ಅಲ್ಪ ಸಂಖ್ಯಾತರಿಗೆ ಮಾತ್ರ ಇವನು ಜಿಪುಣನಾಗಿರುತ್ತಾನೆ.

ನಮ್ಮ ಕಾಲದಲ್ಲಿಯೇ, ಜಿಪುಣರೆನ್ನಿಸಿಕೊಂಡಿದ್ದವರಿಂದ ಮಾತ್ರವಲ್ಲದೆ ಬೇರೆಯವರಿಂದ ಮಹಾತ್ಕಾರ್ಯಗಳ ಸಾಧನೆಯಾಗಿರುವುದು ಯಾವುದೂ ಇಲ್ಲ. ಧಾರಾಳ ಅಟ್ಟಹಾಸದವರು ಯಾವಾಗಲೂ ಕೆಟ್ಟಿರುವುದನ್ನೇ ಕಾಣುತ್ತೇವೆ. ಹನ್ನೊಂದನೆಯ ಜೂಲಿಯಸನು ಪೋಪ್ ಆಗುವುದಕ್ಕೆ ಮುಂಚೆ ತನ್ನ ಔದಾರ್ಯವನ್ನು ಚೆನ್ನಾಗಿ ಪ್ರದರ್ಶಿಸಿದನು. ಆದರೆ, ಫ್ರಾನ್ಸ್ ದೊರೆಯ ಮೇಲೆ ಯುದ್ಧಮಾಡುವುದಕ್ಕೇ ಆಗಲಿ, ಅಥವಾ ಇತರ ಸಂದರ್ಭಗಳಲ್ಲೇ ಆಗಲಿ ದ್ರವ್ಯಾನುಕೂಲ ಒದಗಿಸಿಕೊಳ್ಳುವುದಕ್ಕೋಸ್ಕರ ಇವನು ಪೋಪಾದ ನಂತರ ಪುನಃ ಆಡಂಬರದ ಖರ್ಚು ಮಾಡಲಿಲ್ಲ. ಕೇವಲ ಮಿತವ್ಯಯದಿಂದ ಇವನು ಹಣವನ್ನು ಗಳಿಸಿ ಪ್ರಜೆಗಳನ್ನು ಕಂದಾಯ ಅಥವಾ ಇತರ ಸುಲಿಗೆಗಳಿಂದ ನೋಯಿಸದೆ, ಅನೇಕ ಯುದ್ಧಗಳ ಅಸಾಧಾರಣ ಖರ್ಚನ್ನು ನಿರ್ವಹಿಸಿದನು. ಸ್ಪೈಯಿನ್ ರಾಜ್ಯದ ಈಗಿನ ಪ್ರಭುವು ತಾನು ಡಂಭಾಚಾರದಿಂದ ಉದಾರನೆಂಬ ಹೆಸರು ಪಡೆಯಬೇಕೆಂದಿದ್ದರೆ ಅವನು ಸಾಧಿಸಿರುವ ಬಹಳವಾದ ಮಹಾತ್ಕಾರ್ಯಗಳಿಗೇ ಆಗಲಿ, ಅವನು ಗೆದ್ದಿರುವ ಮಹಾ ಯುದ್ಧಗಳಿಗೇ ಆಗಲಿ ತಕ್ಕಷ್ಟು ಹಣ ಅವಸಿಗೆ ಎಂದಿಗೂ ಇರುತ್ತಿರಲಿಲ್ಲ. ಅದಕ್ಕೋಸ್ಕರ ತನ್ನ ಕಾರ್ಪಣ್ಯ

ದಿಂದ ರಾಜ್ಯದ ಶಕ್ತಿ ಅಭಿವೃದ್ಧಿಯಾಗುತ್ತದೆಂದು ತಿಳಿದು ರಾಜನು ತನ್ನನ್ನು ಜನಗಳು ಜಿಪುಣನೆನ್ನುತ್ತಾರೆಂಬುದನ್ನು ಲಕ್ಷಿಸಬಾರದು. ಈ ಕಾರ್ಪಣ್ಯ ದಿಂದಲೇ ಪ್ರಜೆಗಳಿಗೆ ಸುಲಿಗೆಯಿಲ್ಲದ ಸೌಖ್ಯ; ಇದರಿಂದಲೇ ರಾಜನಿಗೆ ದೇಶ ವನ್ನು ರಕ್ಷಿಸುವ ಶಕ್ತಿ; ಇದರಿಂದಲೇ ರಾಜನು ಪ್ರಜೆಗಳ ಸ್ವತ್ತನ್ನು ಅಪಹರಿಸುವ ದುರಾಶೆಯಿಲ್ಲದೆ ಅವರ ಪ್ರೇಮದಲ್ಲಿ ಸ್ಥಿರನಾಗಿರಬಹುದು. ಇದಕ್ಕೆ ಕೆಲವರು ಆಕ್ಷೇಪಿಸಿ "ಸೀಸರನೂ ಇನ್ನೂ ಅನೇಕರೂ ಹೇರಳವಾದ ಔದಾರ್ಯದಿಂದಲ್ಲವೇ ಪ್ರಭುಗಳಾಗಿ ಪ್ರಖ್ಯಾತರಾದದ್ದು? ಇಂಥಾ ಗುಣ ತ್ಯಾಜ್ಯವೆಂದು ಹೇಗೆ ಹೇಳುತ್ತೀರಿ" ಎಂದು ಹೇಳಬಹುದು. ಇದಕ್ಕೆ ನನ್ನ ಉತ್ತರ ಇಷ್ಟೇ: ಅವರು ರಾಜಪದವಿಗೆ ಉಮೇದುವಾರರಾಗಿದ್ದರು. ಇದು ಲೊರೆನ್ಜೋ ಡಿ ಮೆಡಿಸಿ (Lorenzo de Medici) ಯವರಿಗೆ ಗ್ರಂಥ ಕರ್ತ ಹೇಳುವ ಮಾತು:—"ನೀವು ಈಗಲೇ ರಾಜರಾಗಿದ್ದೀರಿ. ಅಥವಾ ರಾಜ ರಾಗುವುದರಲ್ಲಿದ್ದೀರಿ. ನೀವು ಡಂಭಾಚಾರದಿಂದ ಹಣ ವೆಚ್ಚಮಾಡುವುದು ಖಂಡಿತವಾಗಿಯೇ ತಪ್ಪು. ಸೀಸರ್ ಮತ್ತು ಇತರರು ಪ್ರಭುತ್ವವನ್ನು ಪಡೆಯಬೇಕು ಎಂಬ ಆಕಾಂಕ್ಷೆಯಿಂದ, ಅದರ ಕ್ರಯವೋ ಎಂಬಂತೆ ಹಣ ವೆಚ್ಚ ಮಾಡಿದರು. ಸೀಸರನಾದರೋ ಆ ಪದವಿಗೆ ಮುಟ್ಟಿದ ಮೇಲೆ ಬದುಕಿದ್ದ ನಾದರೆ, ಅವನು ಆ ಅಮಿತ ವ್ಯಯವನ್ನು ಖಂಡಿಸಿ ಮಿತಕ್ಕೆ ತರದಿದ್ದರೆ, ಅವನ ಚಕ್ರಾಧಿಪತ್ಯವು ಬಗೆಗೇಡಿಯಾಗುತ್ತಿತ್ತು. ಧಾರಾಳಿಗಳೆಂದು ಹೆಸರು ಪಡೆದ ಅನೇಕ ರಾಜರುಗಳು ತಮ್ಮ ಸೈನ್ಯಗಳಿಂದ ಹಿರಿಯ ಕೆಲಸಗಳನ್ನು ಮಾಡಿದ್ದಾ ರಲ್ಲ ಎಂದು ಕೇಳಬಹುದು. ಈ ಧಾರಾಳತನದ ಮರ್ಮ ಇಷ್ಟೇ. ಯಾವ ದೊರೆಯಾದರೂ ಖರ್ಚುಮಾಡುವ ದ್ರವ್ಯವು ಆಕಾಶದಿಂದ ಬರುವುದಿಲ್ಲ. ಅದು ತನ್ನ ಮತ್ತು ತನ್ನ ಪ್ರಜೆಗಳದೇ ಆಗಲಿ, ಅಥವಾ ಮಿತ್ರರದೇ ಆಗಲಿ ಆಗಿದ್ದರೆ, ಅವನು ಬಹು ಹಿಡಿತದಿಂದಲೇ ಖರ್ಚು ಮಾಡಬೇಕು. ಇತರರ ದಾಗಿದ್ದರೆ ಯಥೇಚ್ಛೆಯಾಗಿ ಔದಾರ್ಯವನ್ನು ತೋರಿಸಬಹುದು. ಅನ್ಯ ದೇಶಗಳ ಲೂಟಿ, ಸುಲಿಗೆ, ಮತ್ತು ಬಿಟ್ಟಿ ಸರಬರಾಯಿಯ ಮೇಲೆ ಪೋಷಿತ ವಾಗಿರುವ ಸೈನ್ಯದ ರಾಜನು ಉದಾರನಾಗಿಯೇ ಇರಬೇಕು. ಇಲ್ಲದಿದ್ದರೆ ಅವನ ಸೈನ್ಯ ಅವನನ್ನು ಬಿಟ್ಟು ಹೊರಟು ಹೋಗುತ್ತದೆ. ಅದೂ ಅಲ್ಲದೆ, ತನ್ನದು ಅಥವಾ ತನ್ನವರದು ಅಲ್ಲದ ಕಂಡವರ ಸ್ವತ್ತಿನಿಂದ ಮಿತಿಮೀರಿ ಧಾರಾಳವಾಗಿರುವುದರಿಂದ ಬಾಧಕವೇನು? ಸೀಸರ್, ಸೈರಸ್ ಮತ್ತು

ಅಲೆಕ್ಸಾಂಡರ್ ಇವರುಗಳು ಉದಾರರಾಗಿದ್ದುದು ಹೀಗೆ. ಕಂಡವರ ಸ್ವತ್ತಿನ ವಿಷಯದಲ್ಲಿ ಔದಾರ್ಯವು ಖ್ಯಾತಿಗೆ ನ್ಯೂನತೆ ತರುವುದರ ಬದಲು ಅದನ್ನು ಹೆಚ್ಚಿಸುತ್ತದೆ. ಸ್ವಂತ ಹಣವನ್ನು ಹಿಡಿತವಿಲ್ಲದೆ ವೆಚ್ಚಮಾಡಿದರಲ್ಲವೇ ಮೃತ್ಯು ಸಮಾನವಾದ ಕೆಡಕು? ಈ ತರಹದ ಸ್ವಂತ ಹಣ ವ್ಯಯ ಮಾಡುವ ಔದಾರ್ಯವು ತನ್ನನ್ನು ತಾನೇ ಕೊಲ್ಲುವ ಮಾರ್ಗವೆಂದು ಹೇಳಬಹುದು. ಅದನ್ನು ಮಾಡುತ್ತಾ, ಮಾಡುತ್ತಾ, ಮಾಡುವವನ ಜೀವಾಳವೆಲ್ಲವೂ ನಾಶವಾಗುತ್ತದೆ. ಬಡತನದಿಂದ, ತಾತ್ಸಾರಕ್ಕೆ ಗುರಿಯಾಗುವ ಭಯದಿಂದ, ಪ್ರಜೆಗಳಿಂದ ತೆರಿಗೆ ಯೆತ್ತಿದರೆ ದೊರೆಯು ಪ್ರಜಾಕಂಟಕನಾಗುತ್ತಾನೆ. ಪ್ರಜೆಗಳ ತಾತ್ಸಾರಕ್ಕೆ ಅಥವಾ ದ್ವೇಷಕ್ಕೆ ಗುರಿಯಾಗುವುದಕ್ಕಿಂತಲೂ ದೊಡ್ಡ ದೋಷವು ರಾಜನೀತಿ ಯಲ್ಲಿಲ್ಲ. ಆದುದರಿಂದ ವಿವೇಕ ನಿಯಮಿತವಾದ ಔದಾರ್ಯದಿಂದ ಈ ಎರಡು ಅಪಾಯಗಳನ್ನು ಬರದಂತೆ ನೋಡಿಕೊಳ್ಳುವುದು ರಾಜನಿಗೆ ಮುಖ್ಯ. ಒಟ್ಟಿನ ಮೇಲೆ, ಮೇಲೆ ಹೇಳಿರುವ ಕಾರಣಗಳಿಂದ ದೊರೆಯು ಡಂಭಾಚಾರ ದಿಂದ ಪ್ರಜಾಕಂಟಕನಾಗುವುದಕ್ಕಿಂತಲೂ ಕೃಪಣನೆನ್ನಿಸಿಕೊಳ್ಳುವುದೇ ಲೇಸು, ಮತ್ತು ವಿವೇಕ ಎಂದು ಹೇಳಬಹುದು. ಕೃಪಣನೆಂದರೆ ದೀರ್ಘ ದ್ವೇಷವಲ್ಲದ ಅಲ್ಪನಿಂದೆ; ಪ್ರಜಾಕಂಟಕನೆಂದರೆ ನಿಂದೆಯೂ ಹೌದು, ಗಾಢವಾದ ದ್ವೇಷವೂ ಹೌದು.

ಹದಿನಾರನೆಯ ಅಧ್ಯಾಯ

ಕ್ರೌರ್ಯ ಮತ್ತು ದಯೆ

ದೊರೆಯು ದಯಾಶೀಲನಾಗಿ ಎಲ್ಲರ ಪ್ರೇಮಕ್ಕೂ ಪಾತ್ರನಾಗಿರುವುದು ಉತ್ತಮವೋ ಅಥವಾ ಕ್ರೂರನೆನ್ನಿಸಿಕೊಂಡು ಪ್ರಜೆಗಳಲ್ಲಿ ಭಯ ಹುಟ್ಟಿಸಿ ಆಳುವುದು ಉತ್ತಮವೋ ಎಂಬುದನ್ನು ಇಲ್ಲಿ ವಿಚಾರಮಾಡೋಣ:

ಅರಸನು ತಾನು ಕ್ರೂರಿ ಎಂದು ಕರೆಯಿಸಿಕೊಳ್ಳುವುದಕ್ಕಿಂತಲೂ ದಯಾಶೀಲನೆಂದು ಗೌರವಿಸಲ್ಪಡುವುದು ಉತ್ತಮ ಮಾರ್ಗವೆಂದು ನನ್ನ ಅಭಿಪ್ರಾಯ. ಆದರೆ ತನ್ನ ದಯಾಪರತೆ ದುರುಪಯೋಗವಾಗದಂತೆ ಬಹಳ ಹುಷಾರಿನಿಂದ ನಡೆದುಕೊಳ್ಳಬೇಕು. ಸೀಸರ್ ಬೋರ್ಜಿಯನು ಬಹಳ ಕ್ರೂರಿಯೆಂದು ಪರಿಗಣಿಸಲ್ಪಟ್ಟಿದ್ದರೂ, ಆತನ ಕ್ರೌರ್ಯ ರೋಮಾನ್ಯ ನಗರವನ್ನು ಅಂಕೆಗೊಳಿಸಿ, ಅದರಲ್ಲಿ ಐಕಮತ್ಯವನ್ನು ನೆಲೆಗೊಳಿಸಿ, ಅಲ್ಲಿ ಶಾಂತಿಯುತ ವಾತಾವರಣವನ್ನು ಕಲ್ಪಿಸಿ ಅದನ್ನು ಅವನ ನೆಚ್ಚಿನ ನಗರವನ್ನಾಗಿ ಮಾಡಿತು. ಇನ್ನೊಂದು ಕಡೆ ಫ್ಲಾರೆಂಟೈನರು ಸ್ವಭಾವತಃ ಅಷ್ಟೊಂದು ಕ್ರೂರಿಗಳಲ್ಲದಿದ್ದರೂ ಕೂಡ ಉದ್ದೇಶಪೂರ್ವಕವಾದ ಕ್ರೌರ್ಯದಿಂದ ಪಿಸ್ಟೋಯಾ (Pistoia) ನಗರವನ್ನು ಹಾಳುಗೆಡವಿಬಿಟ್ಟರು. ಸರಿಯಾಗಿ ಪರ್ಯಾಲೋಚಿಸಿದರೆ, ಸೀಸರ್ ಬೋರ್ಜಿಯಾ ಫ್ಲಾರೆಂಟೈನರಿಗಿಂತ ದಯಾಪರನೆಂದು ಹೇಳಬಹುದು. ಈ ಉದಾಹರಣೆಗಳಿಂದ ನಮಗೆ ತಿಳಿದು ಬರುವುದೇನೆಂದರೆ, ಸರ್ವಸಮ್ಮತವಾದ ದಯಾಶೀಲತೆಯಿಂದ ಹಲವು ಘೋರ ಕೊಲೆ ಮತ್ತು ಸುಲಿಗೆಗಳಿಗೆ ದಾರಿಮಾಡಿಕೊಟ್ಟ ಅನೇಕರಿಗಿಂತ, ನ್ಯಾಯ

ಮಾರ್ಗದಲ್ಲಿ ಕ್ರೂರಿಯಾಗಿ ಒಳ್ಳೆಯ ಪರಿಣಾಮಕ್ಕೆ ಎಡೆಗೊಡುವ ನೀವು ಹೆಚ್ಚು ಕರುಣಾಶಾಲಿಗಳೆನ್ನಿಸಿಕೊಳ್ಳುವಿರಿ. ಇದಕ್ಕೆ ಕಾರಣವೇನೆಂದರೆ, ಅತಿಯಾದ ದಯೆಯಿಂದ ಸಾರ್ವತ್ರಿಕವಾಗಿ ದುಷ್ಪರಿಣಾಮವುಂಟಾಗುತ್ತದೆ. ಆದರೆ ನಿರ್ದಿಷ್ಟವಾದ ದಂಡನೆಯಾದರೋ ನಿರ್ದಿಷ್ಟವಾದ ವ್ಯಕ್ತಿಗೆ ಮಾತ್ರ ಅನ್ವಯಿಸುತ್ತದೆ. ಆದುದರಿಂದ ದೊರೆ ತನ್ನ ಪ್ರಜೆಗಳನ್ನು ನಿಷ್ಠಾವಂತರಾಗಿ, ಐಕ್ಯಮತ್ಯದಿಂದ ಬಾಳುವಂತೆ ಆಳುವಷ್ಟು ಕಾಲವೂ, ಆತನಿಗೆ ಇತರರು ತನ್ನನ್ನು ಕ್ರೂರಿಯೆಂದು ಪರಿಗಣಿಸಿದರೆ ಅದನ್ನು ಅಷ್ಟು ಲಕ್ಷ್ಯ ಮಾಡಬೇಕಾದ ಪ್ರಮೇಯವೂ ಇಲ್ಲ. ಆದರೆ ಹೊಸದಾಗಿ ಅಧಿಕಾರಕ್ಕೆ ಬಂದ ಅರಸನಿಗೆ ಈ ಜವಾಬ್ದಾರಿಯ ಹೊಣೆ ಬಹಳವಾಗಿರುತ್ತದೆ. ಆತ ಹೊಸಬನಾಗಿ ಬರುವ ಕಾರಣದಿಂದ ತನ್ನ ಹೊಸದಾದ ಆಳ್ವಿಕೆಯಲ್ಲಿ ಕ್ರೂರಿ ಎಂಬ ಅಪವಾದವನ್ನು ತಪ್ಪಿಸಿಕೊಳ್ಳಬೇಕಾದರೆ ಬಹಳ ಎಚ್ಚರದಿಂದಿರಬೇಕು. ಇಲ್ಲದಿದ್ದರೆ ಅದರಿಂದ ತನ್ನ ಸ್ಥಾನಮಾನಗಳಿಗೇ ಧಕ್ಕೆಬರಬಹುದು. ಇದೇ ಅರ್ಥದಲ್ಲಿ ವರ್ಜಿಲ್ (Vergil) ಮಹಾಕವಿಯು ಡೈಡೊ (Dido) ರಾಣಿಯಿಂದ ತನ್ನ ಆಡಳಿತದ ಕಾಠಿಣ್ಯದ ಕಾರಣವನ್ನು ಈ ರೀತಿ ಹೇಳಿಸುತ್ತಾನೆ:

"ನನ್ನ ದೌಲತ್ತು ಹೊಸದಾದ್ದರಿಂದಲೂ, ನನ್ನ ಅನುಭವ ದುಃಖಮಯವಾದ್ದರಿಂದಲೂ, ನಾನು ಈ ರೀತಿ ನಡೆಯಬೇಕಾಗಿದೆ. ಹೇಗಿದ್ದರೂ ನನ್ನ ರಾಜ್ಯವನ್ನು ನಾನು ಕಾಪಾಡಲೇಬೇಕು."

ಆದರೂ, ರಾಜನು ಚಾರರ ಕಥೆಗಳನ್ನು ವಿಮರ್ಶೆಯಿಲ್ಲದೆ ನಂಬಬಾರದು. ತಾನು ದುಡುಕಿ ನಡೆಯಲೂ ಬಾರದು. ಇತರರಿಗೆ ಭಯವಾಗಲಿ, ಅಸೂಯೆಯಾಗಲಿ ಹುಟ್ಟುವಂತೆ ವರ್ತಿಸಬಾರದು. ಅವನ ಆಡಳಿತದ ರೀತಿಯಲ್ಲಿ ವಿವೇಕ, ದಯೆ ಎರಡೂ ಬೆರೆತಿರಬೇಕು. ಇತರರಲ್ಲಿನ ಹೆಚ್ಚು ಭರವಸೆಯಿಂದ ಎಚ್ಚರ ತಪ್ಪಬಾರದು. ಹೆಚ್ಚು ಅಪನಂಬಿಕೆಯಿಂದ ತಾನು ದುಃಸಹನೂ ಆಗಬಾರದು. ಇದರಿಂದ ಈ ಪ್ರಶ್ನೆ ಏಳುತ್ತದೆ: "ರಾಜನು ಪ್ರಜೆಗಳ ಭೀತಿಗೆ ಪಾತ್ರನಾಗುವುದಕ್ಕಿಂತಲೂ ಪ್ರೀತಿಗೆ ಪಾತ್ರನಾಗುವುದು ಮೇಲೇ? ಅಥವಾ ಪ್ರೀತಿಗಿಂತಲೂ ಭೀತಿಯನ್ನು ಉತ್ಪಾದಿಸುವುದು ಮೇಲೇ?" ಇದಕ್ಕೆ ಸಹಜವಾದ ಉತ್ತರ—ಉಭಯ ನೀತಿಯೂ ಒಳ್ಳೆಯದೇ. ಆದರೆ ಎರಡನ್ನೂ ಏಕಕಾಲ ಅನುಸರಿಸುವುದು ಅಸಾಧ್ಯವಾಗಿ, ಒಂದನ್ನೇ ಇಟ್ಟುಕೊಳ್ಳಬೇಕಾದಲ್ಲಿ ಪ್ರೀತಿಗಿಂತ ಭೀತಿ ಮೇಲು. ಪ್ರಜೆಗಳ ಭೀತಿಯಿಂದಲೇ ರಾಜನ ಭದ್ರತೆ

ಹೆಚ್ಚು. ಇದಕ್ಕೆ ಕಾರಣವೇನೆಂದರೆ, ಮನುಷ್ಯಸಾಮಾನ್ಯರು ಕೃತಘ್ನರು, ಚಂಚಲರು, ಕಪಟಿಗಳು, ಅಪಾಯ ಭೀರುಗಳು ಮತ್ತು ಪ್ರಯೋಜನಾ ಕಾಂಕ್ಷಿಗಳು. ಅಪಾಯ ದೂರದಲ್ಲಿದ್ದು ನಿಮ್ಮಿಂದ ಅವರು ಪ್ರಯೋಜನ ಪಡೆಯುತ್ತಿರುವ ವರೆಗೂ ಅವರು ನಿಶ್ಶೇಷವಾಗಿ ನಿಮ್ಮವರು; ಅವರ ಸ್ಥಿತಿ ಗತಿಗಳು, ಅವರ ಪ್ರಾಣ, ಅವರ ಸಂತಾನ ಎಲ್ಲವೂ ನಿಮ್ಮ ಸೇವೆಗೇ ಮೀಸಲು ಎನ್ನುವರು. ಅಪಾಯ ಸನ್ನಿಹಿತವಾಗಿ, ನಿಮಗೆ ಅವರ ಸಹಾಯ ಆವಶ್ಯಕ ವಾಗಿದ್ದರೆ, ಆಗ ಮರುಕವಿಲ್ಲದೆ ತಿರುಗಿಬೀಳುತ್ತಾರೆ. ಜನಗಳ ಸವಿನುಡಿಗಳ ಮೇಲೆ ಸಂಪೂರ್ಣ ಭರವಸೆಯಿಟ್ಟು, ಇತರ ಸನ್ನಾಹವಿಲ್ಲದೆ ನಗ್ನನಾಗಿ ನಿಂತ ರಾಜನು ಖಂಡಿತವಾಗಿಯೂ ನಾಶವಾಗುತ್ತಾನೆ. ತೊಂದರೆಯಿಲ್ಲದ ಕಾಲದಲ್ಲಿ ನಮ್ಮ ಸತ್ಕಾರದಿಂದ ಬರುವ ಭಕ್ತಿಯು ಅಮೂಲ್ಯವಾದುದಾಗಿ ಕಾಣ ಬಹುದು. ಆದರೂ ಇದು ಪರೀಕ್ಷೆಗೆ ಬಂದಾಗ ಅಂತಹದಲ್ಲವೆಂದು ಗೊತ್ತಾ ಗುತ್ತದೆ. ಅಲ್ಲದೆ ಭಯವನ್ನು ಹುಟ್ಟಿಸುವ ರಾಜರಿಗೆ ಕೋಪಬರಿಸು ವುದಕ್ಕೆ ಹೆದರುವ ಜನರು, ಪ್ರೀತಿ ಬಯಸುವ ರಾಜನಿಗೆ ಪಶ್ಚಾತ್ತಾಪ ವಿಲ್ಲದೆ ಎದುರುಬೀಳುತ್ತಾರೆ. ಇದಕ್ಕೆ ಕಾರಣ, ಪ್ರೀತಿಯೆಂಬುದು ಮೃದು ಬಳ್ಳಿಯಂಥ ದುರ್ಬಲವಾದ ಬಂಧವಾದ್ದರಿಂದ ಮನುಷ್ಯರು ಅವರ ಸ್ವಾಭಾವಿಕ ದುರ್ಗುಣದಿಂದ ಅವರಿಗೆ ಲಾಭ ಬರುವಂತಿದ್ದರೆ ಅದನ್ನು ಕಡಿದುಬಿಡುತ್ತಾರೆ. ಭೀತಿಯಾದರೋ ಶಿಕ್ಷೆಯಾದೀತೆಂಬ ಭಯವಾದ್ದರಿಂದ ಆ ರೀತಿ ದುರ್ಬಲ ವಲ್ಲ. ಆದರೂ ಕೂಡ ದೊರೆಯು ಪ್ರಜೆಗಳ ಭಯಭಕ್ತಿಗಳನ್ನು ಸಂಪಾದಿಸು ವುದರಲ್ಲಿಯೂ ಒಂದು ವೇಳೆ ಅವರ ಪ್ರೀತಿಯನ್ನೂ ಜೊತೆಗೆ ಗಳಿಸಲಾರದೆ ಇದ್ದರೂ ಅವರ ದ್ವೇಷಕ್ಕೆ ಎಡೆಕೊಡಬಾರದು. ದ್ವೇಷವಿಲ್ಲದ ಭೀತಿಯು ಸಾಧ್ಯವೇ ಹೌದು. ರಾಜನು ಪ್ರಜೆಗಳ ಸ್ಥಿತಿಗತಿಗಳನ್ನು, ಗೃಹದಾರಾದಿ ಗಳನ್ನು ಅಪಹರಿಸದೆಯೂ, ಯಾರಿಗಾದರೂ ಮರಣದಂಡನೆಯನ್ನು ವಿಧಿಸ ಬೇಕಾದರೆ ಚೆನ್ನಾಗಿ ವಿಚಾರಮಾಡಿ, ಸಂಪೂರ್ಣ ರುಜುವಾತಿನ ಮೇಲೆ ಪ್ರವರ್ತಿಸಿಯೂ, ಪಕ್ಷಪಾತವಿಲ್ಲದ ನ್ಯಾಯದಿಂದಲೂ ಪ್ರಜೆಗಳ ದ್ವೇಷವಿಲ್ಲದ ಭಯಭಕ್ತಿಯನ್ನು ಸಾಧಿಸಬಹುದು. ಮುಖ್ಯವಾಗಿ ಪ್ರಜೆಗಳ ಆಸ್ತಿಯನ್ನು ಅಪಹರಿಸಬಾರದು. ಏಕೆಂದರೆ, ಜನಗಳು ಪಿತೃವಧೆಯನ್ನಾದರೂ ಮರೆ ತಾರು; ಪಿತ್ರಾರ್ಜಿತದ ಅಪಹಾರವನ್ನು ಮರೆಯುವುದಿಲ್ಲ. ಅಲ್ಲದೆ, ಇತರರ ಸೊತ್ತನ್ನು ಅಪಹರಿಸುವುದು ಒಂದು ದುರಭ್ಯಾಸವಾಗಿರುತ್ತದೆ. ಅದನ್ನು

ಒಂದು ಸಲ ಮಾಡಿದವನು ಪುನಃ ಪುನಃ ಮಾಡಿಯೇ ಮಾಡುತ್ತಾನೆ. ಅದಕ್ಕೆ ನೆರೆಹೊರೆಯಲ್ಲಿ ಅವಕಾಶಗಳೂ ದೊರೆಯುತ್ತವೆ. ಇದಕ್ಕೆ ವಿಪರೀತವಾಗಿ ಕೊಲೆಯೂ ಅದಕ್ಕೆ ಅವಕಾಶಗಳೂ ಅಪರೂಪ. ರಾಜನು ಸೈನ್ಯದ ನೇತೃತ್ವದಲ್ಲಿರುವಾಗ ಅವನು ಬಹುಜನ ಕ್ರೂರರನ್ನು ಹತೋಟಿಯಲ್ಲಿಟ್ಟಿರಬೇಕಾಗುತ್ತದಾದ್ದರಿಂದ ತಾನು ಕಠಿಣನಾಗಿಯೇ ಇರಬೇಕು. ಜನಗಳು ನಿಷ್ಕರುಣಿಯೆಂದರೂ ಲಕ್ಷಿಸಬಾರದು. ಕಾಠಿಣ್ಯವಿಲ್ಲದೆ ಯಾವ ಸೈನ್ಯವನ್ನಾದರೂ ಐಕಮತ್ಯದಲ್ಲಾಗಲಿ, ಸಾಹಸಗಳಿಗೆ ಅನುಕೂಲವಾದ ಸ್ಥಿತಿಯಲ್ಲಾಗಲಿ, ಇಡುವುದಕ್ಕಾಗುವುದಿಲ್ಲ.

ಹ್ಯಾನಿಬಾಲ (Hannibal) ನ ಮಹತ್ಕಾರ್ಯಗಳ ಪೈಕಿ ಒಂದು ದೊಡ್ಡ ಉದಾಹರಣೆ ಯಾವುದೆಂದರೆ, ಇವನ ದೊಡ್ಡ ಸೈನ್ಯದಲ್ಲಿ ಅನೇಕ ಜನಾಂಗಗಳ ಭಟರಿದ್ದು ಅವರೆಲ್ಲರೂ ಶತ್ರು ರಾಷ್ಟ್ರದಲ್ಲಿ ಯುದ್ಧಮಾಡುತ್ತಿದ್ದರೂ, ಇಂಥ ಸನ್ನಿವೇಶದಲ್ಲಿ ಕೂಡ ಜಯಾಪಜಯಗಳಲ್ಲಿಯೂ ಕೂಡ ಹ್ಯಾನಿಬಾಲನಿಗೆ ವಿರೋಧವಾಗಿ ದ್ರೋಹವೇ ಆಗಲಿ, ದಂಗೆಯೇ ಆಗಲಿ ಅವರಿಂದ ನಡೆಯಲಿಲ್ಲ. ಇದಕ್ಕೆ ಬಹುಶಃ ಕಾರಣವೇನೆಂದರೆ, ಅವನ ಅಪಾರ ನಿಷ್ಕರುಣ ಶಿಸ್ತು. ಅವನಲ್ಲಿ ಅಪಾರವಾದ ಪೌರುಷಾದಿ ಗುಣಗಳು ಇದ್ದುವು. ಇದರ ಜೊತೆಗೆ ಕಲ್ಲೆದೆಯ ಕ್ರೌರ್ಯವೂ ಇದ್ದುದರಿಂದ ಅವನು ಅವನ ಸಿಪಾಯಿಗಳ ಸಂಪೂರ್ಣ ಭಕ್ತಿಗೂ, ಭೀತಿಗೂ ಪಾತ್ರನಾಗಿದ್ದನು. ಕ್ರೌರ್ಯವಿಲ್ಲದಿದ್ದರೆ ಅವನ ಅನಂತ ಸದ್ಗುಣಗಳಿಂದ ಏನೂ ಪ್ರಯೋಜನವಾಗುತ್ತಿರಲಿಲ್ಲ. ವಿವೇಚನೆಯಿಲ್ಲದ ಕೆಲವು ಐತಿಹಾಸಿಕರು ಹ್ಯಾನಿಬಾಲನ ವೀರಕೃತ್ಯಗಳನ್ನು ಪ್ರಶಂಸಿಸುವಾಗ ಅವುಗಳ ಮೂಲಕಾರಣವಾದ ಕಾಠಿಣ್ಯವನ್ನು ನಿಂದಿಸುತ್ತಾರೆ. ಬರಿಯ ಗುಣಾತಿಶಯಗಳಿಂದಲೇ ಇವನು ಬಹಳ ದೂರ ಹೋಗುತ್ತಿರಲಿಲ್ಲ ಎಂಬುದು ಸಿಪಿಯೋ (Scipio) ವಿನ ವಿಷಯವನ್ನು ನೆನೆದರೆ ವಿಶದವಾಗುತ್ತದೆ. ಸಿಪಿಯೋ ತನ್ನ ಕಾಲದಲ್ಲಿ ಮಾತ್ರವಲ್ಲ, ಎಲ್ಲಾ ಚರಿತ್ರೆಯಲ್ಲಿಯೂ ಸದ್ಗುಣ ಸಂಪನ್ನನಾದ ಮಹಾ ಪುರುಷನೆಂಬುದು ನಿಜ. ಆದರೂ, ಸ್ಪೈಯಿನಿನಲ್ಲಿ ಇವನ ಸೈನ್ಯವು ದಂಗೆಯೆದ್ದಿತು. ಅದಕ್ಕೆ ನಿಜವಾದ ಕಾರಣ ಇವನ ಮೃದುಸ್ವಭಾವ. ತನ್ನ ಈ ಕಾರಣದಿಂದ ಈತನು ತನ್ನ ಸಿಪಾಯಿಗಳಿಗೆ ಶಿಸ್ತು ಕೆಡಿಸುವಷ್ಟು ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಫೇಬಿಯಸ್ ಮಾಕ್ಸಿಮಸ (Fabius Maximus) ನು ರಾಜ್ಯಸಭೆಯಲ್ಲಿ ಸಿಪಿಯೋವನ್ನು, ರೋಮನ್ ನಾಗರಿಕ

ಸೈನ್ಯವನ್ನು ಕೆಡಿಸುವವನೆಂದು ನಿಂದಿಸಿ, ಸಿಪಿಯೋವಿನ ತಾಬೆಯಲ್ಲಿದ್ದ ಒಬ್ಬ ನಾಯಕನು ಲೋಕ್ರಿಸ್ (Locris) ನಿವಾಸಿಗಳನ್ನು ಸೂರೆಮಾಡಿದರೂ ಕೂಡ ಸಿಪಿಯೋವಿನ ಸಾಧು ಸ್ವಭಾವದಿಂದ ನಿವಾಸಿಗಳಿಗೆ ಪರಿಹಾರವೇ ಆಗಲಿ ಈ ದುರಾತ್ಮನ ದುಷ್ಕೃತನಕ್ಕೆ ತಕ್ಕ ಶಿಕ್ಷೆಯೇ ಆಗಲಿ ಆಗಲೇ ಇಲ್ಲ ಎಂದು ಆಪಾದಿಸಿದನು. ಇದು ಎಷ್ಟು ನಿಜವಾಗಿತ್ತೆಂದರೆ, ಸಿಪಿಯೋ ಪಕ್ಷದವನು ಒಬ್ಬ ಅವನ ಪರವಾಗಿ ಮಾತನಾಡುತ್ತಾ, "ಅನೇಕ ಜನರು ತಾವು ಪಾಪವನ್ನು ತ್ಯಜಿಸುವುದರಲ್ಲಿ ನಿಪುಣರಾಗಿದ್ದರೂ ಪಾಪಿಗಳನ್ನು ಶಿಕ್ಷಿಸುವುದರಲ್ಲಿ ಅಷ್ಟು ನಿಪುಣರಾಗಿರುವುದಿಲ್ಲ," ಎಂದು ಒಪ್ಪಬೇಕಾಯಿತು. ಬಹಳ ಕಾಲ ಸಿಪಿಯೋವಿನಲ್ಲಿ ಸರ್ವಾಧಿಕಾರವು ಇದ್ದಿದ್ದರೆ, ಈ ಸ್ವಭಾವವು ಅವನ ಕೀರ್ತಿ ಗ್ರಹಣಹಿಡಿಸುತ್ತಿದ್ದಿತು. ಆದರೆ ರಾಜ್ಯಸಭೆಯು (Senate) ಇವನ ಮೇಲಿನ ಸ್ಥಾನದಲ್ಲಿದ್ದು ಪ್ರತಿಯೊಂದರಲ್ಲಿಯೂ ಇವನಿಗೆ ಆಜ್ಞೆಯನ್ನು ಕೊಡುತ್ತಿದ್ದುದರಿಂದ ಸಿಪಿಯೋವಿನ ಸ್ವಭಾವದ ನ್ಯೂನತೆಯಿಂದ ಇವನಿಗೆ ಕರುಣಾಶಾಲಿಯೆಂಬ ಯಶಸ್ಸೇ ಬಂದಿತು. ಕೊನೆಯ ಮಾತನ್ನು ಹೇಳುವುದೆಂದರೆ—ಪ್ರೀತಿ ತೋರಿಸುವುದೆಂಬುದು ಪ್ರಜೆಗಳ ಇಷ್ಟ ಮತ್ತು ಮನೋಭಾವ; ಹೆದರಿಕೆಯೆನ್ನುವುದು ಅವರ ದೊರೆಯ ಮನೋಭಾವ, ದೊರೆಯ ಶಕ್ತಿಯಿಂದಲೇ ಉಂಟುಮಾಡಬೇಕಾದುದು; ಪ್ರಜೆಗಳು ಪ್ರೀತಿಸಿದರೆ ಪ್ರೀತಿಸಬಹುದು. ಇಲ್ಲದೇ ಇದ್ದರೆ ಇಲ್ಲ. ಪ್ರೀತಿ ನಿರ್ಬಂಧದಿಂದ ಬರತಕ್ಕದ್ದಲ್ಲ. ಭೀತಿಯನ್ನು ಬುದ್ಧಿವಂತನಾದ ದೊರೆ ತನ್ನ ನೀತಿಯಿಂದ ಉತ್ಪಾದಿಸಬಹುದು. ಇದೇ ವಿವೇಕವಾದ ಮಾರ್ಗ; ಆದರೆ, ಭಯಭಕ್ತಿಗಳ ಜೊತೆಗೆ ಪ್ರಜೆಗಳ ದ್ವೇಷವು ಹುಟ್ಟದೇ ಇರುವಂತೆ ಎಚ್ಚರಿಕೆಯಿಂದ ಇರಬೇಕು.

ಹದಿನೇಳನೆಯ ಅಧ್ಯಾಯ

ಆಳುವವರು ತಾವು ಕೊಟ್ಟ ಪ್ರತಿಜ್ಞೆಯಿಂದ ಎಷ್ಟು ದೂರ ಬಂಧಿತರಾಗುತ್ತಾರೆ

ರಾಜರುಗಳು ತಾವು ಕೊಟ್ಟ ಮಾತಿಗೆ ತಪ್ಪದಿರುವುದು, ತಾವು ವಂಚನೆಯಿಲ್ಲದೆ ಧರ್ಮದಿಂದ ವರ್ತಿಸುವುದು, ಎಷ್ಟು ಶ್ಲಾಘ್ಯವೆಂಬುದು ಎಲ್ಲರಿಗೂ ತಿಳಿದ ವಿಷಯವೇ; ಆದರೂ ಈಚಿನ ಅನುಭವದಲ್ಲಿ ಅನೇಕ ರಾಜರು ತಾವು ಕೊಟ್ಟ ಭಾಷೆಗೆ ಅಷ್ಟು ನಾಜೂಕು ಬೆಲೆಕೊಡದೆ, ತಮಗಿಂತ ಸತ್ಯ ಪ್ರತಿಜ್ಞರಾದ ಇತರರ ಸಂಗಡ ಬೆಳೆಯಿಸಿದ ವ್ಯವಹಾರಗಳಲ್ಲಿ ಅವರನ್ನು ತಮ್ಮ ಕುತಂತ್ರಗಳಿಂದ ಸೋಲಿಸಿ, ಮಹತ್ತಾದ ಕಾರ್ಯಗಳನ್ನು ಸಾಧಿಸಿ ಕೊಂಡಿರುವ ಉದಾಹರಣೆಗಳು ಕಂಡುಬರುತ್ತವೆ. ಇದರ ಸರಿಯಾದ ಅರ್ಥ ತಿಳಿಯಬೇಕಾದರೆ, ವ್ಯವಹಾರವನ್ನು ಊರ್ಜಿತ ಪಡಿಸಿಕೊಳ್ಳುವುದಕ್ಕೆ ಎರಡು ಬಗೆಯ ಉಪಾಯಗಳಿವೆ ಎಂಬುದನ್ನು ಗಮನದಲ್ಲಿಡಬೇಕು. ಒಂದು ನ್ಯಾಯ; ಮತ್ತೊಂದು ಬಲ. ಮೊದಲನೆಯದು, ಮನುಷ್ಯನಿಗೆ ಸಹಜ ವಾದದ್ದು; ಎರಡನೆಯದು, ಪಶುಗಳ ಮಾರ್ಗ. ಆದರೆ, ಅನೇಕವೇಳೆ ಕಾರ್ಯಸಾಧನೆಗೆ ಮೊದಲನೆಯ ಉಪಾಯವಾದ ನ್ಯಾಯ ಸಾಲದೆ ಬರು ತ್ತಾದ್ದರಿಂದ ಎರಡನೆಯದಾದ ಬಲವನ್ನು ಪ್ರಯೋಗಿಸ ಬೇಕಾಗುತ್ತದೆ. ಆದ್ದರಿಂದ, ಆಳುವ ದೊರೆಗೆ ಈ ಎರಡು ಮಾರ್ಗಗಳೂ ಚೆನ್ನಾಗಿ ತಿಳಿದಿರ ಬೇಕಲ್ಲದೆ, ಯಾವ ಸಂದರ್ಭದಲ್ಲಿ ಯಾವುದನ್ನು ಅನುಸರಿಸಬೇಕೆಂಬ ವಿವೇ ಚನೆಯೂ ಇರಬೇಕು. ಇದೇ ಅರ್ಥವನ್ನು ಪೂರ್ವ ಕವಿಗಳು ಪ್ರಕಾರಾಂತರ

ವಾಗಿ ಕಥೆಯ ರೂಪವಾಗಿ ಬೋಧಿಸಿದ್ದಾರೆ. ಅಖಿಲಿಸ್ (Achilles) ಮತ್ತು ಇತರ ಅನೇಕ ರಾಜಕುಮಾರರನ್ನು ಶಿಸ್ತು ಮತ್ತು ವಿದ್ಯೆ ಕಲಿಯುವು ದಕ್ಕಾಗಿ ಚಿರಾನ್ (Chiron the centaur) ಎಂಬ ನರತುರಗನ ವಶಕ್ಕೆ ಬಿಟ್ಟರಂತೆ. ಈ ಚಿರಾನನ ಕೆಳ ಅರ್ಧ ಶರೀರ ಕುದುರೆಯ ರಚನೆ; ನಡುವಿನ ಮೇಲಿನ ಮೈಕಟ್ಟು ಮನುಷ್ಯ. ಇಂಥ ಗುರುವಿನಲ್ಲಿ ಭಾವಿ ರಾಜರುಗಳನ್ನು ಬಿಟ್ಟಿದ್ದರ ಅರ್ಥ—ದೊರೆಯಾದವನಿಗೆ ಮನುಷ್ಯನಿಗೆ ಸಹಜ ವಾದ ಧರ್ಮ, ಪಶುವಿನ ನೀತಿಯಾದ ಬಲಪ್ರಯೋಗ ಎರಡೂ ಮನದಟ್ಟಾಗಿರ ಬೇಕೆಂದು ಅಲ್ಲವೇ? ಯುಕ್ತಿಯೂ, ಬಲವೂ ಒಂದನ್ನು ಬಿಟ್ಟು ಒಂದು ಬಹುದಿನ ಉಳಿಯಲಾರದು. ರಾಜನಿಗೆ ಪಶುವಿನ ಚರ್ಯ ಇರತಕ್ಕದ್ದು ಅವಶ್ಯವೆಂದು ನಾವು ಒಪ್ಪಿದರೆ, ಅವನು ಯಾವ ಪಶುಗಳನ್ನು ಹೋಲಬೇಕು? ರಾಜನು ಪಶು ಜಾತಿಯ ಸಿಂಹದ ಮತ್ತು ನರಿಯ ಗುಣಗಳನ್ನು ಅನುಸರಿಸ ಬೇಕೆಂದು ನನಗೆ ತೋರುವುದು. ಸಿಂಹವು ಬಲ ರಭಸಗಳಲ್ಲಿ ಅಪ್ರತಿಮವಾಗಿ ದ್ದರೂ, ಅದಕ್ಕೆ ಬಲೆ, ಬೋನುಗಳ ಅಪಾಯ ಬಹಳವಾಗಿರುತ್ತದೆ, ಏಕಂದರೆ ಅವುಗಳ ಪರಿಚಯ ವಿಲ್ಲದ್ದರಿಂದ; ನರಿಗೆ ಬಲೆ ಬೋನುಗಳ ವಿವೇಕವಿದ್ದರೂ ತನ್ನ ದುರ್ಬಲತೆಯಿಂದ ತೋಳದ ಭಯ. ನಮ್ಮ ರಾಜನು ಬೋನು ಬಲೆಗಳ ಪತ್ತೇದಾರಿಯಲ್ಲಿ ನರಿಯೂ, ತೋಳನ ವಧೆ ಅಥವಾ ಉಚ್ಚಾಟನೆ ಯಲ್ಲಿ ಸಿಂಹನೂ ಆಗಿರಬೇಕು. ತಾವು ಯಾವಾಗಲೂ ಕೇವಲ ಸಿಂಹನೇ ಆಗಿರಬೇಕೆಂಬವರು ಕೇವಲ ಅಲ್ಪಮತಿಗಳು.

ಆದ್ದರಿಂದ ನಾನು ಹೇಳುವುದು ಇಷ್ಟೇ. ಧೀಮಂತ ಮತ್ತು ವಿವೇಕ ಶಾಲಿಯಾದ ರಾಜನು ಸದಾಕಾಲ ತಾನು ಕೊಟ್ಟಮಾತನ್ನು ಸಾರ್ಥಕ ಪಡಿಸಿಕೊಳ್ಳುವ ಹಟ ಹಿಡಿಯಬಾರದು. ಹಾಗೆ ಮಾಡುವುದರಿಂದ ತನಗೆ ಕೇಡು ಉಂಟಾಗುತ್ತದೆಂಬ ಸಂದರ್ಭದಲ್ಲಿ, ಅಥವಾ ತಾನು ಯಾವ ಸನ್ನಿವೇಶ ದಲ್ಲಿ, ಯಾವ ವಾತಾವರಣದಲ್ಲಿ ಮಾತುಕೊಟ್ಟನೋ, ಆ ಸನ್ನಿವೇಶ, ವಾತಾ ವರಣಗಳು ಇಲ್ಲವಾದ ಸಂದರ್ಭದಲ್ಲಿ ತಾನು ಕೊಟ್ಟ ಮಾತಿನಂತೆ ನಡೆಯಲೇ ಬೇಕೆಂಬ ಹಟ ಹಿಡಿಯಬಾರದು. ಪ್ರಪಂಚದ ಜನರೆಲ್ಲರೂ ಸತ್ಯವಂತರೇ ಆಗಿದ್ದರೆ ಈ ನೀತಿಯನ್ನು ಬೋಧಿಸಬೇಕಾಗಿರಲಿಲ್ಲ. ಇತರರು ನಿಮಗೆ ಕೊಟ್ಟ ಮಾತಿನಿಂದ ಭ್ರಷ್ಟರಾಗುವುದಕ್ಕೆ ಹೇಸದಷ್ಟು ನೀಚರಾಗಿರುತ್ತಾರಾದ್ದ ರಿಂದ ನೀವು ಅವರ ವಿಚಾರದಲ್ಲಿ ಸತ್ಯ ಪ್ರತಿಜ್ಞರಾಗಬೇಕಾದದ್ದಿಲ್ಲ. ಪ್ರತಿಜ್ಞೆ

ಯಿಂದ ಅವಶ್ಯಬಿದ್ದಾಗ ಜಾರುವುದಕ್ಕೆ ನಂಬಬಹುದಾದ ನೆವಗಳು ಸಿಕ್ಕದ ರಾಜನೇ ಇದುವರೆಗೆ ಯಾವನೂ ಇಲ್ಲ. ಈಚಿನ ಇತಿಹಾಸದಲ್ಲೇ ಸಂಧಿಗಳನ್ನು, ಕೌಲುಗಳನ್ನು, ಕರಾರುಗಳನ್ನು ರಾಜರುಗಳು ಅಧರ್ಮವಾಗಿ ಮುರಿದು, ಒಡೆದು ಧೂಳೀಪಟಮಾಡಿದ ಕಥೆಗಳು ಅನೇಕ ಇವೆ. ಈ ಕಥೆಗಳಲ್ಲಿ ನರಿಯ ಗುಣದ ರಾಜರುಗಳ ಅಭ್ಯುದಯವೇ ಮುಖ್ಯ ವಸ್ತು.

ಆದರೆ ಒಂದು ಎಚ್ಚರಿಕೆ; ನಿಮ್ಮ ಒಳ ಉದ್ದೇಶವನ್ನು ಬಹಳ ಮಂದವಾಗಿ ಮುಚ್ಚಿ, ನಿಪುಣ ಆಷಾಢಭೂತಿಯಾಗಿರಬೇಕು. ಇದರಲ್ಲಿ ಅಪಾಯವಿಲ್ಲ. ಸಾಮಾನ್ಯ ಜನರು ಬಹಳ ಸರಳ ಸ್ವಭಾವದವರು; ತಾಪತ್ರಯದ ದೆಶೆಯಿಂದ ಬಹಳ ಸಾಧುಗಳು; ನೀವು ಹೆಚ್ಚು ಜಾಣ್ಮೆ ವೆಚ್ಚಮಾಡದೆಯೇ ಇವರು ಬಹುಮಂದಿ ನಿಮ್ಮ ಜಾಲಕ್ಕೆ ಬೀಳುವವರಿರುತ್ತಾರೆ. ಎಲ್ಲರಿಗೂ ನೆನಪಿನಲ್ಲಿರುವ ಒಂದು ಉದಾಹರಣೆ ಸಾಕು. ಪೋಪ್ ಆರನೆಯ ಅಲೆಕ್ಸ್ಯಾಂಡರ್ ಅವನ ಯಾವಜ್ಜೀವವು ಇತರರನ್ನು ಮೋಸಮಾಡುವುದರ ಧ್ಯಾನ, ಅದರ ಆಚರಣೆ, ಇವುಗಳಲ್ಲೇ ನಿರತನಾಗಿದ್ದವನು; ಅವನಿಗೆ ಸದಾ ಕಾಲ ಮೋಸಕ್ಕೆ ತಕ್ಕ ಪ್ರಾಣಿಗಳ ಅಭಾವವೇ ಇರಲಿಲ್ಲ. ಅವನ ಹಾಗೆ ಶ್ರದ್ಧೆಯ ರೂಪದ ಮಂಕು ಬೂದಿಯನ್ನು ಚೆಲ್ಲಿ, ಕಣ್ಣೀರು, ಪ್ರಮಾಣ, ಪ್ರತಿಜ್ಞೆಗಳನ್ನು ಮುಂದೆ ಚಾಚಿ, ಜನಗಳನ್ನು ಮರಳು ಮಾಡಿದವರೂ ಇನ್ನಿಲ್ಲ; ಅವನಂತೆ ಸಂಕೋಚವಿಲ್ಲದೆ ಮಾತಿಗೆ ತಪ್ಪಿ ಮೋಸಮಾಡಿದವರೂ ಇಲ್ಲ. ಆದರೆ, ಅವನ ಉತ್ಕೃಷ್ಟವಾದ ಪ್ರಪಂಚ ಜ್ಞಾನದಿಂದ ಅವನು ಒಂದು ಸಲವೂ ಬೇಸ್ತು ಬಿದ್ದುದೇ ಇಲ್ಲ.

ದೊರೆಗೆ ಸಕಲ ಸದ್ಗುಣಗಳೂ ವಾಸ್ತವವಾಗಿ ಇರಬೇಕಾದದ್ದಿಲ್ಲ; ಆದರೆ ಅವುಗಳಿರುವ ತೋರ್ಕೆ ಇರಬೇಕಾದ್ದು ಅವಶ್ಯ. ಇನ್ನೂ ಬೇಕಾದರೆ ಹೇಳಬಹುದು: ಎಲ್ಲಾ ಸದ್ಗುಣಗಳೂ ಇದ್ದರೆ ಅವು ಅಕಾಲದಲ್ಲಿ ಹೊರಬೀಳುವುದರಿಂದ ಬಹಳ ಅನಾಹುತವೇ ಆಗಬಹುದು. ಆದರೆ, ತೋರ್ಕೆಯಿಂದ ಉತ್ತಮ ಪರಿಣಾಮ ಉಂಟಾಗ ಬಲ್ಲುದು. ಮೇಲೆ ಸೌಮ್ಯಭಾವ, ದಯಾಪರತೆ, ವಿನಯ, ಭೂತದಯೆ, ಮತ್ತು ನಿಷ್ಕಪಟ ಭಾವಗಳಿರುವುದು ಗೌರವಾರ್ಹವಾದಾಗ್ಯೂ, ಅವಕಾಶಕ್ಕನುಗುಣವಾಗಿ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದಕ್ಕೆ ಮನಸ್ಸು ಪಳಗಿ ಸಿದ್ಧವಾಗಿರಬೇಕು. ಅದರಲ್ಲಿಯೂ ಕೊಂಚ ವಿಳಂಬವಾಗಿ ಗದ್ದುಗೆಯನ್ನೇರುವ ದೊರೆ ತನ್ನ ರಾಜ್ಯವನ್ನಾಳಿಸಿ

ಕೊಳ್ಳಬೇಕಾದರೆ, ಮೇಲೆ ಹೇಳಿದಂಥ ಗೌರವಯುತ ಪಥವನ್ನೇ ತ್ಯಜಿಸಬೇಕಾಗಬಹುದು. ಇಂಥ ವೇಳೆಯಲ್ಲಿ ಬೇಕಾದಷ್ಟು ಅಮಾನುಷವಾದ, ಅಧರ್ಮಕರವಾದ, ಭೂತದಯೆಯನ್ನಣಕಿಸುವಂತಹ ಕೆಲಸಗಳಿಗೆ ಕೈಹಾಕಲು ಹೇಸದಂತೆ, ಮನಸ್ಸನ್ನು ಪೂರ್ಣ ಹತೋಟಿಯಲ್ಲಿಟ್ಟುಕೊಂಡು, ಒದಗಿ ಬರಬಹುದಾದ ಪರಿಸ್ಥಿತಿಗಳಿಗೆ ತಕ್ಕಂತೆ ದಾಳಹಾಕ ಬಲ್ಲವನಾಗಿರಬೇಕು; ಗಾಳಿ ಬೀಸುವ ದಿಕ್ಕಿನಲ್ಲಿ ತೂರಬಲ್ಲ ಮನೋಬಲ ಉಳ್ಳವನಾಗಿರಬೇಕು. ಎಂದ ಮಾತ್ರಕ್ಕೇ ಒಳ್ಳೆಯ ಗುಣಗಳನ್ನು ವಿಸರ್ಜಿಸಬೇಕೆಂದಲ್ಲ. ಕೆಲವೆಡೆ ಉದಾರಿಯಾಗಿಯೂ, ಮತ್ತೆ ಕೆಲವೆಡೆಗಳಲ್ಲಿ ಧೂರ್ತನಾಗಿಯೂ ಇರಬೇಕಾದ ಸಂದರ್ಭ ಬಲ್ಲವನಾಗಿರಬೇಕು; ಮತ್ತು ಸಂದರ್ಭಕ್ಕೆ ಸಮಂಜಸವಾದ ನಡತೆಯನ್ನು ಅರಿತಿರಬೇಕು. ಆದರೆ, ಮಾತನಾಡುವ ವಿಷಯದಲ್ಲಿ ದೊರೆ ಬಹಳ ಜಾಗರೂಕತೆಯಿಂದಿರಬೇಕಾಗುತ್ತದೆ. ಬಾಯಿಂದ ಹೊರ ಬೀಳುವ ಮಾತುಗಳಲ್ಲೆಲ್ಲಾ ಮೇಲೆ ಹೇಳಿದ ಐದು ಗುಣಗಳು ತುಂಬಿ ಹೊರ ಹೊಮ್ಮುತ್ತಿರಬೇಕು; ನೋಡುವವರಿಗೆ, ಕೇಳುವವರಿಗೆ ಸಹ ಈತನು ಔದಾರ್ಯ, ಋಜುತ್ವ, ಅನುಕಂಪ ಮತ್ತು ದೈವನಿಷ್ಠೆಯಿಂದ ಕೂಡಿದ ದಿವ್ಯಮಾರ್ಗಿಯೆಂಬ ಭಾವವನ್ನು ಕೊಡಬೇಕು; ಅದರಲ್ಲಿಯೂ ದೈವನಿಷ್ಠೆಯ ಭ್ರಮೆಯನ್ನು ಸರ್ವ ಪ್ರಯತ್ನದಿಂದಲೂ ಉಂಟುಮಾಡಬೇಕು. ಏಕೆಂದರೆ, ಬಹುಜನ ಒರೆಯಿಲ್ಲದೆ ಬರಿಯ ವೀಕ್ಷಣೆಯಿಂದ ವಿಮರ್ಶೆ ಮಾಡುವವರು; ಒರೆಹಚ್ಚಿ ಸತ್ವಪರೀಕ್ಷೆ ಮಾಡಬಲ್ಲವರು ಎಲ್ಲೋ ಕೆಲವರು ಮಾತ್ರ. ವಸ್ತುವನ್ನು ಎಲ್ಲರೂ ನೋಡ ಬಲ್ಲರು. ಆದರೆ, ಅವರಲ್ಲಿ ಕೆಲವರು ಮಾತ್ರವೇ ನೋಡಿದ್ದನ್ನು ಅರ್ಥ ಮಾಡಿಕೊಳ್ಳ ಬಲ್ಲವರು. ಹೀಗೆ ಎಲ್ಲರೂ ದೊರೆಯ ಮೇಲ್ಮುಖವನ್ನು ಮಾತ್ರ ಕಾಣುತ್ತಾರೆ; ಕೇವಲ ಕೆಲವರು ಮಾತ್ರ ಅವನ ಅಂತರಂಗವನ್ನು ತಿಳಿಯ ಬಲ್ಲವರಾಗಿರ ಬಹುದು; ಮತ್ತು ಈ ಕೆಲವರು ಕೂಡಾ ದೊರೆಯ ಕೃಪಾಕಟಾಕ್ಷ ಕಾಂಕ್ಷಿಗಳಾದ ಬಹುಮತದ ಜನಗಳ ಅಭಿಪ್ರಾಯವನ್ನು ವಿರೋಧಿಸುವ ಹುಚ್ಚು ಕೆಲಸಕ್ಕೆ ಹೋಗುವುದಿಲ್ಲವಾದ್ದರಿಂದ ದೊರೆಗೆ ಯಾವ ಆತಂಕವೂ ಇರುವುದಿಲ್ಲ. ದೊರೆಗಳ ಕೃತ್ಯಗಳ ಮೂಲವನ್ನು ಅರಿತು ವಿಮರ್ಶೆಮಾಡುವ ಅಧಿಕಾರ, ಅಥವಾ ಅವಕಾಶ ಯಾರಿಗೂ ಇರುವುದಿಲ್ಲವಾದ್ದರಿಂದ, ಆ ಕಾರ್ಯದ ವಿಮರ್ಶೆ ಅದರ ಫಲದಿಂದಲೇ ಆಗಬೇಕಾಗುತ್ತದೆ. ಆದುದರಿಂದ ತನ್ನ ಜೀವವನ್ನು ಮತ್ತು ತನ್ನ ಪರಮಾಧಿಕಾರವನ್ನು ಉಳಿಸಿ

ಕೊಳ್ಳಲು ದೊರೆ ಯಾವ ಕಾರ್ಯವನ್ನು ಮಾಡಿದರೂ ಅದು ಘನತೆಯಿಂದ ಕೂಡಿದೆ ಎಂದು ಪ್ರತಿಯೊಬ್ಬರೂ ಪ್ರಶಂಸಿಸುತ್ತಾರೆ. ಏಕೆಂದರೆ, ಜನಗಳು ಕೋರಿಕೆ ಮತ್ತು ನಡವಳಿಕೆಗೆ ಮಾರು ಹೋಗುತ್ತಾರೆ; ಮತ್ತು ಯಾರಾದರೂ ಕೆಲವು ಬುದ್ಧಿಶಾಲಿಗಳಿದ್ದರೆ ಮಾರು ಹೋಗಿರುವ ಅಧಿಕ ಸಂಖ್ಯೆಯ ಜನದೊಂದಿಗೆ ಅವರೂ ಸೇರಿಹೋಗುತ್ತಾರೆ.

ಬಾಯಲ್ಲಿ ಸದಾ ನಿಷ್ಠೆ ಮತ್ತು ಶಾಂತಿಯ ಪ್ರೇಮ ಹೊರತು ಮತ್ತೇನೂ ಮಾತನಾಡದ ರಾಜರೊಬ್ಬರು ಇಂದಿಗೂ ಇದ್ದಾರೆ. ಅವರ ಹೆಸರನ್ನು ಇಲ್ಲಿ ಹೇಳ ಬಯಸುವುದಿಲ್ಲ. ಆದರೆ ಅವರೇನಾದರೂ ನಿಜವಾಗಿ ನಿಷ್ಠರೇ ಆಗಿರಲಿ, ಶಾಂತತೆಯ ಪ್ರಿಯರೇ ಆಗಲಿ ಆಗಿದ್ದರೆ ಈ ವೇಳೆಗೆ ಅವರ ಪ್ರಭುತ್ವ ಮತ್ತು ಯಶಸ್ಸುಗಳ ಹೆಸರೇ ಇರುತ್ತಿರಲಿಲ್ಲ.

ಹದಿನೆಂಟನೆಯ ಅಧ್ಯಾಯ

ಆಳುವವರು ದ್ವೇಷಕ್ಕೂ, ಅವಜ್ಞೆಗೂ ಗುರಿಯಾಗದಂತೆ ಎಚ್ಚರದಿಂದ ಇರಬೇಕು

ಇದುವರೆಗೂ ನಾವು ದೊರೆಯಲ್ಲಿರಬೇಕಾದ ಯೋಗ್ಯತೆಗಳಲ್ಲಿ ಅತ್ಯಂತ ಮುಖ್ಯವಾದವುಗಳನ್ನು ಮಾತ್ರ ವಿಚಾರಮಾಡಿದ್ದೇವೆ. ಆದುದರಿಂದ ಈಗ ಮೇಲ್ಕಂಡಂತಹ ಸಾಮಾನ್ಯ ಶೀರ್ಷಿಕೆಗಳಲ್ಲಿ ಬರುವ ಮಿಕ್ಕ ವಿಷಯಗಳ ಬಗ್ಗೆ ಸಂಕ್ಷೇಪವಾಗಿ ವಿಚಾರಮಾಡೋಣ.

ಈ ಮೊದಲೆ ಸೂಕ್ಷ್ಮವಾಗಿ ಸೂಚಿಸಿರುವಂತೆ ಜನಗಳಿಗೆ ತನ್ನಲ್ಲಿ ಅಸಹ್ಯ ಮತ್ತು ತಿರಸ್ಕಾರ ಬರಿಸುವಂತಹ ಸದಂರ್ಭಗಳಿಂದ ದೂರವಿರುವುದು ಕ್ಷೇಮವಾದ ನೀತಿ ಎಂದು ದೊರೆ ತಿಳಿದುಕೊಳ್ಳಬೇಕು. ಹೀಗೆ ನಡೆದುಕೊಂಡಷ್ಟೂ ದೊರೆ ತನ್ನ ಕೆಲಸ ಕಾರ್ಯಗಳಲ್ಲಿ ಯಶಸ್ವಿಯಾಗುತ್ತಾನೆ. ಮತ್ತು ಅವನಿಗೆ ತನ್ನ ಇತರ ದುರ್ಗುಣಗಳಿಂದ ಅನನುಕೂಲ ಮತ್ತು ಅಪಾಯ ಸಂಭವಿಸುವುದಿಲ್ಲ. ನಾನು ಮೊದಲೇ ಹೇಳಿರುವಂತೆ ತನ್ನ ಪ್ರಜೆಗಳ ಆಸ್ತಿಯನ್ನು ದುರಾಕ್ರಮಣಮಾಡುವುದು, ಮತ್ತು ಅವರ ಹೆಂಡಂದಿರ ಮೇಲೆ ಅತ್ಯಾಚಾರ ನಡೆಸುವುದು, ಇವುಗಳು ದೊರೆಯ ಮೇಲೆ ಸಹಿಸಲಸಾಧ್ಯವಾದ ದ್ವೇಷವನ್ನು ಕೆರಳಿಸುತ್ತವೆ. ಇವುಗಳನ್ನು ದೊರೆ ಜಾಗರೂಕನಾಗಿ ತ್ಯಜಿಸಬೇಕು. ಏಕೆಂದರೆ, ಪ್ರಪಂಚದಲ್ಲಿ ಹೆಚ್ಚಿನ ಅಂಶ ಜನಸಾಮಾನ್ಯರು ತಮ್ಮ ತಮ್ಮ ಧನ ಗೌರವಗಳಿಗೆ ಹಾನಿಯಿಲ್ಲದಿರುವ ವರೆಗೂ ತಮ್ಮ ಪದವಿಯಲ್ಲಿ ತೃಪ್ತರಾಗಿ, ಶಾಂತಿಯಿಂದ ಬಾಳುತ್ತಾರೆ. ದುರಭಿಲಾಷೆಯಿಂದ ಸೊಕ್ಕಿರು

ವವರು ಬಹಳ ಕಡಿಮೆ ಮಂದಿ. ಇವರನ್ನು ಅಡಗಿಸಲು ಅತ್ಯಂತ ಸುಲಭವಾದ ಅನೇಕ ಮಾರ್ಗಗಳಿವೆ. ಆದರೆ, ತಾನು ಸ್ತ್ರೀಲಂಪಟ ಮತ್ತು ತೂಕವಿಲ್ಲದ, ಸ್ಥೈರ್ಯವಿಲ್ಲದ, ಅಳ್ಳೆದೆಯ ಮತ್ತು ಹಿಂಜರಿಯುವ ಮನೋಭಾವವುಳ್ಳವನೆಂದು ಪರಿಗಣಿಸಲ್ಪಟ್ಟಾಗ ದೊರೆ ತಿರಸ್ಕೃತನಾಗುತ್ತಾನೆ. ಸಮುದ್ರದ ನಡುವಿನ ಬಂಡೆಯು ನಾವಿಕನಿಗೆ ಹೇಗೆ ಮೃತ್ಯುಪ್ರಾಯವೋ, ಹಾಗೆ ದೊರೆಗೆ ಈ ನ್ಯೂನತೆಗಳು ಅಪಾಯಕರ; ಆದುದರಿಂದ ಅವನು ಇವುಗಳ ವಿಚಾರ ಅತ್ಯಂತ ಜಾಗರೂಕನಾಗಿರಬೇಕು. ತನ್ನ ಪ್ರತಿಯೊಂದು ನಡೆ ನುಡಿಯಲ್ಲಿ ಉದಾತ್ತಭಾವ, ಕೆಚ್ಚು, ಗಾಂಭೀರ್ಯ ಮತ್ತು ಧೃತಿ ಇವುಗಳು ಎದ್ದು ಕಾಣುವಂತೆ ತನ್ನ ಕೈಯಲ್ಲಾದಷ್ಟು ಪ್ರಯತ್ನಪಡಬೇಕು. ತನ್ನ ಪ್ರಜೆಗಳ ಖಾಸಗೀ ವ್ಯವಹಾರಗಳಲ್ಲಿ ತಾನು ನಿರ್ಧಾರಕ್ಕೆಬಂದು ಕೊಡುವ ತೀರ್ಪು ಮತ್ತೆ ರದ್ದುಗೊಳಿಸುವಂತಹದಾಗಿರಬಾರದು. ಮತ್ತು ಪ್ರಜೆಗಳಿಗೆ ದೊರೆಗಳ ಮನಸ್ಸನ್ನು ಮರುಳುಮಾಡುವುದಕ್ಕಾಗಲಿ, ಅಥವಾ ಒಂದು ಸಲ ದೊರೆಯು ಮಾಡಿದ ಸಂಕಲ್ಪವನ್ನು ಬದಲಾಯಿಸುವಂತೆ ಮಾಡುವುದಕ್ಕಾಗಲಿ, ತಮಗೆ ಸಾಧ್ಯವೇ ಇಲ್ಲವೆಂಬ ಖಾತರಿ ಬರುವಂತೆ ಮಾಡಬೇಕು. ಈ ರೀತಿಯಾಗಿ ಜನಗಳಿಂದ ಗೌರವಿಸಲ್ಪಡುವುದಕ್ಕೆ ದೊರೆ ಅತ್ಯಂತ ಬಲಿಷ್ಠನಾಗಿರಬೇಕು. ಇಂತಹ ದೊರೆ ಶಕ್ತನಾದರೆ ಜನಗಳು ಆತನ ವಿರುದ್ಧ ಸುಲಭವಾಗಿ ದಂಗೆಯೇಳಲು ಮತ್ತು ಧಾಳಿಮಾಡಲು ಸಾಧ್ಯವಿಲ್ಲ. ಏಕೆಂದರೆ, ಜನಗಳ ದೃಷ್ಟಿಯಲ್ಲಿ ಈತನು ಮೊದಲೇ ಧರ್ಮಿಷ್ಠನೂ ಶೂರನೂ ಆಗಿರುತ್ತಾನೆ. ದೊರೆ ಎರಡು ಕಡೆಗಳಲ್ಲಿ ಭಯದಿಂದ ಗೌರವಿಸಲ್ಪಡಬೇಕು. ತನ್ನ ರಾಜ್ಯದಲ್ಲಿ; ತನ್ನ ಪ್ರಜೆಗಳಲ್ಲಿ; ಮತ್ತು ಹೊರದೇಶಗಳಲ್ಲಿ ತನ್ನ ಅಂತಸ್ತಿನವರಿಂದ. ಹೊರಗಿನವರ ಭಯಭರಿತ ಗೌರವವನ್ನು ಪಡೆಯುವುದಕ್ಕೆ ಒಳ್ಳೆಯ ಸೈನ್ಯಬಲ, ಮಿತ್ರರಾಷ್ಟ್ರಗಳ ಸಮೂಹ ಸಾಧನೆಗಳು; ಅವನ ಸೈನ್ಯಬಲ ಚೆನ್ನಾಗಿದ್ದರೆ ಅವನ ಸ್ನೇಹವನ್ನು ಸಾಕಾದಷ್ಟು ರಾಷ್ಟ್ರಗಳು ಬಯಸುತ್ತವೆ. ಮತ್ತು ದೇಶದ ಒಳ ಆಡಳಿತ ಬಂದೋಬಸ್ತಾಗಿದ್ದು, ಮುಂಚಿನ ಒಳಸಂಚೇನೂ ಇರದಿದ್ದರೆ ಯಾವ ಹೊರಗಿನವರಿಂದಲೂ ಆತನ ರಾಜ್ಯಕ್ಕೆ ಅಪಾಯ ಉಂಟಾಗುವುದಿಲ್ಲ. ಯಾವ ರೀತಿಯ ಗಲಭೆಯಾದರೂ ಸಹ ಧೃತಿಗೆಡದೆ ದೊರೆ ನಾನು ಮೊದಲೆ ನಿರೂಪಿಸಿರುವಂತೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಎದೆಗೆಡದಿದ್ದರೆ, ಯಾವ ರೀತಿಯ ಹೊರ ತೊಂದರೆಯನ್ನಾದರೂ ಎದುರಿಸಿ ನಿಲ್ಲಬಹುದು.

ಇದಕ್ಕೆ ಸ್ಪಾರ್ಟದ ನ್ಯಾಬಿಸ್ ಎಂಬಾತನ ಉದಾಹರಣೆ ಇದೆ. ನಾನು ಮೊದಲೇ ಒತ್ತಿ ಹೇಳಿರುವಂತೆ, ಪ್ರಜೆಗಳು ತನ್ನ ವಿಷಯದಲ್ಲಿ ತೃಪ್ತರಾಗಿರುವಂತೆ ನೋಡಿಕೊಳ್ಳತಕ್ಕದ್ದು ದೊರೆಗೆ ಅತ್ಯವಶ್ಯವಾದ ಅಂಶ. ತನ್ನನ್ನು ಯಾರೂ ದ್ವೇಷಿಸದಂತೆ ನಡೆದುಕೊಂಡು, ತನ್ನ ಬಗ್ಗೆ ಪ್ರಜೆಗಳು ತೃಪ್ತರಾಗುವಂತೆ ಮಾಡಿದರೆ, ರಾಜ್ಯದಲ್ಲಿ ಒಳಸಂಚಿಗೆ ತಕ್ಕ ಮದ್ದು ಮಾಡಿದಂತಾಗುತ್ತದೆ. ಹೀಗೆ, ಹೊರಗಿನ ಪರಿಸ್ಥಿತಿ ಸಮಾಧಾನಕರವಾಗಿರುವಾಗ, ಒಳಗೆ ಒಳಸಂಚಿಗೂ ಅವಕಾಶವಿಲ್ಲದಿದ್ದರೆ ರಾಜ್ಯಭಾರ ಸುಗಮವಾಗಿಯೇ ನಡೆಯುತ್ತದೆ.

ದಂಗೆಯನ್ನಡಗಿಸುವುದಕ್ಕೆ ದೊರೆಗೆ ಅತ್ಯುತ್ತಮ ಸಾಧನವೆಂದರೆ ಜನತೆಯ ದ್ವೇಷಕ್ಕೆ ಅಥವಾ ಧಿಕ್ಕಾರಕ್ಕೆ ಗುರಿಯಾಗದಿರುವುದು. ಸಾಮಾನ್ಯವಾಗಿ ದೊರೆಯನ್ನು ಕೊಲ್ಲಬಯಸುವವರು ಅವನ ಕೊಲೆಯಿಂದ ಪ್ರಜೆಗಳಿಗೆ ಸಂತೋಷವಾಗುವುದೆಂದು ನಿರೀಕ್ಷಿಸುತ್ತಾರೆ. ದೊರೆ ಜನಗಳಿಗೆ ಪ್ರಿಯನೆಂದು ತಿಳಿದರೆ, ಯಾರೂ ಅವನನ್ನು ಕೊಲ್ಲುವ ಸಂಚಿಗೆ ಹೋಗುವುದಿಲ್ಲ. ಏಕೆಂದರೆ, ಒಳಸಂಚು ಮಾಡುವುದು ಸುಲಭವಲ್ಲ. ಅದರಲ್ಲಿ ಬೇಕಾದಷ್ಟು ಎಡರುತೊಡರುಗಳಿರುತ್ತವೆ. ಇತಿಹಾಸದಲ್ಲಿ ಸಂಚುಗಾರರು ಯತ್ನಿಸಿದ ಬಹು ಪಿತೂರಿಗಳ ಪೈಕಿ ಅತಿ ಸ್ವಲ್ಪ ಸಂಖ್ಯೆಯವು ತಾನೇ ಸಂಚುಗಾರರ ಇಷ್ಟದಂತೆ ಪರಿಣಮಿಸಿವೆ. ಏಕೆಂದರೆ, ಯಾವ ಮನುಷ್ಯನೂ ತಾನೊಬ್ಬನೇ ಪಿತೂರಿ ಮಾಡಲು ಸಾಧ್ಯವಿಲ್ಲ. ಮತ್ತು ಪಿತೂರಿಗಾರನು ದೊರೆಯ ಬಗ್ಗೆ ಅತೃಪ್ತಿ ಹೊಂದಿರುವವರನ್ನೇ ತನ್ನ ಜೊತೆಗಾರರನ್ನಾಗಿ ಆರಿಸಿಕೊಳ್ಳಬೇಕು. ಹೀಗೆ ಒಳಸಂಚಿಗೆ ಸೇರಿದವನು, ಗುಟ್ಟನ್ನು ರಟ್ಟುಮಾಡಿ, ದೊರೆಯ ಕೃಪೆಗೆ ಪಾತ್ರನಾಗಿ ಪ್ರಯೋಜನವನ್ನು ಪಡೆಯಬಹುದೆಂಬ ಮಹತ್ತರವಾದ ಆಶೆಗೆ ಸಿಕ್ಕಿಬೀಳುತ್ತಾನೆ. ಸಂಚಿನ ಸುಗಮತೆ, ಮತ್ತು ಅದರಿಂದ ಲಭಿಸಬಹುದಾದ ಪ್ರಯೋಜನ ಸಂದೇಹಾಸ್ಪದ; ಆದರೆ ಅದನ್ನು ದೊರೆಗೆ ತಿಳಿಸುವುದರಿಂದ ಪಡೆಯಬಹುದಾದ ಫಲ ಸ್ಪಷ್ಟ. ಈ ಆಂದೋಳನದಲ್ಲಿ ಸಿಕ್ಕಿದ ಮನುಷ್ಯ ನಿಮ್ಮಲ್ಲಿ ಸಾಚಾವಾಗಿರಬೇಕಾದರೆ ಅವನು ನಿಮ್ಮ ಪರಮಮಿತ್ರನೋ, ದೊರೆಯ ಪರಮಶತ್ರುವೋ ಆಗಿರಬೇಕು. ಎರಡು ಮಾತುಗಳಲ್ಲಿ ಹೇಳಬೇಕಾದರೆ ಪಿತೂರಿದಾರರ ಪಕ್ಷದ ಮನೋಭಾವ ಸಂದೇಹ, ಮಾತ್ಸರ್ಯ ಮತ್ತು ರಾಜದಂಡನೆಯ ಭೀತಿ; ದೊರೆಯ ಪಕ್ಷದಲ್ಲಾದರೋ ಸರಕಾರದ ಜಬರ್, ಜಬರದಸ್ತು, ಮತ್ತು ಕಾನೂನು, ಸಿಬ್ಬಂದಿಯ ಸಹಾಯ ಕಂಡ

ಹಾಗೇ ಇವೆ; ಇವುಗಳ ಜೊತೆಯಾಗಿ ಪ್ರಜೆಗಳ ಅನುರಾಗವೂ ಬೆರೆತರೆ, ಎಂತಹ ಹಟವಾರಿ ಶತ್ರುವೂ ಪಿತೂರಿಯ ಧೋರಣೆಗೆ ನುಗ್ಗಲು ಹಿಂಜರಿಯ ಬೇಕಾಗುತ್ತದೆ. ಹೀಗೆ, ದಂಗೆಕೋರನಿಗೆ ತನ್ನ ಸಂಚನ್ನು ಕಾರ್ಯರೂಪಕ್ಕೆ ತರುವ ಮೊದಲೇ ಇಷ್ಟು ಹೆದರಿಕೆಯಿದ್ದರೆ, ತದನಂತರದ ಹೆದರಿಕೆ ಮತ್ತೂ ಜಾಸ್ತಿ ಇರುತ್ತದೆ. ದಂಗೆಯಿಂದ ಜನತೆಯ ವೈರಕ್ಕೆ ಗುರಿಯಾದ ಆತನಿಗೆ ತಲೆತಪ್ಪಿಸಿಕೊಳ್ಳುವ ದಾರಿಯೇ ಸಿಕ್ಕುವುದಿಲ್ಲ. ಈ ಬಗ್ಗೆ ಅನೇಕ ಉದಾ ಹರಣೆಗಳನ್ನು ಮುಂದಿಡಬಹುದು. ಆದರೆ ಈಗ ನಮ್ಮ ಹಿರಿಯರ ಕಾಲದಲ್ಲಿ ನಡೆದ ಒಂದು ಘಟನೆಯನ್ನು ಮಾತ್ರ ಹೇಳುತ್ತೇನೆ: ಈಗ ದೊರೆಯಾಗಿರುವ ಹ್ಯಾನಿಬಾಲರ ಅಜ್ಜನವರಾದ ಹ್ಯಾನಿಬಾಲ್ ಬೆಂಟಿವೋಗ್ಲಿ ಬೊಲೋನದ ದೊರೆಯಾಗಿದ್ದಾಗ, ಕೆನ್ನೋಷಿ ಎಂಬವರು ಪಿತೂರಿ ಮಾಡಿ, ಆಗ ತೊಟ್ಟಿಲಲ್ಲಿದ್ದ ಜಾನ್ ಎನ್ನುವ ಹೆಸರಿನ ಒಂದು ಮಗುವನ್ನು ಹೊರತು ಉಳಿದವರೆಲ್ಲರನ್ನೂ ಕೊಂದುಹಾಕಿದರು. ಆದರೆ ಬೊಲೋನದ ಪ್ರಜೆ ಗಳಿಗೆ ಬೆಂಟಿವೋಗ್ಲಿ ಮನೆತನದ ಮೇಲೆ ಎಷ್ಟು ಭಕ್ತಿ ವಿಶ್ವಾಸಗಳಿದ್ದುವೆಂದರೆ, ರಾಜರ ಕೊಲೆ ನಡೆದ ಕೂಡಲೇ ಪ್ರಜೆಗಳು ಆಯುಧಗಳನ್ನು ಹಿರಿದು ಕೆನ್ನೋಷಿ ಮನೆತನದವರನ್ನೆಲ್ಲಾ ನಾಶಮಾಡಿಬಿಟ್ಟರು; ಅಲ್ಲದೆ, ದೊರೆಯ ಮರಣಾನಂತರ ರಾಜ್ಯಭಾರವನ್ನು ಕೈಕೊಳ್ಳುವಂತಹ ಹಿರಿಯ ತಲೆಯೇ ಆ ವಂಶದಲ್ಲಿ ಉಳಿದಿರಲಿಲ್ಲವಾದ್ದರಿಂದ, ಅಲ್ಲಿನ ಜನಗಳು ಫ್ಲಾರೆನ್ಸ್ ನಗರದಲ್ಲಿ ಬೆಂಟಿವೋಗ್ಲಿ ಮನೆತನದ ಅನೌರಸ ಹುಡುಗನೊಬ್ಬನು ಕಮ್ಮಾರ ಕಸಬಿನಿಂದ ಜೀವಿಸುತ್ತಿರುವನೆಂಬ ಸುದ್ದಿಯನ್ನು ತಿಳಿದು, ಫ್ಲಾರೆನ್ಸಿಗೆ ತಮ್ಮ ರಾಯಭಾರಿ ಗಳನ್ನು ಕಳುಹಿಸಿ, ಆ ಹುಡುಗನನ್ನು ರಾಜಮರ್ಯಾದೆಗಳೊಡನೆ ತಮ್ಮ ಪಟ್ಟಣಕ್ಕೆ ಕರೆಯಿಸಿಕೊಂಡು, ಅವನಿಗೆ ರಾಜ್ಯಾಡಳಿತ ವಹಿಸಿದರು. ಈತನು, ಮೇಲೆ ಹೇಳಿದ ಜಾನ್ ವಯಸ್ಸಿಗೆ ಬರುವವರೆಗೂ ಸುಸೂತ್ರವಾಗಿ ಆಡಳಿತ ನಡೆಸಿದನು. ಇದನ್ನು ಏಕೆ ಹೇಳುವುದಕ್ಕೆ ಬಂದೆನೆಂದರೆ, ಪ್ರಜೆಗಳು ರಾಜನ ವಿಷಯದಲ್ಲಿ ಸ್ನೇಹಿತರಾಗಿರುವ ವರೆಗೂ ಪಿತೂರಿಗಾರರ ಸಂಚು ಯಶಸ್ವಿ ಯಾಗುವ ಸಂಭವ ಕಡಿಮೆ. ಆದರೆ ಪ್ರಜೆಗಳೇನಾದರೂ ಅಸಂತುಷ್ಟರಾಗಿ ದೊರೆಯ ಮೇಲೆ ದ್ವೇಷ ತಳೆದರೆ ದೊರೆಗೆ ಎಲ್ಲರಿಂದಲೂ ಎಲ್ಲ ರೀತಿಯಲ್ಲೂ ಅಪಾಯವುಂಟು. ರಾಜ್ಯದ ದೊಡ್ಡ ಸಾಮಂತರ ಘನತೆಗೆ ಧಕ್ಕೆ ಒದಗದಂತೆ ಮತ್ತು ಪ್ರಜೆಗಳು ಅಸಂತುಷ್ಟರಾಗದಂತೆ ಎಲ್ಲಾ ಬುದ್ಧಿವಂತ ದೊರೆಗಳೂ

ಮತ್ತು ಬಿಗಿಯಾದ ಆಡಳಿತಗಳೂ ಅಚಲವಾದ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಕಾಲದ ಸಾಂಕುಶ ಪ್ರಭುತ್ವಕ್ಕೊಳಗಾದ ದೇಶಗಳಲ್ಲೆಲ್ಲಾ ಅತ್ಯಂತ ಸುಸೂತ್ರವಾಗಿರುವುದೆಂದರೆ ಫ್ರಾನ್ಸ್ ದೇಶ. ಇದರಲ್ಲಿ ರಾಜನ ಸ್ವಾತಂತ್ರ್ಯ ಮತ್ತು ಭದ್ರತೆಯನ್ನು ಕಾಪಾಡತಕ್ಕಂಥ ಕಾನೂನುಗಳು ಮತ್ತು ರಾಜ್ಯಾಂಗದ ಸಂಸ್ಥೆಗಳು ಇವೆ. ಇವುಗಳಲ್ಲಿ ಮುಖ್ಯವಾದದ್ದು ಪಾರ್ಲಿಮೆಂಟು, ಮತ್ತು ಪಾರ್ಲಿಮೆಂಟಿಗೆ ವಹಿಸಿರುವ ಅಧಿಕಾರ. ಫ್ರೆಂಚ್ ಪ್ರಭುತ್ವವನ್ನು ಸ್ಥಾಪಿಸಿದ ಮೂಲಪುರುಷನು, ರಾಜ್ಯದಲ್ಲಿನ ದೊಡ್ಡದೊಡ್ಡ ಶ್ರೀಮಂತ ಸರದಾರರುಗಳ ಅಹಂಕಾರವನ್ನೂ, ಮಹತ್ವಾಕಾಂಕ್ಷೆಯನ್ನೂ ಚೆನ್ನಾಗಿ ತಿಳಿದು, ಇವುಗಳ ಹತೋಟಿಯ ಬಗ್ಗೆ ಲಗಾಮನ್ನು ನಿರ್ಮಾಣ ಮಾಡಬೇಕೆಂದು ಪಾರ್ಲಿಮೆಂಟನ್ನು ರಚಿಸಿದನು. ಅದೂ ಅಲ್ಲದೆ ಈ ದುರಹಂಕಾರಿ ಶ್ರೀಮಂತರುಗಳ ಮೇಲೆ ಜನಗಳಿಗಿರುವ ಬದ್ಧ ದ್ವೇಷವನ್ನು ಅರಿತು, ದೊರೆಯು ತಾನು ಶ್ರೀಮಂತರ ಕಡೆ ಸೇರಿದರೆ ಜನಗಳ ದ್ವೇಷಕ್ಕೆ ಗುರಿಯಾಗುತ್ತೇನೆ; ಹಾಗೆಯೇ ಜನಗಳ ಪಕ್ಷವಹಿಸಿದರೆ ಶ್ರೀಮಂತರ ವೈರವನ್ನು ಕಟ್ಟಿಕೊಳ್ಳುತ್ತೇನೆ; ಎಂಬ ಕಾರಣದಿಂದ ದೊರೆಯನ್ನು ಈ ಸಂಧಿಗ್ಧ ಸ್ಥಾನದಿಂದ ತಪ್ಪಿಸಿ, ಜನಗಳಿಗೂ, ಶ್ರೀಮಂತರಿಗೂ ಸಂಭವಿಸಬಹುದಾದ ದ್ವಂದ್ವಗಳ ವಿಮರ್ಶೆಗೆ ಬೇರೊಂದು ಸಂಸ್ಥೆಯಾದ ಪಾರ್ಲಿಮೆಂಟನ್ನು ನಿರ್ಮಿಸಿದನು. ಇದರ ಫಲವೇನೆಂದರೆ, ಆಡಳಿತದ ಕಷ್ಟವೂ ದ್ವೇಷಗಳ ನಿಷ್ಠುರವೂ ಅಧಿಕಾರಿಗಳ ತಲೆಯ ಮೇಲೆ ಹೊರಿಸಲ್ಪಡುತ್ತದೆ. ದಯೆ, ದಾನ, ಉಪಕೃತಿ ಇವುಗಳ ಗೌರವ, ಕೀರ್ತಿ ಇವು ಮಾತ್ರ ದೊರೆಯ ಪಾಲಿಗೆ ಬರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ದೊರೆಗಳು ಜನಗಳನ್ನು ಎದುರುಹಾಕಿಕೊಳ್ಳದಂತೆ, ತಮ್ಮ ಘನತೆಯನ್ನು ಕಾಪಾಡಿಕೊಂಡು ಬರಬೇಕು.

ಹಿಂದಿನ ಅನೇಕ ರೋಮನ್ ಚಕ್ರವರ್ತಿಗಳ ಜೀವನಗಳನ್ನು ಮೇಲೆ ಮೇಲೆ ಅವಲೋಕಿಸಿದವರಿಗೆ ನನ್ನ ಅಭಿಪ್ರಾಯಕ್ಕೆ ವಿರೋಧವಾಗುವಂತಹ ಬೇಕಾದಷ್ಟು ಉದಾಹರಣೆಗಳು ಕಂಡುಬಂದಂತಿರಬಹುದು. ಏಕೆಂದರೆ, ಅವರಲ್ಲಿ ಕೆಲವು ದೊರೆಗಳು ಎಲ್ಲರಿಗೂ ಅಚ್ಚುಮೆಚ್ಚಾದ, ಅತ್ಯುತ್ತಮ ನಡತೆಯಿಂದ ಕೂಡಿ ನಿಸ್ಸಂದೇಹವಾದ ಉದಾತ್ತ ಮನೋಭಾವ ಉಳ್ಳವರಾದಾಗ್ಯೂ ಕೂಡ ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದಾರೆ; ಮತ್ತು ಇನ್ನು ಕೆಲವರು ತಮ್ಮ ಪ್ರಜೆಗಳ ಪಿತೂರಿಗೊಳಗಾಗಿ ಕೊಲೆ ಮಾಡಲ್ಪಟ್ಟಿ

ದ್ದಾರೆ. ಇದಕ್ಕೆ ನಾನು ಸಮಂಜಸವಾದ ಸ್ಪಷ್ಟೀಕರಣದ ಉತ್ತರಕೊಡುತ್ತೇನೆ. ಈ ರಾಜರುಗಳ ವ್ಯವಹಾರ ಮತ್ತು ಗುಣದೋಷಗಳ ಬಗ್ಗೆ ಗಾಢವಾಗಿ ವಿಚಾರಮಾಡಿದರೆ ಅವರ ನಾಶವು ನನ್ನ ಹೇಳಿಕೆಯನ್ನು ಸಮರ್ಥಿಸುತ್ತದೆ. ಈಗ ಮಾತ್ರ ನಾನು ನಮ್ಮ ಕಾಲದ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಮನುಷ್ಯನ ಪರಿಗಣನೆಗೋಸ್ಕರ ಕೆಲವು ವಿಷಯಗಳನ್ನು ಇಲ್ಲಿ ನಿರೂಪಿಸುತ್ತೇನೆ. ತತ್ವಜ್ಞಾನಿ ದೊರೆ ಮಾರ್ಕಸ (Marcus) ನಿಂದ ಹಿಡಿದು ಮ್ಯಾಕ್ಸಿಮಸ (Maximus) ನ ವರೆಗೆ—ಅಂದರೆ ಮಾರ್ಕಸ್, ಇವನ ಮಗ ಕಮ್ಮೋಡಸ್ (Commodus), ಪರ್ಟಿನ್ಯಾಕ್ಸ್ (Pertinax), ಜೂಲಿಯನ್ (Julian), ಸೆವೆರಸ್ (Severus), ಆ್ಯಂಟೋನಿಯಸ್ (Antonius), ಇವನ ಮಗ ಕಾರಕುಲ್ಲಾ (Caraculla), ಮೇಕ್ರಿನಸ್ (Macrinus), ಹೆಲಿಯೋಗಬ್ಯಾಲಸ್ (Heliogabalus), ಅಲೆಕ್ಸ್ಯಾಂಡರ್ (Alexander) ಮತ್ತು ಮ್ಯಾಕ್ಸಿಮಸ್ (Maximus)—ರೋಮ್ ಚಕ್ರಾಧಿಪತ್ಯವನ್ನಾಳಿದ ದೊರೆಗಳ ಜೀವನದ ಉದಾಹರಣೆಗಳನ್ನು ಹೇಳಿದರೆ ಸಾಕೆಂದು ತೋರುತ್ತದೆ.

ಈ ಚಕ್ರವರ್ತಿಗಳ ಸನ್ನಿವೇಶ ಹೇಗಿತ್ತೆಂದರೆ, ಉಳಿದ ರಾಜರುಗಳಿಗೆ ತಮ್ಮ ರಾಜ್ಯದ ಶ್ರೀಮಂತರ ಹತೋಟಿ, ಮತ್ತು ಸಾಮಾನ್ಯ ಜನರ ಪುಂಡುತನದ ನಿವಾರಣೆ, ಇವೆರಡೇ ಮುಖ್ಯ ಸಮಸ್ಯೆಗಳಾಗಿದ್ದರೆ, ರೋಮನ್ ಚಕ್ರವರ್ತಿಗಳು ಇವೆರಡಕ್ಕಿಂತಲೂ ಭಾರವಾದ ಇನ್ನೊಂದು ಜವಾಬ್ದಾರಿಯನ್ನು ಹೊತ್ತಿದ್ದರು. ಅದು ತಮ್ಮ ಸೈನ್ಯದ ಧನತೃಷ್ಣೆ ಮತ್ತು ನಿರ್ದಯತೆಯನ್ನು ತಡೆಗಟ್ಟುವುದು. ಪ್ರಜೆಗಳನ್ನೂ ಸೈನ್ಯವನ್ನೂ ಏಕಕಾಲದಲ್ಲಿ ಏಕ ನೀತಿಯಿಂದ ತೃಪ್ತಿಪಡಿಸುವುದು ಅಸಾಧ್ಯ ಸಮಸ್ಯೆ. ಪ್ರಜೆಗೆ ಶಾಂತತೆ, ಶಾಂತತೆಯ ಪ್ರಿಯನಾದ ಪ್ರಭು ಬೇಕು. ಸೈನ್ಯಕ್ಕೆ ಯುದ್ಧ, ಕದನಪ್ರಿಯನಾದ ದೊರೆಬೇಕು. ಈ ದೊರೆ ತನ್ನ ಪ್ರಜೆಗಳನ್ನು ಸುಲಿದು, ತಮಗೆ ದ್ರವ್ಯಕೊಟ್ಟರೆ ಅದಕ್ಕೆ ಅವನ ಮೇಲೆ ಇದ್ದದ್ದೂ ಪ್ರೇಮ. ಈ ವಿಪರೀತ ಆಶೆಗಳನ್ನು ಏಕಶ್ರುತಿಗೆ ತರುವ ಅಸಾಧ್ಯ ಕಾರ್ಯಕ್ಕೆ ಸಿಕ್ಕಿ ಅನೇಕ ಚಕ್ರವರ್ತಿಗಳು ಮಡಿದರು. ಕೆಲವರು ಸಿಪಾಯಿಗಳ ದಯೆ ಮುಖ್ಯವೆಂದು ಭಾವಿಸಿ ಪ್ರಜಾಕಂಟಕರಾದರು. ಇನ್ನು ಕೆಲವರು ಪ್ರಜಾಪಕ್ಷವನ್ನು ವಹಿಸಿ, ಸೈನ್ಯದ ಕ್ರೋಧಕ್ಕೆ ಬಲಿಬಿದ್ದರು. ಪರ್ಟಿನ್ಯಾಕ್ಸ್ (Pertinax), ಅಲೆಕ್ಸ್ಯಾಂಡರ್

ಎಂಬ ದಯಾಪರ ಮತ್ತು ಧರ್ಮಿಷ್ಠರಾದ ಚಕ್ರವರ್ತಿಗಳು ಶೋಚನೀಯ ಅಂತ್ಯಕ್ಕೆ ಬಂದರು. ಮಾರ್ಕಸ್ ಆರಿಲಿಯಸ್ (Marcus Aurelius) ಅವರಷ್ಟೆ ಧರ್ಮಿಷ್ಠನಾಗಿದ್ದರೂ, ಆ ದುರ್ದೈವಕ್ಕೆ ಒಳಗಾಗದಿದ್ದುದಕ್ಕೆ ಕಾರಣ ಬೇರೆ. ಅವನು ಸೈನ್ಯದ ದಯೆಯಿಂದಾಗಲಿ, ಸೈನ್ಯದ ಒತ್ತಾಸೆಯಿಂದಾಗಲಿ ದೊರೆಯಾಗಲಿಲ್ಲ. ಸಾಮ್ರಾಟಪದವಿಯು ಅವನಿಗೆ ವಂಶಾನುಕ್ರಮವಾಗಿ ಲಭಿಸಿ, ಅವನಲ್ಲಿದ್ದ ಅನುಪಮ ಸದ್ಗುಣಗಳಿಂದ ಅವನು ಸೈನ್ಯ, ಪ್ರಜೆ ಈ ಉಭಯತ್ರರ ಪೂಜೆಯನ್ನೂ ಗಳಿಸಿ, ಉಭಯತ್ರರನ್ನೂ ನ್ಯಾಯವಾದ ಮಾರ್ಗದಲ್ಲಿಟ್ಟಿದ್ದನು. ಆದರೆ ಪರ್ಟಿನ್ಯಾಕ್ಸ್ ಚಕ್ರವರ್ತಿ ಸೈನಿಕರ ಇಚ್ಛೆಗೆ ವಿರೋಧವಾಗಿ ಚುನಾಯಿಸಲ್ಪಟ್ಟಿದ್ದನು. ಆ ವೇಳೆಗೆ ಸೈನಿಕರು ನಿಯಮಗಳ ಲಕ್ಷ್ಯವಿಲ್ಲದೆ, ಅಶಿಕ್ಷಿತರಾಗಿ, ಹಿಂದೆ ಕಮ್ಮೋಡಸ್ ಚಕ್ರವರ್ತಿಯ ಕಾಲದಲ್ಲಿದ್ದಂತೆಯೇ ಸ್ವೇಚ್ಛಾ ವಿಹಾರಿಗಳಾಗಿದ್ದರು. ಇವರನ್ನು ನ್ಯಾಯದ ಶಿಸ್ತಿಗೆ ತರಲು ಪರ್ಟಿನ್ಯಾಕ್ಸ್ ಚಕ್ರವರ್ತಿ ಹಾಕಿದ ಕಟ್ಟಳೆಗಳು ಅವರಿಗೆ ಸಹಿಸಲಿಲ್ಲ. ಹೀಗೆ ಸೈನಿಕರ ದ್ವೇಷದಿಂದ ಕುಗ್ಗಿದವನಾಗಿ, ವಯಸ್ಸಿನ ಕಾರಣದಿಂದ ಸ್ವಲ್ಪಮಟ್ಟಿಗೆ ಅಗೌರವಕ್ಕೂ, ಉಪೇಕ್ಷೆಗೂ ಗುರಿಯಾಗಿ ಅವನು ತನ್ನ ಅಧಿಕಾರದ ಮೊದಲ ಹಂತದಲ್ಲಿಯೇ ಅವನತಿಯನ್ನನುಭವಿಸಿದನು. ಇದರಿಂದ ನಮಗೆ ತಿಳಿಯುವದೇನೆಂದರೆ ಒಳ್ಳೆಯದು ಮಾಡಿದರೂ ಅಥವಾ ಕೆಟ್ಟದು ಮಾಡಿದರೂ ದ್ವೇಷವೆಂಬುದು ಸಂದರ್ಭಾನುಸಾರ ಹುಟ್ಟುತ್ತದೆ. ಆದ್ದರಿಂದ, ನಾನು ಮೊದಲೇ ತಿಳಿಸಿರುವಂತೆ, ದೊರೆ ತನ್ನ ನ್ಯಾಯಾಧಿಕಾರವನ್ನು ಉಳಿಸಿಕೊಳ್ಳಬೇಕಾದರೆ ಎಷ್ಟೋ ಸಂದರ್ಭಗಳಲ್ಲಿ ಅನಾವಶ್ಯವಾಗಿ ಕೆಟ್ಟವನಾಗಿರಬೇಕಾಗುತ್ತದೆ. ಏಕೆಂದರೆ ನಮಗೆ ಮುಖ್ಯವಾದ ಗುಂಪಿನವರು, ಸೈನಿಕರೇ ಆಗಲಿ ಅಥವಾ ರಾಜಸಂತತಿಯವರೇ ಆಗಲಿ, ಇವರಲ್ಲಿ ಯಾರೇ ಆಗಲಿ, ನಮಗೆ ಉಪಯೋಗವಾಗಿ ನಮ್ಮ ಘನತೆಯನ್ನು ಕಾಪಾಡಲು ಶಕ್ತರೆನಿಸುವರೋ ಅವರಿಗೆ ಪ್ರಾಮುಖ್ಯತೆ ಕೊಡುತ್ತೇವೆ. ಇವರು ಕೆಟ್ಟವರಾಗಿದ್ದರೆ ಅವರನ್ನು ಒಲಿಸಿಕೊಳ್ಳುವುದಕ್ಕಾಗಿ ಅವರ ಇಷ್ಟಕ್ಕನುಸಾರವಾಗಿ ನಡೆದುಕೊಂಡು ಅವರನ್ನು ತೃಪ್ತಿಗೊಳಿಸಬೇಕು. ಆದರೆ ಈಗ ಅಲೆಕ್ಸ್ಯಾಂಡರ್ ಚಕ್ರವರ್ತಿಯ ವಿಷಯದ ಕಡೆಗೆ ಗಮನ ಕೊಡೋಣ. ಈತ ಬಹಳ ನಿಷ್ಪಕ್ಷಪಾತನಾದ ಮತ್ತು ಸೌಜನ್ಯಶೀಲನಾದ ದೊರೆಯೆನ್ನಿಸಿಕೊಂಡಿದ್ದನು. ಆತನ ಹದಿನಾಲ್ಕು ವರ್ಷಗಳ

ಆಳ್ವಿಕೆಯಲ್ಲಿ ಆತ ನ್ಯಾಯಸಮ್ಮತವಾಗಿ ವಿಚಾರಣೆ ಮಾಡದ ಹೊರತು ಯಾರನ್ನೂ ಮರಣದಂಡನೆಗೆ ಒಳಪಡಿಸಿದ್ದೇ ಇಲ್ಲವೆಂಬುದು ಇವನ ಬಗ್ಗೆ ಇರುವ ಅನೇಕ ಹೊಗಳಿಕೆಗಳಲ್ಲೊಂದಾಗಿದೆ. ಅಷ್ಟಾದರೂ ಕೂಡ ಈತ ಪೌರುಷವಿಲ್ಲದವನೆಂದೂ ಮತ್ತು ತನ್ನ ತಾಯಿಯ ಮೇಲ್ವಿಚಾರಣೆಯಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದನೆಂತಲೂ ಪರಿಗಣಿಸಲ್ಪಟ್ಟು ಇದರಿಂದ ಅಪಮಾನಕ್ಕೊಳಗಾದನು. ಅವನ ಸೈನಿಕರು ಅವನ ಮೇಲೆ ಪಿತೂರಿಮಾಡಿ ಅವನನ್ನು ಕೊಂದು ಬಿಟ್ಟರು. ಮತ್ತೊಂದು ಕಡೆ ಕಮ್ಮೋಡಸ್, ಸೆವೆರಸ್, ಆ್ಯಂಟೋನಿಯಸ್, ಕಾರಕಲ್ಲ ಮತ್ತು ಮ್ಯಾಕ್ಸಿಮಸ್ ಚಕ್ರವರ್ತಿಗಳ ನಡತೆಗಳನ್ನು ಪರೀಕ್ಷಿಸಿದರೆ ಇವರುಗಳೆಲ್ಲಾ ಕ್ರೂರಿಗಳೂ ಪರದ್ರವ್ಯಾಪೇಕ್ಷಿಗಳೂ ಆಗಿದ್ದರೆಂದು ಗೊತ್ತಾಗುತ್ತದೆ. ಸೈನಿಕರನ್ನು ತೃಪ್ತಿಗೊಳಿಸಲು ಇವರು ಪ್ರಜೆಗಳಿಗೆ ಕೊಡದ ಹಿಂಸೆಯಿಲ್ಲ. ಸೆವೆರಸ್ ಒಬ್ಬನನ್ನುಳಿದು ಇವರೆಲ್ಲರೂ ದುರ್ಮರಣಕ್ಕೆ ಒಳಗಾದರು. ಸೆವೆರಸ್ ಎಷ್ಟು ಧೈರ್ಯಶಾಲಿಯಾದ ಮತ್ತು ಉದಾರ ಹೃದಯದ ದೊರೆಯಾಗಿದ್ದನೆಂದರೆ, ತನ್ನ ಸೈನ್ಯದೊಂದಿಗೆ ತಕ್ಕ ಸ್ನೇಹವನ್ನುಳಿಸಿಕೊಂಡು, ತನ್ನ ಪ್ರಜೆಗಳನ್ನು ಪೀಡಿಸಿದರೂ ಕೂಡ ತನ್ನ ಪ್ರಭುತ್ವ ಸುಖಮಯವಾಗಿರುವಂತೆ ಮಾಡಿದ್ದನು. ಈತನ ಸೈನಿಕರ ಮತ್ತು ಪ್ರಜೆಗಳ ಕಣ್ಣೆದುರಿಗೆ ಈತನ ಸದ್ಗುಣಗಳು ಈತನನ್ನು ಶ್ಲಾಘ್ಯವಾಗಿ ಚಿತ್ರಿಸಿದ್ದುವು. ಒಬ್ಬರು ಅಚ್ಚರಿಯಿಂದ ಮಂಕುಬಡಿದವರಂತೆಯೂ, ಮತ್ತೊಬ್ಬರು ಸಂತೃಪ್ತಿಯಿಂದ ವಿಧೇಯರಾಗಿಯೂ ಇರುವಂತೆ ಮಾಡಿದ್ದವು.

ಅನೇಕ ದೊರೆಗಳ ಪೈಕಿ ಸೆವೆರಸ್ಸನ ಚರ್ಯೆಗಳು ಬಹಳ ಹಿರಿಮೆಯಿಂದ ಕೂಡಿರುವುದರಿಂದಲೇ ಈತನು (ನಾನು ಆಗಲೇ ಹೇಳಿರುವಂತೆ) ದೊರೆಯು ಅವಶ್ಯವಾಗಿ ಅಭಿನಯಿಸಬೇಕಾದ ಸಿಂಹ ಮತ್ತು ನರಿಗಳ ಪಾತ್ರವನ್ನು ಹೇಗೆ ನಿರ್ವಹಿಸಿದನೆಂದು ವಿಶದವಾಗಿ ಹೇಳುತ್ತೇನೆ. ಚಕ್ರವರ್ತಿ ಜೂಲಿಯನ್ನನ ಸೋಮಾರಿತನ ಮತ್ತು ಜಡತ್ವವನ್ನು ಬಲ್ಲ ಈ ಸೆವೆರಸ್ ಆಗ ಸೇನಾನಿಯಾಗಿದ್ದು, ತನ್ನ ನೇತೃತ್ವದಲ್ಲಿದ್ದ ಸೈನ್ಯಕ್ಕೆ—"ಕೂಡಲೆ ರೋಮಿಗೆ ಹೋಗಿ ಪರ್ಟಿನ್ಯಾಕ್ಸ್ ಚಕ್ರವರ್ತಿಯ ಕೊಲೆಪಾತಕರಾದ ರಾಜಭಟರನ್ನು ಶಿಕ್ಷಿಸೋಣ" ಎಂದು ಒಪ್ಪಿಸಿ, ರೋಮಿಗೆ ನಡೆತಂದನು. ತಾನು ಚಕ್ರವರ್ತಿಯಾಗಲು ಈ ರೀತಿ ಮಾಡಿದನೆಂಬ ಸುಳಿವು ಯಾರಿಗೂ ತೋರದಷ್ಟು ಜಾಣ್ಮೆಯಿಂದ ವರ್ತಿಸಿದನು. ಅವನು ರೋಮಿಗೆ ಸೈನ್ಯಸಮೇತನಾಗಿ ತಲಪಿದ ಕೂಡಲೆ,

ಅಲ್ಲಿನ ಶ್ರೀಮಂತ ಸಭೆಯು (Senate) ಬೆದರಿ, ಜೂಲಿಯನ್ನನನ್ನು ಕೊಂದು, ಸೆವೆರಸ್ಸನ್ನು ಚಕ್ರವರ್ತಿಯಾಗಿ ಚುನಾಯಿಸಿತು. ಇದಂತೂ ಆಯಿತು; ಆದರೆ ಕೂಡಲೇ ಎರಡು ದೊಡ್ಡ ತೊಡಕುಗಳು ಅಡ್ಡ ನಿಂತವು. ಮೊದಲನೆಯದು, ಏಷ್ಯಾದಲ್ಲಿನ ರೋಮನ್ ಸೈನ್ಯದ ನಾಯಕನಾಗಿದ್ದು, ತಾನೇ ಚಕ್ರವರ್ತಿ ಎಂದು ಹೇಳಿಕೊಂಡು ಪ್ರಕಟಿಸಿದ್ದ ನೈಜರ (Niger)ನ ವ್ಯವಸ್ಥೆ. ಎರಡನೆಯದು, ಪಶ್ಚಿಮದಲ್ಲಿ ಚಕ್ರವರ್ತಿ ಪದವಿಯನ್ನು ವಹಿಸಿದ್ದ ಆಲ್ಬಿನಸ್ (Albinus) ಎಂಬ ಸೇನಾಧಿಪತಿಯ ಪ್ರಶ್ನೆ. ಸೆವೆರಸ್ ಇವರಿಬ್ಬರ ಮೇಲೂ ಏಕಕಾಲದಲ್ಲಿ ಪ್ರವರ್ತಿಸುವುದು ಅತಿಸಾಹಸವೆಂದು ಭಾವಿಸಿ, ಮೊದಲು ನೈಜರನನ್ನು ಎದುರಿಸಲು ನಿಶ್ಚಯಿಸಿದನು. ಮತ್ತು ಆಲ್ಬಿನಸ್ಸನನ್ನು ಪುಸಲಾಯಿಸಿ, ಈ ರೀತಿ ಕಾಗದ ಬರೆದನು: "ನಾನೇನೋ ಶ್ರೀಮಂತ ಸಭೆಯಿಂದ ಚುನಾಯಿಸಲ್ಪಟ್ಟ ಚಕ್ರವರ್ತಿಯಾಗಿದ್ದೇನೆ; ಆದರೂ ಅದೇ ಸಭೆಯಿಂದ ನಿನ್ನನ್ನೂ ಚುನಾಯಿತನನ್ನಾಗಿ ಮಾಡಿಸಿ, ನಿನ್ನನ್ನು ನನ್ನ ಸಹೋದ್ಯೋಗಿ ಚಕ್ರವರ್ತಿಯನ್ನಾಗಿ ಮಾಡಿಕೊಂಡು, ನಿನಗೂ ಸೀಸರ್ (Caesar=ಚಕ್ರವರ್ತಿ) ಎಂಬ ನಾಮಾಂಕಿತ ಕೊಡಲು ಕಬೂಲಿದ್ದೇನೆ." ಇವನ ಈ ಭರವಸೆಯನ್ನು ಆಲ್ಬಿನಸ್ ನಂಬಿ ಒಪ್ಪಿದನು. ಸೆವೆರಸ್ ನೈಜರನನ್ನು ಜಯಿಸಿ, ವಧಿಸಿ, ಪೂರ್ವ ಪ್ರಾಂತ್ಯಗಳ ವ್ಯವಸ್ಥೆ ಮಾಡಿದ ನಂತರ ರೋಮಿಗೆ ವಾಪಾಸು ಬಂದು, ಆಲ್ಬಿನಸನ ಮೇಲೆ ಶ್ರೀಮಂತ ಸಭೆಯಲ್ಲಿ, 'ಈ ಆಲ್ಬಿನಸ್ ನನ್ನಿಂದ ಹೊಂದಿದ ಉಪಕಾರಗಳನ್ನು ಮರೆತು, ನನ್ನನ್ನು ಕೊಲ್ಲಲು ಪಿತೂರಿ ನಡೆಸುತ್ತಿರುವ ದ್ರೋಹಿ' ಎಂದು ಆಪಾದನೆಯನ್ನು ಹೂಡಿ, ಅವನ ಮೇಲೆ ದಂಡಯಾತ್ರೆಯನ್ನು ಮಾಡಿ, ಅವನ ಕೃತಘ್ನತೆಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು, ಫ್ರಾನ್ಸಿನಲ್ಲಿದ್ದ ಅವನ ಮೇಲೆ ಆಕ್ರಮಣವನ್ನು ಮಾಡಿ, ಅವನನ್ನು ಸೋಲಿಸಿ ಕೊಲ್ಲಿಸಿದನು. ಇವನ ನೀತಿ ಚರ್ಯೆಗಳನ್ನು ಪರಿಶೀಲಿಸಿದರೆ ಇವನಲ್ಲಿ ಸಿಂಹದ ಶೌರ್ಯವನ್ನೂ, ನರಿಯ ಉಪಾಯವನ್ನೂ ಕಾಣಬಹುದು. ಇವುಗಳ ಸಮ್ಮೇಳನದಿಂದ ಇವನು ಎಲ್ಲರ ಭಯಭಕ್ತಿಗಳಿಗೂ ಪಾತ್ರನಾಗಿ, ಸೈನ್ಯಕ್ಕೂ ಬೇಕಾದವನಾಗಿದ್ದನು. ಅವನು ಹೊಸದಾಗಿ ಚಕ್ರಾಧಿಪತ್ಯಕ್ಕೆ ಏರಿದವನಾದರೂ ಅವನ ಕೀರ್ತಿ ಪ್ರತಿಷ್ಠೆಗಳ ತೂಕದಿಂದ ಅವನು ಹೊರಶತ್ರುಗಳನ್ನು ಹಿಂದಟ್ಟುವುದಕ್ಕೂ ತನ್ನ ಪ್ರಜೆಗಳ ಅಸಮಾಧಾನವನ್ನು ನಿರ್ವಹಿಸುವುದಕ್ಕೂ ಶಕ್ತನಾದದ್ದು

ಆಶ್ಚರ್ಯವೇನೂ ಅಲ್ಲ. ಅವನ ಮಗ ಆ್ಯಂಟೋನಿಯಸ್ಸ (Antonius) ನಾದರೋ ಅವನಂತೆ ಗುಣಸಂಪನ್ನನಾಗಿ ಜನಗಳ ಮೆಚ್ಚಿಗೆಗೂ, ಸೈನ್ಯದ ಸಂತುಷ್ಟಿಗೂ ಪಾತ್ರನಾಗಿದ್ದನು. ಅವನು ಸದಾ ಆಲಸ್ಯವಿಲ್ಲದೆ ಕೆಲಸ ಮಾಡುವ ಸ್ವಭಾವದವನು. ಯುದ್ಧಪ್ರಿಯ ವಿಕ್ರಮಿಯು. ವಿಷಯಲಂಪಟನಲ್ಲ. ಆದರೂ ಅವನ ನಿರ್ದಯ ಕ್ರೌರ್ಯ ಮತ್ತು ಘೋರ ಧೋರಣೆ ಮಿತಿಮೀರಿದುವಾಗಿದ್ದುವು. ಅನೇಕ ಸಲ ವಿವಿಧ ಕಾರಣಗಳ ಮೇಲೆ ರೋಮಿನ ಜನಗಳ ಬಹುಭಾಗವನ್ನು ಇವನು ಕೊಲ್ಲಿಸಿದನು. ಅಲೆಕ್ಸಾಂಡ್ರಿಯ (Alexandria)ದ ನಿವಾಸಿಗಳೆಲ್ಲರನ್ನೂ ನಾಶಮಾಡಿದನು. ಈ ಘೋರ ಕೃತ್ಯಗಳಿಂದ ಇವನು ಪ್ರಜೆಗಳ—ಹಾಗೂ ಪ್ರಪಂಚದ—ಅಸಹ್ಯ ದ್ವೇಷಕ್ಕೆ ಗುರಿಯಾಗಿ ತನ್ನ ಅನುಚರರ ನಂಬಿಕೆಯನ್ನೂ ಕಳೆದುಕೊಂಡು, ಕೊನೆಗೆ ತನ್ನ ಪಾಳೆಯದಲ್ಲಿಯೇ ಒಬ್ಬ ಕಿರಿಯ ಸರದಾರನಿಂದ ಕೊಲ್ಲಲ್ಪಟ್ಟನು. ಹೀಗೆ, ತನ್ನ ಪ್ರಾಣವನ್ನೇ ಲೆಕ್ಕಿಸದೆ ದೊರೆಯನ್ನು ಏನೇ ಆಗಲಿ ಕೊಲ್ಲಬೇಕೆಂದು ಹಟಹಿಡಿದವನಿಂದ ಪ್ರಾಣವನ್ನು ಕಾಪಾಡಿಕೊಳ್ಳುವುದು ದೊರೆಗಳಿಗೂ ಕಷ್ಟಸಾಧ್ಯವೆಂಬುದನ್ನು ಕಾಣಬಹುದು. ಆದರೆ ಹೀಗೆ ಹಟಹಿಡಿಯುವವರು ಅಪರೂಪ. ದೊರೆ ಯಾರಿಗಾದರೂ ಸಹಿಸಲು ಮತ್ತು ಮರೆಯಲು ಅಸಾಧ್ಯವಾದ ಕೇಡುಕನ್ನು ಮಾಡಿದ್ದರೆ ತಾನೆ, ಅವರು ಇಂತಹ ದ್ವೇಷವನ್ನು ತಳೆಯುತ್ತಾರೆ? ಈ ಆ್ಯಂಟೋನಿಯಸ್ಸನು ಇಂತಹ ದ್ವೇಷಕ್ಕೆ ಅವಕಾಶವನ್ನು ಕೊಡುತ್ತಲೇ ಇದ್ದನು. ಅವನನ್ನು ಕೊಂದ ಸರದಾರನ ಸಹೋದರನನ್ನು ಕ್ರೂರವೂ ಅಪಮಾನಕರವೂ ಆದ ಕೊಲೆಗೆ ಗುರಿಮಾಡಿದ್ದನು. ದಿನವಹಿ ನಿನಗೂ ಹೀಗೇ ಮಾಡುತ್ತೇನೆಂದು ಆ ಸರದಾರನನ್ನು ಹೆದರಿಸುತ್ತಲೂ ಇದ್ದನು. ಆದರೂ, ಅವನನ್ನು ತನ್ನಲ್ಲಿಯೇ ಕೆಲಸಕ್ಕೂ ಇಟ್ಟುಕೊಂಡಿದ್ದನು.

ಈಗ ಕಮ್ಮೋಡಸನ ಕತೆಗೆ ಬರೋಣ. ಇವನು ಮಾರ್ಕಸ್ಸಿನ ಮಗನಾಗಿ ಮಾರ್ಕಸ್ಸಿನ ರಾಜ್ಯಕ್ಕೆ ಬಂದವನು ದೌಲತ್ತನ್ನು ಕಾಪಾಡಿಕೊಳ್ಳಲಿಕ್ಕೆ ಹೆಚ್ಚು ಶ್ರಮಪಡಬೇಕಾಗಿರಲಿಲ್ಲ. ಜನಗಳನ್ನು ತೃಪ್ತಿಪಡಿಸಲಿಕ್ಕೂ, ಸಿಪಾಯಿಗಳ ಕೋರಿಕೆಗಳನ್ನು ಸಲ್ಲಿಸಲಿಕ್ಕೂ, ಅವನ ತಂದೆಯ ಹಜ್ಜೆಯಲ್ಲಿ ಅವನು ನಡೆದರೆ ಸಾಕಾಗಿತ್ತು. ಆದರೆ, ಅವನು ಪಶುಸ್ವಭಾವದ ಕ್ರೂರವೃತ್ತಿಯವನಾದ್ದರಿಂದ ತನ್ನ ಸೈನಿಕರನ್ನು ಮೆಚ್ಚಿಸಲಿಕ್ಕೆ ಅವರಿಗೆ ತನ್ನ ಪ್ರಜೆಗಳ ಮೇಲೆ ಎಲ್ಲ ವಿಧದ ಅತ್ಯಾಚಾರಗಳಿಗೂ ಅವಕಾಶ ಕೊಟ್ಟನು. ಇದಲ್ಲದೆ ಇವನು

ಮಲ್ಲಯುದ್ಧದ ಜಟ್ಟಿಯಾಗಿ ಅಖಾಡಕ್ಕೆ ಇಳಿದು ತನ್ನ ಗೌರವವನ್ನು ಮಣ್ಣು ಮಾಡಿಕೊಂಡದ್ದಲ್ಲದೆ, ಸಾಮ್ರಾಟ ಪದವಿಗೆ ಸಲ್ಲದ ಹೀನ ಕೃತ್ಯಗಳನ್ನು ಮಾಡಿ, ತನ್ನ ಸೈನ್ಯದ ತಿರಸ್ಕಾರವನ್ನೂ, ತನ್ನ ಪ್ರಜೆಗಳ ತಾತ್ಸಾರವನ್ನೂ ಹೊಂದಿದನು. ಅವರು ಪಿತೂರಿ ನಡೆಸಿ ಅವನನ್ನು ಕೊಂದರು. ಮ್ಯಾಕ್ಸಿಮಸ್ಸನು ಯುದ್ಧಪ್ರಿಯನು, ಯುದ್ಧ ಪರಿಣತನು. ಅಲೆಕ್ಸಾಂಡರನ ಹೆಣ್ಣಿಗತನದಿಂದ ಬೇಸತ್ತಿದ್ದ ಸೈನಿಕರು ಅವನನ್ನು ಕೊಂದು, ಮ್ಯಾಕ್ಸಿಮಸ್ಸನ್ನು ಚಕ್ರವರ್ತಿಯಾಗಿ ಮಾಡಿದರು. ಆದರೆ, ಅವನು ಆ ಪದವಿಯನ್ನು ಬಹುಕಾಲ ಅನುಭವಿಸಲಿಲ್ಲ. ಎರಡು ಕಾರಣಗಳಿಂದ ಅವನು ಜನಗಳ ತಿರಸ್ಕಾರಕ್ಕೆ ಗುರಿಯಾದನು. ಮೊದಲನೆಯ ಕಾರಣ—ಅವನು ಥ್ರೇಸ್ (Thrace) ಪ್ರಾಂತದ ಒಬ್ಬ ಕುರುಬನ ಮಗನಾದ ಹೀನವಂಶಿಕ ಎಂಬುದು ಎಲ್ಲರಿಗೂ ತಿಳಿದು ನಗೆಗೇಡಾಗಿತ್ತು. ಎರಡನೆಯದು, ಅವನು ಚಕ್ರವರ್ತಿ ಪದವಿ ಘಟಿಸಿದ ಕೂಡಲೇ ರೋಮಿಗೆ ಬರದೆ ನಿಂತದ್ದರಿಂದ, ಅಧಿಕಾರವು ಅಲ್ಪರಾದ ತಾಬೇದಾರರ ವಶವಾಗಿ, ಅವರ ಅತ್ಯಾಚಾರದಿಂದ ಪ್ರಜೆಗಳು ಉದ್ರೇಕಗೊಳ್ಳುವಂತಾಯಿತು. ಆದ್ದರಿಂದ ಇವನ ತುಚ್ಛಕುಲ, ಇವನ ಕಡೆಯವರ ಮೂಲಕ ನಡೆದ ಕ್ರೂರ ವರ್ತನೆಯಿಂದ ಬೇಸತ್ತ ಜನ, ಇನ್ನು ಮುಂದೆ ಇನ್ನೇನು ದುರ್ವರ್ತನೆಗಳಾಗಬಹುದೋ ಎಂಬ ಭಯದಿಂದ ಆಫ್ರಿಕದಲ್ಲೂ ರಾಜಸಭೆಯಲ್ಲೂ ರೋಮಿನಲ್ಲೂ ಇಟಲಿಯ ಜನಪದದಲ್ಲೂ ಇವನ ಮೇಲೆ ಪಿತೂರಿ ಮಾಡಿದರು. ಇವರ ಸಂಗಡ ಸೈನ್ಯವೂ ಒಂದಾಯಿತು. ಈ ಸೈನ್ಯವು ಅಕ್ವಿಲೈಯಾ (Aquileia) ಕೋಟೆಗೆ ನಿಷ್ಫಲ ಮುತ್ತಿಗೆ ಹಾಕಿ ಬೇಸತ್ತು, ಚಕ್ರವರ್ತಿಯ ಕ್ರೌರ್ಯಕ್ಕೆ ರೇಗಿದ ಜನದ ಸಂಗಡ ಸೇರಿತು. ಇವರೆಲ್ಲರೂ ಸೇರಿ ಇವನನ್ನು ಕೊಂದರು.

ನಾನು ಹೆಲಿಯೋಗಬ್ಯಾಲಸ್ (Heliogabalus), ಮಾಕ್ರಿಮಸ್ (Macrimus) ಮತ್ತು ಜೂಲಿಯನ್ (Julian) ಎಂಬ ಪುರುಷತ್ವವಿಲ್ಲದ ಮತ್ತು ಅಲ್ಪಜೀವಿಗಳಾದ ಚಕ್ರವರ್ತಿಗಳ ಮಾತಿಗೆ ಹೋಗುವುದಿಲ್ಲ. ನಮ್ಮ ಕಾಲದ ದೊರೆಗಳು ತಮ್ಮ ಸಿಪಾಯಿಗಳನ್ನು ಹಿಂದಿನವರಂತೆ ಅಸಾಧಾರಣ ಉಪಾಯಗಳಿಂದ ತೃಪ್ತಿಪಡಿಸಬೇಕಾಗಿಲ್ಲವೆಂದು ಹೇಳಿ ನನ್ನ ಪ್ರಬಂಧವನ್ನು ಕೊನೆಗಾಣಿಸುತ್ತೇನೆ. ಸಿಪಾಯಿಗಳ ವಿಚಾರದಲ್ಲಿ ಉದಾಸೀನರಾಗಿರಬೇಕೆಂಬುದು ನನ್ನ ಉದ್ದೇಶವಲ್ಲ. ಆದರೆ, ನಮ್ಮ ದೊರೆಗಳು ಯಾರೂ

ರೋಮನ್ ಚಕ್ರವರ್ತಿಗಳಂತೆ, ಭಾರಿ ಭಾರಿ ಪಟು ಸೈನ್ಯಗಳನ್ನು ಪ್ರಾಂತ್ಯ ಪ್ರಾಂತ್ಯದಲ್ಲಿಯೂ ಇಟ್ಟುಕೊಂಡಿಲ್ಲ. ಆ ಚಕ್ರಾಧಿಪತ್ಯದಲ್ಲಿ ಸೈನ್ಯಗಳೇ ಸರ್ವಶಕ್ತಿಯುಳ್ಳವುಗಳಾದ್ದರಿಂದ ಅವುಗಳನ್ನು ಹೇಗಾದರೂ ಸಂತೋಷಪಡಿಸಿ ಇರಿಸಿಕೊಂಡಿರಬೇಕಾಗಿತ್ತು; ಈಗ ತುರ್ಕೀ ಚಕ್ರವರ್ತಿ ಮತ್ತು ಸೋಲ್ಡಾನ (Soldan) ರನ್ನು ಬಿಟ್ಟರೆ, ಉಳಿದ ರಾಜರುಗಳೆಲ್ಲಾ ಸೈನ್ಯಕ್ಕಿಂತಲೂ ಸಂಖ್ಯೆಯಲ್ಲಿಯೂ, ಶಕ್ತಿಯಲ್ಲಿಯೂ ಹೆಚ್ಚಾದ ತಮ್ಮ ಪ್ರಜೆಗಳ ಅನುರಾಗವನ್ನು ಪಡೆದರೆ ಸಾಕು. ತುರ್ಕೀ ದೊರೆಯಾದರೋ ತನ್ನ ಸುತ್ತಲೂ ಆಜ್ಞಾಧಾರಕರನ್ನಾಗಿ, ಹನ್ನೆರಡು ಸಾವಿರ ಪದಾತಿಗಳನ್ನೂ ಹದಿನೈದು ಸಾವಿರ ರಾಹುತರನ್ನೂ ಇಟ್ಟುಕೊಂಡಿದ್ದಾನೆ. ಅವರ ಒತ್ತಾಸೆಯಿರುವವರೆಗೂ ಅವನಿಗೆ ಅಧಿಕಾರ ಚ್ಯುತಿಯ ಭಯವಿಲ್ಲ. ಪ್ರಜಾಸಾಮಾನ್ಯರ ಪ್ರೀತಿಯೂ ಅಷ್ಟು ಮುಖ್ಯವಾದುದಲ್ಲ. ಸೋಲ್ಡಾನನ ಪದವಿಯೂ ಹೀಗೆಯೇ ಅವನ ಸಿಪಾಯಿಗಳ ಕತ್ತಿಯ ಮೊನೆಯ ಮೇಲೆ ನಿಂತಿದೆ. ಇವನು ಸೈನ್ಯದ ಅಧೀನದಲ್ಲಿಯೇ ಇದ್ದಾನೆಂದು ಹೇಳಬಹುದು. ಸೋಲ್ಡಾನನ ದರ್ಬಾರು ಇತರ ಆಡಳಿತಗಳಂತೆ ಇಲ್ಲ. ಇದು ಕೆಲವು ಅಂಶಗಳಲ್ಲಿ ಕ್ರೈಸ್ತ ಪ್ರಪಂಚದ ಪೋಪನ ಅಧಿಕಾರವನ್ನು ಹೋಲುತ್ತದೆ. ಈ ರಾಜ್ಯವನ್ನು ಹೊಸರಾಜ್ಯವೆಂದು ಹೇಳುವುದಕ್ಕೂ ಆಗುವುದಿಲ್ಲ. ವಂಶಪಾರಂಪರ್ಯದ್ದೆಂದು ಹೇಳುವುದಕ್ಕೂ ಆಗುವುದಿಲ್ಲ. ರಾಜ್ಯವೇನೋ ಹಳೆಯದು. ಹಳೆಯ ಪದ್ಧತಿಗಳಿಗೆ ಮತ್ತು ಹಳೆಯ ಕಾನೂನುಗಳಿಗೆ ಒಳಪಟ್ಟದ್ದಾದ್ದರಿಂದ ಇವುಗಳಿಗೆ ಹೊಸ ಸಂಸ್ಥಾನಗಳಿಗೆ ವಕ್ರಿಸುವ ಪೀಡೆಗಳ ಭಯವಿಲ್ಲ. ಆದರೂ, ಇವುಗಳ ನಾಯಕರು ಓಟುಗಳನ್ನು ಕೊಡುವ ಸಮಿತಿಯಿಂದ ಚುನಾಯಿಸಲ್ಪಡಬೇಕಾದವರೇ ಹೊರತು, ವಂಶಪಾರಂಪರ್ಯದಿಂದ ಬರತಕ್ಕವರಲ್ಲ. ಆದರೆ, ನಮ್ಮ ವಿಚಾರಕ್ಕೆ ವಾಪಾಸು ಬರೋಣ. ನಾವು ಹಿಂದೆ ಹೇಳಿರುವುದನ್ನು ಪರ್ಯಾಲೋಚಿಸಿದವರಿಗೆ ಚಕ್ರವರ್ತಿಗಳ ಪತನಕ್ಕೆ ದ್ವೇಷವೋ, ಅವಜ್ಞೆಯೋ, ಸತತ ಕಾರಣವೆಂದು ತಿಳಿಯಬಹುದು. ಮತ್ತು ತಮ್ಮ ಆಡಳಿತದಲ್ಲಿ ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಿದ ಚಕ್ರವರ್ತಿಗಳಲ್ಲಿ ಪ್ರತಿಮಾರ್ಗದಲ್ಲಿಯೂ ಕೆಲವರು ಕ್ಷೇಮವಾಗಿದ್ದರೂ, ಕೆಲವರು ಪತನ ಹೊಂದಿದರು ಎಂಬುದನ್ನು ತಿಳಿಯಬಹುದು. ಅಲ್ಪೋದ್ಧತ ಪ್ರಭುಗಳಾದ ಪರ್ಟಿನ್ಯಾಕ್ಸ್ ಮತ್ತು ಅಲೆಕ್ಸ್ಯಾಂಡರರು ಪಿತ್ರಾರ್ಜಿತ ಹಕ್ಕಿನಿಂದ ಆ ಪದವಿಗೇರಿದ ಮಾರ್ಕಸನ

ಮಾರ್ಗವನ್ನು ಅನುಕರಿಸುವುದು ಹಾಸ್ಯಾಸ್ಪದ ಮತ್ತು ಅಪಾಯಕರ. ದುರ್ಬಲರಾದ ಮತ್ತು ಪೌರುಷವಿಲ್ಲದ ಕಾರಕುಲ್ಲ, ಕಮ್ಮೋಡಸ್ ಮತ್ತು ಮ್ಯಾಕ್ಸಿಮಿನಸ್ ಇವರುಗಳು ಶೂರನೂ, ಪ್ರಭಾವಶಾಲಿಯೂ ಆದ ಸೆವೆರಸನನ್ನು ತಮ್ಮ ಮಾದರಿಯಾಗಿಟ್ಟುಕೊಂಡದ್ದು ಹಾನಿಕರವಾಯಿತು. ಹೊಸ ರಾಜನಾದವನು ಮಾರ್ಕಸನ ನೀತಿಯನ್ನು ಅನುಸರಿಸಲು ಸಾಧ್ಯವಾಗದಿದ್ದರೂ ಸೆವೆರಸನ ಪಥದಲ್ಲಿ ನಡೆಯಬೇಕಾದ ಆವಶ್ಯಕತೆಯಿಲ್ಲ. ತನ್ನ ಸಂಸ್ಥಾನದ ತಳಹದಿಯನ್ನು ಭದ್ರವಾಗಿ ಹಾಕುವುದಕ್ಕೆ ಎಷ್ಟು ಬೇಕೋ ಅಷ್ಟು ಭಾಗವನ್ನು ಮಾತ್ರ ಸೆವೆರಸನಿಂದ ತೆಗೆದುಕೊಂಡು, ಅನಂತರ, ಆ ಸಂಸ್ಥಾನವು ಸ್ಥಿರವಾಗಿ ಸ್ಥಾಪಿತವಾದ ಮೇಲೆ ಅದನ್ನು ಯಶಸ್ವಿಯಾಗಿ ರಕ್ಷಿಸಿ, ಕಾಪಾಡಿಕೊಳ್ಳುವುದಕ್ಕೆ ಬೇಕಾದಷ್ಟನ್ನು ಮಾರ್ಕಸನಿಂದ ತೆಗೆದುಕೊಳ್ಳಬಹುದು.

ಹತ್ತೊಂಭತ್ತನೆಯ ಅಧ್ಯಾಯ

ದೊರೆಗಳು ಅನೇಕ ವೇಳೆ ನಿರ್ಮಿಸುವ ಕೋಟೆಕೊತ್ತಳ ಗಳು ಲಾಭಕರವೇ? ಅಪಾಯವೇ?

ಕೆಲವು ರಾಜರುಗಳು ತಮ್ಮ ರಾಜ್ಯದ ಹೆಚ್ಚಿನ ಭದ್ರತೆಗಾಗಿ ತಮ್ಮ ಪ್ರಜೆಗಳನ್ನು ನಿರಾಯುಧರನ್ನಾಗಿ ಮಾಡಿರುತ್ತಾರೆ; ಇನ್ನು ಕೆಲವರು ರಾಜ್ಯ ವನ್ನು ತುಂಡು ತುಂಡಾಗಿ ವಿಭಾಗಿಸಿರುತ್ತಾರೆ; ಮತ್ತೆ ಕೆಲವರು ಪರಸ್ಪರ ವಿರೋಧವಾದ ಕಕ್ಷಿ ಪ್ರತಿಕಕ್ಷಿಗಳನ್ನು ಎತ್ತಿಕಟ್ಟಿ ಭೇದೋಪಾಯದಿಂದ ಪ್ರಜೆಗಳ ಐಕಮತ್ಯವನ್ನು ಒಡೆದಿದ್ದಾರೆ; ಮತ್ತೆ ಕೆಲವರು ತಮ್ಮ ಅಧಿಕಾರದ ಹೊಸದರಲ್ಲಿ ತಮ್ಮಗಳ ಬಗ್ಗೆ ಸಂಶಯಗ್ರಸ್ತರಾಗಿದ್ದವರನ್ನು ಉಪಾಯದಿಂದ ಉಬ್ಬಿಸಿ, ಒಲಿಸಿಕೊಳ್ಳುವುದರಲ್ಲಿ ನಿರತರಾಗುತ್ತಾರೆ. ಹಲವು ರಾಜರುಗಳು ಕೋಟೆಗಳನ್ನು ಕಟ್ಟಿಸಿದರೆ, ಹಲವರು ಕೋಟೆಗಳನ್ನು ನೆಲಸಮಮಾಡಿದರು. ಮೇಲ್ಕಂಡ ಸಂದರ್ಭಗಳನ್ನು ಕುರಿತು ವಿವೇಚಿಸಿದರೆ, ಯಾವುದಾದರೊಂದು ನಿರ್ದಿಷ್ಟವಾದ ರಾಜ್ಯವನ್ನು ಗಣನೆಗೆ ತೆಗೆದುಕೊಂಡ ಹೊರತು, ಇವುಗಳಿಗೆ ನಿಶ್ಚಿತವಾದ ಯಾವ ನಿಯಮವನ್ನೂ ವಿಧಿಸಲು ಸಾಧ್ಯವಿಲ್ಲ. ಆದರೂ, ಮೇಲ್ಕಂಡ ಎಲ್ಲಾ ಸನ್ನಿವೇಶಗಳಿಗೂ ಅನ್ವಯಿಸುವ ಒಳ ಇಂಗಿತವೇನಿರ ಬಹುದೆಂಬುದನ್ನು ಪ್ರಕೃತ ಸಂದರ್ಭದಲ್ಲಿ ಹೇಳುತ್ತೇನೆ. ಬುದ್ಧಿವಂತನಾದ ದೊರೆಯು ತನ್ನ ಪ್ರಜೆಗಳನ್ನು ಎಂದಿಗೂ ನಿರಾಯುಧರನ್ನಾಗಿ ಮಾಡುವುದಿಲ್ಲ. ಅದರ ಬದಲು ನಿರಾಯುಧರಾದ ಪ್ರಜೆಗಳಿಗೆ ಆಯುಧಗಳನ್ನು ಒದಗಿಸಿ, ಸರಿಯಾದ ತರಬೇತಿನಿಂದ ಯೋಧರನ್ನಾಗಿ ಮಾಡಿದರೆ ಆ ಆಯುಧ ಬಲ

ವೆಲ್ಲವೂ ಖಂಡಿತವಾಗಿ ರಾಜನದೇ. ಹಿಂದೆ ರಾಜರಾದ ನಿಮ್ಮನ್ನು ಸಂಶಯ ದೃಷ್ಟಿಯಿಂದ ನೋಡುತ್ತಿದ್ದವರು ಹೀಗೆ ಮಾಡಿದರೆ ನಿಮ್ಮ ನಂಬಿಕೆ ವಿಶ್ವಾಸ ಗಳಿಗೆ ಪಾತ್ರರಾಗುವರು. ಅಲ್ಲದೆ ಮೊದಲೇ ನಂಬಿಕೆಯಿಂದ ಸೇವೆ ಸಲ್ಲಿಸು ತ್ತಿದ್ದವರು ಈಗ ಇನ್ನೂ ಆಪ್ತರಾಗಿ, ಒಟ್ಟಿನಲ್ಲಿ ನಿಮ್ಮ ಪ್ರಜೆಗಳೆಲ್ಲರೂ ನಿಮ್ಮ ಭಕ್ತರೇ ಆಗುತ್ತಾರೆ. ನಿಮ್ಮ ಆಡಳಿತಕ್ಕೆ ಒಳಪಟ್ಟ ರಾಜ್ಯದಲ್ಲಿನ ಎಲ್ಲ ಆಯುಧಪಾಣಿಗಳಾದ ಸೈನಿಕರನ್ನೂ ಅನುಗ್ರಹದಿಂದ ನಿಮ್ಮವರನ್ನಾಗಿ ಮಾಡಿ ಕೊಳ್ಳುವುದರಿಂದ ನೀವು ಉಳಿದವರ ವಿಚಾರದಲ್ಲಿ ನಿರ್ಭೀತಿಯಿಂದ ವರ್ತಿಸ ಬಹುದು. ನಿಮ್ಮ ಯೋಧರು ದೇಶಕ್ಕೋಸ್ಕರ ಪ್ರಾಣಕೊಡಲು ಸಿದ್ಧರಾಗಿರು ವುದರಿಂದ, ಅವರಿಗೆ ನೀವು ಹೆಚ್ಚು ರಿಯಾಯಿತಿ ತೋರಿಸಿದರೆ ಯಾರೂ ಅಸೂಯೆಪಡುವುದಿಲ್ಲ. ಇದನ್ನು ಬಿಟ್ಟು, ಪ್ರಜೆಗಳನ್ನು ಬಲಾತ್ಕಾರದಿಂದ ನಿರಾಯುಧರನ್ನಾಗಿ ಮಾಡಿದರೆ, ನಿಮಗೆ ಅವರ ಹೇಡಿತನದ ಸಲುವಾಗಿಯೋ, ದ್ರೋಹದ ಸಲುವಾಗಿಯೋ, ಅವರಲ್ಲಿ ನಂಬಿಕೆಯಿಲ್ಲವೆಂಬ ಭಾವನೆ ಉಂಟಾಗಿ ಅವರಿಗೆ ನಿಮ್ಮಲ್ಲಿ ದ್ವೇಷ ಹುಟ್ಟಲು ಕಾರಣವಾಗುತ್ತದೆ. ಸೈನಿಕರಿಲ್ಲದೆ ರಾಜ್ಯ ಪಾಲನೆ ಮಾಡುವುದು ಸಾಧ್ಯವಿಲ್ಲವಾದ್ದರಿಂದ ನಾನು ಮೊದಲೇ ವರ್ಣಿಸಿರುವ ಬಗೆಯ ವಿದೇಶೀಯ ಕೂಲಿಗಾರ ಸಿಪಾಯಿಗಳನ್ನು ನೀವು ನೇಮಿಸಿಕೊಳ್ಳ ಬೇಕಾಗುತ್ತದೆ. ಬರಿಯ ಅಂಥವರೇ ನಿಮ್ಮನ್ನು ದಂಗೆಕೋರ ಪ್ರಜೆಗಳಿಂದಲೂ ಬಲಾಢ್ಯರಾದ ಪರರಿಂದಲೂ ರಕ್ಷಿಸಲಾರರು. ಆದುದರಿಂದ ಇತಿಹಾಸದಲ್ಲಿ ಕಂಡುಬರುವಂತೆ ಹೊಸ ದೊರೆಗಳು ತಮ್ಮ ಹೊಸ ಆಡಳಿತಗಳಲ್ಲಿ ತಮ್ಮ ಪ್ರಜೆಗಳೆಲ್ಲರನ್ನೂ ಸದಾಕಾಲ ಆಯುಧಪಾಣಿಗಳನ್ನಾಗಿ ಮಾಡಿರುತ್ತಾರೆ. ಆದರೆ, ಒಬ್ಬ ರಾಜನು ಹೊಸ ಪ್ರದೇಶವನ್ನು ಜಯಿಸಿ, ತನ್ನ ಪುರಾತನ ಪ್ರಾಂತಕ್ಕೆ ಸೇರಿಸಿಕೊಳ್ಳುವ ಸಂದರ್ಭದಲ್ಲಿ, ಅಂತಹ ಹೊಸಪ್ರದೇಶದ ಪ್ರಜೆ ಗಳನ್ನು ನಿರಾಯುಧರನ್ನಾಗಿ ಮಾಡಿ, ತನ್ನ ಕಡೆ ಜೈತ್ರ ಯಾತ್ರೆಯಲ್ಲಿ ಸೇರಿದ ವರನ್ನು ಮಾತ್ರ ಆಯುಧಪಾಣಿಗಳನ್ನಾಗಿ ಮಾಡಬೇಕು. ಹೊಸಬರನ್ನು ಕ್ರಮೇಣ ಧೈರ್ಯಹೀನರನ್ನೂ, ಆಯುಧ ನಿರಭ್ಯಾಸದಿಂದ ಸೋಮಾರಿಗಳನ್ನೂ ಮಾಡಿ, ತನ್ನ ಸಹಜವಾದ ಹಳೆಯ ಪ್ರಜೆಗಳ ಸೈನ್ಯದ ಮೇಲೆ ವಿಶಿಷ್ಟ ಶಕ್ತಿಯೂ ಅವಲಂಬಿಸಿರುವ ಹಾಗೆ ಮಾಡಿಕೊಂಡು, ಅವರನ್ನೇ ಯಾವಾ ಗಲೂ ತನ್ನ ಬಳಿಯಲ್ಲಿಟ್ಟುಕೊಂಡಿರಬೇಕು. ಬುದ್ಧಿಶಾಲಿಗಳೆಂದು ಪ್ರಸಿದ್ಧ ರಾದ ನಮ್ಮ ಹಿರಿಯರು ಈ ರೀತಿ ಹೇಳುತ್ತಿದ್ದರು: "ಪಿಷ್ಟೋಯಿಸ್ಯ (ಹೊಸದಾಗಿ

ಗೆಢ್ರಾಜ್ಯ) ದಲ್ಲಿ ಪರಸ್ಪರ ವಿರುದ್ಧವಾದ ಕಕ್ಷಿಗಳನ್ನು ಎಬ್ಬಿಸಿ ಆಳಬೇಕು; ಪೈಸಾವನ್ನು ಕೋಟೆಗಳನ್ನು ಸ್ಥಾಪಿಸಿ ಆಳಬೇಕು" ಎಂದು. ಆ ನೀತಿಯನ್ನು ಅನುಸರಿಸಿ ಅವರ ಅಧಿಕಾರಕ್ಕೆ ಒಳಪಟ್ಟ ಅನೇಕ ಪಟ್ಟಣಗಳಲ್ಲಿ ಪ್ರಜೆಗಳನ್ನು ಪರಸ್ಪರ ವಿರೋಧವುಳ್ಳ ಪಂಗಡಗಳನ್ನಾಗಿ ಭೇದಿಸಿ, ತಾವು ಸುಖವಾಗಿ ಆಳುತ್ತಿದ್ದರು. ಇಟಲೀ ದೇಶವು ಒಂದು ರೀತಿಯ ಅವ್ಯವಸ್ಥೆ ಮತ್ತು ಸಂದಿಗ್ಧ ಸ್ಥಿತಿಯಲ್ಲಿದ್ದಾಗ, ಏನೋ ಇದನ್ನು ಸರಿಯಾದ ನೀತಿಯೆನ್ನಬಹುದು. ಆದರೆ ಇದೇ ನೀತಿ ಈಗಿನ ಕಾಲದಲ್ಲಿ ಅನುಸರಿಸಲು ಯೋಗ್ಯವಾದದ್ದಲ್ಲ ಎಂಬುದು ನನ್ನ ದೃಢವಾದ ಮತ. ಏಕೆಂದರೆ ನಗರದಲ್ಲಿ ಕಕ್ಷಿಗಳಿದ್ದರೆ, ಶತ್ರುಸೈನ್ಯ ಅಂತಹ ನಗರವನ್ನು ಮುತ್ತಿದ ಕೂಡಲೆ, ದುರ್ಬಲವಾದ ಕಕ್ಷಿ ಶತ್ರುಗಳೊಂದಿಗೆ ಸೇರಿ ಸಹಾಯಮಾಡುವುದರಿಂದ ನಗರವು ಪರಾಧೀನವಾಗುವುದು. ಇದಕ್ಕೆ ಐತಿಹಾಸಿಕ ನಿದರ್ಶನ: ವೆನಿಸ್ ರಾಜ್ಯದವರು ಮೇಲ್ಕಂಡ ನೀತಿಯನ್ನನುಸರಿಸಿ ತಮ್ಮ ಅಧೀನದಲ್ಲಿದ್ದ ಪ್ರತಿಯೊಂದು ಪಟ್ಟಣದಲ್ಲಿಯೂ ಗೆಲ್ಫ್ ಮತ್ತು ಜಿಭಿಲಿನ್ ಎಂಬ ಪರಸ್ಪರ ಅಹಿತ ಕಕ್ಷಿಗಳನ್ನು ಪರಸ್ಪರ ವಿರೋಧದಲ್ಲಿ ಪ್ರೋತ್ಸಾಹಿಸಿದರು; ಈ ಕಕ್ಷಿಗಳನ್ನು ರಕ್ತಪಾತದಿಂದ ಮಾತ್ರ ತಡೆಗಟ್ಟಿದ್ದರು; ಇದರ ಪರ್ಯವಸಾನ ಏನಾಯಿತೆಂದರೆ, ಶತ್ರುಗಳು ಮೇಲೆ ಬಿದ್ದು ವೆನಿಸಿನವರನ್ನು ವಾಲಿಯಾ ಕದನದಲ್ಲಿ ಸೋಲಿಸಿದಾಗ ಕಕ್ಷಿಗಳ ಪೈಕಿ ಒಂದು ದಂಗೆಯೆದ್ದು ವೆನಿಸಿನವರನ್ನು ಪಟ್ಟಣಗಳಿಂದ ಹೊರತಳ್ಳಿ ಓಡಿಸಿಬಿಟ್ಟಿತು. ಆದುದರಿಂದ ಕಕ್ಷಿಕಟ್ಟಿ ಆಳುವುದೆಂಬ ನೀತಿಯು ರಾಜನ ದುರ್ಬಲತೆಯನ್ನು ಸೂಚಿಸುತ್ತದೆಯೇ ಹೊರತು ಬೇರೆ ಅಲ್ಲ. ಬಲವಾದ ಯಾವ ರಾಜ್ಯವೂ ಇಂಥ ನೀತಿಯನ್ನು ಅನುಸರಿಸಬಾರದು. ಏಕೆಂದರೆ, ಯುದ್ಧವಿಲ್ಲದ ಕಾಲದಲ್ಲಿ ಇವು ಆಳ್ವಿಕೆಯನ್ನು ಸ್ವಲ್ಪಮಟ್ಟಿಗೆ ಸುಲಭ ಮಾಡಬಹುದಾದರೂ, ಯುದ್ಧ ಬಂದ ಕೂಡಲೆ ಇದು ಅನರ್ಥಕ್ಕೆ ಕಾರಣವಾಗುತ್ತದೆ. ಒಳ್ಳೆಯ ಅದೃಷ್ಟವು ಒಬ್ಬ ಹೊಸರಾಜನನ್ನು ಉನ್ನತಿಗೆ ತರಬೇಕಾಗಿದ್ದರೆ, ಅವನಿಗೆ ಹಳೆಯ ರಾಜರಿಗಿಂತಲೂ ಹೆಚ್ಚು ಕೀರ್ತಿಗೆ ಅವಕಾಶ ಕೊಡಲಿಕ್ಕೋ ಎಂಬಂತೆ ಅವನಿಗೆ ಶತ್ರುಗಳನ್ನು ಎಬ್ಬಿಸಿ, ಅವರನ್ನು ಅವನಿಂದ ಪರಾಜಿತರನ್ನಾಗಿಮಾಡಿ, ಅವನ ಅಭಿವೃದ್ಧಿಗೆ ಅಂತಹ ಶತ್ರುಗಳೇ ಸೋಪಾನವಾಗುವಂತೆ ಮಾಡುತ್ತದೆ. ಇದರಿಂದ ಕೆಲವು ನೀತಿಜ್ಞರು, ಬುದ್ಧಿವಂತನಾದ ರಾಜನು ತನಗೆ ಅನುಕೂಲವಿದ್ದರೆ ಕೆಲವು ಶತ್ರುಗಳನ್ನು ತನ್ನ ಕೀರ್ತಿಯಾತ್ರೆಗಾಗಿ ಮಿಾಸಲಿಟ್ಟುಕೊಳ್ಳ

ಬೇಕೆಂದು ಅಭಿಪ್ರಾಯಪಡುತ್ತಾರೆ. ಸರಿಯಾದ ಕಾಲನೋಡಿ ಈ ಶತ್ರುಗಳನ್ನು ಧ್ವಂಸಮಾಡುವುದರಿಂದ ರಾಜನ ಕೀರ್ತಿ ಹೆಚ್ಚಾಗುತ್ತದೆಂದು ಹೇಳುತ್ತಾರೆ.

ಅನೇಕ ರಾಜರುಗಳು, ಅದರಲ್ಲಿಯೂ ಆ ಪದವಿಗೆ ಹೊಸದಾಗಿ ಬಂದವರು, ಪ್ರಾರಂಭದಲ್ಲಿ ತಮ್ಮ ವಿಶೇಷ ನಂಬಿಕೆಗೆ ಅರ್ಹರಾಗಿದ್ದವರಿಗಿಂತಲೂ, ಪ್ರಾರಂಭದಲ್ಲಿ ಯಾರನ್ನು ಕಂಡರೆ ನಂಬಿಕೆಯಿರಲಿಲ್ಲವೋ ಅವರಿಂದಲೇ ಹೆಚ್ಚು ಸೇವೆಯನ್ನೂ, ಭಕ್ತಿಯನ್ನೂ ಪಡೆದಿರುತ್ತಾರೆ. ಪಾನ್ ಡಾಲ್‌ಫಸ್ ಪೆಟ್ರುಚ್ಚಿ (Pan Dalfus Petrecci) ಎಂಬ ಸಿಯೆನ್ನಾ ದೊರೆಯು, ತನ್ನ ರಾಜ್ಯವನ್ನು ತನಗೆ ಯಾರಲ್ಲಿ ನಂಬಿಕೆಯಿರಲಿಲ್ಲವೋ ಅಂಥವರ ಸಹಾಯದಿಂದಲೇ ಆಳುತ್ತಿದ್ದನು. ಆದರೆ, ಈ ನೀತಿಯು ಎಲ್ಲಾ ಕಾಲದಲ್ಲಿಯೂ, ಎಲ್ಲಾ ಸಂದರ್ಭಗಳಲ್ಲಿಯೂ ಆಚರಣೀಯವಲ್ಲ. ಇದರ ಫಲಿತಾಂಶವು ಜನಗಳ ಸ್ವಭಾವದ ಮೇಲೆ ಹೋಗುತ್ತದೆ. ಇಷ್ಟು ಮಟ್ಟಿಗೆ ಹೇಳಬಹುದು: ರಾಜನನ್ನು ಪ್ರಾರಂಭದಲ್ಲಿ ಎದುರಿಸಿದವರು ಇತರರ ಆಧಾರವನ್ನು ಅಪೇಕ್ಷಿಸುವಷ್ಟು ದುರ್ಬಲರಾಗಿದ್ದರೆ, ಅವರನ್ನು ರಾಜನು ಸುಲಭವಾಗಿ ತನ್ನ ಕಡೆಗೆ ತಿರುಗಿಸಿಕೊಳ್ಳಬಹುದು. ಇಂಥವರು ತಮ್ಮ ಹಿಂದಿನ ವಿರೋಧವರ್ತನೆಯನ್ನು ಮರೆಸುವುದಕ್ಕಾಗಿ ರಾಜನ ಸೇವೆಯನ್ನು ವಿಶೇಷ ಭಕ್ತಿಯಿಂದಲೂ, ದಕ್ಷತೆಯಿಂದಲೂ ಮಾಡುತ್ತಾರೆ; ಆದ್ದರಿಂದ, ಹಿಂದೆಯೇ ಸೇವೆ ಮಾಡಿ, ರಾಜನೇ ತಮ್ಮ ಋಣಿಯೆಂದು ತಿಳಿದಿರುವ ಹಳೆಯ ಪಕ್ಷದವರಿಗಿಂತಲೂ ಇವರ ಸೇವೆ ಹೆಚ್ಚು ಶ್ರದ್ಧೆಯುಳ್ಳದ್ದಾಗಿರುತ್ತದೆ.

ಈ ಸಂದರ್ಭದಲ್ಲಿ ಹೊಸದಾಗಿ ಮುಂದೆ ಬಂದಿರುವ ರಾಜನಿಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ದೇಶದಲ್ಲಿನ ಪ್ರಜೆಗಳ ಭಿನ್ನಾಭಿಪ್ರಾಯಗಳ ದೆಸೆಯಿಂದ ಈ ಪದವಿ ನಿಮಗೆ ಲಭಿಸಿದ್ದರೆ, ಒಂದು ಪಂಗಡ ನಿಮ್ಮ ಪಕ್ಷವನ್ನು ವಹಿಸಿದ್ದು ನಿಮ್ಮ ಮೇಲಿನ ಪ್ರೀತಿಯಿಂದಲೋ ಅಥವಾ ಹಿಂದಿನ ರಾಜರುಗಳ ಮೇಲಿನ ದ್ವೇಷದಿಂದಲೋ, ಎಂದು ಯೋಚನೆಮಾಡಿ ತಿಳಿಯಿರಿ. ಹಿಂದಿನವರ ಮೇಲಿನ ದ್ವೇಷದಿಂದ ಆಗಿದ್ದರೆ, ಆ ಪಂಗಡವನ್ನು ತೃಪ್ತಿಪಡಿಸಿ, ನಿರಂತರವೂ ನಿಮ್ಮ ಹಿತವರವನ್ನಾಗಿ ಕಾಪಾಡಿಕೊಳ್ಳುವುದು ಬಹಳ ಕಷ್ಟ. ಯಾರು ಹಿಂದಿನ ಸರಕಾರಕ್ಕೆ ಸ್ನೇಹಿತರಾಗಿದ್ದರೊ ಅವರು ಸುಲಭವಾಗಿ ನಿಮಗೂ ಸ್ನೇಹಿತರಾಗುತ್ತಾರೆ. ಹಿಂದಿನ ಸರಕಾರಕ್ಕೆ ದ್ರೋಹ ಮಾಡಿದವರು ಅಷ್ಟು ನಂಬಿಕೆಗೆ ಅರ್ಹರಲ್ಲ.

ತಮ್ಮ ರಾಜ್ಯವನ್ನು ಭದ್ರಪಡಿಸಿಕೊಳ್ಳುವುದಕ್ಕೂ ಮತ್ತು ಪ್ರಜೆಗಳು ದಂಗೆ ಎದ್ದರೆ, ತಮ್ಮ ಆತ್ಮರಕ್ಷಣೆಗಾಗಿಯೂ ಕೋಟೆಕೊತ್ತಳಗಳನ್ನು ಕಟ್ಟಿ ಬಲಪಡಿಸುವುದು ರಾಜರುಗಳ ಪದ್ಧತಿಯಾಗಿದೆ. ಇದು ಬಹು ಪುರಾತನ ವಾಡಿಕೆಯಾದ್ದರಿಂದ ಇದನ್ನು ನಾನು ಸಮರ್ಥಿಸುತ್ತೇನೆ. ಆದರೆ, ಇತ್ತೀಚೆಗೆ ನಿಕೋಲೋ ವಿಟೆಲ್ಲಿ (Nicolo Vitelli) ಕಾಸ್ಟೆಲೋ ಪಟ್ಟಣದಲ್ಲಿದ್ದ ಎರಡು ಕೋಟೆಗಳನ್ನು ತನ್ನ ಆಡಳಿತದ ಭದ್ರತೆಗೆ ಎಂದು ನೆಲಮಟ್ಟ ಮಾಡಿದನು. ಗೈಡೋ ಬಾಲ್ಡೋ ಎಂಬ ಅರ್ಬಿನ್ ಅಧಿಪತಿ (Guido Baldo, Duke of Urbin) ಸೀಸರ್ ಬೋರ್ಜಿಯನಿಂದ ತನಗೆ ಉಚ್ಚಾಟನೆಯಾಗಿದ್ದ ತನ್ನ ಪ್ರಾಂತಕ್ಕೆ ಮರಳಿ ಬಂದವನು, ಅಲ್ಲಿನ ಎಲ್ಲಾ ದುರ್ಗಗಳನ್ನು ನಾಶಮಾಡಿದನು. ಅವು ಇದ್ದರಲ್ಲವೇ ಶತ್ರುಗಳ ವಶವಾದಾವು ಎಂಬ ಅಭಿಪ್ರಾಯದಿಂದ ಹೀಗೆ ಮಾಡಿದನು. ಬೆಂಟಿವೋಗ್ಲಿ ಎಂಬವನು ಬೊಲೋನಕ್ಕೆ ಮರಳಿ ಬಂದಾಗಲೂ ಇದೇ ರೀತಿ ಮಾಡಿದನು. ಅದಕ್ಕೋಸ್ಕರ, ಕೋಟೆಗಳು ಪ್ರಯೋಜನಕಾರಿ, ಅಥವಾ ಅಲ್ಲ, ಎಂದು ಒಂದೇ ಮಾತಿನಲ್ಲಿ ಹೇಳುವುದಕ್ಕಾಗುವುದಿಲ್ಲ. ಅವು ಕಾಲದೇಶಗಳ ಅನುಸಾರ ಇಷ್ಟ ಅಥವಾ ಅನಿಷ್ಟ ಆಗಬಹುದು. ಒಟ್ಟಿನ ಮೇಲೆ ಇಷ್ಟು ಹೇಳಬಹುದು: ಯಾವ ದೊರೆಗೆ ತನ್ನ ನೆರೆಯವರಿಗಿಂತಲೂ ತನ್ನ ಪ್ರಜೆಗಳನ್ನು ಕಂಡರೆ ಹೆಚ್ಚು ಭಯವೋ, ಅಂಥವನು ಕೋಟೆಗಳನ್ನು ಇಟ್ಟುಕೊಂಡಿರಬೇಕು. ಇದಕ್ಕೆ ನಿದರ್ಶನ ನೋಡಿ: ಸ್ಫೋರ್ಜಾ ಮನೆತನದವರು ಅದರ ಮೂಲಪುರುಷರು ಕಟ್ಟಿದ ಮಿಲಾನ್ ಕೋಟೆಯಿಂದ ಎಂಥ ಸರ್ವಾಧಿಕವಾದ ಅನಾಹುತಗಳನ್ನು ಅನುಭವಿಸಿದ್ದಾರೆ! ದೊರೆಯ ಮುಖ್ಯ ಕೋಟೆಯೆಂಬುದು ಕಲ್ಲುಗಚ್ಚುಗಳಲ್ಲ; ಪ್ರಜೆಗಳ ಅನುರಾಗ. ದೊರೆ ಪ್ರಜೆಗಳ ಬದ್ಧದ್ವೇಷಕ್ಕೆ ಪಾತ್ರನಾದರೆ, ಅವರು ದಂಗೆಯೆದ್ದ ಕೂಡಲೆ ಶತ್ರುಗಳೆಲ್ಲರೂ ಅವರ ಸಹಾಯಕ್ಕೆ ಗುಂಪು ಕೂಡುತ್ತಾರೆ. ನಮ್ಮ ಕಾಲದಲ್ಲಿ ದೊರೆಗೆ ಕೋಟೆಯಿಂದ ಪ್ರಯೋಜನ ಉಂಟಾದ್ದಕ್ಕೆ ಒಂದು ಉದಾಹರಣೆ ಮಾತ್ರವಿದೆ. ಹಿರೋನಿಮೋ (Hironimo) ಸತ್ತಾಗ, ಅವನ ಹೆಂಡತಿ, ಕೌಂಟೆಸ್ ಆಫ್ ಫರ್ಲಿ (Countess of Furli) ತನ್ನ ಕೋಟೆಗಳಲ್ಲಿ, ತನಗೆ ಮಿಲಾನಿನಿಂದ ಸಹಾಯ ಮತ್ತು ಸರಬರಾಯಿ ಬರುವ ವರೆಗೂ ಪ್ರಜೆಗಳ ರೋಷಕ್ಕೆ ಬಲಿಯಾಗದೆ ತನ್ನ ಪ್ರಾಣವನ್ನು ರಕ್ಷಿಸಿಕೊಂಡಳು. ಪ್ರಜೆಗಳಿಗೆ ಹೊರಗಿನವರ ಸಹಾಯ ದೊರೆಯುವ ಸಂಭವವಿರಲಿಲ್ಲವಾದ್ದರಿಂದ ಇದು

ಸಾಧ್ಯವಾಯಿತು. ಆ ಮೇಲೆ, ಸೀಸರ್ ಬೋರ್ಜಿಯಾ ಆಕ್ರಮಿಸಿ ಬಂದಾಗ ರೇಗಿದ್ದ ಇವಳ ಪ್ರಜೆಗಳು ಅವನ ಕಡೆ ಸೇರಿದ್ದರಾದ್ದರಿಂದ ಈ ಕೋಟೆಗಳಿಂದ ಇವಳಿಗೇನೂ ಪ್ರಯೋಜನವುಂಟಾಗಲಿಲ್ಲ. ಇದರಿಂದ ತಿಳಿಯಬೇಕಾದ್ದು ಇಷ್ಟೆ, ಮೊದಲಿನಿಂದಲೂ ಈಕೆ ಜನಗಳ ಅನುರಾಗವನ್ನು ಸಂಪಾದಿಸಿದ್ದರೆ ಈ ಎಲ್ಲಾ ಕೋಟೆಗಳಿಗಿಂತ ಅದು ಮಿಗಿಲಾಗಿರುತ್ತಿದ್ದಿತು. ಒಟ್ಟಿನ ಮೇಲೆ ನನಗೆ ಕೋಟೆ ಕಟ್ಟುವುದೂ ಒಪ್ಪಿಗೆಯೇ, ಕಟ್ಟದಿರುವುದೂ ಒಪ್ಪಿಗೆಯೇ; ಆದರೆ ಕೋಟೆಗಳ ಮೇಲೆ ಭರವಸೆಯಿಟ್ಟು ತನ್ನ ಪ್ರಜೆಗಳನ್ನು ಧಿಕ್ಕರಿಸಿ ಅವರ ವೈರವನ್ನು ಸಂಪಾದಿಸುವುದು ಮಾತ್ರ ಪರಮ ಅವಿವೇಕ ಎಂದು ಖಚಿತವಾಗಿ ಹೇಳುತ್ತೇನೆ.

ಇಪ್ಪತ್ತನೆಯ ಅಧ್ಯಾಯ

ಪ್ರಖ್ಯಾತಿಯನ್ನು ಗಳಿಸುವುದಕ್ಕೆ ರಾಜನು ಹೇಗೆ ವರ್ತಿಸಬೇಕು ?

ದೊಡ್ಡ ಸಾಹಸದ ಕಾರ್ಯಗಳು, ಆತ್ಮ ಪೌರುಷದ ಶ್ಲಾಘ್ಯವಾದ ಪ್ರದರ್ಶನಗಳು, ಇವುಗಳಷ್ಟು ರಾಜನ ಕೀರ್ತಿಯನ್ನು ಖ್ಯಾತಿಗೊಳಿಸುವ ಸಾಮಗ್ರಿಗಳು ಪ್ರಪಂಚದಲ್ಲಿ ಮತ್ತೆ ಯಾವುವೂ ಇಲ್ಲ. ಇದಕ್ಕೆ ನಮ್ಮ ಕಾಲದಲ್ಲಿಯೇ, ಈಗ ಸ್ಪೆಯಿನ್ ರಾಜನಾಗಿರತಕ್ಕ ಆರಗಾನ್ ಪ್ರಭುವಾದ ಫರ್ಡಿನ್ಯಾಂಡ (Ferdinand, King of Aragon)ನ ಉದಾಹರಣೆಯನ್ನು ಕೊಡುತ್ತೇನೆ. ಇವನು ಒಂದು ಸಣ್ಣ ಪ್ರಾಂತ್ಯದ ದುರ್ಬಲ ದೊರೆಯಾಗಿದ್ದವನು ಈಗ ಕ್ರೈಸ್ತಮತ ಇರುವ ಪ್ರದೇಶಗಳಲ್ಲೆಲ್ಲಾ ಶ್ರೇಷ್ಠನಾದ ಪ್ರಭುವೆಂದು ಪ್ರಖ್ಯಾತಿಯನ್ನು ಪಡೆದಿರುವುದರಿಂದ, ಇವನನ್ನು ಉಚಿತವಾಗಿಯೇ ನೂತನ ಪ್ರಭುವೆಂದು ಕರೆಯಬಹುದು. ಇವನ ವೀರ ಕೃತ್ಯಗಳನ್ನು ಪರಿಶೀಲಿಸಿದರೆ, ಎಲ್ಲವೂ ಅಧಿಕ ಶೌರ್ಯವನ್ನು ತೋರಿಸುವುವಲ್ಲದೆ, ಕೆಲವು ಅತ್ಯದ್ಭುತವಾಗಿ ಕಾಣುತ್ತವೆ. ಆಳ್ವಿಕೆಯ ಪ್ರಾರಂಭದಲ್ಲಿಯೇ ಇವನು ಗ್ರಾನಡ (Granada) ರಾಜ್ಯವನ್ನು ಆಕ್ರಮಿಸಿದನು. ಈ ಸಾಹಸ ಕೃತ್ಯವು ಇವನ ಮಹತ್ವದ ತಳಹದಿಯಾಯಿತು. ಇವನು ಇದನ್ನು ಆತಂಕವಿಲ್ಲದೆ, ಅವಸರವಿಲ್ಲದೆ ಕ್ರಮವಾಗಿ ಸಾಧಿಸಿದನು. ಇವನ ನಾಯಕತ್ವದಲ್ಲಿ ಯುದ್ಧ ಮಾಡುತ್ತಿದ್ದ ಕ್ಯಾಸ್ಟೀಲಿ (Castile)ನ ಯೋಧ ಶ್ರೀಮಂತರು ಈ ಕಾಲದಲ್ಲಿ ಸಂಗ್ರಾಮದ ಉತ್ಸಾಹದಲ್ಲಿ ತಮ್ಮ ಸ್ಥಾನದಲ್ಲಿ ಕ್ರಮೇಣ ನುಸಿದು ಬರುತ್ತಿರುವ ಬದಲಾವಣೆ

ಗಳನ್ನೇ ಕನಸಿನಲ್ಲಿಯೂ ಕಾಣದೆ ಹೋದರು. ಅವರಿಗೆ ಅವರ ಪದವಿಯಲ್ಲಿನ ಬದಲಾವಣೆ ತಿಳಿಯುವುದರೊಳಗಾಗಿ ಅವನು ಪ್ರಖ್ಯಾತನಾಗಿ, ಅವರ ಅಧಿಪತಿ ಯಾಗಿ ಹೋಗಿದ್ದನು. ಫರ್ಡಿನ್ಯಾಂಡನು ಉಪಾಯದಿಂದ ತನ್ನ ಸೈನ್ಯದ ಖರ್ಚನ್ನು ಕ್ರಿಶ್ಚಿಯನ್ ಮಠಗಳು ಮತ್ತು ಕ್ರಿಶ್ಚಿಯನ್ ದೇಶದ ಜನಗಳು ಹೊರುವಂತೆ ಮಾಡಿಕೊಂಡನು. ದೀರ್ಘ ಕಾಲದ ಈ ಯುದ್ಧದಲ್ಲಿ ತನ್ನ ಸೈನ್ಯದ ರಚನೆಯನ್ನೂ, ಶಿಸ್ತನ್ನೂ ಎಷ್ಟು ಚೆನ್ನಾಗಿ ಭದ್ರಪಡಿಸಿ ಕೊಂಡನೆಂದರೆ, ಆ ಸೈನ್ಯದ ಮೂಲಕ ಅವನು ಅನೇಕ ಘನವಾದ ಜಯಗಳನ್ನು ಪಡೆಯಲು ಸಾಧ್ಯವಾಯಿತು. ತದನಂತರ ಇನ್ನೂ ಭಾರಿಯ ವಿಜಯ ಸಾಹಸಗಳನ್ನು ಕೈಗೊಳ್ಳಲು ಅನುವಾಗಿ ಈ ದೊರೆ ಸದಾಕಾಲ ತಾನು ಮತೋದ್ಧಾರಕ್ಕೆ ಕಂಕಣ ಕಟ್ಟಿದವನೆಂಬ ವ್ಯಾಜದ ಒಂದು ತರಹದ ಭಕ್ತಿಪೂರ್ವಕ ಕ್ರೂರ ಆಗ್ರಹದಲ್ಲಿ ಮರ್‍ರಾನಿ (Marrani) ಎಂಬ ಯೆಹೂದೀಯ ಜನಾಂಗವನ್ನು ನಿರ್ಮೂಲವಾಗಿ ನಾಶ ಮಾಡಿದನು. ಇದೇ ಮತೋದ್ಧಾರದ ನೆವದಲ್ಲಿ ಇವನು ಆಫ್ರಿಕಾ ಮತ್ತು ಇಟಲಿಗಳಲ್ಲಿ ದಂಡಯಾತ್ರೆ ಹೋಗಿ, ನಂತರ ಫ್ರಾನ್ಸಿನ ಮೇಲೂ ಕೈಮಾಡಿ, ಅನೇಕ ವೀರ ಕೃತ್ಯಗಳನ್ನು ನಡೆಸಿ, ತನ್ನ ಪ್ರಜೆಗಳ ಮೆಚ್ಚಿಗೆಯನ್ನೂ, ವಿಸ್ಮಯವನ್ನೂ ಎಬ್ಬಿಸಿ ಕೀರ್ತಿವಂತನಾ ದನು. ಇವನ ಸಾಹಸಗಳೆಲ್ಲಾ ಊಹಿಸಲು ಅಶಕ್ಯವಾದ ತೀವ್ರತೆಯಿಂದ ಪ್ರಾರಂಭವಾಗುತ್ತಿದ್ದುದರಿಂದಲೂ, ಇವನ ಕಾರ್ಯಗಳು ಒಂದರಿಂದೊಂದಕ್ಕೆ ವಿರಾಮವಿಲ್ಲದೆ ಪ್ರಗತಿ ಹೊಂದುತ್ತಿದ್ದುದರಿಂದಲೂ, ಯಾವ ಮನುಷ್ಯನಿಗೂ ನಿಧಾನವಾಗಿ ಯೋಚನೆ ಮಾಡಿ, ಇವನಿಗೆ ವಿರೋಧವಾಗಿ ಕಾರ್ಯ ಕೈಗೊಳ್ಳು ವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ತನ್ನ ದೇಶದ ಆಡಳಿತದಲ್ಲಿಯೂ, ಯಾವುದಾದರೂ ಅಪೂರ್ವವಾದ ಸುಧಾರಣೆಯನ್ನು ಮಾಡುವುದು ದೊರೆಯು ಖ್ಯಾತಿ ಸಂಪಾದಿಸುವುದಕ್ಕೆ ಕೈಗೊಳ್ಳಬಹುದಾದ ಮತ್ತೊಂದು ಉಪಾಯ. ಆಡಳಿತದಲ್ಲಿನ ನ್ಯೂನತೆ ಗಳನ್ನೂ, ತಪ್ಪುಗಳನ್ನೂ ತಿದ್ದಿ, ತಪ್ಪಿತಸ್ಥರನ್ನು ದಂಡಿಸಿ, ಯೋಗ್ಯರನ್ನು ಬಹುಮಾನಿಸುವ ದೊರೆಗಳಿಗೂ ಪ್ರಪಂಚದಲ್ಲಿ ಖ್ಯಾತಿಯುಂಟು. ಬರ್ನಾ ಡೋರ್ ಡ ಮಿಲಾನೋ (Bernardo da Milano) ಈ ರೀತಿಯಾಗಿ ಪ್ರಖ್ಯಾತನಾದನೆಂದು ಹೇಳುತ್ತಾರೆ. ದೊರೆಯು ತಾನು ಮಹಾನುಭಾವನು ಮಾತ್ರವಲ್ಲದೆ, ಸತ್ಪುರುಷನೂ ಹೌದು ಎಂಬ ಖ್ಯಾತಿಯನ್ನು ಪಡೆಯುವುದಕ್ಕೆ

ಪ್ರಯತ್ನ ಪಡಬೇಕು. ಅಲ್ಲದೆ, ಪ್ರಭುವು ಶ್ರದ್ಧಾಳುವಾದ ಮಿತ್ರ, ಧರ್ಮಿಷ್ಠನಾದ ಶತ್ರು, ಎಂದು ಎಣಿಸಲ್ಪಟ್ಟರೆ ಅವನಿಗೆ ಖ್ಯಾತಿಯುಂಟು. ಇದರ ಅರ್ಥವೇನೆಂದರೆ, ನೃಪ ಪ್ರಪಂಚದಲ್ಲಿ ಭಿನ್ನತ್ವ ಉಂಟಾದರೆ ತಾನು ಅಡ್ಡ ಗೋಡೆಯ ಮೇಲಿನ ದೀಪದಂತಿರದೆ, ತನಗೆ ಧರ್ಮವೆಂದು ತೋರುವ ಪಕ್ಷಕ್ಕೆ ಸಂಶಯವಿಲ್ಲದೆ ಬೆಂಬಲ ಕೊಡಬೇಕು. ಅವನ ನೆರೆಹೊರೆಯ ಇಬ್ಬರು ಪ್ರಬಲ ರಾಜರುಗಳು ಯುದ್ಧ ಮಾಡಿದರೆ, ಆ ಯುದ್ಧದಲ್ಲಿ ವಿಜಯಿಯಾಗುವವನಿಂದ ತನಗೆ ಭಯವಿರಲಿ ಇಲ್ಲದೇ ಇರಲಿ, ಮುಚ್ಚುಮರೆಯಿಲ್ಲದೆ ತನಗೆ ಯುಕ್ತವೆಂದು ತೋರುವ ಪಕ್ಷಕ್ಕೆ ತಾನು ಸೇರುವುದು ಲಾಭಕರ; ಧರ್ಮವೂ ಹೌದು. ಹಾಗೆ ಸೇರದೇ ಇದ್ದರೆ, ಗೆದ್ದಂಥವನು ಪೃಥಕ್ಕಾಗಿ ನಿಂತವನ ಮೇಲೆ ಆಕ್ರಮಣ ಹೂಡುತ್ತಾನೆ. ಇದಕ್ಕೆ ಕಾರಣವೇನೆಂದರೆ, ತನ್ನ ಕಷ್ಟ ಸಂದರ್ಭದಲ್ಲಿ ಸಹಾಯಕ್ಕೆ ಬಾರದಿದ್ದವನನ್ನು ಯಾವನೂ ಮಿತ್ರನೆಂದು ಭಾವಿಸುವುದಿಲ್ಲ. ಆಗ ಸೋತವನೂ ಕೂಡಾ ತನ್ನ ಸಹಾಯಕ್ಕೆ ಬಾರದೆ ಮಧ್ಯಸ್ಥನಾಗಿ ಉಳಿದುಕೊಂಡಿದ್ದವನ ದುರ್ದೆಶೆಯನ್ನು ನೋಡಿ ತನ್ನಂತೆಯೇ ಅವನಿಗೂ ಆಯಿತಲ್ಲ ಎಂದು ಸಮಾಧಾನವನ್ನೇ ಪಡೆಯುತ್ತಾನೆ. ರೋಮನರು ಗ್ರೀಸನ್ನು ಆಕ್ರಮಿಸಿದಾಗ ಎಟೋಲಿಯನ್ನರ ಕರೆಯಂತೆ, ರೋಮನರನ್ನು ಎದುರಿಸಲು ಆ್ಯಂಟಿಯೋಕಸ್ ಗ್ರೀಸಿಗೆ ಸೈನ್ಯಸಹಿತನಾಗಿ ಹೋದನು. ಅಲ್ಲಿ ರೋಮನರಿಗೆ ಮಿತ್ರರಾದ ಅಕೈಯನ್ನರಿಗೆ ಆ್ಯಂಟಿಯೋಕಸ್ ತಟಸ್ಥರಾಗಿರಲು ಬೋಧಿಸುವುದಕ್ಕಾಗಿ ರಾಯಭಾರಿಗಳನ್ನು ಕಳುಹಿಸಿದನು. ರೋಮನರೂ ತಮ್ಮ ಪಕ್ಷಕ್ಕೆ ಸೇರಬೇಕೆಂದು ಅದೇ ಕಾಲದಲ್ಲಿ ಹೇಳಿ ಕಳುಹಿಸಿದರು. ಈ ವಿಷಯವು ಅಕೈಯನ್ನರ ರಾಜಸಭೆಯಲ್ಲಿ ಚರ್ಚೆಗೆ ಬಂದಾಗ, ಆ್ಯಂಟಿಯೋಕಸನ ದೂತನು ಆಕೈಯನ್ನರು ತಟಸ್ಥರಾಗಬೇಕೆಂದು ಕೇಳಿಕೊಂಡದ್ದಕ್ಕೆ, ರೋಮನ್ ರಾಯಭಾರಿಯು ಈ ರೀತಿ ಉತ್ತರ ಕೊಟ್ಟನು—"ಈ ಮನುಷ್ಯ ಈ ಯುದ್ಧದಲ್ಲಿ ನೀವು ಯಾವ ಪಕ್ಷಕ್ಕೂ ಸೇರದೆ ಇರುವುದು ನಿಮ್ಮ ರಾಷ್ಟ್ರಕ್ಕೆ ಶ್ರೇಯಸ್ಕರವೆಂದು ಹೇಳುತ್ತಾನೆ. ಇದಕ್ಕಿಂತಲೂ ನಿಮಗೆ ಹಾನಿಕರವಾದ ವಿಪರೀತ ಪರಿಣಾಮವುಳ್ಳ ಬೇರೆ ನೀತಿ ಯಾವುದೂ ಇಲ್ಲ. ನೀವು ತಟಸ್ಥರಾದರೆ ನಿಮಗೆ ಅಪಕೀರ್ತಿ ಕವಿಯುವುದಲ್ಲದೆ, ನಿಮಗೆ ಅಯ್ಯೋ ಎನ್ನುವವರೂ ಇಲ್ಲದೆ, ನೀವು ಗೆದ್ದವನ ಬಾಯಿತುತ್ತಾಗುತ್ತೀರೆಂಬುದು ಖಂಡಿತ. ಇದು ನಿರತವೂ ಸತ್ಯವಾದ ಮಾತು: ಏನೆಂದರೆ,

ನಿಮ್ಮಲ್ಲಿ ದಯೆಯಿಲ್ಲದವನು ನಿಮ್ಮನ್ನು ತಟಸ್ಥರಾಗಿರಿ ಎಂದು ತನ್ನ ಬಲೆಗೆ ಹಾಕಿಕೊಳ್ಳುತ್ತಾನೆ. ನಿಮ್ಮ ಮಿತ್ರರು ನೀವು ಆಯುಧಪಾಣಿಗಳಾಗಿ ತಮ್ಮ ಪಕ್ಷವನ್ನು ವಹಿಸಬೇಕೆಂದು ಬೇಡುತ್ತಾರೆ" ಎಂದು. ಸದ್ಯದ ಅಪಾಯುವನ್ನು ತಪ್ಪಿಸಿಕೊಳ್ಳುವುದಕ್ಕೆ, ಕುಮಂತ್ರಿಗಳ ಮಾತು ಕೇಳಿ, ಯಾವ ರಾಜರು ತಟಸ್ಥರಾಗುತ್ತಾರೋ ಅವರು ಬಹು ಸಾಮಾನ್ಯವಾಗಿ ಕೆಡುತ್ತಾರೆ. ಯಾರು ಧೈರ್ಯವಾಗಿ ಒಂದು ಪಕ್ಷವನ್ನು ಅವಲಂಬಿಸುತ್ತಾರೋ ಅವರು ಕ್ಷೇಮದಿಂದಿರುತ್ತಾರೆ. ನೀವು ಅವಲಂಬಿಸುವ ಪಕ್ಷ ಜಯಶಾಲಿಯಾದರೆ, ಆ ಪಕ್ಷ ನಿಮಗಿಂತ ಎಷ್ಟು ಬಲವತ್ತರವಾದುದಾಗಿದ್ದರೂ ನಿಮ್ಮಿಂದ ಉಪಕೃತವಾದ್ದರಿಂದ ನಿಮ್ಮಲ್ಲಿ ಪ್ರೀತಿ ಗೌರವಗಳನ್ನು ಇಟ್ಟೇ ಇರುತ್ತದೆ. ಮಾಡಿದ ಉಪಕಾರವನ್ನು ಮರೆತು ಕೃತಘ್ನರಾಗುವಷ್ಟು ಪಾಪಿಗಳಲ್ಲ ಮನುಷ್ಯರು. ಅಲ್ಲದೆ, ಜಯವೆಂಬುದು ವಿಜಯಿಯನ್ನು ವಿವೇಚನಾರಹಿತನನ್ನಾಗಿಯೂ ಧರ್ಮ ಹೀನನನ್ನಾಗಿಯೂ ಮಾಡುವಷ್ಟು ಸಂಪೂರ್ಣವಾದ್ಯವಲ್ಲ. ನೀವು ವಹಿಸಿದ ಪಕ್ಷದವರು ಪರಾಜಿತರಾದರೂ ಕೂಡ ನೀವು ಅವರಿಂದ ತಮ್ಮವರೆಂದು ಭಾವಿಸಲ್ಪಟ್ಟು, ತಮ್ಮ ಅದೃಷ್ಟ ದುರ್ದೈವಗಳಲ್ಲಿ ಭಾಗಿಯೆಂದು ಎಣಿಸಲ್ಪಟ್ಟು ಅವರ ಆದರಕ್ಕೂ, ಸಹಾಯಕ್ಕೂ ಅರ್ಹರಾಗುತ್ತೀರಿ. ಇದರಿಂದ ನಿಮ್ಮ ಅದೃಷ್ಟವು ಪುನರುದ್ಧಾರವಾಗಬಹುದು. ಅಥವಾ, ಯುದ್ಧ ಮಾಡುವ ಪಕ್ಷಗಳವರು ಸಮತೂಕರಾಗಿದ್ದರೆ, ನೀವು ಎಷ್ಟು ಜಾಗ್ರತೆಯಲ್ಲಿ ಒಂದು ಪಕ್ಷಕ್ಕೆ ಸೇರಿದರೆ ಅಷ್ಟು ಒಳ್ಳೆಯದು. ಏಕೆಂದರೆ, ಗೆಲ್ಲುವವನು ನಿಮ್ಮ ಸಹಾಯದಿಂದಲೇ ಜಯಿಸಿದನೆಂದು ತಿಳಿದು, ಮುಂದೆಯೂ ನಿಮ್ಮ ಸಹಾಯವೇ ಆವಶ್ಯಕವೆಂಬ ಭಾವನೆಯಿಂದ ಸದಾಕಾಲ ನಿಮಗೆ ಅನುಕೂಲನಾಗಿಯೇ ಇರುತ್ತಾನೆ. ಇಲ್ಲಿ ಒಂದು ಎಚ್ಚರಿಕೆ ಹೇಳಬೇಕಾಗಿದೆ. ಸಾಧ್ಯವಾದ ಮಟ್ಟಿಗೂ ರಾಜನು ತನಗಿಂತ ಬಲಾಢ್ಯನೊಂದಿಗೆ ಆಕ್ರಮಣ ಯುದ್ಧಕ್ಕಾಗಿ ಸಂಧಿಮಾಡಿಕೊಳ್ಳಬಾರದು. ಏಕೆಂದರೆ, ಆ ಯುದ್ಧ ಜಯಪ್ರದವಾದರೆ, ಆ ರಾಜನು, ತನಗಿಂತಲೂ ಬಲಾಢ್ಯನಾದ ತನ್ನ ಸಹಾಯ ಪಡೆದ ಮಿತ್ರರಾಜನ ಹತೋಟಿಯಲ್ಲಿ ಬೀಳುತ್ತಾನೆ. ರಾಜರು ತಮ್ಮ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಇತರ ರಾಜರಲ್ಲಿ ಅಧಿಕಾರಕ್ಕೆ ತಲೆಬಾಗದಂತೆ ಬಹು ಜಾಗರೂಕರಾಗಿರಬೇಕು. ವೆನಿಷಿಯನ್ನರು ಅನಾವಶ್ಯಕವಾಗಿ ಫ್ರಾನ್ಸಿನ ಅನುಬಂಧವನ್ನು ಮಾಡಿ, ಮಿಲಾನ್ ಡ್ಯೂಕನ ಮೇಲೆ ವಿರೋಧಮಾಡಿದರು.

ಆ ಅನುಬಂಧವೇ ಅವರು ಹಾಳಾಗುವುದಕ್ಕೆ ಅವಕಾಶವಾಯಿತು. ಆದರೆ ಬಲವತ್ಸಂಗ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಬಹುದು. ಪೋಪನೂ, ಸ್ಪೆಯಿನಿನವರೂ ತಮ್ಮ ಸೈನ್ಯಗಳನ್ನು ಲಂಬಾರ್ಡಿ ಆಕ್ರಮಣಕ್ಕೆ ಕಳುಹಿಸಿದಾಗ ಫ್ಲಾರೆಂಟೈನರಿಗೆ ಇಂಥ ಸಂದರ್ಭ ಒದಗಿತು. ಬಲಾಢ್ಯರ ಸಹಾಯವಿಲ್ಲದೆ ಆತ್ಮರಕ್ಷಣೆ ಅಸಾಧ್ಯವಾದರೆ, ಅಂತಹ ಸಹಾಯವನ್ನು ಪಡೆಯಲೇಬೇಕಾದ ಸಂದರ್ಭದಲ್ಲಿ ನಮ್ಮ ಸಮಯಾನುಸಾರವಾಗಿ ನಾವು ಸತ್ಯದಿಂದ ನಡೆಯಬೇಕು. ಎಲ್ಲಾ ಸನ್ನಿವೇಶಗಳಲ್ಲಿಯೂ ವಿನಾಯತಿಯಿಲ್ಲದೆ ಅನ್ವಯಿಸಬಹುದಾದ ನಿರ್ಣಯವಾದ ಒಂದೇ ನೀತಿಯನ್ನು ಬೋಧಿಸುವುದು ಅಸಾಧ್ಯ. ರಾಜಕೀಯ ಪ್ರಪಂಚದಲ್ಲಿ ಒಂದು ಅಪಾಯವನ್ನು ತಪ್ಪಿಸಿಕೊಳ್ಳಬೇಕೆಂದು, ವಿಚಾರವಿಲ್ಲದೆ ಆತುರ ಪಡುವವನು ಬೇರೊಂದು ಅಪಾಯಕ್ಕೆ ತುತ್ತಾಗುತ್ತಾನೆ. ಒಂದು ಸನ್ನಿವೇಶದಲ್ಲಿ ಸಂಭವಿಸಲು ಸಾಧ್ಯವಾದ ಎಲ್ಲಾ ಅಪಾಯಗಳನ್ನೂ ಸ್ಪಷ್ಟವಾಗಿ ಗುಣಿಸಿ, ಸಾಧ್ಯವಾದರೆ ಎಲ್ಲದರಿಂದಲೂ ಪಾರಾಗುವವನು, ಅಥವಾ ಅಪಾಯಗಳ ಪೈಕಿ ಘೋರವಾದವುಗಳನ್ನೆಲ್ಲಾ ತಪ್ಪಿಸಿಕೊಂಡು, ಲಘುವಾದದ್ದನ್ನು ಮಾತ್ರ ಎದುರಿಸುವವನೇ ನಿಪುಣ ನೀತಿಜ್ಞನು. ಇತರ ಕಲೆಗಳಲ್ಲಿ ಶ್ರೇಷ್ಠತ್ವದ ತಾರತಮ್ಯವನ್ನು ತಿಳಿದವನು ಹೇಗೆ ಕಲಾವಿದನೆನ್ನಿಸಿಕೊಳ್ಳುತ್ತಾನೆಯೋ, ಹಾಗೆ ರಾಜಕೀಯ ನೀತಿಯಲ್ಲಿಯೂ ಅಪಾಯಗಳ ಮತ್ತು ಉಪಾಯಗಳ ತಾರತಮ್ಯವನ್ನು ಚೆನ್ನಾಗಿ ಗುಣಿಸಿ, ತಿಳಿಯತಕ್ಕವನೇ ರಾಜನೀತಿಜ್ಞನೆನಿಸಿಕೊಳ್ಳುತ್ತಾನೆ. ರಾಜನಾದವನು ಎಲ್ಲಾ ಕಲೆಗಳಲ್ಲಿಯೂ ವಿವೇಚಿಸುವಷ್ಟು ತಿಳುವಳಿಕೆಯನ್ನು ಪಡೆದು, ಉತ್ಕೃಷ್ಟವಾದವುಗಳನ್ನು ಗೌರವಿಸಬೇಕು. ಅಲ್ಲದೆ ಅವನು ಸಮಸ್ತ ಪ್ರಜೆಗೂ, ಅವರ ಶಾಂತತೆ ಮತ್ತು ಕ್ಷೇಮದ ರಕ್ಷಣೆಯ ಜವಾಬ್ದಾರಿ ತನ್ನದು, ಅವರು ನಿಶ್ಚಿಂತರಾಗಿ ವ್ಯಾಪಾರ, ವ್ಯವಸಾಯ ಮೊದಲಾದ ತಮ್ಮ ತಮ್ಮ ಉಚಿತ ಕಸಬುಗಳಲ್ಲಿ ನಿರತರಾಗಿರಬಹುದು ಎಂಬ ಭರವಸೆಯನ್ನು ಕೊಡಬೇಕು. ಇಂತಹ ಭರವಸೆ ಇಲ್ಲದಿದ್ದರೆ ಜನಗಳು ತಮ್ಮ ಸ್ಥಿತಿಗತಿಗಳನ್ನು ಸಂಶಯಾಸ್ಪದವೆಂದು ತಿಳಿದು ಅಭಿವೃದ್ಧಿಗೆ ತರಲು ಪ್ರಯತ್ನಿಸುವುದಿಲ್ಲ. ದೊರೆಯು ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸುವಂತಹ ಕಸಬುದಾರರಿಗೆ ಬಹುಮಾನಗಳು, ತೆರಿಗೆಗಳಿಂದ ವಿನಾಯಿತಿಗಳು, ಮೊದಲಾದ ರಿಯಾಯಿತಿಗಳಿಂದ ಪ್ರೋತ್ಸಾಹಿಸಬೇಕು. ಅದೂ ಅಲ್ಲದೆ, ಪ್ರತಿವರ್ಷವೂ ಅನುಕೂಲವಾದ ಕಾಲಗಳಲ್ಲಿ

ಜನಾಂಗದವರಿಗೆಲ್ಲಾ ಹಿತವಾದ ಉತ್ಸವಗಳು, ನಾಟಕಗಳು, ವಿನೋದಗಳು ಮೊದಲಾದವುಗಳನ್ನೇರ್ಪಡಿಸಿ ಸಂತೋಷದಲ್ಲಿ ಇಟ್ಟಿರಬೇಕು. ರಾಜ್ಯದ ಪ್ರತಿ ಪಟ್ಟಣದಲ್ಲಿಯೂ ಸಂಘಗಳು, ಮೊಹಲ್ಲಾ ಸಮಿತಿಗಳು ಇರುತ್ತವಾದ್ದರಿಂದ, ಇವುಗಳಿಗೆ ಗೌರವಕೊಟ್ಟು, ಇವುಗಳ ಹಬ್ಬಹಾಡಿಗಳಲ್ಲಿ ಭಾಗವಹಿಸಿ ಜನಗಳಿಗೆ ತನ್ನ ಅನುರಾಗ ಮತ್ತು ವಿಭೂತಿಯ ಪ್ರದರ್ಶನವನ್ನು ಮಾಡಬೇಕು. ಆದರೆ ಈ ಎಲ್ಲಾ ವರ್ತನೆಗಳಲ್ಲಿಯೂ ಅತಿ ಸಲಿಗೆ ತನ್ನ ಗೌರವಕ್ಕೂ, ದರ್ಪಕ್ಕೂ ಚ್ಯುತಿತಾರದಂತೆ ಕಾಪಾಡಿಕೊಳ್ಳಬೇಕು.

ಇಪ್ಪತ್ತೊಂದನೆಯ ಅಧ್ಯಾಯ

ರಾಜರುಗಳ ಸಚಿವರುಗಳನ್ನು ಕುರಿತು

ತನಗೆ ಬೇಕಾದ ಮಂತ್ರಿವರ್ಗದವರನ್ನು ಚುನಾಯಿಸುವುದು ದೊರೆಯಾದವನಿಗೆ ಅತಿಮುಖ್ಯವಾದ ಕೆಲಸಗಳಲ್ಲೊಂದು. ಜನರು ಸಾಮಾನ್ಯವಾಗಿ ರಾಜನ ಯೋಗ್ಯತೆಯನ್ನು ಅವನು ತನ್ನ ಸುತ್ತಲೂ ಸೇರಿಸಿಕೊಂಡಿರುವ ಸಿಬ್ಬಂದಿ ವರ್ಗದಿಂದ ನಿರ್ಣಯಿಸುತ್ತಾರೆ. ಮಂತ್ರಿಗಳು ಬುದ್ಧಿವಂತರೂ ದಕ್ಷರೂ ಆಗಿದ್ದರೆ, ರಾಜನು ಸಮರ್ಥರಾದವರನ್ನು ಆರಿಸುವುದರಲ್ಲಿ ಚತುರನೂ ಮತ್ತು ತನ್ನ ಅಧೀನ ಅಧಿಕಾರಿಗಳನ್ನು ಒಲಿಸಿ ಚೆನ್ನಾಗಿ ಕೆಲಸವನ್ನು ತೆಗೆದುಕೊಳ್ಳುವುದನ್ನು ಬಲ್ಲವನೂ ಎಂಬುದು ಸ್ಪಷ್ಟವಾಗುತ್ತದೆ. ಹಾಗಿಲ್ಲದ ಪಕ್ಷಕ್ಕೆ ಅಸಮರ್ಥರಾದ ಮಂತ್ರಿಗಳನ್ನು ನೇಮಿಸಿಕೊಂಡದ್ದು ಆ ಅವಿವೇಕಿ ದೊರೆಯ ಆಳ್ವಿಕೆಯ ಮೊದಲ ತಪ್ಪು ಹಜ್ಜೆಯೆನ್ನಬಹುದು. ಆ್ಯಂಟೋನಿಯೋ ಡ ವೆನಾಫ್ರೊ (Antonio da Venafro) ಪ್ಯಾಂಡೋಲ್ಫೋ ಪೆಟ್ರುಚ್ಚಿ (Pandolpho Petrucci)ಯ ಕಾರ್ಯದರ್ಶಿ ಎಂದು ತಿಳಿದವರೆಲ್ಲರೂ ಇಂಥ ವಿವೇಕಿಯನ್ನು ಕಾರ್ಯದರ್ಶಿಯಾಗಿ ಆರಿಸಿಕೊಂಡ ಪ್ಯಾಂಡೋಲ್ಫೋ ಎಷ್ಟು ಬುದ್ಧಿವಂತನೆಂದು ಹೊಗಳುತ್ತಿದ್ದರು. ಮನುಷ್ಯರ ಕಾರ್ಯನಿರ್ವಾಹಕ ಶಕ್ತಿಯಲ್ಲಿ ಮೂರು ತರಗತಿಗಳುಂಟು. ಉತ್ತಮನು, ಸ್ವಬುದ್ಧಿಯಿಂದಲೇ ಕಾರ್ಯಾಕಾರ್ಯ ವಿವೇಚನೆಯನ್ನು ಮಾಡುತ್ತಾನೆ; ಮಧ್ಯಮನು ಅನ್ಯರು ವಿವೇಚನೆಮಾಡಿ ಹೇಳಿದ್ದನ್ನು ಗ್ರಹಿಸುತ್ತಾನೆ; ಅಧಮನು ತಾನೂ ಮಾಡುವುದಿಲ್ಲ, ಇತರರು ಹೇಳಿದ್ದನ್ನು ಅರ್ಥಮಾಡಿಕೊಳ್ಳುವುದೂ

ಇಲ್ಲ. ಪ್ಯಾಂಡೋಲ್ಫೋ ಉತ್ತಮ ತರಗತಿಗೆ ಸೇರಿದವನಲ್ಲದಿದ್ದರೂ, ಎರಡನೆ ಯದಕ್ಕೆ ಸೇರಿದವನೆಂದು ಹೇಳಬಹುದು. ದೊರೆಯಾದರೋ ತನ್ನ ಸ್ಫೂರ್ತಿ ಅಷ್ಟು ಶ್ರೇಷ್ಠವಲ್ಲದಿದ್ದರೂ ಇತರರ ಮಂತ್ರಾಲೋಚನೆ ಮತ್ತು ಕಾರ್ಯಗಳಲ್ಲಿ ಗುಣಾವಗುಣಗಳನ್ನು ತಿಳಿಯುವಷ್ಟು ಪರಿಜ್ಞಾನವಿದ್ದರೆ ಒಳ್ಳೆಯ ಮಂತ್ರಿ ಯಾರು, ಅಯೋಗ್ಯನು ಯಾರು, ಎಂಬುದನ್ನು ವಿವೇಚಿಸಿ ತಿಳಿಯಬಹುದು; ಅಯೋಗ್ಯನನ್ನು ದೂರಮಾಡಿ, ಯೋಗ್ಯನಿಂದ ಸರಿಯಾದ ಸೇವೆಯನ್ನು ಪಡೆಯಬಹುದು. ಯೋಗ್ಯನಾದ ಮಂತ್ರಿ ಕೂಡ ವಿವೇಚನಾಪರನಾದ ಸ್ವಾಮಿಯ ಹತ್ತಿರ ಭಯದಿಂದಲೂ, ಎಚ್ಚರಿಕೆಯಿಂದಲೂ ಕೆಲಸಮಾಡು ತ್ತಾನೆ. ದೊರೆಯು ಮಂತ್ರಿಗಳ ಯೋಗ್ಯತೆಯನ್ನು ನಿರ್ಧರಿಸುವ ಬಗೆ ಯಾದರೂ ಹೇಗೆ? ಖಚಿತವಾದ ಒಂದು ಸೂತ್ರವಿದೆ. ನಿಮ್ಮ ತಾಬೇದಾ ರನು ನಿಮ್ಮ ಯೋಗಕ್ಷೇಮಕ್ಕಿಂತಲೂ ತನ್ನ ಯೋಗಕ್ಷೇಮವನ್ನೇ ಮುಂದಿಟ್ಟು ನೋಡಿಕೊಳ್ಳುವನಾದರೆ ಅವನೆಂದಿಗೂ ಒಳ್ಳೆಯ ಮಂತ್ರಿಯಾಗಲಾರನು. ಅವನನ್ನು ನೀವು ಎಂದಿಗೂ ನಂಬಬಾರದು. ದೊರೆಯ ಮಂತ್ರಿಯೆಂಬವನು ತನ್ನನ್ನು ತಾನು ಮರೆತು, ಸದಾಕಾಲ ತನ್ನ ಸ್ವಾಮಿಯ ಶ್ರೇಯಸ್ಸನ್ನೇ ತನ್ನ ಲಕ್ಷ್ಯದಲ್ಲಿಡಬೇಕು. ಇದಕ್ಕೆ ಪ್ರತಿಯಾಗಿ ರಾಜನು ಆ ಸ್ವಾಮಿಭಕ್ತನಾದ ಮಂತ್ರಿಯ ಯೋಗಕ್ಷೇಮ, ಮಾನ, ಭಾಗ್ಯ, ಉತ್ತರೋತ್ತರಾಭಿವೃದ್ಧಿ ಇವು ಗಳು ತಾನು ಹೊತ್ತ ಜವಾಬ್ದಾರಿ ಎಂದು ಭಾವಿಸಬೇಕು. ಈ ವಿನಿಮಯ ದಿಂದ ಮಂತ್ರಿ ತನ್ನ ಸರ್ವಸ್ವವನ್ನೂ ಸ್ವಾಮಿದತ್ತವೆಂದು ತಿಳಿದು, ಅದನ್ನು ಕಾಪಾಡಿಕೊಳ್ಳಲು ತನ್ನ ಸರ್ವಶಕ್ತಿಯಿಂದಲೂ ಸ್ವಾಮಿಸೇವೆಯಲ್ಲಿ ನಿರತ ನಾಗುತ್ತಾನೆ. ಇಂತಹ ಅನ್ಯೋನ್ಯ ಸಂಬಂಧವಿರುವ ದೊರೆ ಮಂತ್ರಿಗಳು ಕ್ಷೇಮವಾಗಿ ಬಾಳುತ್ತಾರೆ. ಇದಕ್ಕೆ ವಿಪರೀತವಾದರೆ ಇಬ್ಬರಲ್ಲಿ ಒಬ್ಬ ನಾದರೂ ದುರಂತಕ್ಕೆ ಒಳಗಾಗುತ್ತಾನೆ.

ಇಪ್ಪತ್ತೆರಡನೆಯ ಅಧ್ಯಾಯ

ಹುಸಿ ಹೊಗಳಿಕೆಯ ಭಟರನ್ನು ಹೇಗೆ ದೂರವಿಡಬೇಕು

ಬಹಳ ಬುದ್ಧಿವಂತರೂ, ಸೂಕ್ಷ್ಮ ವಿಮರ್ಶಕರೂ ಅಲ್ಲದ ರಾಜರುಗಳು ತಪ್ಪಿಸಿಕೊಳ್ಳಲು ಕಷ್ಟವಾದ, ಮತ್ತು ದುಷ್ಟಪರಿಣಾಮವುಳ್ಳ ಒಂದು ವಿಚಾರವನ್ನು ನಾನು ಪ್ರಸ್ತಾವಿಸದೆ ಇರಲಾಗದು. ಇದು ಹುಸಿ ಸೂಸುತ್ತಿರುವ ಹೊಗಳು ಭಟ್ಟರ ವಿಚಾರ. ಈ ಪಶುಗಳು ಚರಿತ್ರೆಯಲ್ಲಿ ಎಲ್ಲಿ ನೋಡಿದರೂ ತುಂಬಿರುತ್ತಾರೆ. ಮನುಷ್ಯರಿಗೆ ತಾವು ಮಾಡಿದ ಕೆಲಸಗಳು, ಪ್ರಶಂಸನೀಯವಾದ ಮಹತ್ಕಾರ್ಯಗಳೆಂಬ ದುರಭಿಮಾನ ಸ್ವಾಭಾವಿಕವಾಗಿರುವುದರಿಂದ ಆ ಕಾರ್ಯಗಳನ್ನು ಕೊಂಡಾಡಿ ಕೀರ್ತನಮಾಡುತ್ತಿರುವ ಕಪಟಿಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದು ಬಹಳ ಕಷ್ಟ. ಒಂದುವೇಳೆ ರಕ್ಷಿಸಿಕೊಳ್ಳುವುದಕ್ಕಾಗಿ ಈ ಆಷಾಡಭೂತಿಗಳು ಹೇಳುವುದೆಲ್ಲ ಸುಳ್ಳೆಂದರೆ ಜನಗಳ ತಾತ್ಸಾರಕ್ಕೆ ಗುರಿಯಾಗುವ ಸಂಭವವೂ ಉಂಟು. ಈ ಅಪಾಯಕ್ಕೆ ಉಪಾಯ — ಸ್ತೋತ್ರವಲ್ಲದ ನಿಜವನ್ನು ಕೇಳಲು ನಿಮ್ಮ ಸಿದ್ಧತೆ; ಆದರೆ ಕಂಡವರೆಲ್ಲ ಮನಸ್ವಿಯಾಗಿ ನಿಮ್ಮನ್ನು ಕುರಿತು ಇಂಥ ನಿಜವನ್ನೇ ಹೇಳಿದರೂ ನಿಮ್ಮ ಮಾನ ಗೌರವಗಳಿಗೆ ಹಾನಿಯೇ. ಬುದ್ಧಿವಂತನಾದ ರಾಜನು ಈ ಎರಡು ಮಾರ್ಗವನ್ನೂ ತ್ಯಜಿಸಿ ಮೂರನೆಯದನ್ನು ಹಿಡಿಯಬೇಕು. ತನ್ನ ಪ್ರಜೆಗಳ ಪೈಕಿ ವಿವೇಕಿಗಳಾದ ಕೆಲವರನ್ನು ಮಾತ್ರ ಆರಿಸಿಕೊಂಡು, ಅವರಿಗೆ ಮಾತ್ರ ತನ್ನ ವಿಚಾರದ ನಿಜ ಸಂಗತಿಗಳನ್ನು ಹೇಳುವ ಅಧಿಕಾರವನ್ನು ಕೊಡಬೇಕು. ಇಂಥವರಿಗೂ ಕೂಡ ಸತ್ಯವಾದ ಸಂಗತಿಗಳಲ್ಲಿಯೂ ಎಷ್ಟು

ಭಾಗವನ್ನು ಪ್ರಚಾರಪಡಿಸಬಹುದು ಎಂಬುದನ್ನು ಚೆನ್ನಾಗಿ ಪರ್ಯಾಲೋಚಿಸಿ ಅಷ್ಟನ್ನುಮಾತ್ರ ಹೇಳುವಂತೆ ನಿಯಮಿಸಬೇಕು. ಎಷ್ಟನ್ನು ಬಹಿರಂಗಪಡಿಸಬಹುದೆಂಬುದನ್ನು ಇವರ ಸಂಗಡಲೇ ಆಲೋಚಿಸಿ, ಜನಗಳು ಈ ದೊರೆಯು ಎಷ್ಟು ಸಾಚಾ ಸ್ವಭಾವದವನು ಎಂದು ಮೆಚ್ಚುವಷ್ಟು ಪ್ರಚಾರಪಡಿಸಬೇಕು. ಈ ಮನುಷ್ಯರನ್ನು ಚಾರರನ್ನಾಗಿಯೂ ಉಪಯೋಗಿಸಿ, ತನ್ನ ರಾಜ್ಯದಲ್ಲಿನ ವಾರ್ತೆಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಗಾಢವಾಗಿ ಪರ್ಯಾಲೋಚಿಸಿ ತನ್ನ ಕಾರ್ಯಗಳನ್ನು ನಿರ್ವಹಿಸಬೇಕು. ಹೀಗೆ ನಿರ್ಣಯಿಸಿದ ಸಂಕಲ್ಪವನ್ನು ಎಂದಿಗೂ ಬದಲಾಯಿಸಬಾರದು. ಮೇಲೆ ಹೇಳಿದಂತೆ ವಿವೇಕದಿಂದ ವರ್ತಿಸದ ದೊರೆಯು ಕೇವಲ ಹೊಗಳು ಭಟ್ಟರ ಮಾತಿಗೆ ಮೋಸ ಹೋಗಿ, ದುಡುಕಿ ನಡೆದು, ಆಪತ್ತಿಗೆ ಗುರಿಯಾಗುತ್ತಾನೆ. ಅಥವಾ ಕಂಡವರ ಮಾತುಗಳನ್ನು ಕೇಳಿ ಗಳಿಗೆ ಗಳಿಗೆಗೂ ಸಂಕಲ್ಪಗಳನ್ನು ಬದಲಾಯಿಸಿ, ಚಪಲ ಚಿತ್ತನೆಂಬ ಲಾಘವಕ್ಕೆ ಗುರಿಯಾಗುತ್ತಾನೆ. ಇದನ್ನು ಸ್ಪಷ್ಟಪಡಿಸುವುದಕ್ಕೆ ಇತ್ತೀಚಿನ ನಿದರ್ಶನ ಒಂದನ್ನು ಕೊಡುತ್ತೇನೆ.

ಈಗಿರುವ ಚಕ್ರವರ್ತಿ ಮ್ಯಾಕ್ಸಿಮಿಲಿಯನ (Maximilian) ನ ಸೇವಕನಾದ ಲ್ಯೂಕಾಸ್ (Lucas) ಎಂಬವನು ತನ್ನ ಯಜಮಾನನ ಸ್ವಭಾವ ವಿವರಣೆ ಮಾಡುತ್ತಾ—ಚಕ್ರವರ್ತಿಯು ಯಾರ ಸಂಗಡಲೂ ಮಂತ್ರಾಲೋಚನೆಯನ್ನು ಮಾಡುವುದೂ ಇಲ್ಲ, ತನ್ನ ಸ್ವೇಚ್ಛೆಯ ತೀರ್ಮಾನಗಳಂತೆ ಆಚರಿಸುವುದೂ ಇಲ್ಲ—ಎಂದು ಘೋಷಿಸಿದನು. ಇದರ ಕಾರಣವೇನಂದರೆ, ಚಕ್ರವರ್ತಿಯು ಮರ್ಮ ಪ್ರಕೃತಿಯ ಮನುಷ್ಯ; ಮುಚ್ಚು ಬಾಯಿಯ ಸ್ವಭಾವದವನು; ಇತರರಿಗೆ ತನ್ನ ಇಂಗಿತವನ್ನು ಹೇಳುವವನೂ ಅಲ್ಲ, ಅವರ ಅಭಿಪ್ರಾಯವನ್ನು ಕೇಳುವವನೂ ಅಲ್ಲ. ಅನಂತರ ತನ್ನ ನಿಷ್ಕರ್ಷೆಗಳನ್ನು ಕಾರ್ಯತಃ ಪ್ರಾರಂಭಮಾಡಿ ಬಯಲಿಗೆ ತಂದಾಗ, ಸುತ್ತಮುತ್ತಲವರು ಅವುಗಳನ್ನು ಖಂಡಿಸಿ, ಅವುಗಳನ್ನು ತ್ಯಜಿಸಬೇಕೆಂದು ಹೇಳಹತ್ತಿದರೆ, ಅವನು ದಾಕ್ಷಿಣ್ಯಪರನಾದ್ದರಿಂದ ಅವರನ್ನು ಸಂತೋಷಪಡಿಸುವುದಕ್ಕೆ ಆರಂಭಗೊಂಡ ಕಾರ್ಯವನ್ನು ಕೈಬಿಡುವನು. ಇದರ ಪರಿಣಾಮ—ಈ ಹೊತ್ತು ಕೈಗೊಂಡ ಕೆಲಸವನ್ನು ನಾಳೆ ಕೈಬಿಡುವುದು; ಚಕ್ರವರ್ತಿಯ ಧ್ಯೇಯವೇನೆಂಬುದು ತಿಳಿಯಲು ಅಸಾಧ್ಯವಾಗಿ ಅವನ ತೀರ್ಮಾನಗಳು ನಂಬಿಕೆಗೆ ಅನರ್ಹವಾಗುವುದು. ಆದುದರಿಂದ, ದೊರೆಯು ಸಂದರ್ಭಬಿದ್ದಾ

ಗೆಲ್ಲ, ತನ್ನ ಇಷ್ಟಬಂದ ವೇಳೆಯಲ್ಲಿ, (ಅನ್ಯರ ಇಷ್ಟಬಂದ ವೇಳೆಯಲ್ಲಲ್ಲ) ಇತರರ ಅಭಿಪ್ರಾಯಗಳನ್ನು ಆಹ್ವಾನಿಸಬೇಕು. ಆಹ್ವಾನವಿಲ್ಲದೆ ಸ್ವತಃ ಜಲ್ಪಿಸುವವರನ್ನು ಮುಖ ಮುರಿದು ಬಾಯಿ ಮುಚ್ಚಿಸಬೇಕು. ಆವಶ್ಯಕವಿದ್ದಾಗ ಇತರರ ಸಲಹೆಗಳನ್ನು ಸಂಕೋಚವಿಲ್ಲದೆ ಕೇಳಬೇಕು; ಅವರ ಉತ್ತರ ಒಂದುವೇಳೆ ರುಚಿಸದಿದ್ದರೂ ಅದನ್ನು ತಾಳ್ಮೆಯಿಂದ ಆಲೈಸಬೇಕು. ಮಂತ್ರಾಲೋಚನೆಗೆ ಕರೆಯಲ್ಪಟ್ಟವರು ತನ್ನ ಭೀತಿಯಿಂದಲೋ, ದಾಕ್ಷಿಣ್ಯದಿಂದಲೋ ತಮ್ಮ ಸತ್ಯವಾದ ಅಭಿಪ್ರಾಯವನ್ನು ಮರೆಮಾಚುತ್ತಿದ್ದಾರೆಂದು ತಿಳಿದರೆ ಮಾತ್ರ ಅವರಲ್ಲಿ ಅಸಮಾಧಾನವನ್ನು ತೋರಬಹುದು. ರಾಜನು ತನ್ನ ಮಂತ್ರಿಗಳ ಪ್ರಭಾವದಿಂದ ಜನಗಳಲ್ಲಿ ನೀತಿಜ್ಞನೆಂಬ ಖ್ಯಾತಿಯನ್ನು ಪಡೆಯುತ್ತಾನೆಯೇ ಹೊರತು ತನ್ನ ನಿಜಶಕ್ತಿಯಿಂದಲ್ಲ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಇದು ಶುದ್ಧ ತಪ್ಪು ತಿಳುವಳಿಕೆ. ಈಗ ನಾನು ಹೇಳುವುದು ಅಪವಾದವಿಲ್ಲದ ಸೂತ್ರ—ತನ್ನ ಅಧಿಕಾರವನ್ನೆಲ್ಲಾ ವಿವೇಕಿಗಳಿಗೆ ಒಪ್ಪಿಸಿ, ತಾನು ಹೆಸರಿಗೆ ಮಾತ್ರ ದೊರೆಯಾದವನ ಮಾತು ಒಂದುವಿನಾ, ಸ್ವತಃ ವಿವೇಕವಿಲ್ಲದೆ ಆಳುವ ರಾಜನಿಗೆ ವಿವೇಕವಾದ ಮಂತ್ರಾಲೋಚನೆ ಸಿದ್ಧಿಸುವುದು ಎಂದಿಗೂ ಇಲ್ಲ. ಒಂದು ವೇಳೆ ಅವನು ಪುತ್ಥಳಿರಾಜನಾಗಿ, ಆಡಳಿತ ಅಧಿಕಾರವನ್ನೆಲ್ಲಾ ವಿವೇಕಿಗಳು ನೋಡಿಕೊಳ್ಳುತ್ತಿದ್ದರೂ, ಈ ಸುಖ ಸಂಪತ್ತು ಕೇವಲ ಅಲ್ಪಾವಧಿಯದು ಮಾತ್ರ. ನಿಜವಾಗಿ ಆಳುವ ಮಂತ್ರಿಯೋ, ಸರ್ವಾಧಿಕಾರಿಯೋ, ತಾನೇ ರಾಜ ಬಿರುದನ್ನೂ ದುರಾಕ್ರಮಣಮಾಡುತ್ತಾನೆ. ಹೀಗಾದೀತೆಂಬ ಭಯದಿಂದ, ಮಂದಬುದ್ಧಿಯ ರಾಜನು ಒಬ್ಬರನ್ನೇ ನಂಬಬಾರದೆಂದು ಹೆಚ್ಚು ಸಂಖ್ಯೆಯವರನ್ನು ಮಂತ್ರಾಲೋಚನೆಗೆ ಕರೆದರೆ, ಭಿನ್ನಾಭಿಪ್ರಾಯಗಳ ಗೊಂದಲ ಹುಟ್ಟಿ, ಇವುಗಳನ್ನು ಸಮನ್ವಯ ಮಾಡಲು ಶಕ್ತಿಸಾಲದೆ, ನೀತಿಶೂನ್ಯನಾಗುತ್ತಾನೆ. ಪ್ರತಿಯೊಬ್ಬನೂ ಅವನ ಇಚ್ಛೆ, ಮತ್ತು ಬುದ್ಧಿಗೆ ಅನುಗುಣವಾಗಿ ಬೋಧಿಸಲು ಯತ್ನಿಸುತ್ತಾನೆ, ಈ ಬೋಧೆಗಳ ಬಾಹುಳ್ಯದಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬ ವಿವೇಚನಾ ಶಕ್ತಿ ದೊರೆಗೆ ಇರಬೇಕು. ಇದರಿಂದ ಸ್ಪಷ್ಟಪಡುವುದು ಇಷ್ಟೆ: ಸಲಹೆ ಬಹು ಮುಖದಿಂದ ಬರಬಹುದು; ನಾನಾ ಬಗೆಯದಾಗಿರಬಹುದು; ತೀರ್ಮಾನ ರಾಜನದಾಗಿರಬೇಕು. ಆದ್ದರಿಂದ, ರಾಜನ ಆಡಳಿತದ ನೀತಿ ಶ್ರೇಷ್ಠವಾಗಿದ್ದರೆ, ನ್ಯಾಯವಾಗಿ ಅದರ ಕೀರ್ತಿ ರಾಜನ ಪ್ರಜ್ಞಾಬಲಕ್ಕೆ ಸಲ್ಲತಕ್ಕದ್ದೇ ಹೊರತು ಸಲಹೆಕಾರರಾದ ಸಚಿವರಿಗಲ್ಲ.

ಇಪ್ಪತ್ತಮೂರನೆಯ ಅಧ್ಯಾಯ

ಇಟಲೀ ದೇಶದ ಬಹುಜನ ರಾಜರುಗಳು ತಮ್ಮ ರಾಜ್ಯಗಳನ್ನು ಕಳೆದುಕೊಂಡದ್ದು ಹೇಗೆ?

ನಾನು ಮೊದಲೇ ತಿಳಿಸಿದ ಗುಣಗಳನ್ನುಳ್ಳ ರಾಜನು ತನ್ನ ಹಿಂದಿನವರ ಹಾಗೆ ಆಗದೆ, ತನ್ನ ದೇಶದಲ್ಲಿ ಒಂದು ವೈಶಿಷ್ಟ್ಯವನ್ನು ಹೊಂದುವನಲ್ಲದೆ, ವಂಶ ಪಾರಂಪರ್ಯವಾದ ಹಕ್ಕಿನಿಂದ ಸಿಂಹಾಸನವನ್ನೇರಿದವನಿಗಿಂತ ಹೆಚ್ಚು ಪ್ರಭಾವ ಶಾಲಿಯಾಗಿಯೂ ಇರುತ್ತಾನೆ. ಏಕೆಂದರೆ, ಹೊಸ ರಾಜನು ಮಾಡುವ ಕಾರ್ಯಗಳ ಬಗ್ಗೆ ಜನರ ಅವಲೋಕನೆ, ವಂಶಪಾರಂಪರ್ಯವಾಗಿ ಬಂದ ರಾಜನ ಕಾರ್ಯಗಳದಕ್ಕಿಂತ ಹೆಚ್ಚು ಕಟ್ಟುನಿಟ್ಟಿನದಾಗಿರುತ್ತದೆಯಲ್ಲದೆ, ಹೊಸರಾಜನ ಗುಣವಿಶೇಷಗಳು ಪಿತ್ರಾರ್ಜಿತವಾದ ಸಿಂಹಾಸನವನ್ನೇರಿದವನದಕ್ಕಿಂತಲೂ ಜನತೆಯ ಮೇಲೆ ಹೆಚ್ಚು ಸತ್ಪರಿಣಾಮವನ್ನು ಉಂಟುಮಾಡುತ್ತವೆ. ಜನಗಳು, ಕಳೆದು ಹೋದ ಘಟನೆಗಳಿಗಿಂತಲೂ ಪ್ರಕೃತ ಕಾಲದಲ್ಲಿ ನಡೆಯುವ ಘಟನೆ ಗಳಿಂದ ಹೆಚ್ಚು ಪ್ರಭಾವಿತರಾಗುವುದೇ ಇದಕ್ಕೆ ಕಾರಣ. ಪ್ರಕೃತ ಸ್ಥಿತಿಯಲ್ಲಿ ತಾವು ಸುಖವಾಗಿರುವಾಗ ಅದರಿಂದಲೇ ಅವರು ತೃಪ್ತರಾಗುತ್ತಾರೆ. ಬೇರೆ ಯಾವ ಕಡೆಗೂ ತಮ್ಮ ಗಮನವನ್ನು ಹೊರಳಿಸದೆ, ತಮ್ಮ ರಾಜನ ಹಿತ ರಕ್ಷಣೆಯ ಕೆಲಸದಲ್ಲಿ ಮಗ್ನರಾಗುತ್ತಾರೆ. ಇದರಿಂದ ದೊರೆಯು ಹೊಸ ಸಾಮ್ರಾಜ್ಯದ ಭವ್ಯ ನಿರ್ಮಾಣಕ್ಕೆ ತಳಹದಿಯನ್ನು ಹಾಕಿ, ಇಮ್ಮಡಿಯಾದ ಗೌರವವನ್ನು ಗಳಿಸುವನಲ್ಲದೆ, ಒಳ್ಳೆಯ ಕಾನೂನು, ಸುಸಜ್ಜಿತ ಸೈನ್ಯ, ಆಪ್ತ ಸ್ನೇಹಿತರು ಮತ್ತು ಆದರ್ಶ ಸಂಪತ್ತೆಂಬ ಭೂಷಣಗಳಿಂದ ರಾಜ್ಯವನ್ನು ಸಿಂಗರಿಸಿ

ಬಲಪಡಿಸಿಕೊಳ್ಳುತ್ತಾನೆ. ಆದರೆ, ಅರಮನೆಯಲ್ಲೇ ಹುಟ್ಟಿ ದೊರೆಯಾದವನು ತನ್ನ ಅವ್ಯವಸ್ಥೆಯಿಂದ ಪಿತ್ರಾರ್ಜಿತವಾಗಿ ಬಂದ ಪದವಿಯನ್ನು ಕಳೆದುಕೊಳ್ಳುವನಲ್ಲದೆ, ತನ್ನ ಅವಿವೇಕದಿಂದ ಘನತೆಯ ಪೀಠದಿಂದ ಕೆಳಗುರುಳಿಬಿದ್ದು ಅಪಖ್ಯಾತಿಗೀಡಾಗುತ್ತಾನೆ. ನಮ್ಮ ಕಾಲದಲ್ಲಿ ಇಟಲಿಯಲ್ಲಿ ರಾಜ್ಯಗಳನ್ನು ಕಳೆದುಕೊಂಡ ಸಾರ್ವಭೌಮರುಗಳ ವಿಷಯವನ್ನು ಪರಿಶೀಲಿಸೋಣ. ನೇಪಲ್ಸಿನ ದೊರೆ, ಡ್ಯೂಕ್ ಆಫ್ ಮಿಲಾನ್ ಮತ್ತು ಇತರರ ವಿಚಾರದಲ್ಲಿ ಈ ವಿಷಯವನ್ನು ನೋಡಿದಾಗ ಅವರ ಆಡಳಿತದ ಮೊದಲಿನಲ್ಲೇ ನಾನು ಮೇಲೆ ವಿಸ್ತಾರವಾಗಿ ವಿವರಿಸಿರುವ ದೊಡ್ಡ ಕುಂದು ಅವರೆಲ್ಲರ ಸೈನ್ಯದ ನಿರ್ವಹಣೆಯಲ್ಲಿ ಇರುತ್ತಿತ್ತು. ಅದಲ್ಲದೆ, ಅವರಲ್ಲಿ ಕೆಲವರು ತಮ್ಮ ಪ್ರಜೆಗಳಿಂದಲೇ ದೂಷಿಸಲ್ಪಟ್ಟವರು. ಅಥವಾ ಪ್ರಜೆಗಳ ಗೆಳೆತನ, ಸೌಹಾರ್ದಗಳನ್ನುಗಳಿಸಲು ಪ್ರಯತ್ನಿಸಿದ ವಿವೇಕಿಗಳು ಕೂಡ ತಮಗಿಂತ ಪ್ರಖ್ಯಾತರಾದವರನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಅರಿಯದವರಾಗಿದ್ದವರು. ಧನಬಲ, ಸೈನ್ಯ ಬಲವಿದ್ದು ಸೈನ್ಯವನ್ನು ಯುದ್ಧ ಭೂಮಿಗೆ ತರುವ ಸಾಮರ್ಥ್ಯವುಳ್ಳ ಯಾವ ದೇಶವೂ ಇಂತಹ ತಪ್ಪುಗಳನ್ನು ಮಾಡಿದ ಹೊರತು ಪತನವಾಗಿಲ್ಲ. ಫಿಲಿಪ್ ಆಫ್ ಮ್ಯಾಸಿಡಾನ್ (ಅಲೆಕ್ಸ್ಯಾಂಡರ್ ಮಹಾಶಯನ ತಂದೆಯಲ್ಲ; ಬಹುಕಾಲದ ನಂತರ ಟೈಟಿಸ್ ಕ್ವಿಂಟಸನಿಂದ ಸೋಲಿಸಲ್ಪಟ್ಟವನು) ತನ್ನನ್ನು ಆಕ್ರಮಿಸಲು ರೋಮನರು ಮತ್ತು ಗ್ರೀಸಿನವರು ಹೊಂದಿದಷ್ಟು ಹೆಚ್ಚು ಸೇನಾಬಲ ಉಳ್ಳವನಾಗಿರಲಿಲ್ಲ. ಆದರೂ, ಸಂದರ್ಭಾನುಸಾರವಾಗಿ ತನ್ನ ಪ್ರಜೆಗಳೊಡನೆಯೂ, ಸಾಮಂತರೊಡನೆಯೂ ಹೇಗೆ ಚತುರತೆಯಿಂದ ಕಲೆತು, ಅವರನ್ನು ಒಲಿಸಿಕೊಳ್ಳಬೇಕೆಂಬುದನ್ನು ಬಲ್ಲ ಆ ಕೆಚ್ಚೆದೆಯ ರಾಜನು ಆ ಇಬ್ಬರು ಶತ್ರುಗಳನ್ನೂ ಎದುರಿಸಿ ಅನೇಕ ವರ್ಷಗಳ ವರೆಗೂ ಕಾದಿದನು. ಯುದ್ಧದ ಕೊನೆಯಲ್ಲಿ ಅವನು ಕೆಲವು ಪಟ್ಟಣಗಳನ್ನು ಕಳೆದುಕೊಂಡರೂ, ತನ್ನ ಸಾಮ್ರಾಜ್ಯವನ್ನು ಶತ್ರುಗಳ ಕೈವಶಮಾಡದೆ ಕಾಪಾಡಿಕೊಂಡನು. ಆದ್ದರಿಂದ, ಅನೇಕ ವರ್ಷಗಳ ಕಾಲ ತಮ್ಮ ರಾಜ್ಯದ ಆಡಳಿತವನ್ನು ನಡೆಸಿದ ರಾಜರುಗಳು, ಆ ಮೇಲೆ ತಮ್ಮ ರಾಜ್ಯಗಳನ್ನು ಕಳೆದುಕೊಂಡರೆ ಅದನ್ನು ದುರದೃಷ್ಟವೆನ್ನಲಾಗುವುದಿಲ್ಲ. ಯುದ್ಧ ಭಯದಿಂದ ದೂರವಾಗಿ, ಶಾಂತಿಯುತವಾಗಿದ್ದ ತಮ್ಮ ರಾಜ್ಯದ ಬಿಗಿ ಭದ್ರತೆಯು ಆಪತ್ತು ಬಂದಾಗ ಸಡಿಲವಾಗಬಹುದೆಂಬ ಮುಂದಾಲೋಚನೆಯನ್ನು ಮಾಡದ ಆ

ರಾಜರುಗಳ ಅಲಕ್ಷ್ಯ ಮತ್ತು ಅವಿಚಾರ ಪರತೆಯೇ ಅವರ ಅವನತಿಗೆ ಕಾರಣ. ಜೀವನ ನೌಕೆ ಶಾಂತಿಯುತವಾಗಿ ಸಾಗುತ್ತಿರುವಾಗ ಮುಂದೆ ಬೀಸಬಹುದಾದ ಬಿರುಗಾಳಿಯ ನಿರೀಕ್ಷಣೆಯನ್ನೇ ಮಾಡದಿರುವುದು ಎಲ್ಲಾ ಮಾನವರ ಸಹಜ ಹ್ರಸ್ವದೃಷ್ಟಿ. ಸದ್ಯಕ್ಕೆ ತಾವು ರಾಜ್ಯವನ್ನು ಕಳೆದು ಕೊಂಡರೂ, ಆಕ್ರಮಣಕಾರನ ಅತ್ಯಾಚಾರ ಧಿಕ್ಕಾರಗಳಿಂದ ಬೇಸರಗೊಂಡ ತಮ್ಮ ಪ್ರಜೆಗಳು ಮತ್ತೆ ತಮ್ಮನ್ನು ರಾಜರನ್ನಾಗಿ ಆರಿಸುವರೆಂಬ ಒಂದೇ ಒಂದು ನಂಬಿಕೆಯ ಮೇಲೆ ಆ ದೊರೆಗಳು ದೇಶವನ್ನು ಶತ್ರುಗಳಿಂದರಕ್ಷಿಸಿ ಕೊಳ್ಳುವ ಬದಲು ತಲೆ ತಪ್ಪಿಸಿಕೊಳ್ಳುವ ಯೋಚನೆ ಮಾಡುತ್ತಿದ್ದರು. ಪ್ರಜೆಗಳಿಗೆ ಆ ರಾಜನೇ ಮತ್ತೆ ಬರಬೇಕೆಂಬ ಆಸೆಯಿದ್ದದ್ದು ಒಂದು ವೇಳೆ ನಿಜವಾಗಿದ್ದರೆ, ಆ ರೀತಿಯ ನಂಬಿಕೆಯನ್ನು ದೊರೆ ಅವಲಂಬಿಸುವುದರಲ್ಲಿ ಬಾಧಕವಿರುತ್ತಿರಲಿಲ್ಲ. ಬೇರೆ ಯಾವ ಪರಿಹಾರ ಮಾರ್ಗವನ್ನೂ ಹುಡುಕುವ ಗೋಜಿಗೆ ಹೋಗದೆ, ಅದೊಂದೇ ಭರವಸೆಯನ್ನು ಇಟ್ಟುಕೊಳ್ಳುವುದು ಮಾತ್ರ ಅತಿ ಖಂಡನೀಯ. ಯಾವ ವಿವೇಕಿಯೂ ಮತ್ತೊಬ್ಬನು ತನ್ನನ್ನು ಹಿಡಿದು ಮೇಲಕ್ಕೆತ್ತುತ್ತಾನೆಂಬ ಕುರುಡು ನಂಬಿಕೆಯಿಂದ ಆತ್ಮ ರಕ್ಷಣೆಯ ಯತ್ನವನ್ನೇ ಮಾಡದೆ ಹಳ್ಳಕ್ಕೆ ಬೀಳುವುದಿಲ್ಲ. ಅದೂ ಅಲ್ಲದೆ, ಆ ನಂಬಿಕೆ ಸಂಪೂರ್ಣವಾಗಿ ಫಲಿಸುವುದೂ ಇಲ್ಲ. ಒಂದು ವೇಳೆ ಫಲಿಸಿದರೂ ಆ ರೀತಿಯ ರಕ್ಷಣೆಯಿಂದ ಸಿದ್ಧಿಸಿದ ಉಳಿವು ಕೇವಲ ತುಚ್ಛ, ಅಸ್ಥಿರ. ರಾಜನ ಶೌರ್ಯ ಮತ್ತು ಗುಣಗಳ ಪ್ರಭಾವದಿಂದ ಮಾಡಲ್ಪಡುವ ಆತ್ಮರಕ್ಷಣೆಯೊಂದೇ ಸಾಧುವೇ ಹೊರತು ಅನ್ಯರಿಂದ ಆಗಬಹುದಾದ ಉದ್ಧಾರ ನಿಶ್ಚಯವಲ್ಲ, ಶಾಶ್ವತವಲ್ಲ; ಯಶಸ್ಸಿಗೆ ಮೃತ್ಯುವಾದದ್ದು.

ಇಪ್ಪತ್ತನಾಲ್ಕನೆಯ ಅಧ್ಯಾಯ

ಅದೃಷ್ಟವೆಂಬುದು ಎಷ್ಟು ಮಾಡಬಲ್ಲದು? ಅದನ್ನು ಎದುರಿಸುವ ಬಗೆ ಹೇಗೆ?

ಪ್ರಾಪಂಚಿಕ ವಿಷಯಗಳಲ್ಲಿ ಅದೃಷ್ಟ, ದೈವಾನುಗ್ರಹ ಎನ್ನುವುದೇ ಮುಖ್ಯ, ಇವುಗಳನ್ನು ಪುರುಷ ಪ್ರಯತ್ನದಿಂದ ಎದುರಿಸುವುದಕ್ಕೇ ಆಗಲಿ, ಬದಲಾಯಿಸುವುದಕ್ಕೇ ಆಗಲಿ, ಆಗುವುದಿಲ್ಲ, ಎಂಬುದು ಅನೇಕ ಜನರ ಮತವೆಂದು ಬಲ್ಲೆ. ಇದು ನಿಜವಾಗಿದ್ದಲ್ಲಿ, ಆಗುವುದು ಹೇಗಿದ್ದರೂ ಆಗಿಯೇ ಬಿಡುತ್ತದೆ, ನಾವೇತಕ್ಕೆ ವೃಥಾ ಶ್ರಮಪಡಬೇಕು ಎಂದು ಹೇಳಬಹುದು. ನಮ್ಮ ಕಾಲದಲ್ಲಿ ಸಂಭವಿಸಿರತಕ್ಕ ಅನೇಕ ಅನಿರೀಕ್ಷಿತ ಕ್ರಾಂತಿಗಳಿಂದ ಈ ಅಭಿಪ್ರಾಯಕ್ಕೆ ಸಮರ್ಥನೆ ಉಂಟಾಗಬಹುದು. ಇತ್ತೀಚಿನ ಸಂದರ್ಭಗಳನ್ನು ನೆನೆದರೆ ನನಗೂ ಈ ಅಭಿಪ್ರಾಯವೇ ಸರಿಯೆಂದು ಒಂದೊಂದು ವೇಳೆ ತೋರುತ್ತದೆ. ಆದರೆ ಪುರುಷ ಸಂಕಲ್ಪದ ಗೌರವವನ್ನು ಉಳಿಸುವುದಕ್ಕಾಗಿ ಮನುಷ್ಯ ವ್ಯವಹಾರದಲ್ಲಿ ಅರ್ಧ ಭಾಗ ದೈವಾಧೀನವೆಂತಲೂ ಉಳಿದ ಅರ್ಧ ಭಾಗವೋ ಅಥವಾ ಇನ್ನೂ ಕಡಿಮೆಯೋ ಪುರುಷ ಪ್ರಯತ್ನದ ಆಧೀನವೆಂತಲೂ ಭಾವಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಅದೃಷ್ಟವೆಂಬುದು ರಭಸದ ಒಂದು ಮಹಾ ನದಿಯ ಹಾಗೆ, ಪ್ರವಾಹ ಬಂದಾಗ ಇದು ಸುತ್ತಲ ಬಯಲನ್ನು ಆವರಿಸಿ, ಮನೆ, ಮರಮಟ್ಟು ಎಲ್ಲವನ್ನೂ ಉರುಳಿಸಿ ನಾಶಮಾಡುತ್ತದೆ. ಇದನ್ನು ತಡೆಯುವ ಬಗೆ ಕಾಣದೆ ಎಲ್ಲರೂ ಹೆದರುತ್ತಾರೆ. ಆದರೂ, ಇದು ಯಾವಾಗಲೂ ಈ ರಭಸದಲ್ಲಿ ಇರುವುದಿಲ್ಲ. ಈ ಹೊಳೆಯು ಶಾಂತವಾಗಿದ್ದಾಗ,

ಜನಗಳು ಅಣೆಕಟ್ಟು, ಕಾಲುವೆ, ಕೆರೆ ಮೊದಲಾದವುಗಳನ್ನು ಕಟ್ಟಿ, ಪುನಃ ಪ್ರವಾಹ ಬಂದಾಗ ನೀರು ಬೇರೆ ಕಡೆಗೆ ಹರಿದು ಜನಗಳಿಗೆ ಕೆಡುಕು ಉಂಟಾಗದಂತೆ ಏರ್ಪಾಡು ಮಾಡಬಹುದು. ಅದೃಷ್ಟದ ಪ್ರವರ್ತನೆಯು ಹೊಳೆಯ ಪ್ರವಾಹದ ಹಾಗೆಯೇ ಮುಂಜಾಗರೂಕತೆ ಮತ್ತು ಪೌರುಷ ಇಲ್ಲದವರಿಗೆ ಪ್ರಳಯಪ್ರಾಯವಾಗಿ, ತಡೆಯಲಸಾಧ್ಯವಾಗಿ ಎಲ್ಲವನ್ನೂ ನಾಶ ಮಾಡಿಬಿಡುತ್ತದೆ. ಈ ಕ್ರಾಂತಿಗಳಿಗೆಲ್ಲಾ ತವರುಮನೆಯಾದ ಇಟಲಿಯ ಇತಿಹಾಸವನ್ನು ನೋಡಿದರೆ, ಆಪತ್ತುಗಳಿಗೆ ಸಂಪೂರ್ಣವಾಗಿ ಯಾವ ತಡೆಯೂ ಇಲ್ಲದ ಕ್ಷೇತ್ರ ಒದಗಿದ್ದೇ ಈ ಕ್ರಾಂತಿಗಳಿಗೆ ಕಾರಣವೆಂದು ವ್ಯಕ್ತವಾಗುತ್ತದೆ. ಜರ್ಮನಿ, ಸ್ಪೆಯಿನ್ ಮತ್ತು ಫ್ರಾನ್ಸಿನಲ್ಲಿದ್ದಂತೆ ಇಟಲಿಯಲ್ಲಿಯೂ ಈಗಿನವರು ಅವರ ಪೂರ್ವಿಕರ ಧೈರ್ಯದಿಂದ ವಿಪತ್ತುಗಳನ್ನು ಎದುರಿಸಿದ್ದಲ್ಲಿ ಇಂಥ ಅನಾಹುತ ಪ್ರಳಯವೇ ಆಗಲಿ, ಇಂಥ ಸರ್ವನಾಶವೇ ಆಗಲಿ ಆಗುತ್ತಿರಲಿಲ್ಲ. ದುರ್ದೈವವನ್ನು ಕುರಿತು ಈಗ ಹೇಳಿರುವುದು ಸಾಕೆಂದು ನನ್ನ ಅಭಿಪ್ರಾಯ. ತಪ್ಸೀಲು ವಿವರಣೆಗೆ ಬಂದರೆ ಇಷ್ಟು ಹೇಳಬಲ್ಲೆ. ಒಬ್ಬ ರಾಜನು ತನ್ನ ಸ್ವಭಾವ ಮತ್ತು ಆಡಳಿತಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ, ಒಂದು ದಿವಸ ಕ್ಷೇಮವಾಗಿಯೂ, ಮಾರನೆಯ ದಿವಸ ನಿರ್ಭಾಗ್ಯನಾಗಿಯೂ ಇರುವುದು ಸಾಮಾನ್ಯಗೋಚರವಾಗಿದೆ. ಇದರ ಕಾರಣವನ್ನು ಕುರಿತು ಆಗಲೇ ಪ್ರಸಂಗ ಮಾಡಿದ್ದೇನೆ. ಅವುಗಳಲ್ಲಿ ಯಾವ ದೊರೆ ಎಲ್ಲವೂ ದೈವದಿಂದ ಬರಬೇಕೆಂದು ನಂಬುತ್ತಾನೆಯೋ ಅವನು ದೈವವು ಚಂಚಲವಾದ್ದರಿಂದ ಖಂಡಿತವಾಗಿಯೂ ಹಾಳಾಗುತ್ತಾನೆ. ಯಾವನು ಕಾಲಗತಿಗೆ ತನ್ನ ನೀತಿಯನ್ನು ಹೊಂದಿಸುತ್ತಾನೆಯೋ ಅವನು ಸುಖವಾಗಿರುತ್ತಾನೆ. ಯಾರು ಹೀಗೆ ಮಾಡಲಾರನೋ ಅವನು ಸಂಕಟಕ್ಕೆ ಗುರಿಯಾಗುತ್ತಾನೆ. ತಮ್ಮ ಉದ್ದೇಶಗಳನ್ನು ಸಾಧಿಸುವ ವಿಧಾನದಲ್ಲಿ ಜನಗಳು ಭಿನ್ನ ಭಿನ್ನವಾದ ಮಾರ್ಗವನ್ನು ಹಿಡಿಯುತ್ತಾರೆ. ಕೆಲವರು ದೀರ್ಘಾಲೋಚನೆಯಿಂದ, ಕೆಲವರು ಅವಸರದ ಬಿಸಿಯಿಂದ, ಕೆಲವರು ಬಲದಿಂದ, ಕೆಲವರು ಯುಕ್ತಿಯಿಂದ, ಕೆಲವರು ತಾಳ್ಮೆಯಿಂದ, ಕೆಲವರು ರಭಸದಿಂದ— ಹೀಗೆ ನಾನಾ ರೀತಿಯಲ್ಲಿ ಪ್ರವರ್ತಿಸಿದಾಗ್ಯೂ ಅರ್ಥ ಸಾಧನೆಯು ಸಲ್ಲಬಹುದು. ಇಬ್ಬರೂ ಸಮಜಾಗರೂಕತೆಯಿಂದ ಪ್ರಯತ್ನಮಾಡಬಹುದು. ಮಾಡಿದವರಲ್ಲಿ ಒಬ್ಬನು ಅಭಿವೃದ್ಧಿಗೆ ಬರುತ್ತಾನೆ, ಒಬ್ಬನು ಹಾಳಾಗುತ್ತಾನೆ.

ಹುಷಾರಿಂದ ಕೆಲಸಮಾಡುವವನೂ, ದುಡುಕಿ ಕೆಲಸಮಾಡುವವನೂ ಉಭಯತ್ರರೂ ತಮ್ಮ ಯತ್ನಗಳಲ್ಲಿ ಜಯಶಾಲಿಗಳಾಗಬಹುದು. ಇದಕ್ಕೆ ಆ ಯತ್ನದ ಸಮಯದಲ್ಲಿದ್ದ ಕಾಲಸ್ಥಿತಿಯೇ ಮುಖ್ಯ ಕಾರಣ. ಈ ಕಾಲ ಸ್ಥಿತಿಯ ವ್ಯತ್ಯಾಸದಿಂದ ಭಿನ್ನ ನೀತಿಯನ್ನು ಅನುಸರಿಸುವ ಇಬ್ಬರೂ ಜಯ ಶಾಲಿಗಳಾಗಬಹುದು. ಹಾಗೆಯೇ, ಒಂದೇ ನೀತಿಯನ್ನನುಸರಿಸುವ ಇಬ್ಬರ ಪೈಕಿ ಒಬ್ಬನು ಜಯಶಾಲಿಯಾಗಬಹುದು. ಇನ್ನೊಬ್ಬನು ಹಾಳಾಗಬಹುದು. ಆದ್ದರಿಂದ, ಜಯಾಪಜಯಗಳ ಮುಖ್ಯ ಹೇತುವನ್ನು ಕಾಲ ಮತ್ತು ಸನ್ನಿವೇ ಶದ ಅನುಕೂಲ್ಯ ಅಥವಾ ಅನಾನುಕೂಲ್ಯ ಸ್ಥಿತಿಗಳಲ್ಲಿಯೂ ಹುಡುಕಬೇಕು. ಈ ವ್ಯತ್ಯಾಸಗಳನ್ನು ಮುಂಜಾಗರೂಕತೆಯಿಂದ ಅರಿತು, ತನ್ನ ಕಾರ್ಯಕ್ರಮ ವನ್ನು ಅವುಗಳಿಗೆ ಹೊಂದಿಸಿಕೊಳ್ಳಲು ಪ್ರಾಜ್ಞನಾದ ಮನುಷ್ಯನು ಯಾರೂ ಇಲ್ಲ; ಏಕೆಂದರೆ, ಯಾವನೂ ತನ್ನ ಸ್ವಭಾವಕ್ಕೆ ವಿರೋಧವಾಗಿ ನಡೆಯಲು ಶಕ್ತನಲ್ಲ. ಅದೂ ಅಲ್ಲದೆ, ಒಬ್ಬನು ಯಾವುದಾದರೂ ಒಂದು ಮಾರ್ಗದಿಂದ ಪದೇ ಪದೇ ಪ್ರಯೋಜನವನ್ನು ಹೊಂದಿದ್ದರೆ, ಅದನ್ನು ತ್ಯಜಿಸಿ ಬೇರೆ ಮಾರ್ಗದಲ್ಲಿ ಹೋಗೆಂದು ಅವನನ್ನು ಒಪ್ಪಿಸುವುದು ಸುಲಭವಲ್ಲ. ಯಾವಾ ಗಲೂ ಬರಿಯ ಉಪಾಯದಿಂದ ಮುಂದೆ ಬಂದ ಮನುಷ್ಯನು ಬಲಪ್ರಯೋ ಗದ ಕಾಲ ಒದಗಿದಾಗ ಏನುಮಾಡಬೇಕೆಂದು ತೋಚದೆ ಸುಮ್ಮನಿದ್ದು ನಾಶ ವಾಗುವುದು ಖಂಡಿತ. ಹನ್ನೊಂದನೆಯ ಪೋಪ್ ಜೂಲಿಯಸ್ ಎಲ್ಲಾ ಉದ್ಯಮಗಳಲ್ಲಿಯೂ ರಾಗದಿಂದಲೂ ರಭಸದಿಂದಲೂ ವರ್ತಿಸುತ್ತಿದ್ದನು. ಆಗಿನ ಕಾಲಸ್ಥಿತಿಯು ಈ ವರ್ತನಕ್ಕೆ ಅನುಕೂಲವಾಗಿದ್ದುದರಿಂದ ಅವನು ಮಾಡಿದ ಯತ್ನವೆಲ್ಲಾ ಕೈಗೂಡಿತು. ಉದಾಹರಣೆಗೆ ಈತನು ಮಾನ್‌ಷಿರ್ ಗಿಯೊವನ್ನಿ ಬೆಂಟಿವೋಗ್ಲಿ (Monsieur Giovanni Bentivogli) ಯ ಕಾಲದಲ್ಲಿ ಬೊಲೋನಾವನ್ನು ಆಕ್ರಮಿಸಿದ್ದನ್ನು ನೋಡಿ ವೆನಿಷಿಯನ್ನರು ಇದಕ್ಕೆ ವಿರೋಧವಾಗಿದ್ದರು. ಆ ಕಾಲದಲ್ಲಿ ಅನ್ಯೋನ್ಯ ಮಿತ್ರರಾಗಿದ್ದ ಸ್ಪೆಯಿನ್ ಮತ್ತು ಫ್ರಾನ್ಸಿನ ರಾಜರುಗಳು ತಾವೇ ಇದರ ಮೇಲೆ ಕಣ್ಣಿಟ್ಟಿದ್ದರು. ಹೀಗಿದ್ದರೂ, ಸ್ಪೆಯಿನಿನವರು ಮತ್ತು ವೆನಿಷಿಯನ್ನರು— ವೆನಿಷಿಯನ್ನರು ಭೀತಿ ಯಿಂದಲೂ, ಸ್ಪೆಯಿನಿನವರು ದುರಾಶೆಯಿಂದಲೂ — ಮೀನಮೇಷ ಮಾಡು ತ್ತಿದ್ದಾಗ, ಈ ಪೋಪನು ದುಡುಕಿ, ಒಡನೆಯೇ ರಭಸದಿಂದ ತಾನೇ ಮುಂದುವರಿದನು. ಇವನು ಮುಂದೆ ಬಿದ್ದದ್ದನ್ನು ನೋಡಿ, ಇವನ ಸ್ನೇಹ

ವನ್ನು ಸಂಪಾದಿಸಿ ವೆನಿಷಿಯನ್ನರ ದರ್ಪವನ್ನು ತಗ್ಗಿಸಬೇಕು ಎಂಬ ಆಶೆಯಿಂದ ಫ್ರಾನ್ಸ್ ದೊರೆ ಇವನ ಪಕ್ಷಕ್ಕೆ ಸೇರಿದನು. ಇದರ ಫಲವಾಗಿ ಹಿಂದಿನ ಪೋಪರು ತಮ್ಮ ಕುಯುಕ್ತಿ, ನೀತಿ ಇವುಗಳಿಂದ ಮಾಡಲಾರದಿದ್ದ ಕೆಲಸವನ್ನು, ಜೂಲಿಯಸ್ಸನು ತನ್ನ ದುಡುಕು ಮತ್ತು ರೋಷದಿಂದ ಸಾಧಿಸಿ ಬಿಟ್ಟನು. ಇವನು ಹೀಗೆ ಮಾಡುವುದರ ಬದಲು ಹಿಂದಿನ ಪೋಪರುಗಳ ಆಚರಣೆಯಂತೆ ಎಲ್ಲವೂ ಕ್ರಮವಾಗಿರುವವರೆಗೂ ಕಾದು, ಕಾರ್ಯ ಪ್ರಾರಂಭ ಮಾಡೋಣವೆಂದಿದ್ದರೆ, ಅವನಿಗೆಂದಿಗೂ ಜಯವಾಗುತ್ತಿರಲಿಲ್ಲ. ಫ್ರಾನ್ಸ್ ದೊರೆ ಇವನನ್ನು ಕೂಡುವುದರ ಬದಲು ಒಂದು ಸಾವಿರ ನೆವದ ಮೇಲೆ ಪ್ರತ್ಯೇಕ ಇರುತ್ತಿದ್ದನು. ಇವನ ಮಂತ್ರಿಗಳು ಒಂದು ಸಾವಿರ ಪ್ರತಿಬಂಧಕ ಗಳನ್ನು ಹೂಡುತ್ತಿದ್ದರು. ಇವನ ಇತರ ದಂಡಯಾತ್ರೆಗಳನ್ನು ನಾನು ವಿವರಿ ಸುವುದಿಲ್ಲ. ಅವುಗಳೆಲ್ಲವೂ ಹೀಗೆಯೇ ದುಡುಕಿನವು; ಹೀಗೆಯೇ ಯಶಸ್ವಿ ಯಾಗಿ ಪರಿಣಮಿಸಿದವು. ಅವನು ಚಿಕ್ಕವಯಸ್ಸಿನಲ್ಲೇ ತೀರಿ ಹೋದುದ ರಿಂದ ತನ್ನ ಭಾಗ್ಯ ಪಲ್ಲಟವಾಗುವುದನ್ನು ಅನುಭವಿಸಲಿಲ್ಲ. ದುಡುಕಿಗೆ ಪ್ರತಿಕೂಲವಾದ ಕಾಲ ಒದಗಿ ಬಂದು, ದೀರ್ಘಾಲೋಚನೆಯಿಂದ ಪ್ರವರ್ತಿಸ ಬೇಕಾಗುವ ಸನ್ನಿವೇಶ ಒದಗಿದ್ದರೆ ಮಾತ್ರ ಇವನು ಖಂಡಿತವಾಗಿಯೂ ನಾಶವಾಗುತ್ತಿದ್ದನು. ಇವನಿಗೆ ಸ್ವಾಭಾವಿಕವಾದ ಮತ್ತು ಹಿಂದೆ ಜಯವನ್ನು ಕೊಟ್ಟ ದುಡುಕನ್ನು ಇವನು ಬಿಡುತ್ತಿರಲಿಲ್ಲ. ಇದರಿಂದ ನಾವು ತಿಳಿಯಬೇಕಾದ ಪಾಠವೇನೆಂದರೆ, ದೊರೆಗಳ ಹಟ ಕಾಲಾನುಗುಣವಾಗಿದ್ದು, ಅವರ ಅದೃಷ್ಟ ಚೆನ್ನಾಗಿದ್ದರೆ ಅವರು ಕ್ಷೇಮವಾಗಿರಬಹುದು. ಕಾಲ ವಿಷಮವಾದರೆ, ಅವರು ಭೂಗತವಾಗುವುದು ಸಿದ್ಧ. ಭಯದಿಂದ, ಸಂದೇಹದಿಂದ ಹಿಂದುಳಿ ಯುವುದಕ್ಕಿಂತ ರಭಸದಿಂದ, ದುಡುಕಿನಿಂದ ಪ್ರವರ್ತಿಸುವುದು ಲೇಸು. ಅದೃಷ್ಟವೆಂಬುದು ಹೆಣ್ಣಿನ ಹಾಗೆ: ದರ್ಪದಿಂದ ವಿಧೇಯತೆಯಲ್ಲಿಡಬೇಕಾದ ಸ್ವಭಾವದ್ದು. ಇದು ಪ್ರತಿದಿನವೂ ಅನುಭವಸಿದ್ಧವಾಗಿದೆ. ಅದೃಷ್ಟವೆಂಬ ಹೆಣ್ಣು ಸ್ತ್ರೀಸ್ವಭಾವದಿಂದ ಶೌರ್ಯ ಮತ್ತು ಧೈರ್ಯದಿಂದ ವರ್ತಿಸುವವರನ್ನು ಒಲಿದು, ನಿರುತ್ಸಾಹರಾದ ಜಡರನ್ನು ಉದಾಸೀನ ಮಾಡುತ್ತಾಳೆ.

ಇಪ್ಪತ್ತೈದನೆಯ ಅಧ್ಯಾಯ

ಇಟಲಿಯನ್ನು ಖಳರಿಂದ ಉದ್ಧಾರಮಾಡಲು ಪ್ರಚೋದನೆ

ಮೇಲೆ ಹೇಳಿರುವುದನ್ನೆಲ್ಲಾ ತುಲನೆಮಾಡಿ, ಈಗಿನ ರಾಜಕೀಯ ಸನ್ನಿವೇಶದಲ್ಲಿ ಇಟಲಿಯಲ್ಲಿ ಹೊಸ ರಾಜನನ್ನು ಮುಂದೆ ತರಲು ಕಾಲಾನುಕೂಲತೆಯಿದೆಯೋ, ವಿವೇಕಿಯಾದ ಪುರುಷನಿಗೆ ತನಗೆ ಕೀರ್ತಿಯನ್ನೂ, ತನ್ನ ಪ್ರಜೆಗಳೆಲ್ಲರಿಗೆ ಕ್ಷೇಮವನ್ನೂ ಕೊಡುವಂಥ ರಚನೆಯನ್ನು ಉತ್ಪನ್ನ ಮಾಡಲು ಅನುಕೂಲಿಸುವ ಸಾಮಗ್ರಿಯೂ, ಸಂದರ್ಭವೂ ಈಗ ಒದಗಿವೆಯೋ, ಎಂಬುದನ್ನು ನನ್ನಲ್ಲಿ ನಾನೇ ಬಹಳ ಗಂಭೀರವಾಗಿ, ಶ್ರದ್ಧೆಯಿಂದ ವಿಚಾರಮಾಡಿ ತೀರ್ಮಾನಕ್ಕೆ ಬಂದಿದ್ದೇನೆ. ಹೊಸ ರಾಜನು ಇಲ್ಲಿ ಎದ್ದು ಉದ್ಧಾರವಾಗುವುದಕ್ಕೆ ಭರವಸೆ ತೋರುವ ಪರಿಸ್ಥಿತಿಗಳು ಈಗಿನ ಹಾಗೆ ಮತ್ತೆ ಯಾವಾಗಲೂ ಒದಗಿ ಒಟ್ಟುಗೂಡಿದ್ದದ್ದು ನನಗೆ ಅರಿವಿಲ್ಲ. ನಾನು ಹಿಂದೆ ಹೇಳಿದಂತೆ, ಮೋಸೆಸ್ಸಿನ ಧೈರ್ಯ ಪ್ರಕಾಶನಕ್ಕೆ ಯೆಹೂದೀಯರು ಈಜಿಪ್ಟಿನಲ್ಲಿ ಬಂದಿಗಳಾಗುವುದು ಅವಶ್ಯವಿತ್ತು; ಕೈರಸ್ಸಿನ ಮಾಹಾತ್ಮ್ಯಕ್ಕೆ ಪಾರ್ಸಿಯವರನ್ನು ಮೀಡರು ಪೀಡಿಸಿ ಆಳುವುದು ಅವಕಾಶಕೊಟ್ಟಿತು; ಥೀಸಿಯಸನ ಶ್ರೇಷ್ಠತೆ ಎತ್ತಿ ಕಾಣುವುದಕ್ಕೆ ಅಥೀನಿಯನ್ ಜನಾಂಗದವರು ಗಡಿಪಾರಾಗಿ, ದಿಕ್ಕುಪಾಲಾಗಿ, ಚೆದರುವುದು ಸಂದರ್ಭ ಇತ್ತಿತು. ಇಟಲಿಯ ಧೀರಸತ್ವ ಹೊರಹೊಮ್ಮಿ ಪ್ರಪಂಚದಲ್ಲಿ ಪ್ರತ್ಯಕ್ಷವಾಗುವುದಕ್ಕೆ, ಇಟಲಿ ಈಗ ಇಳಿದಿರುವ ನತಗತಿ ಅತ್ಯಾವಶ್ಯಕವಾಗಿತ್ತು. ಇಟಲಿ ಈಗ ಅನುಭವಿಸುತ್ತಿರುವುದು, ಯೆಹೂದೀಯರದಕ್ಕಿಂತ ಕಠಿನತರವಾದ ಸೆರೆ; ಪಾರ್ಸಿಗಳ ದಾಸ್ಯ

ವನ್ನು ವಿೂರಿದ ಪರಾಧೀನ. ಅಧೀನಿಯನ್ನರ ಚೆದರಿಕೆಗಿಂತ ಹೆಚ್ಚಾದ ಚದರಿಕೆ. ನಮಗೆ ನಾಯಕರಿಲ್ಲ, ಶಿಸ್ತಿಲ್ಲ, ಸ್ವಸ್ಥತೆ ಇಲ್ಲ; ನಮ್ಮನ್ನು ಸೂರೆಮಾಡುತ್ತಿದ್ದಾರೆ; ನಾವು ಪರಾಜಿತರು; ನಾವು ಮಹಾವ್ಯಸನಗಳಲ್ಲಿ ಮುಳುಗಿ ಹೋಗಿದ್ದೇವೆ. ಹಿಂದೆ ಯಾವಾಗಲಾದರೂ, ಎಲ್ಲಿಯಾದರೂ, ಯಾರಾದರೂ ನಮ್ಮ ಪುರುಷರಲ್ಲಿ ಸ್ವಲ್ಪ ತೇಜಸ್ಸು ಕಂಡು, ಭಗವಂತನು ಅವರ ಮೂಲಕ ನಮ್ಮನ್ನು ಉದ್ಧಾರ ಮಾಡುತ್ತಾನೆಂಬ ಆಶೆ ನಮ್ಮಲ್ಲಿ ಎದ್ದರೆ, ಅಲ್ಪ ಕಾಲದಲ್ಲೇ ಉದ್ಯಮ ಮಧ್ಯ ದಲ್ಲೇ ಅವರಿಗೆ ಭಂಗ ಬಂದು, ನಿರಾಶೆಯಾಗಿ ಇಟಲಿ ಗತಪ್ರಾಣಪ್ರಾಯವಾಗಿ ಆರ್ತಸ್ವರದಿಂದ ಗೋಗರೆಯುತ್ತದೆ. ಲಂಬಾರ್ಡಿಯ ಕೊಲೆಪಾತಕ ಹಾವಳಿ ಯನ್ನು ನಿವಾರಿಸಲು, ಮತ್ತು ನೇಪಲ್ಸ್ ಟಸ್ಕನಿಗಳ ಲೂಟಿ ದರೋಡೆ ಮೊದ ಲಾದ ರಕ್ತಕೀವುಗಳು ಸೋರುವ ಗಾಯಗಳನ್ನು ದಿವ್ಯೌಷಧಿಗಳಿಂದ ಉಪ ಶಮನಮಾಡಲು, ದಯಾಶೂನ್ಯ ಖಳರ ಕಠೋರ ಧಿಕ್ಕಾರದಿಂದ ರಕ್ಷಿಸಲು ಯಾರನ್ನಾದರೂ ಮಹಾಪುರುಷನನ್ನು ಕಳುಹಿಸೆಂದು ಈ ದೇಶವು ಭಗವಂತ ನನ್ನು ಎಷ್ಟು ದೈನ್ಯದಿಂದ ಬೇಡಿಕೊಳ್ಳುತ್ತಿದೆ ಎಂಬುದನ್ನು ಹೇಳಬೇಕಾಗಿಲ್ಲ. ಅಂತಹ ಪುರುಷನು ಯಾವನಾದರೂ ಸಿದ್ಧನಾಗಿ, ಧ್ವಜ ಎತ್ತಿದರೆ, ಅವನ ನೇತೃತ್ವದಲ್ಲಿ ಇರಲು ಇಟಾಲಿಯನ್ನರು ಎಷ್ಟು ಉತ್ಸಾಹದಿಂದ ಒಪ್ಪುತ್ತಾ ರೆಂಬುದು ಸ್ಪಷ್ಟವಾಗಿದೆ. ಈಗಿನ ಕಾಲದಲ್ಲಿ ನಿಮ್ಮ ಘನಮನೆತನದವರಿ ಗಿಂತಲೂ ದೇಶದ ಉದ್ಧಾರದ ಆಶಯಗಳಿಗೆ ಸಮನಾದ ಪಾತ್ರರು ಮತ್ತೆ ಯಾರೂ ಇಲ್ಲ. ನಿಮ್ಮ ಮನೆತನದ ನೀವುಗಳು ನಿಮ್ಮ ಶೌರ್ಯದಿಂದಲೂ, ದಕ್ಷತೆಯಿಂದಲೂ, ದೇವರ ಮತ್ತು ದೇವರ ಮಠದ (Church of Rome) ಅನುಗ್ರಹದಿಂದಲೂ ಈ ಉದ್ಧಾರದ ಭಾರವನ್ನು ವಹಿಸಲು ಅನುಮತಿಸು ತ್ತೀರೆಂಬ ತೀವ್ರ ಆಸೆ ಇದೆ. ನಿಮ್ಮ ಪೂರ್ವಿಕರು ಎಂತಹ ಮಹತ್ಕಾರ್ಯ ಗಳನ್ನು ಯಶಸ್ವಿಯಾಗಿ ಸಾಧಿಸಿದರು! ಆ ಮಹಾತ್ಮರ ವಂಶಿಕರಾದ ನೀವು ಅವರ ಮಾರ್ಗವನ್ನು ಅವಲಂಬಿಸಲು ಶಕ್ತರಾಗಿದ್ದೀರಿ; ನಿಮ್ಮ ಹಿರಿ ಯರು ಮಾಡಿದ ಸಾಹಸ ನೀವು ಮಾಡಬೇಕಾಗಿರುವುದಕ್ಕಿಂತಲೂ ಧರ್ಮ ಯುಕ್ತವೇ ಆಗಲಿ, ಸುಲಭ ಸಾಧ್ಯವೇ ಆಗಲಿ ಆಗಿರಲಿಲ್ಲ. ಮತ್ತು ದೈವಾನು ಗ್ರಹವು ನಿಮ್ಮಲ್ಲಿಗಿಂತಲೂ ಅವರಲ್ಲಿ ಹೆಚ್ಚಾಗಿರಲಿಲ್ಲ. ಧರ್ಮವು ನಿಮ್ಮ ಕಡೆ ಇದೆ. ಯುದ್ಧವು ಅನಿವಾರ್ಯವಾಗಿ ಧರ್ಮದ ರಕ್ಷಣೆಗೆ ಆವಶ್ಯಕವಾಗಿರು ವಲ್ಲಿ, ಯುದ್ಧಮಾಡುವುದೇ ದೇವರ ಸೇವೆ. ದೇಶದ ಜನಗಳೆಲ್ಲರೂ ನಿಮ್ಮ

ಕಡೆ ಇದ್ದಾರೆ; ಮತ್ತು ನೀವು ನಿಮ್ಮ ಹಿರಿಯರ ಮೇಲ್ಪಂಕ್ತಿಯನ್ನನುಸರಿಸಿ ವರ್ತಿಸುವುದಾದರೆ ನಿಮ್ಮನ್ನು ಎದುರಿಸುವವರು ಬಹು ಅಲ್ಪ ಸಂಖ್ಯಾತರು. ಹಿಂದಿನ ಇತಿಹಾಸದಲ್ಲಿ ಧರ್ಮದ ಪಕ್ಷದಲ್ಲಿ ದೈವವು ಪ್ರಕೃತ್ಯತೀತ ವ್ಯಾಪಾರ ಗಳಿಂದ ಜಯವನ್ನು ಒದಗಿಸಿತೆಂದು ಪ್ರತೀತಿ ಇದೆ. ಸಮುದ್ರವು ದಾರಿಯನ್ನು ಬಿಟ್ಟಿತಂತೆ; ಒಂದು ಮೇಘವು ದಾರಿಯನ್ನು ತೋರಿಸಿತಂತೆ; ಒಂದು ಬಂಡೆಯು ಕುಡಿಯುವ ನೀರನ್ನು ಕೊಟ್ಟಿತಂತೆ; ಆಕಾಶವು ಆಹಾರವನ್ನು ಮಳೆಗರೆಯಿ ತಂತೆ. ಈಗ ಅದ್ಭುತಗಳ ಸ್ಥಾನದಲ್ಲಿ ನಿಮ್ಮ ಘನತೆಯೂ, ಶೌರ್ಯವೂ ಇವೆ. ಭಗವಂತನು ನಮಗೆ ಯಶಸ್ಸು ಬರಲೆಂದು ನಮ್ಮ ನೈಜ ಸಂಕಲ್ಪಕ್ಕೂ, ಸಾಹಸಕ್ಕೂ ಅನುಕೂಲವಾಗಿ, ನಮ್ಮಿಂದಲೇ ಈ ಕೆಲಸಗಳನ್ನೆಲ್ಲಾ ಮಾಡಿಸು ತ್ತಾನೆಯೇ ಹೊರತು ತಾನೇ ನೇರವಾಗಿ ವರ್ತಿಸುವುದಿಲ್ಲ. ಈಗ ನೀವು ಮಾಡಬೇಕಾದ ಕೆಲಸವನ್ನು ಇತರ ಇಟಾಲಿಯನ್ನರು ಮಾಡಲಾರದೆ ಹೋದ ರೆಂಬುದು ಏನೂ ಅಚ್ಚರಿಯಲ್ಲ. ಅದಕ್ಕೆ ಕಾರಣವೇನೆಂದರೆ, ಇಟಲಿಯಲ್ಲಿ ಅನೇಕ ಕ್ರಾಂತಿಗಳಿಂದಲೂ, ದೀರ್ಘಕಾಲದ ಕದನದಿಂದಲೂ ಜನಗಳ ಯುದ್ಧಾಕಾಂಕ್ಷೆಯು ವ್ಯಯವಾಗಿ, ಕಲಿತನ ಮಂದವಾಗಿ ಹೋಗಿತ್ತು. ಅವರ ಶಿಸ್ತು ದುರ್ಬಲವಾಗಿತ್ತು. ಹೊಸ ಶಿಸ್ತನ್ನು ಸ್ಥಾಪಿಸಲು ಯಾರೂ ಶಕ್ತರಿರ ಲಿಲ್ಲ. ಧರ್ಮವಾದ ಹೊಸ ಕಾನೂನುಗಳನ್ನೂ, ಹೊಸ ಕ್ರಮಗಳನ್ನೂ ರಚಿಸಿ, ದೇಶದ ವಿಭೂತಿಗೆ ಸ್ಥಿರವಾದ ತಳಹದಿಯನ್ನು ಹಾಕುವುದಕ್ಕಿಂತಲೂ ಯಶಸ್ಕರವಾದ ನೀತಿ ಹೊಸರಾಜನಿಗೆ ಮತ್ತೆ ಯಾವುದೂ ಇಲ್ಲ. ಅಂತಹ ರಾಜನನ್ನು ಪ್ರಜೆಗಳೆಲ್ಲರೂ ಮೆಚ್ಚಿ ಪೂಜಿಸುತ್ತಾರೆ. ಈಗ ಇಟಲಿಯಲ್ಲಿ ಇಂತಹ ರಚನೆಗೆ ಸದವಕಾಶವಿದೆ. ಪ್ರತಿಭೆ ಉಳ್ಳ ನಾಯಕರಿದ್ದರೆ ಅವರ ನೇತೃತ್ವದಲ್ಲಿ ಹೋರಾಡುವ ಕಲಿತನವುಳ್ಳ ಸಿಪಾಯಿಗಳಿಗೇನೂ ಬರವಿಲ್ಲ. ಕಾಳಗಗಳಲ್ಲಿ, ದ್ವಂದ್ವ ಯುದ್ಧಗಳಲ್ಲಿ, ಕೈದುಗಳ ಪ್ರಯೋಗದ ಜಾಣ್ಮೆಯಲ್ಲಿ ನಮ್ಮ ಜನಗಳು ಅದ್ವಿತೀಯರಾಗಿದ್ದಾರೆ. ಆದರೂ, ಇಂತಹ ಶೂರರು ಯುದ್ಧ ಗಳಲ್ಲಿ ಬಹುಮಟ್ಟಿಗೆ ಪರಾಜಿತರಾಗಿದ್ದಾರೆ. ಅನುಭವವುಳ್ಳ ಸೇನಾ ನಾಯಕರ ಅಭಾವವೇ ಇದಕ್ಕೆ ಕಾರಣ. ನಮ್ಮಲ್ಲಿ ಪ್ರತಿಯೊಬ್ಬನೂ ತಾನು ನಿಪುಣನೆಂಬ ಅಹಂಭಾವ ಉಳ್ಳವನಾದದ್ದರಿಂದ ಇನ್ನೊಬ್ಬನ ಆಜ್ಞೆಯನ್ನು ಕೇಳುವುದಿಲ್ಲ. ತನ್ನ ನೈಪುಣ್ಯದಿಂದ, ಜಯ ಪ್ರದರ್ಶನದಿಂದ ತನ್ನ ನೇತೃತ್ವದಲ್ಲಿ ಇತರರಿಗೆ ಭಕ್ತಿ ಬರುವಂತೆ ಮಾಡಿದವನು ಇದುವರೆಗೆ ಯಾರೂ ಇಲ್ಲ. ಈ ಕಾರಣ

ದಿಂದ ಈ ಇಪ್ಪತ್ತು ವರ್ಷಗಳಲ್ಲಿ ಕೇವಲ ಇಟಾಲಿಯನ್ ಜನಗಳೇ ಇದ್ದ ಸೈನ್ಯಗಳು ಯುದ್ಧಮಾಡಿದಾಗೆಲ್ಲ ಖಂಡಿತವಾಗಿ ಸೋಲುತ್ತಲೇ ಇದ್ದವು. ಇದಕ್ಕೆ ನಿದರ್ಶನ ಕಾರಸ್, ಅಲೆಕ್ಸ್ಯಾಂಡ್ರಿಯ, ಕಾಪುವಾ, ಜಿನೋವ, ವಾಯಿಲಾ, ಬೊಲೋನ, ಮೆಯಿಸ್ಟ್ರೀ ಕಾಳಗಗಳು. ಆದ್ದರಿಂದ ನಾನು ಹೇಳುವ ಮಾತು ಇಷ್ಟೇ. ತಮ್ಮ ಘನವಾದ ಮನೆತನವು ತಮ್ಮ ದೇಶೋದ್ಧಾರಕರಾದ ಪೂರ್ವಿಕ ಮಹಾ ಪುರುಷರ ಮಾರ್ಗವನ್ನು ಅನುಸರಿಸಲು ಮನಸ್ಸುಮಾಡಿದರೆ, ಎಲ್ಲಾ ಮಹತ್ಕಾರ್ಯಗಳಿಗೂ ನಿಜವಾದ ತಳಹದಿಯಾದ ಯಾವ ಸನ್ನಾಹವನ್ನು ಮಾಡಬೇಕೆಂದರೆ, ವ್ಯಕ್ತಿತಃ ಶೂರರಾದ ನಿಮ್ಮ ಪ್ರಜೆಗಳನ್ನೇ ಒಳಗೊಂಡ, ಒಳ್ಳೆಯ ಶಿಸ್ತುಳ್ಳ ಬಲವಾದ ಸೈನ್ಯಗಳನ್ನು ಕಟ್ಟಿಕೊಳ್ಳಬೇಕು. ಸಹಜಶೂರರಾದ ಇವರು, ತಮ್ಮನ್ನು ತಮ್ಮ ರಾಜನೇ ಪ್ರೀತಿಯಿಂದ ಪೋಷಿಸಿ, ಇತರರಿಗಿಂತಲೂ ಮಿಗಿಲೆಂದು ನಂಬಿ, ಯುದ್ಧದಲ್ಲಿ ನಡೆಸುತ್ತಾನೆಂದು ತಿಳಿದು, ತಮ್ಮ ಶೌರ್ಯಕ್ಕೆ ಮಿಗಿಲಾದ ಉತ್ಸಾಹ ಉಳ್ಳವರಾಗುತ್ತಾರೆ. ನಮ್ಮ ದೇಶವನ್ನು ಇಟಾಲಿಯನ್ ಸಹಜ ಶೌರ್ಯದ ಮೂಲಕ ಈಗಿರುವ ವಿದೇಶೀಯರ ಕಾಟದಿಂದ ಬಿಡುಗಡೆ ಮಾಡಬೇಕಾಗಿದ್ದರೆ, ಮೇಲೆ ಹೇಳಿದ ರೀತಿಯಲ್ಲಿ ಸೈನ್ಯವನ್ನು ರಚಿಸಿ, ಸಜ್ಜುಗೊಳಿಸುವುದು ಅತ್ಯಾವಶ್ಯಕ. ಸ್ವಿಸ್ ಮತ್ತು ಸ್ಪ್ಯಾನಿಷ್ ಪದಾತಿಗಳು ಭಯಂಕರ ಶೂರರೇ ಹೌದು. ಆದರೆ, ಅವರಲ್ಲಿಯೂ ನ್ಯೂನತೆಗಳು ಉಂಟು. ಆದಕಾರಣ, ಅವರನ್ನು ಎದುರಿಸಿ, ಸೋಲಿಸಲು ಶಕ್ತರಾದ ಪದಾತಿಗಳನ್ನು ಸಿದ್ಧಪಡಿಸಿಡುವುದು ಅಸಾಧ್ಯವಲ್ಲ. ಸ್ಪ್ಯಾನಿಷ್ ಪದಾತಿಗಳು ಕುದುರೆ ರಾಹುತರ ಆಕ್ರಮಣವನ್ನು ಸಹಿಸಲಾರರು. ಸ್ವಿಸ್ ಪದಾತಿಗಳು ತಮಗೆ ಸಮಾನರಾದ ಮೊಂಡು ಪದಾತಿಗಳು ಎದುರು ಬಿದ್ದರೆ ಅಜೇಯರಲ್ಲ. ಸ್ಪ್ಯಾನಿಷ್ ಪದಾತಿಗಳು ಫ್ರೆಂಚ್ ರಾಹುತರ ರಭಸವನ್ನು ತಡೆಯಲಾರದೇ ಹೋದದ್ದು ಅನುಭವ ಸಿದ್ಧವಾಗಿದೆ. ಮುಂದೂ ಇದೇ ಅನುಭವಕ್ಕೆ ಬರುವುದಾಗಿಯೂ ಇದೆ. ಸ್ವಿಸ್ ಪದಾತಿಗಳಾದರೋ ಸ್ಪೆಯಿನಿನ ಪದಾತಿಗಳಿಂದ ಪರಾಜಯ ಹೊಂದಿರುವುದು ಸಂಪೂರ್ಣ ಪ್ರದರ್ಶನಕ್ಕೆ ಬಾರದಿದ್ದರೂ ರ್‍ಯಾವೆನಾ ಯುದ್ಧದಲ್ಲಿ ಸಾಕಾದಷ್ಟು ಅನುಭವಕ್ಕೆ ಬಂದಿದೆ. ಆ ಯುದ್ಧದಲ್ಲಿ ಶಿಸ್ತಿನಲ್ಲಿಯೂ, ರಚನೆಯಲ್ಲಿಯೂ ಸ್ವಿಸರಿಗೆ ಸಮಾನರಾದ ಜರ್ಮನ್ ವ್ಯೂಹಗಳಿಗೂ, ಸ್ಪ್ಯಾನಿಷ್ ಪದಾತಿಗಳಿಗೂ ಕೈಕೈಹತ್ತಿದಾಗ, ಸ್ಪೆಯಿನ್‌ನವರು ತಮ್ಮ ಶರೀರ ಲಾಘವದಿಂದಲೂ ಮತ್ತು ತಮ್ಮ

ಗುರಾಣಿಗಳ ರಕ್ಷಣೆಯಿಂದಲೂ, ಜರ್ಮನರ ದೀರ್ಘವಾದ ಭರ್ಚಿಗಳ ಕೆಳಗೆ ನುಗ್ಗಿ, ಒಳಹೊಕ್ಕು ಅವರನ್ನು ಸುಲಭವಾಗಿ ಕೊಂದರು. ಅಷ್ಟರಲ್ಲೇ ರಾಹುತ ದಳವು ಈ ಸ್ಪೈಯಿನಿನವರ ಮೇಲೆ ಧಾಳಿಮಾಡಿ ಇವರನ್ನು ಚೆದರಿಸ ದಿದ್ದರೆ ಜರ್ಮನ್ ಪದಾತಿ ಸಂಪೂರ್ಣವಾಗಿ ನಾಶವಾಗುತ್ತಿತ್ತು. ಆದ್ದರಿಂದ ನಾನು ಹೇಳುವುದು, ಮೇಲ್ಕಂಡ ಎರಡು ದುರ್ಬಲತೆಗಳನ್ನೂ ನಮ್ಮ ಶಿಸ್ತಿನಿಂದ ನಿವಾರಣೆಮಾಡಿ, ರಾಹುತರ ರಭಸವನ್ನೂ ತಡೆಯುವ ಮತ್ತು ಪದಾತಿಗಳ ಭಯವಿಲ್ಲದ ಒಂದು ಸೈನ್ಯವನ್ನು ಸರಿಯಾದ ಆಯುಧಗಳು ಮತ್ತು ಶಿಸ್ತಿನಿಂದ ಏರ್ಪಡಿಸಬಹುದು. ಹೀಗೆ ಹೊಸ ಸೇನೆಯನ್ನು ರಚಿಸುವುದರಿಂದ, ಯಾವ ಹೊಸ ರಾಜನಿಗಾದರೂ ತೇಜಸ್ಸೂ ಯಶಸ್ಸೂ ಬರುವುದು ಸಿದ್ಧ. ಮುಖ್ಯವಾಗಿ ಬಹು ದಿವಸದಿಂದ ಉದ್ಧಾರಕ್ಕಾಗಿ ಹಂಬಲಿಸುತ್ತಿರುವ ಇಟಲಿಯ ಆಶಯವನ್ನು ಸಾರ್ಥಕಗೊಳಿಸಲು ಒದಗಿರುವ ಈ ಸಂದರ್ಭವನ್ನು ಕೈಬಿಡಬಾರದು. ಇಂಥ ಉದ್ಧಾರಕ ಬಂದರೆ ಆನಂದದಿಂದ, ಭಕ್ತಿಯಿಂದ, ಕಣ್ಣೀರು ಚೆರಿತ ಪ್ರೀತಿಯಿಂದ, ಶತ್ರುಗಳ ಸೇಡನ್ನು ತೀರಿಸಿಕೊಳ್ಳಬೇಕೆಂಬ ಆಗ್ರಹದಿಂದ, ಜನ ಅವನ ನೇತೃತ್ವವನ್ನು ಸ್ವಾಗತಿಸಿಯಾರು ಎಂಬುದನ್ನು ಹೇಳಬೇಕಾದುದೇ ಇಲ್ಲ. ಆ ಧೀರನು ಬಂದರೆ ಯಾವ ಕೋಟೆ ಬಾಗಿಲು ತೆಗೆದು ಅವನನ್ನು ಸ್ವಾಗತಿಸುವುದಿಲ್ಲ? ಯಾವ ಜನಾಂಗ ಅವನ ಆಜ್ಞಾಧಾರಕವಾಗಿರುವುದಿಲ್ಲ? ಅವನ ಮಾತಿಗೆ ಯಾರು ಎದುರು ಬಂದಾರು? ಯಾವ ನಿಜವಾದ ದೇಶಬಾಂಧವ ಅವನ ನೇತೃತ್ವಕ್ಕೆ ಒಳಗಾಗುವುದಿಲ್ಲ? ಈಗಿನ ದುರುಳರ ದೌಲತ್ತನ್ನು ಸಂಕಟವಿಲ್ಲದೆ, ಅಸಹನೆ ಇಲ್ಲದೆ ಅನುಭವಿಸುವವರು ಯಾರಾದರೂ ಇದ್ದಾರೆಯೇ? ದೇಶೋದ್ಧಾರದ ಪವಿತ್ರವಾದ ಸಾಹಸಕ್ಕೆ ಉಚಿತವಾದ ಧೈರ್ಯದಿಂದ ಮತ್ತು ಭಗವತ್ಸಹಾಯದಲ್ಲಿ ನಂಬಿಕೆಯಿಂದ ನಿಮ್ಮ ಘನವಾದ ಮನೆತನದವರು ಈ ಕಾರ್ಯವನ್ನು ಕೈಗೊಳ್ಳಲಿ. ನಿಮ್ಮ ಮನೆತನದವರ ಬಾವುಟದ ನೆರಳಿನಲ್ಲಿ ನಮ್ಮ ದೇಶ ಉದ್ಧಾರವಾಗಲಿ. ಈ ಚರಿತ್ರೆಯಿಂದಪೆಟ್ರಾರ್ಕ್ ಮಹಾಕವಿಯ ಭವಿಷ ವಾಕ್ಯ ಸಿದ್ಧಿಯಾಗಲಿ—

"ದುರಾವೇಶವನ್ನು ಎದುರಿಸಲು ಧರ್ಮವು ಆಯುಧ ಪಾಣಿಯಾಯಿತು; ಸ್ವಲ್ಪ ಯುದ್ಧದಲ್ಲಿಯೇ ರೋಮನ್ ಶೌರ್ಯವು ತಾನು ಕಳೆಗುಂದಲಿಲ್ಲವೆಂಬುದನ್ನು ಜಗತ್ತಿಗೆ ತೋರಿತು."

g) Find the va

ಭಾರತೀಯರಾದ ನಮಗೆ ಚಾಣಕ್ಯನ ಹೆಸರು ಅಪರಿಚಿತವೇನಲ್ಲ. 'ಅರ್ಥಶಾಸ್ತ್ರ'ವೆಂಬ ಸುಪ್ರಸಿದ್ಧ ಗ್ರಂಥದ ಕರ್ತೃ ಅವನು; ಚಂದ್ರಗುಪ್ತ ಮೌರ್ಯನ ಮಿತ್ರನೂ ಮಂತ್ರಿಯೂ ಆಗಿದ್ದವನು. ಈ ರಾಜತಂತ್ರ ಪ್ರವೀಣನಿಗೆ ಸರಿಗಟ್ಟುವ ಯಾವನಾದರೂ ಒಬ್ಬ ವ್ಯಕ್ತಿ ಪಾಶ್ಚಾತ್ಯ ಇತಿಹಾಸದಲ್ಲಿ ಇದ್ದರೆ ಅವನು ಫ್ಲಾರೆನ್ಸಿನ ಮೆಕಿಯಾವೆಲ್ಲಿ. ಚಾಣಕ್ಯನದಂತೆಯೇ ಮೆಕಿಯಾವೆಲ್ಲಿಯ ಹೆಸರೂ ಚತುರ ರಾಜತಂತ್ರ ಕಲೆಗೆ ಪ್ರತಿಶಬ್ದವಾಗಿದೆ.

೧೪೬೯ರಲ್ಲಿ ಜನ್ಮವೆತ್ತಿದ ಮೆಕಿಯಾವೆಲ್ಲಿ ಫ್ಲಾರೆನ್ಸಿನ ಗಣತಂತ್ರದಲ್ಲಿ ಅನೇಕ ಉಚ್ಚ ಪದವಿಗಳನ್ನು ಅಲಂಕರಿಸಿದ್ದನು. ಅವನು ತನ್ನ ಅಧಿಕಾರಾವಧಿಯಲ್ಲಿ ರಾಜಕಾರಣದ ಬೀಸುಗಾಳಿಗೆ ಸಿಕ್ಕಿ ಕೆಲವು ಬಾರಿ ದೇಶಭ್ರಷ್ಟನಾಗಬೇಕಾಯಿತು. ಹಾಗೆ ದೇಶಭ್ರಷ್ಟನಾದಾಗ ದೊರೆಯುತ್ತಿದ್ದ ವಿರಾಮವನ್ನು ಹಾಳುಗೆಡಗೊಡದೆ ಮೆಕಿಯಾವೆಲ್ಲಿಯು ರಾಜ್ಯಶಾಸ್ತ್ರದ ಮೇಲೆ ಗ್ರಂಥಗಳನ್ನು ಬರೆಯಲು ವಿನಿಯೋಗಿಸಿದನು. ಅವನ ಕೃತಿಗಳಲ್ಲೆಲ್ಲಾ 'ಇಲ್ ಪ್ರಿನ್ಸಿಪೆ' ಅಥವಾ 'ದಿ ಪ್ರಿನ್ಸ್' ಎಂಬುದು ಹೆಸರುವಾಸಿಯಾದುದು. ಚಿಕ್ಕದಾದರೂ ಸಶಕ್ತವಾದ ಈ ಪುಸ್ತಕ ಈ ಹಿಂದೆ ಅನೇಕ ರಾಷ್ಟ್ರನಾಯಕರ ಜೀವನದ ಮೇಲೆ ಪ್ರಭಾವ ಬೀರಿದೆ.

ಜಗತ್ತಿನ ಉದ್ಗ್ರಂಥಗಳಲ್ಲಿ ಇದೂ ಒಂದೆಂದು ಆರಿಸಿ, ಸಾಹಿತ್ಯ ಅಕಾದೆಮಿ 'ಇಲ್ ಪ್ರಿನ್ಸಿಪೆ'ಯನ್ನು ಭಾರತದ ಪ್ರಮುಖ ಭಾಷೆಗಳಿಗೆ ಅನುವಾದ ಮಾಡಿಸಲು ಏರ್ಪಾಡು ಮಾಡಿದೆ. ನಿಮ್ಮ ಕೈಯಲ್ಲಿರುವ ಈ ಕನ್ನಡ ಅನುವಾದ ಹಿಂದೆ ಮೈಸೂರು ಸರಕಾರದಲ್ಲಿ ಉನ್ನತಾಧಿಕಾರಿಗಳಾಗಿದ್ದ ಹೆಸರಾಂತ ಕನ್ನಡ ಲೇಖಕ ಶ್ರೀ ನವರತ್ನ ರಾಮರಾಯರು ಮಾಡಿದುದು.

ಬೆಲೆ: ೨.೨೫ ರೂಪಾಯಿ.